ಗುರುವಾರ, ಜುಲೈ 1, 2021 | ₹ 6.00

ಪ್ರಜಾವಾ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

# ಯಡಿಯೂರಪ್ಪ ವಿರುದ್ಧ ದೂರು ಜುಲೈ 8ಕ್ಕೆ ಭವಿಷ್ಯ ನಿರ್ಧಾರ?

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಿವಿಧ ಕಾಮಗಾರಿಗಳ ಗುತ್ತಿಗೆಗೆ ಸಂಬಂಧಿಸಿದಂತೆ ಪ್ರಭಾವ ಬೀರುವುದಕ್ಕಾಗಿ ಗುತ್ತಿಗೆದಾರ ಚಂದ್ರಕಾಂತ್ ರಾಮಲಿಂಗಂ ಬಳಿ ₹ 12.5 ಕೋಟಿ ಲಂಚ ಪಡೆದಿರುವ ಆರೋಪದ ಮೇಲೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಅವರ ಪುತ್ರ ಬಿ.ವೈ. ವಿಜಯೇಂದ್ರ, ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಸೇರಿದಂತೆ ಒಂಬತ್ತು ಮಂದಿಯ ವಿರುದ್ಧ ಸಾಮಾಜಿಕ ಹೋರಾಟಗಾರ ಟಿ.ಜೆ. ಅಬ್ರಹಾಂ ಸಲ್ಲಿಸಿರುವ ಖಾಸಗಿ ದೂರಿನ ಭವಿಷ್ಯ ಜುಲೈ 8ಕ್ಕೆ ನಿರ್ಧಾರವಾಗಲಿದೆ.

ಯಡಿಯೂರಪ್ಪ ಅವರ ಮೊಮ್ಮಗ ಶಶಿಧರ ಮರಡಿ, ಅಳಿಯ ಸಂಜಯ್ ಶ್ರೀ, ಚಂದ್ರಕಾಂತ್ ರಾಮಲಿಂಗಂ, ಸದ್ಯ ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತರಾಗಿರುವ

ಐಎಎಸ್ ಅಧಿಕಾರಿ ಡಾ.ಜಿ.ಸಿ. ಪ್ರಕಾಶ್, 37 ಕ್ರೆಸೆಂಟ್ ಹೋಟೆಲ್ ಮಾಲೀಕ ಕೆ. ರವಿ ಮತ್ತು ಯಡಿಯೂರಪ್ಪ ಅವರ ಇನ್ನೊಬ್ಬ ಅಳಿಯ ವಿರೂಪಾಕ್ಷಪ್ಪ ಯಮಕನಮರಡಿ ಅವರನ್ನು ಈ ಪ್ರಕರಣದ ಇತರ ಆರೋಪಿಗಳೆಂದು ಖಾಸಗಿ ದೂರಿನಲ್ಲಿ ಹೆಸರಿಸಲಾಗಿದೆ.

ಜೂನ್ 2ರಂದು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಖಾಸಗಿ ದೂರು ಸಲ್ಲಿಸಿದ್ದ ಅಬ್ರಹಾಂ, ಯಡಿಯೂರಪ್ಪ ಮತ್ತು ಇತರ ಆರೋಪಿಗಳ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಪ್ರಕರಣ ದಾಖಲಿಸಿ, ತನಿಖೆ ನಡೆಸುವಂತೆ ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ಆದೇಶಿಸಲು ಮನವಿ ಮಾಡಿದ್ದರು.

4ನೇ ಪುಟ ನೋಡಿ

## ಪ್ರಾಸಿಕ್ಯೂಷನ್‌ಗೆ ಅನುಮತಿ ನಿರಾಕರಿಸಿದ ರಾಜ್ಯಪಾಲ

2020ರ ಸೆಪ್ಟೆಂಬರ್‌ನಲ್ಲಿ ಅಬ್ರಹಾಂ, ಇದೇ ದೂರನ್ನು ಎಸಿಬಿಗೆ ಸಲ್ಲಿಸಿದ್ದರು. ಸೆಪ್ಟೆಂಬರ್ 25ರಂದು ಎಸಿಬಿ ದೂರನ್ನು ತಿರಸ್ಕರಿಸಿತ್ತು. ಬಳಿಕ, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಸಚಿವ ಎಸ್.ಟಿ. ಸೋಮಶೇಖರ್ ವಿರುದ್ಧ ಖಾಸಗಿ ದೂರು ದಾಖಲಿಸಲು ಅನುಮತಿ ಕೋರಿ ರಾಜ್ಯಪಾಲರಿಗೆ ಅರ್ಜಿ ಸಲ್ಲಿಸಿದ್ದರು.

'ಯಡಿಯೂರಪ್ಪ ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಿರುವುದನ್ನು ರಾಜ್ಯಪಾಲರು ತಿರಸ್ಕರಿಸಿದ್ದಾರೆ' ಎಂಬ ಮಾಹಿತಿಯನ್ನು ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಬಿ. ರಾಜೇಶ್ವರಿ ಬುಧವಾರದ ವಿಚಾರಣೆ ಸಂದರ್ಭದಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಿದ ಮೆಮೊದಲ್ಲಿ ನೀಡಿದ್ದಾರೆ.

### 310 ಪ್ರಾಂಶುಪಾಲರ ನೇಮಕಕ್ಕೂ ಅಸ್ತು

# 1,242 ಸಹಾಯಕ ಪ್ರಾಧ್ಯಾಪಕರ ನೇಮಕಕ್ಕೆ ಸರ್ಕಾರದ ಒಪ್ಪಿಗೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ 1,242 ಸಹಾಯಕ ಪ್ರಾಧ್ಯಾಪಕರು ಮತ್ತು 310 ಪ್ರಾಂಶುಪಾಲರನ್ನು ಆರು ತಿಂಗಳ ಒಳಗೆ ನೇರ ನೇಮಕಾತಿ ಮಾಡಿಕೊಳ್ಳಲು ನಿರ್ಧರಿಸಲಾಗಿದೆ' ಎಂದು ಉನ್ನತ ಶಿಕ್ಷಣ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಮಾಧ್ಯಮಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, 'ಸಂದರ್ಶನ ಇಲ್ಲದೆ, ಕೇವಲ ಲಿಖಿತ ಪರೀಕ್ಷೆ ಮೂಲಕ ಈ ಹುದ್ದೆಗಳನ್ನು ತುಂಬಲಾಗುವುದು. ಈ ಪ್ರಸ್ತಾವನೆಗೆ ಆರ್ಥಿಕ ಇಲಾಖೆ ಒಪ್ಪಿಗೆ ನೀಡಿದೆ. ಅರ್ಹತೆ ಆಧರಿಸಿ, ಪಾರದರ್ಶಕವಾಗಿ ಇಡೀ ನೇಮಕಾತಿ ಪ್ರಕ್ರಿಯೆ ನಡೆಯಲಿದೆ' ಎಂದರು.

'2009ರ ನಂತರ ಪ್ರಾಂಶುಪಾಲರ ಹುದ್ದೆಗಳಿಗೆ ನೇಮಕಾತಿ ನಡೆದಿಲ್ಲ. ಇದಕ್ಕೆ 55 ವರ್ಷ ವಯೋಮಿತಿ ಇದೆ. 2017ರ ನಂತರ ಸಹಾಯಕ ಪ್ರಾಧ್ಯಾಪಕರ ನೇಮಕವೂ ನಡೆದಿಲ್ಲ. ಸಹಾಯಕ ಪ್ರಾಧ್ಯಾಪಕರ ಪರೀಕ್ಷೆ 500 ಅಂಕಗಳಿಗೆ (ಕನ್ನಡ 100, ಇಂಗ್ಲಿಷ್ 100, ಸಾಮಾನ್ಯ ಜ್ಞಾನ 50 ಮತ್ತು ಐಚ್ಛಿಕ ವಿಷಯಗಳಿಗೆ 250 ಅಂಕ), ಪ್ರಾಂಶುಪಾಲರ ಆಯ್ಕೆ ಪರೀಕ್ಷೆ 100 ಅಂಕಗಳಿಗೆ ನಡೆಯಲಿದೆ. ಎಲ್ಲ ಪ್ರಶ್ನೆಗಳು ಬಹು ಆಯ್ಕೆ ಮಾದರಿಯಲ್ಲಿ ಇರಲಿದೆ' ಎಂದು ಮಾಹಿತಿ ನೀಡಿದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, 'ಅರ್ಹತೆ ಹೊರತುಪಡಿಸಿ ಬೇರೆ ಯಾವುದೇ ಮಾನದಂಡ ಈ ನೇಮಕಾತಿಯಲ್ಲಿ ಇರುವುದಿಲ್ಲ. ಗುಣಮಟ್ಟದ ಶಿಕ್ಷಣಕ್ಕೆ ಒತ್ತು ನೀಡುವ ಉದ್ದೇಶದಿಂದ ಈ ಕ್ರಮ ವಹಿಸಲಾಗಿದೆ' ಎಂದು ಸ್ಪಷ್ಟಪಡಿಸಿದರು.

**ಎಂಜಿನಿಯರಿಂಗ್‌ಗೆ ಸಿಇಟಿ ಕನಿಷ್ಠ ಅಂಕ:** 'ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕೆ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ (ಸಿಇಟಿ) ಕನಿಷ್ಠ ಅಂಕ ಅರ್ಹತೆಯಾಗಿ ನಿಗದಿಪಡಿಸಲಾಗುವುದು. ಆದರೆ ಎಷ್ಟು ಅಂಕ ನಿಗದಿಪಡಿಸಬೇಕು ಎಂಬ ಬಗ್ಗೆ ತೀರ್ಮಾನಿಸಿಲ್ಲ. ಇತರ ವೃತ್ತಿಪರ ಕೋರ್ಸ್‌ಗಳಿಗೂ ಸಿಇಟಿಯಲ್ಲಿ ಕನಿಷ್ಠ ಅಂಕ ನಿಗದಿಪಡಿಸಬೇಕೆ ಎಂಬ ಬಗ್ಗೆ ಈ ಬಗ್ಗೆ ಪ್ರಸ್ತಾವನೆ ಬಂದ ಬಳಿಕ ನಿರ್ಧರಿಸಲಾಗುವುದು' ಎಂದು ಅವರು ಹೇಳಿದರು.

## ಜುಲೈ 5 ರಿಂದ ಸಂವೇದಾ ತರಗತಿಗಳ ಆರಂಭ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳ ಕಲಿಕಾ ದೃಷ್ಟಿಯಿಂದ ದೂರದರ್ಶನ ಚಂದನ ವಾಹಿನಿಯಲ್ಲಿ ಇದೇ 5ರಿಂದ ಸಂವೇದಾ ಇ–ತರಗತಿಗಳ ಕಲಿಕಾ ಕಾರ್ಯಕ್ರಮಗಳು ಪ್ರಸಾರವಾಗಲಿವೆ.

1ರಿಂದ 7ನೇ ತರಗತಿಗಳಿಗೆ ಬೆಳಿಗ್ಗೆ 9ರಿಂದ ಸಂಜೆ 4 ಗಂಟೆವರೆಗೆ ಮತ್ತು 8 ರಿಂದ 10ನೇ ತರಗತಿವರೆಗೆ ಬೆಳಿಗ್ಗೆ 8ರಿಂದ ಸಂಜೆ 4.30ರವರೆಗೆ ಬೋಧನಾ ಕಾರ್ಯಕ್ರಮಗಳು ಇರಲಿವೆ.

'ಕೋವಿಡ್ ಕಾರಣದಿಂದ 2021-22ನೇ ಸಾಲಿನ ಭೌತಿಕ ತರಗತಿಗಳ ಆರಂಭ ವಿಳಂಬವಾಗುತ್ತಿರುವುದರಿಂದ ಚಂದನ ವಾಹಿನಿಯ ಮೂಲಕ ಇ–ತರಗತಿಗಳನ್ನು ನಡೆಸಲಾಗುತ್ತಿದೆ' ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ತಿಳಿಸಿದ್ದಾರೆ.

ಮರಣ ಪ್ರಮಾಣ ನಿಯಂತ್ರಣ, ಲಸಿಕೆ ವಿತರಣೆಯಲ್ಲಿ ಕೇರಳವೇ ಮಾದರಿ

# ಕೋವಿಡ್ ಮರಣ: ದಕ್ಷಿಣ ರಾಜ್ಯಗಳಲ್ಲಿ ಕರ್ನಾಟಕದಲ್ಲೇ ಅಧಿಕ

• ವರುಣ ಹೆಗಡೆ

**ಬೆಂಗಳೂರು:** ಕರ್ನಾಟಕದಲ್ಲಿ ಈವರೆಗೆ ದೃಢಪಟ್ಟಿರುವ ಕೋವಿಡ್ ಪ್ರಕರಣಗಳಲ್ಲಿ ಪ್ರತಿ ನೂರು ಸೋಂಕಿತರಿಗೆ ತಲಾ ಒಬ್ಬರು ಮರಣ ಹೊಂದಿದ್ದಾರೆ. ದಕ್ಷಿಣ ಭಾರತದ ಐದು ರಾಜ್ಯಗಳ ಪೈಕಿ ಕರ್ನಾಟಕದಲ್ಲಿಯೇ ಹೆಚ್ಚಿನ ಸಂಖ್ಯೆಯಲ್ಲಿ ಸಾವು ಸಂಭವಿಸಿದೆ.

ರಾಜ್ಯದಲ್ಲಿ ಕಳೆದ ವರ್ಷ ಮಾ.8ರಂದು ಮೊದಲ ಕೋವಿಡ್ ಪ್ರಕರಣ ಹಾಗೂ ಮಾ.10ರಂದು ಮೊದಲ ಮರಣ ಪ್ರಕರಣ ವರದಿಯಾಗಿತ್ತು. ಮೊದಲನೇ ಅಲೆಯಲ್ಲಿ 9.73 ಲಕ್ಷ ಮಂದಿ ಸೋಂಕಿತರಾಗಿದ್ದರು. ಅವರಲ್ಲಿ 12,449 ಮಂದಿ ಸಾವಿಗೀಡಾಗಿದ್ದರು. ಮೊದಲ ಅಲೆಯಲ್ಲಿ ಮರಣ ಪ್ರಮಾಣ ದರವು ಶೇ 1.27ರಷ್ಟಿತ್ತು. ಎರಡನೇ ಅಲೆಯಲ್ಲಿ ಕೋವಿಡ್ ಹೊಸ ಪ್ರಕರಣಗಳ ಜತೆಗೆ ಮೃತಪಟ್ಟವರ ಸಂಖ್ಯೆ ಕೂಡ ಏರಿಕೆ ಕಂಡಿದೆ. ಮೂರುವರೆ ತಿಂಗಳಲ್ಲಿ 18.66 ಲಕ್ಷಕ್ಕೂ ಅಧಿಕ ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಅವರಲ್ಲಿ 22,480 ಮಂದಿ ಮೃತಪಟ್ಟಿದ್ದಾರೆ.

6.57 ಕೋಟಿ ಜನಸಂಖ್ಯೆ ಹೊಂದಿರುವ ರಾಜ್ಯದಲ್ಲಿ 28.40 ಲಕ್ಷಕ್ಕೂ ಅಧಿಕ ಮಂದಿ ಸೋಂಕಿತರಾಗಿದ್ದು, ಸೋಂಕು ದೃಢ ಪ್ರಮಾಣ ಶೇ 2.4ರಷ್ಟಿದೆ. 35 ಸಾವಿರ ಮಂದಿ ಸಾವಿಗೀಡಾಗಿದ್ದಾರೆ. 3.51 ಕೋಟಿ ಜನಸಂಖ್ಯೆ ಇರುವ ಕೇರಳದಲ್ಲಿ 29.10 ಲಕ್ಷಕ್ಕೂ ಅಧಿಕ ಮಂದಿ ಸೋಂಕಿತರಾಗಿದ್ದಾರೆ. ಅಲ್ಲಿ ಸೋಂಕು ದೃಢ ಪ್ರಮಾಣವು ಶೇ 10.4ರಷ್ಟಿದೆ. ಆದರೆ, ಅಲ್ಲಿ ಮರಣ ಪ್ರಮಾಣ ದರವು ಶೇ 0.4ರಷ್ಟು ಮಾತ್ರ ಇದೆ. ಕೇರಳದಲ್ಲಿ ಪ್ರತಿ ಒಂದು ಲಕ್ಷ ಜನರಿಗೆ ನಡೆಸಲಾದ ಪರೀಕ್ಷೆಯಲ್ಲಿ 8,286 ಮಂದಿ ಸೋಂಕಿತರಾಗಿರುವುದು ದೃಢಪಡುತ್ತಿದೆ. ರಾಜ್ಯದಲ್ಲಿ 4,316 ಮಂದಿ ಕೋವಿಡ್ ಪೀಡಿತರಾಗುತ್ತಿದ್ದಾರೆ.

**ತಡವಾಗಿ ಪರೀಕ್ಷೆ, ಮನೆ ಆರೈಕೆ ವೇಳೆ ನಿರ್ಲಕ್ಷ್ಯ, ಐಸಿಯು ಹಾಸಿಗೆ ಕೊರತೆ ಸೇರಿದಂತೆ ವಿವಿಧ ಕಾರಣಗಳಿಂದ ರಾಜ್ಯದಲ್ಲಿ ಅಧಿಕ ಮರಣ ಪ್ರಕರಣಗಳು ವರದಿಯಾಗಿವೆ**

**ಡಾ.ಸಿ.ಎನ್. ಮಂಜುನಾಥ್,** ಕೋವಿಡ್ ತಾಂತ್ರಿಕ ಸಮಿತಿ ಸದಸ್ಯ

**ರಾಜ್ಯದಲ್ಲಿ ಕೋವಿಡ್ 2ನೇ ಅಲೆಯಲ್ಲಿ ಯುವಜನರು ಹಾಗೂ ಮಧ್ಯಮ ವಯಸ್ಕರು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಮೃತಪಟ್ಟಿದ್ದಾರೆ. ಹೀಗಾಗಿ, ಮರಣ ಪ್ರಕರಣಗಳು ಹೆಚ್ಚಾಗಿವೆ**

**ಡಾ.ಸಿ. ನಾಗರಾಜ್,** ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆ ನಿರ್ದೇಶಕ

ದಕ್ಷಿಣದ ರಾಜ್ಯಗಳಲ್ಲಿ ಕೇರಳದಲ್ಲಿಯೇ ಅಧಿಕ ಸಂಖ್ಯೆಯಲ್ಲಿ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಪ್ರತಿ ಲಕ್ಷ ಜನರಿಗೆ ಅಲ್ಲಿ 65,289 ಮಂದಿಗೆ ಪರೀಕ್ಷೆ ನಡೆಯುತ್ತಿದೆ. ರಾಜ್ಯದಲ್ಲಿ 51,823 ಮಂದಿ ಪರೀಕ್ಷೆಗೆ ಒಳಪಡುತ್ತಿದ್ದಾರೆ. ಈ ಸಂಖ್ಯೆ ತಮಿಳುನಾಡಿನಲ್ಲಿ 43,167, ಆಂಧ್ರಪ್ರದೇಶದಲ್ಲಿ 41,929 ಹಾಗೂ ತೆಲಂಗಾಣದಲ್ಲಿ 49,871 ಇದೆ.

## ಪಂಚರಾಜ್ಯಗಳ ಕೋವಿಡ್ ಸ್ಥಿತಿಗತಿ (ಜೂ.29)

| ಕರ್ನಾಟಕ | |
|---|---|
| ಜನಸಂಖ್ಯೆ | 6,57,98,000 |
| ಒಟ್ಟು ಕೋವಿಡ್ ಪರೀಕ್ಷೆ | 3.4 ಕೋಟಿ |
| ಒಟ್ಟು ಪ್ರಕರಣ | 28.40 ಲಕ್ಷ |
| ಗುಣಮುಖರು | 27.19 ಲಕ್ಷ |
| ಮರಣ ಪ್ರಕರಣ | 34,929 |

| ಕೇರಳ | |
|---|---|
| ಜನಸಂಖ್ಯೆ | 3,51,25,000 |
| ಒಟ್ಟು ಕೋವಿಡ್ ಪರೀಕ್ಷೆ | 2.3 ಕೋಟಿ |
| ಒಟ್ಟು ಪ್ರಕರಣ | 29.10 ಲಕ್ಷ |
| ಗುಣಮುಖರು | 27.97 ಲಕ್ಷ |
| ಮರಣ ಪ್ರಕರಣ | 13,094 |

| ತಮಿಳುನಾಡು | |
|---|---|
| ಜನಸಂಖ್ಯೆ | 7,56,95,000 |
| ಒಟ್ಟು ಕೋವಿಡ್ ಪರೀಕ್ಷೆ | 3.3 ಕೋಟಿ |
| ಒಟ್ಟು ಪ್ರಕರಣ | 24.75 ಲಕ್ಷ |
| ಗುಣಮುಖರು | 24.03 ಲಕ್ಷ |
| ಮರಣ ಪ್ರಕರಣ | 32,506 |

| ಆಂಧ್ರಪ್ರದೇಶ | |
|---|---|
| ಜನಸಂಖ್ಯೆ | 5,22,21,000 |
| ಒಟ್ಟು ಕೋವಿಡ್ ಪರೀಕ್ಷೆ | 2.2 ಕೋಟಿ |
| ಒಟ್ಟು ಪ್ರಕರಣ | 18.85 ಲಕ್ಷ |
| ಗುಣಮುಖರು | 18.32 ಲಕ್ಷ |
| ಮರಣ ಪ್ರಕರಣ | 12,671 |

| ತೆಲಂಗಾಣ | |
|---|---|
| ಜನಸಂಖ್ಯೆ | 3,72,20,000 |
| ಒಟ್ಟು ಕೋವಿಡ್ ಪರೀಕ್ಷೆ | 1.9 ಕೋಟಿ |
| ಒಟ್ಟು ಪ್ರಕರಣ | 6.22 ಲಕ್ಷ |
| ಗುಣಮುಖರು | 6.05 ಲಕ್ಷ |
| ಮರಣ ಪ್ರಕರಣ | 3,651 |

*2019ರ ಎನ್‌ಸಿಪಿ ವರದಿಯ ಅನುಸಾರ ರಾಜ್ಯಗಳ ಜನಸಂಖ್ಯೆ

ಪಂಚರಾಜ್ಯಗಳಲ್ಲಿ ತೆಲಂಗಾಣದಲ್ಲಿ ಅತೀ ಕಡಿಮೆ ಕೋವಿಡ್ ಪ್ರಕರಣಗಳು ವರದಿಯಾಗಿವೆ. ಅಲ್ಲಿ 3.72 ಕೋಟಿ ಜನಸಂಖ್ಯೆಯಿದ್ದು, 6.22 ಲಕ್ಷ ಕೋವಿಡ್ ಪ್ರಕರಣಗಳು ವರದಿಯಾಗಿವೆ. 3,651 ಮಂದಿ ಸಾವಿಗೀಡಾಗಿದ್ದಾರೆ. ಅಲ್ಲಿ ಮರಣ ಪ್ರಮಾಣ ದರವು ಶೇ 0.6ರಷ್ಟಿದೆ.

**ಲಸಿಕೆಯಲ್ಲಿ ಮುಂಚೂಣಿ:** ಲಸಿಕೆ ವಿತರಣೆಯಲ್ಲಿ ದಕ್ಷಿಣ ಭಾರತದ ರಾಜ್ಯಗಳಲ್ಲಿ ಕರ್ನಾಟಕ ದ್ವಿತೀಯ ಸ್ಥಾನದಲ್ಲಿದೆ. ನಿಗದಿಪಡಿಸಲಾದ ಫಲಾನುಭವಿಗಳಲ್ಲಿ ಶೇ 28.6ರಷ್ಟು ಮಂದಿಗೆ ಮೊದಲ ಡೋಸ್ ವಿತರಿಸಲಾಗಿದೆ. ಅವರಲ್ಲಿ ಶೇ 5.6ರಷ್ಟು ಮಂದಿ ಎರಡೂ ಡೋಸ್ ಪೂರ್ಣಗೊಳಿಸಿದ್ದಾರೆ. ಕೇರಳದಲ್ಲಿ ಶೇ 30.6ರಷ್ಟು ಮಂದಿಗೆ ಪ್ರಥಮ ಡೋಸ್ ಹಾಗೂ ಶೇ 9.1ರಷ್ಟು ಮಂದಿಗೆ ದ್ವಿತೀಯ ಡೋಸ್ ನೀಡಲಾಗಿದೆ. ತಮಿಳುನಾಡು ಲಸಿಕೆ ವಿತರಣೆಯಲ್ಲಿ ಹಿಂದೆ ಬಿದ್ದಿದ್ದು, ಅಲ್ಲಿ ಶೇ 17.1ರಷ್ಟು ಮಂದಿಗೆ ಪ್ರಥಮ ಡೋಸ್ ಹಾಗೂ ಶೇ 3.4ರಷ್ಟು ಮಂದಿಗೆ ದ್ವಿತೀಯ ಡೋಸ್ ಲಸಿಕೆ ಒದಗಿಸಲಾಗಿದೆ.

ಕೋವಿಡ್ ಚೇತರಿಕೆ ಪ್ರಮಾಣದಲ್ಲಿ ಐದು ರಾಜ್ಯಗಳಲ್ಲಿ ಕರ್ನಾಟಕ ಕಡೆಯ ಸ್ಥಾನದಲ್ಲಿದೆ. ಶೇ 95.7ರಷ್ಟು ಚೇತರಿಕೆ ಪ್ರಮಾಣವಿದೆ. ಅಂದರೇ, ಪ್ರತಿ 100 ಕೋವಿಡ್ ಪ್ರಕರಣಗಳಲ್ಲಿ 96 ಮಂದಿ ಗುಣಮುಖರಾಗುತ್ತಿದ್ದಾರೆ. ಈ ಪ್ರಮಾಣ ತೆಲಂಗಾಣ ಮತ್ತು ಆಂಧ್ರ ಪ್ರದೇಶದಲ್ಲಿ ಶೇ 97.2ರಷ್ಟು ಇದೆ. ತಮಿಳುನಾಡಿನಲ್ಲಿ ಶೇ 97.1 ಹಾಗೂ ಕೇರಳದಲ್ಲಿ ಶೇ 96.1ರಷ್ಟು ಇದೆ.

## ಕೃಷಿ ವಿ.ವಿ: ಶೇ 45 ರಷ್ಟು ಬೋಧಕ ಹುದ್ದೆಗಳು ಖಾಲಿ

**ಬೆಂಗಳೂರು:** ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಶೇ 45ರಷ್ಟು ಬೋಧಕ ಮತ್ತು ಶೇ 55ರಷ್ಟು ಬೋಧಕೇತರ ಹುದ್ದೆಗಳ ಕೊರತೆ ಇದ್ದು, ಅವುಗಳ ಭರ್ತಿಗೆ ಕ್ರಮ ತೆಗೆದುಕೊಳ್ಳಬೇಕು ಎಂದು ವಿವಿಧ ಕೃಷಿ ವಿಶ್ವವಿದ್ಯಾಲಯಗಳ ಕುಲಪತಿಗಳು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಮನವಿ ಮಾಡಿದ್ದಾರೆ.

ಅಲ್ಲದೆ, ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣ ಮತ್ತು ಸಂಶೋಧನೆಗೆ 2016–17ರಿಂದ ಈಚೆಗೆ ಶೇ 65ರಷ್ಟು ಅನುದಾನ ಕಡಿತಗೊಂಡಿದೆ ಎಂದೂ ಅವರು ಮುಖ್ಯಮಂತ್ರಿ ಗಮನಕ್ಕೆ ತಂದರು.

ಮಾನವ ಸಂಪನ್ಮೂಲ ಕೊರತೆ ವಿದ್ಯಾರ್ಥಿಗಳ ಕಲಿಕೆಯ ಮೇಲೂ ಪರಿಣಾಮ ಬೀರುತ್ತಿದೆ ಎಂದು ನಿಯೋಗದ ನೇತೃತ್ವ ವಹಿಸಿದ್ದ ಕೃಷಿ ಸಚಿವ ಬಿ.ಸಿ. ಪಾಟೀಲ ಅವರು ಹೇಳಿದರು.

## ರಾಜ್ಯದಲ್ಲಿ ಹೊಸದಾಗಿ 3,382 ಮಂದಿಗೆ ಸೋಂಕು ದೃಢ
# ಇಳಿಕೆಯಾಗಿದ್ದ ಕೋವಿಡ್ ಮರಣ ಏರಿಕೆ

ಪ್ರಜಾವಾಣಿ ವಾರ್ತೆ



**ಬೆಂಗಳೂರು:** ಕೊರೊನಾ ಸೋಂಕಿತರಲ್ಲಿ 111 ಮಂದಿ ಮೃತಪಟ್ಟಿರುವುದು ಬುಧವಾರ ದೃಢಪಟ್ಟಿದೆ. ಇದರಿಂದಾಗಿ ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 35 ಸಾವಿರ ದಾಟಿದೆ.

ರಾಜ್ಯದಲ್ಲಿ ಕಳೆದ ಮೂರು ದಿನಗಳಿಂದ ಕೋವಿಡ್ ಮರಣ ಪ್ರಕರಣಗಳು ನೂರರ ಗಡಿಯೊಳಗೆ ವರದಿಯಾಗಿದ್ದವು. ಮರಣ ಪ್ರಮಾಣ ದರವು ಶೇ 3.28ಕ್ಕೆ ಏರಿಕೆಯಾಗಿದೆ. ಈ ತಿಂಗಳು 5,950 ಮಂದಿ ಸಾವಿಗೀಡಾಗಿದ್ದಾರೆ. ಹೊಸದಾಗಿ ವರದಿಯಾದ ಕೋವಿಡ್ ಮರಣ ಪ್ರಕರಣಗಳಲ್ಲಿ ಒಂದೂವರೆ ತಿಂಗಳ ಹಿಂದೆ ಮೃತಪಟ್ಟವರು ಕೂಡ ಸೇರಿದ್ದಾರೆ.

ರಾಜ್ಯದಲ್ಲಿ ಹೊಸದಾಗಿ 3,382 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಒಂದು ದಿನದ ಅವಧಿಯಲ್ಲಿ 1.71 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 1.97 ರಷ್ಟು ವರದಿಯಾಗಿದೆ. ಬೆಂಗಳೂರಿನಲ್ಲಿ 813 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 500ರ ಗಡಿಯೊಳಗಡೆ ಇವೆ. ಈ ಸಂಖ್ಯೆ 15 ಜಿಲ್ಲೆಗಳಲ್ಲಿ ಎರಡಂಕಿಯಲ್ಲಿದೆ. ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 28.43 ಲಕ್ಷ ದಾಟಿದೆ.

ರಾಜ್ಯದ 25 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ದೃಢಪಟ್ಟಿವೆ. ದಕ್ಷಿಣ ಕನ್ನಡದಲ್ಲಿ 15, ಮೈಸೂರಿನಲ್ಲಿ 14, ದಾವಣಗೆರೆಯಲ್ಲಿ 12 ಹಾಗೂ ಬೆಂಗಳೂರಿನಲ್ಲಿ 11 ಮಂದಿ ಮೃತಪಟ್ಟಿದ್ದಾರೆ. ಉಳಿದ ಜಿಲ್ಲೆಗಳಲ್ಲಿ 10ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಮರಣ ಪ್ರಕರಣಗಳು ವರದಿಯಾಗಿವೆ.

ಸಕ್ರಿಯ ಪ್ರಕರಣಗಳ ಸಂಖ್ಯೆ 76,505ಕ್ಕೆ ಇಳಿಕೆಯಾಗಿದೆ. ಸೋಂಕಿತರಲ್ಲಿ 12,763 ಮಂದಿಗೆ ಕಾಯಿಲೆ ವಾಸಿಯಾಗಿದೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 27.32 ಲಕ್ಷ ದಾಟಿದೆ.

## ‘ಪದಾಧಿಕಾರಿಗಳ ನೇಮಕಕ್ಕೆ ವೀಕ್ಷಕರ ಅಭಿಪ್ರಾಯ’

**ಬೆಂಗಳೂರು:** ‘ಪಕ್ಷದ ಜಿಲ್ಲಾ ಘಟಕಗಳ ಅಧ್ಯಕ್ಷರು ಹಾಗೂ ಇತರ ಪದಾಧಿಕಾರಿಗಳ ನೇಮಕ ಸಂಬಂಧ ಅಭಿಪ್ರಾಯ ನೀಡಲು ಒಂದೆರಡು ದಿನಗಳಲ್ಲಿ ವೀಕ್ಷಕರನ್ನು ನೇಮಿಸಲಾಗುವುದು’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಈ ಬಗ್ಗೆ ಜಿಲ್ಲಾ ಘಟಕಗಳ ಅಧ್ಯಕ್ಷರಿಗೆ, ಶಾಸಕರಿಗೆ ಸೂಚನೆ ನೀಡಲಾಗಿದೆ. ವೀಕ್ಷಕರು ಎಲ್ಲ ಜಿಲ್ಲೆಗಳಿಗೆ ಭೇಟಿ ನೀಡಲಿದ್ದಾರೆ. ಪದಾಧಿಕಾರಿಗಳಾಗಿ ಹೊಸಬರ ನೇಮಕಕ್ಕೂ ಮೊದಲು ವೀಕ್ಷಕರ ಮೂಲಕ ಅಭಿಪ್ರಾಯ ಸಂಗ್ರಹಿಸಲಾಗುವುದು’ ಎಂದರು.

## ದ್ವಿತೀಯ ಪಿಯುಸಿ ಫಲಿತಾಂಶ: ತಜ್ಞರಿಂದ ತ್ರಿಸೂತ್ರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ರದ್ದು ಮಾಡಿರುವುದರಿಂದ ವಿದ್ಯಾರ್ಥಿಗಳನ್ನು ಉತ್ತೀರ್ಣ ಮಾಡಲು ಅನುಸರಿಸಬೇಕಾದ ಮಾನದಂಡಗಳ ಬಗ್ಗೆ ಸಲಹೆ ನೀಡಲು ರಾಜ್ಯ ಸರ್ಕಾರ ರಚಿಸಿರುವ 12 ಸದಸ್ಯರ ತಜ್ಞರ ಸಮಿತಿ ಅನೌಪಚಾರಿಕವಾಗಿ ಚರ್ಚಿಸಿದ್ದು, ಮೂರು ಸೂತ್ರಗಳನ್ನು ರೂಪಿಸಿದೆ.

‘ಸಮಿತಿ ಇನ್ನೂ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿಲ್ಲ. ಆದರೆ, ಫಲಿತಾಂಶವನ್ನು ಯಾವೆಲ್ಲ ರೀತಿಯಲ್ಲಿ ನಿರ್ಣಯಿಸಬಹುದು ಎಂಬ ಬಗ್ಗೆ ಚರ್ಚಿಸಿದೆ. ಜುಲೈ 2ನೇ ವಾರದಲ್ಲಿ ಫಲಿತಾಂಶ ಪ್ರಕಟಿಸಲು ಈಗಾಗಲೇ ನಿರ್ಧರಿಸಲಾಗಿದೆ’ ಎಂದು ಶಿಕ್ಷಣ ಇಲಾಖೆಯ ಮೂಲಗಳು ತಿಳಿಸಿವೆ.

‘ಎಸ್ಸೆಸ್ಸೆಲ್ಸಿ ಮತ್ತು ಪ್ರಥಮ ಪಿಯುಸಿಯಲ್ಲಿ ವಿದ್ಯಾರ್ಥಿ ಪಡೆದ ಅಂಕಗಳನ್ನು ತಲಾ ಶೇ 50ರಂತೆ ತೆಗೆದುಕೊಂಡು, ಗರಿಷ್ಠ 600 ಅಂಕಕ್ಕೆ ನಿಗದಿಪಡಿಸುವುದು, ಪ್ರಥಮ ಪಿಯುಸಿಯ ಶೇ 60 ಮತ್ತು ಎಸ್ಸೆಸ್ಸೆಲ್ಸಿಯ ಶೇ 35 ಅಂಕ ಸಮೀಕರಿಸಿ 600 ಅಂಕಗಳಿಗೆ ನಿಗದಿಪಡಿಸುವುದು ಅಥವಾ ಕೃಪಾಂಕ ನೀಡಿ ಪಾಸ್ ಮಾಡುವ ಬಗ್ಗೆ ಸಮಿತಿ ಚರ್ಚೆ ನಡೆಸಿದೆ. ಆದರೆ, ಸರ್ಕಾರ ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ’ ಎಂದೂ ಮೂಲಗಳು ಹೇಳಿವೆ.

ಎಸ್ಸೆಸ್ಸೆಲ್ಸಿಯಲ್ಲಿ ಕೆಲವು ವಿಷಯಗಳಲ್ಲಿ ಹೆಚ್ಚಿನ ಅಂಕ ಗಳಿಸಿರುವ ವಿದ್ಯಾರ್ಥಿಗಳು ಪಿಯುಸಿಯಲ್ಲಿ ಕಡಿಮೆ ಅಂಕ ಅಂಕ ಗಳಿಸಿರುವ ನಿದರ್ಶನಗಳಿವೆ. ದ್ವಿತೀಯ ಪಿಯುಸಿ ಪರೀಕ್ಷೆಗೆ ನೋಂದಾಯಿಸಿರುವ ಎಲ್ಲರನ್ನೂ ಪಾಸು ಮಾಡಲಾಗುವುದೆಂದು ಸರ್ಕಾರ ಹೇಳಿರುವುದರಿಂದ ವಿದ್ಯಾರ್ಥಿಯು ಎಸ್ಸೆಸ್ಸೆಲ್ಸಿಯಲ್ಲಿ ಪಡೆದ ಹೆಚ್ಚಿನ ಅಂಕಗಳನ್ನು ಪಿಯುಸಿಗೆ ಕೃಪಾಂಕ ಎಂದು ಪರಿಗಣಿಸುವ ಬಗ್ಗೆಯೂ ಚರ್ಚೆ ನಡೆದಿದೆ.

ದ್ವಿತೀಯ ಪಿಯುಸಿ ಎಲ್ಲ ವಿದ್ಯಾರ್ಥಿಗಳನ್ನು ತೇರ್ಗಡೆ ಮಾಡಲು ಈಗಾಗಲೇ ಸರ್ಕಾರ ತೀರ್ಮಾನಿಸಿದೆ. ಆದರೆ, ವಿದ್ಯಾರ್ಥಿಗಳಿಗೆ ಅಂಕಗಳನ್ನು ನೀಡಬೇಕೇ, ಗ್ರೇಡ್ ನೀಡಬೇಕೇ ಎಂಬ ಬಗ್ಗೆ ಗೊಂದಲದ ಕಾರಣಕ್ಕೆ ಸಮಿತಿ ರಚಿಸಲಾಗಿತ್ತು. ಗ್ರೇಡಿಂಗ್ ಮೂಲಕ ವಿದ್ಯಾರ್ಥಿಗಳನ್ನು ಪಾಸು ಮಾಡುವ ನಿರ್ಧಾರಕ್ಕೆ ಪಾಲಕರು ಮತ್ತು ವಿದ್ಯಾರ್ಥಿಗಳಿಂದ ಆಕ್ಷೇಪ ವ್ಯಕ್ತವಾಗಿದ್ದರಿಂದ ಅಂಕಗಳನ್ನು ನೀಡಲು ಚಿಂತನೆ ನಡೆಸಲಾಗಿದೆ.

**ನಲಪಾಡ್, ರಕ್ಷಾ ರಾಮಯ್ಯ ಮಧ್ಯೆ ಹಗ್ಗ ಜಗ್ಗಾಟ: ಇದೇ 4ಕ್ಕೆ ಸಭೆ**

# ಯುವ ಕಾಂಗ್ರೆಸ್ ಅಧಿಕಾರ ಹಂಚಿಕೆಗೆ ಸೂತ್ರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಸ್ಥಾನದ ಗೊಂದಲಕ್ಕೆ ಅಂತ್ಯಹಾಡಲು ರಕ್ಷಾ ರಾಮಯ್ಯ ಮತ್ತು ಮೊಹಮ್ಮದ್ ನಲಪಾಡ್ ಮಧ್ಯೆ ಅಧಿಕಾರ ಹಂಚಿಕೆಯ ‘ಸಂಧಾನ ಸೂತ್ರ’ವೊಂದನ್ನು ಕಾಂಗ್ರೆಸ್ ಮುಂದಿಟ್ಟಿದೆ. ಈ ಬಗ್ಗೆ ಇದೇ 4ರಂದು ಯುವ ಕಾಂಗ್ರೆಸ್ ಮತ್ತು ಕೆಪಿಸಿಸಿ ನಾಯಕರು ಸಭೆ ನಡೆಸಿ ತೀರ್ಮಾನಿಸಲು ಮುಂದಾಗಿದ್ದಾರೆ.

ಇತ್ತೀಚೆಗೆ ದೆಹಲಿಗೆ ತೆರಳಿದ್ದ ವೇಳೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಯುವ ಕಾಂಗ್ರೆಸ್ ಅಧ್ಯಕ್ಷ ಸ್ಥಾನದ ವಿಷಯದಲ್ಲಿ ನಡೆಯುತ್ತಿರುವ ಹಗ್ಗ-ಜಗ್ಗಾಟವನ್ನು ವರಿಷ್ಠರ ಗಮನಕ್ಕೆ ತಂದಿದ್ದರು. ಈ ವೇಳೆ ಪರಸ್ಪರ ಸಂಧಾನದ ಮೂಲಕ ಸಮಸ್ಯೆ ಪರಿಹರಿಸುವಂತೆ ಹಿರಿಯ ನಾಯಕರು ಸಲಹೆ ನೀಡಿದ್ದರು ಎಂದು ಗೊತ್ತಾಗಿದೆ.

ಇದೇ ಕಾರಣಕ್ಕೆ ಕೆಪಿಸಿಸಿ ಕಚೇರಿಯಲ್ಲಿ ಯುವ ಕಾಂಗ್ರೆಸ್ ಉಸ್ತುವಾರಿಯೂ ಆಗಿರುವ ಎಐಸಿಸಿ ಜಂಟಿ ಕಾರ್ಯದರ್ಶಿ ಕೃಷ್ಣ ಅಲ್ಲಾವರ್, ರಕ್ಷಾ ರಾಮಯ್ಯ ಮತ್ತು ಮೊಹಮ್ಮದ್ ನಲಪಾಡ್ ಜೊತೆ ಮಂಗಳವಾರ (ಜೂನ್ 29) ರಾತ್ರಿ ಡಿ.ಕೆ. ಶಿವಕುಮಾರ್ ಸಭೆ ನಡೆಸಿದ್ದರು. ಮಧ್ಯರಾತ್ರಿವರೆಗೆ ಸಭೆ ನಡೆದರೂ ಒಮ್ಮತ ಸಾಧ್ಯ ಆಗಿಲ್ಲ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಮೊಹಮ್ಮದ್ ನಲಪಾಡ್



ರಕ್ಷಾ ರಾಮಯ್ಯ

‘ಸದ್ಯ ಅಧ್ಯಕ್ಷರಾಗಿರುವ ರಕ್ಷಾ ರಾಮಯ್ಯ ಡಿ. 31ರವರೆಗಿನ ಆರು ತಿಂಗಳು ಅವಧಿಗೆ ಮಂದುವರಿಯಲಿ. ಬಳಿಕ ಮೊಹಮ್ಮದ್ ನಲಪಾಡ್‌ಗೆ ಬಿಟ್ಟುಕೊಡಬೇಕು ಎಂಬ ಸೂತ್ರವನ್ನು ಡಿ.ಕೆ. ಶಿವಕುಮಾರ್ ಮುಂದಿಟ್ಟಿದ್ದಾರೆ. ಆದರೆ, ಇದಕ್ಕೆ ರಕ್ಷಾ ರಾಮಯ್ಯ ಒಪ್ಪಿಲ್ಲ. ಮುಂದಿನ ಒಟ್ಟು ಅವಧಿಯಲ್ಲಿ (ಸುಮಾರು 30 ತಿಂಗಳು) ಅರ್ಧದಷ್ಟು ಅವಧಿಗೆ ಕಾರ್ಯ ನಿರ್ವಹಿಸಲು ಅವಕಾಶ ಕೊಡಬೇಕು. ಈ ಅವಧಿಯಲ್ಲಿ ನಲಪಾಡ್ ಮಧ್ಯಪ್ರವೇಶಿಸಬಾರದು. ಅಷ್ಟೇ ಅಲ್ಲ, ಅವರಿಗೆ ರಾಷ್ಟ್ರೀಯ ಯುವ ಕಾಂಗ್ರೆಸ್‌ನಲ್ಲಿ ಸ್ಥಾನ ನೀಡಬೇಕು ಎಂಬ ಸಲಹೆಯನ್ನು ರಕ್ಷಾ ನೀಡಿದ್ದಾರೆ’ ಎಂದೂ ಗೊತ್ತಾಗಿದೆ.

ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಹೆಚ್ಚು ಮತ ಗಳಿಸಿದ್ದ ಮೊಹಮ್ಮದ್ ನಲಪಾಡ್ ಅವರನ್ನು ಅನರ್ಹಗೊಳಿಸಿ, ಎರಡನೇ ಸ್ಥಾನ ಗಳಿಸಿದ್ದ ರಕ್ಷಾ ರಾಮಯ್ಯ ಅವರನ್ನು ಅಧ್ಯಕ್ಷರನ್ನಾಗಿ ಘೋಷಿಸಲಾಗಿತ್ತು. ಹೆಚ್ಚಿನ ಸಂಖ್ಯೆಯಲ್ಲಿ ಮತಗಳನ್ನು ತಿರಸ್ಕರಿಸಿರುವ ಬಗ್ಗೆ ರಕ್ಷಾ ಅವರು ವರಿಷ್ಠರಿಗೆ ದೂರು ನೀಡಿದ್ದರು. ಅಪರಾಧ ಪ್ರಕರಣಗಳಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿದ್ದ ಕಾರಣಕ್ಕೆ ನಲಪಾಡ್ ಅವರನ್ನು ಫಲಿತಾಂಶದ ಬಳಿಕ ಅನರ್ಹಗೊಳಿಸಲಾಗಿತ್ತು.

### ಸಿದ್ದರಾಮಯ್ಯ ತೀವ್ರ ಅಸಮಾಧಾನ

ಯುವ ಕಾಂಗ್ರೆಸ್ ಅಧ್ಯಕ್ಷ ಸ್ಥಾನದಿಂದ ರಕ್ಷಾ ಅವರನ್ನು ಬದಲಿಸುವ ವಿಚಾರದ ಬಗ್ಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎಂದು ಗೊತ್ತಾಗಿದೆ.

ಸಿದ್ದರಾಮಯ್ಯ ಅವರನ್ನು ಬುಧವಾರ ಬೆಳಿಗ್ಗೆ ಭೇಟಿ ಮಾಡಿದ್ದ ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ಈ ವಿಚಾರ ಚರ್ಚೆ ಮಾಡಿದ್ದಾರೆ. ಈ ವೇಳೆ, ‘ಚುನಾವಣೆಗೆ ಇನ್ನು ಎರಡು ವರ್ಷ ಮಾತ್ರವಿದೆ. ಪಕ್ಷ ಸಂಘಟನೆಯಲ್ಲಿ ಯುವ ಕಾಂಗ್ರೆಸ್‌ನ ಅಧ್ಯಕ್ಷ ಮಹತ್ವದ್ದು. ಆ ಹುದ್ದೆಯಲ್ಲಿರುವವರು ಉತ್ತಮ ನಡವಳಿಕೆ ಹೊಂದಿರುವುದೂ ಮುಖ್ಯ’ ಎಂದು ಸಿದ್ದರಾಮಯ್ಯ ಸಲಹೆ ನೀಡಿದ್ದಾರೆ ಎಂದು ಮೂಲಗಳು ಹೇಳಿವೆ.

ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಸಿದ್ದರಾಮಯ್ಯ, ‘ಈ ವಿಚಾರದಲ್ಲಿ ನಾನು ನೀಡಿರುವ ಸಲಹೆಯನ್ನು ನಿಮಗೆ ಹೇಳಲು ಆಗದು. ಅವರು (ಶ್ರೀನಿವಾಸ್) ಏನೋ ಒಂದು ಸಂಧಾನ ಮಾಡುತ್ತೇವೆ ಅಂದಿದ್ದಾರೆ. ಇಬ್ಬರನ್ನೂ ಕೂರಿಸಿಕೊಂಡು ಹೊಂದಾಣಿಕೆ ಮಾಡಿ ಎಂದಿದ್ದೇನೆ’ ಎಂದರು.

ಈ ವಿಷಯದಲ್ಲಿ ಪ್ರತಿಕ್ರಿಯೆ ನೀಡಲು ಡಿ.ಕೆ. ಶಿವಕುಮಾರ್ ನಿರಾಕರಿಸಿದರು.

ಗುರುವಾರ, ಜುಲೈ 1, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 182 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ವಿದ್ಯುತ್ ವಿತರಣಾ ಸುಧಾರಣೆಗೆ ₹3.03 ಲಕ್ಷ ಕೋಟಿ 8

ಇಂದು ರಾಷ್ಟ್ರೀಯ ವೈದ್ಯರ ದಿನ
ಸಾಂಕ್ರಾಮಿಕದ ಸಂಕಷ್ಟದ ನಡುವೆ ವೈದ್ಯರಿಗೆ ನಮನ 7

ಬ್ರೆಜಿಲ್ ಲಸಿಕೆ ಒಪ್ಪಂದದಲ್ಲಿ ತಪ್ಪೆಸಗಿಲ್ಲ 9

| ಸೆನ್ಸೆಕ್ಸ್ | ನಿಫ್ಟಿ | ₹/$ |
|---|---|---|
| 52,483 ▼ | 15,721 ▼ | 74.32 ▼ |

ಆರ್ಥಿಕ ನೆರವು ನೀಡಲು ಮಾರ್ಗಸೂಚಿ ಸಿದ್ಧಪಡಿಸಿ: ಕೇಂದ್ರಕ್ಕೆ ಸುಪ್ರೀಂ ಕೋರ್ಟ್ ಸೂಚನೆ

# ಕೋವಿಡ್ ಸಾವಿಗೆ ಪರಿಹಾರ ನೀಡಿ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಕೋವಿಡ್–19 ರಿಂದ ಮೃತಪಟ್ಟವರ ಕುಟುಂಬಗಳಿಗೆ ಆರ್ಥಿಕ ಪರಿಹಾರ ನೀಡುವ ವಿಚಾರದಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರವು (ಎನ್‌ಡಿಎಂಎ) ವಿಫಲವಾಗಿದೆ ಎಂದು ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ.

ಕೋವಿಡ್ ಸಾಂಕ್ರಾಮಿಕವನ್ನು ರಾಷ್ಟ್ರೀಯ ವಿಪತ್ತು ಎಂದು 2020ರ ಮಾರ್ಚ್ 14ರಂದೇ ಘೋಷಿಸಲಾಗಿದೆ. ಹಾಗಾಗಿ, ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಗಳಿಗೆ ಕನಿಷ್ಠ ಮಟ್ಟದ ಪರಿಹಾರವನ್ನಾದರೂ ಒದಗಿಸುವುದು ಎನ್‌ಡಿಎಂಎಯ ಸಾಂವಿಧಾನಿಕ ಹೊಣೆಗಾರಿಕೆ ಎಂದು ನ್ಯಾಯಮೂರ್ತಿಗಳಾದ ಅಶೋಕ್ ಭೂಷಣ್ ಮತ್ತು ಎಂ.ಆರ್. ಶಾ ಅವರ ಪೀಠವು ಹೇಳಿದೆ.

ಕೋವಿಡ್–19 ಸಂತ್ರಸ್ತರ ಕುಟುಂಬಗಳಿಗೆ ಪರಿಹಾರ ನೀಡಿಕೆ ಹಾಗೂ ಮರಣ ಪ್ರಮಾಣಪತ್ರ ನೀಡಿಕೆ ಸಂಬಂಧ ಮಾರ್ಗದರ್ಶಿ ಸೂತ್ರಗಳನ್ನು ಸಿದ್ಧಪಡಿಸಲು ಕೇಂದ್ರಕ್ಕೆ ನ್ಯಾಯಾಲಯವು ಆರು ವಾರಗಳ ಕಾಲಾವಕಾಶ ಕೊಟ್ಟಿದೆ.

‘ಪರಿಹಾರ ನೀಡಿಕೆಗೆ ಶಿಫಾರಸು ಮಾಡುವಲ್ಲಿ ವಿಫಲವಾಗಿರುವ ಎನ್‌ಡಿಎಂಎ, ವಿಪತ್ತು ನಿರ್ವಹಣಾ ಕಾಯ್ದೆಯ 12ನೇ ಸೆಕ್ಷನ್‌ನಲ್ಲಿ ವಿವರಿಸಲಾಗಿರುವ ಕರ್ತವ್ಯ ಪಾಲನೆಯಲ್ಲಿ ವಿಫಲವಾಗಿದೆ’ ಎಂದು 66 ಪುಟಗಳ

ತೀರ್ಪಿನಲ್ಲಿ ಹೇಳಲಾಗಿದೆ.

ಸಾಂಕ್ರಾಮಿಕದ ಅಸಾಧಾರಣ ಸ್ವರೂಪ, ಆರೋಗ್ಯ ಮೂಲಸೌಕರ್ಯ ಬಲಪಡಿಸುವ ಮೂಲಕ ಜನರಿಗೆ ಒದಗಿಸಬೇಕಿರುವ ಪರಿಹಾರ ಮತ್ತು ಇತರ ಪ್ಯಾಕೇಜ್‌ಗಳ ಅಗತ್ಯದಿಂದಾಗಿ ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಗಳಿಗೆ ಆರ್ಥಿಕ ಪರಿಹಾರ ನೀಡಲು ಸಾಧ್ಯವಿಲ್ಲ ಎಂದು ಕೇಂದ್ರ ಸರ್ಕಾರವು ವಾದಿಸಿತ್ತು.

ವಿಪತ್ತು ನಿರ್ವಹಣಾ ಕಾಯ್ದೆಯಲ್ಲಿರುವ ವಿಪತ್ತು ಸಂತ್ರಸ್ತರಿಗೆ ಪರಿಹಾರ ನೀಡಿಕೆಗೆ ಸಂಬಂಧಿಸಿದ 12ನೇ ಸೆಕ್ಷನ್ ಕಡ್ಡಾಯ ಸ್ವರೂಪದ್ದಾಗಿದೆ ಎಂದು ನ್ಯಾಯಾಲಯ ಹೇಳಿದೆ.

ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಗಳಿಗೆ ವಿವಿಧ ರಾಜ್ಯ ಸರ್ಕಾರಗಳು ಪರಿಹಾರ ನೀಡುತ್ತಿವೆ. ಬಿಹಾರದಲ್ಲಿ ₹4 ಲಕ್ಷ, ಕರ್ನಾಟಕ ಮತ್ತು ಮಧ್ಯಪ್ರದೇಶದಲ್ಲಿ ₹1 ಲಕ್ಷ, ದೆಹಲಿಯಲ್ಲಿ ₹50 ಸಾವಿರ ಪರಿಹಾರ ನೀಡಲಾಗುತ್ತಿದೆ. ಮುಖ್ಯಮಂತ್ರಿ ಪರಿಹಾರ ನಿಧಿ ಅಥವಾ ಇತರ ನಿಧಿಗಳಿಂದ ಮೊತ್ತ ಮಂಜೂರು ಮಾಡಲಾಗುತ್ತಿದೆ.

## ಮೊತ್ತ: ಸರ್ಕಾರ ನಿರ್ಧರಿಸಲಿ

ಕೋವಿಡ್‌ನಿಂದ ಮೃತಪಟ್ಟ ವ್ಯಕ್ತಿಯ ಕುಟುಂಬಕ್ಕೆ ₹4 ಲಕ್ಷ ಪರಿಹಾರ ಕೊಡಬೇಕು ಎಂದು ಕೋರಿ ಗೌರವ್ ಕುಮಾರ್ ಬನ್ಸಲ್ ಮತ್ತು ರೀಪಕ್ ಕನ್ಸಲ್ ಅವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದಾರೆ. ಇತರ ವಿಪತ್ತುಗಳ ಸಂದರ್ಭದಲ್ಲಿ ಪಾವತಿಸಿದ ಅಷ್ಟೇ ಮೊತ್ತವನ್ನು ಈಗಲೂ ಪಾವತಿಸಿ ಎಂದು ನ್ಯಾಯಾಲಯವು ಹೇಳುವುದು ಸರಿ ಹೋಗುವುದಿಲ್ಲ. ಏಕೆಂದರೆ, ಕೋವಿಡ್–19 ಸಾಂಕ್ರಾಮಿಕದ ಅಸಾಧಾರಣ ಸ್ವರೂಪ ಮತ್ತು ಪರಿಣಾಮವನ್ನು ಗಮನದಲ್ಲಿ ಇರಿಸಿಕೊಳ್ಳಬೇಕಾಗುತ್ತದೆ ಎಂದು ಪೀಠವು ಹೇಳಿದೆ.

ಯಾವುದೇ ರಾಜ್ಯ ಅಥವಾ ದೇಶವು ಮಿತಿಯಿಲ್ಲದ ಸಂಪನ್ಮೂಲವನ್ನು ಹೊಂದಿರುವುದಿಲ್ಲ. ಮೃತರ ಕುಟುಂಬಗಳಿಗೆ ನೀಡುವ ಪರಿಹಾರದಿಂದಾಗಿ ಸರ್ಕಾರದ ಮೇಲೆ ಹಣಕಾಸಿನ ಹೊರೆ ಉಂಟಾಗುತ್ತದೆ. ಅದನ್ನು ಗಮನದಲ್ಲಿರಿಸಿಕೊಂಡ ಸರ್ಕಾರವು ವಿವೇಕಯುತ ನಿರ್ಧಾರ ಕೈಗೊಳ್ಳಬೇಕು ಎಂದು ಪೀಠವು ತಿಳಿಸಿದೆ.

## ₹10 ಲಕ್ಷ ಪರಿಹಾರಕ್ಕೆ ಆಗ್ರಹ

ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಕ್ಕೆ ಪರಿಹಾರ ನೀಡಬೇಕು ಎಂದು ಹೇಳುವ ಮೂಲಕ ಕಾಂಗ್ರೆಸ್ ಪಕ್ಷದ ನಿಲುವನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ. ಜತೆಗೆ, ಹೊಣೆಗಾರಿಕೆಯಿಂದ ಜಾರಿಕೊಳ್ಳುವ ಕೇಂದ್ರದ ಪ್ರಯತ್ನವನ್ನು ಬಯಲಾಗಿಸಿದೆ ಎಂದು ಕಾಂಗ್ರೆಸ್ ಪಕ್ಷವು ಹೇಳಿದೆ.

ಪ್ರಧಾನಿ ನರೇಂದ್ರ ಮೋದಿ ಮತ್ತು ಅವರ ನೇತೃತ್ವದ ಸರ್ಕಾರವು ಕೋವಿಡ್ ಸಂತ್ರಸ್ತರ ಜತೆಗೆ ನಿಂತಿಲ್ಲ. ತಕ್ಷಣವೇ ‘ಕೋವಿಡ್ ಪರಿಹಾರ ನಿಧಿ’ ಘೋಷಿಸಿ, ಕೋವಿಡ್‌ನಿಂದ ಮೃತರಾದವರ ಕುಟುಂಬಕ್ಕೆ ತಲಾ ₹10 ಲಕ್ಷ ಪರಿಹಾರ ನೀಡಬೇಕು ಎಂದು ಕಾಂಗ್ರೆಸ್‌ನ ಮುಖ್ಯ ವಕ್ತಾರ ರಣದೀಪ್ ಸುರ್ಜೇವಾಲಾ ಆಗ್ರಹಿಸಿದ್ದಾರೆ.

## ಮರಣ ಪ್ರಮಾಣಪತ್ರ ಸರಳಗೊಳಿಸಿ

ಕೋವಿಡ್‌ನಿಂದ ವ್ಯಕ್ತಿ ಮೃತಪಟ್ಟರೆ ಪ್ರಮಾಣಪತ್ರ ನೀಡಿಕೆ ಪ್ರಕ್ರಿಯೆಯನ್ನು ಸರಳಗೊಳಿಸಲು ಮಾರ್ಗಸೂಚಿ ಹೊರಡಿಸಬೇಕು. ವ್ಯಕ್ತಿಯು ಕೋವಿಡ್‌ನಿಂದ ಅಥವಾ ಅದರಿಂದಾದ ಸಮಸ್ಯೆಗಳಿಂದ ಮೃತಪಟ್ಟಿದ್ದಾರೆ ಎಂದು ಸ್ಪಷ್ಟವಾಗಿ ನಮೂದಿಸಬೇಕು. ಪ್ರಮಾಣಪತ್ರವನ್ನು ಪರಿಷ್ಕರಿಸಲು ಅವಕಾಶ ಇರಬೇಕು ಎಂದು ಪೀಠವು ಹೇಳಿದೆ.

ಮರಣಪೂರ್ವದಲ್ಲಿ ರೋಗಿಯ ಸಂಪರ್ಕಕ್ಕೆ ಬರುವವರು ಮತ್ತು ಕೋವಿಡ್–19ರಿಂದ ಮೃತಪಟ್ಟವರ ಮೃತದೇಹದ ಸಂಪರ್ಕಕ್ಕೆ ಬರುವವರಿಗೂ ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಯೋಜನೆ ಅಡಿಯಲ್ಲಿನ ₹50 ಲಕ್ಷ ಮೊತ್ತದ ವಿಮಾ ಸೌಲಭ್ಯ ವಿಸ್ತರಿಸುವ ಬಗ್ಗೆ ಪರಿಶೀಲನೆ ನಡೆಸಿ ಎಂದೂ ಕೋರ್ಟ್ ಸೂಚಿಸಿದೆ.

# ಶಿಕ್ಷಕರ ವರ್ಗಾವಣೆ ಶುರು

## ಕಡ್ಡಾಯ ವರ್ಗಾವಣೆ ಆದವರಿಗೆ ಆದ್ಯತೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನನೆಗುದಿಗೆ ಬಿದ್ದಿದ್ದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಗೆ ಅಂತೂ ಬುಧವಾರ ಚಾಲನೆ ಸಿಕ್ಕಿದ್ದು, ಇದೇ 12ರಿಂದ ಪ್ರಕ್ರಿಯೆ ಪ್ರಾರಂಭವಾಗಲಿದೆ.

2019-20ರಲ್ಲಿ ಕಡ್ಡಾಯ ಮತ್ತು ಹೆಚ್ಚುವರಿ ವರ್ಗಾವಣೆ ಆದವರಿಗೆ ಆದ್ಯತೆ ನೀಡಲಾಗುತ್ತದೆ. ನಂತರದಲ್ಲಿ 2020–21 ಹಾಗೂ 2021–22ನೇ ಸಾಲಿನ ಸಾಮಾನ್ಯ ವರ್ಗಾವಣೆ ಪ್ರಕ್ರಿಯೆಯೂ ಇದೇ ಆಸುಪಾಸು ನಡೆಯಲಿದೆ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಹೇಳಿದ್ದಾರೆ.

‘ತಾಲ್ಲೂಕಿನ ಹೊರಗೆ ಕಡ್ಡಾಯ ವರ್ಗಾವಣೆಗೊಂಡಿದ್ದ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಮತ್ತು ಜಿಲ್ಲೆಯ ಹೊರಗೆ ಕಡ್ಡಾಯ ವರ್ಗಾವಣೆಗೊಂಡಿದ್ದ ಪ್ರೌಢಶಾಲಾ ಶಿಕ್ಷಕರನ್ನು ಅವರು ಈ ಪೂರ್ವದಲ್ಲಿ ಕಾರ್ಯನಿರ್ವಹಿಸುತ್ತಿದ್ದ ತಾಲ್ಲೂಕು ಇಲ್ಲವೇ ಜಿಲ್ಲೆಯೊಳಗೆ ಸ್ಥಳ ನಿಯುಕ್ತಿಗೊಳಿಸಲಾಗುವುದು’ ಎಂದು ಅವರು ಹೇಳಿದ್ದಾರೆ.

ಆಯಾ ವಿಭಾಗದ ವಿಭಾಗೀಯ ಜಂಟಿ ನಿರ್ದೇಶಕರು ವರ್ಗಾವಣಾ ಕುಂದುಕೊರತೆ ನಿವಾರಣಾಧಿಕಾರಿಯಾಗಿದ್ದಾರೆ. ಪ್ರಾಥಮಿಕ ಶಾಲಾ ಶಿಕ್ಷಕರ ವರ್ಗಾವಣೆ ಕೌನ್ಸೆಲಿಂಗ್ ಅನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು (ಆಡಳಿತ) ನಡೆಸಿದರೆ, ಪ್ರೌಢಶಾಲಾ ಶಿಕ್ಷಕರ ಕೌನ್ಸೆಲಿಂಗ್‌ನ್ನು ಇಲಾಖೆಯ ಆಯಾ ವಿಭಾಗೀಯ ಜಂಟಿ ನಿರ್ದೇಶಕರು ನಡೆಸಲಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಹೆಚ್ಚುವರಿ/ಕಡ್ಡಾಯ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆ ಇದೇ 12ರಂದು ಆರಂಭವಾಗಲಿದ್ದು, ಸೆ.21ರಂದು ಕೌನ್ಸೆಲಿಂಗ್ ನಡೆಯಲಿದೆ.

8ನೇ ಪುಟ ನೋಡಿ

# ಕೈಗಾರಿಕೆ: 8 ವಲಯಗಳಲ್ಲಿ ಶೇ 16.8ರಷ್ಟು ಬೆಳವಣಿಗೆ

**ನವದೆಹಲಿ (ಪಿಟಿಐ):** ದೇಶದ ಪ್ರಮುಖ ಎಂಟು ಕೈಗಾರಿಕಾ ವಲಯಗಳ ಬೆಳವಣಿಗೆಯು ಮೇ ತಿಂಗಳಿನಲ್ಲಿ ಶೇಕಡ 16.8ರಷ್ಟಾಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಮಾಹಿತಿ ನೀಡಿದೆ.

ನೈಸರ್ಗಿಕ ಅನಿಲ, ಸಂಸ್ಕರಣಾ ಉತ್ಪನ್ನಗಳು, ಉಕ್ಕು, ಸಿಮೆಂಟ್ ಮತ್ತು ವಿದ್ಯುತ್ ವಲಯಗಳ ಉತ್ಪಾದನೆ ಹೆಚ್ಚಳ ಆಗಿರುವುದರಿಂದ ಈ ಪ್ರಮಾಣದ ಬೆಳವಣಿಗೆ ಸಾಧ್ಯವಾಗಿದೆ ಎಂದು ಸಚಿವಾಲಯ ಹೇಳಿದೆ. ರಸಗೊಬ್ಬರ ಮತ್ತು ಕಚ್ಚಾತೈಲ ವಲಯಗಳು ಮಾತ್ರವೇ ಮೇ ತಿಂಗಳಿನಲ್ಲಿ ನಕಾರಾತ್ಮಕ ಬೆಳವಣಿಗೆ ಕಂಡಿವೆ.

ಈ ಎಂಟು ವಲಯಗಳು ಮಾರ್ಚ್‌ನಲ್ಲಿ ಶೇ 11.4ರಷ್ಟು ಮತ್ತು ಏಪ್ರಿಲ್‌ನಲ್ಲಿ ಶೇ 60.9ರಷ್ಟು ಬೆಳವಣಿಗೆ ಕಂಡಿದ್ದವು. ಕೋವಿಡ್ ಸಾಂಕ್ರಾಮಿಕವನ್ನು ನಿಯಂತ್ರಿಸಲು ಲಾಕ್‌ಡೌನ್ ಹೇರಿದ್ದರಿಂದ 2020ರ ಮೇ ತಿಂಗಳಿನಲ್ಲಿ ಎಂಟು ವಲಯಗಳ ಬೆಳವಣಿಗೆಯು ಶೇ (–)21.4ರಷ್ಟು ಆಗಿತ್ತು.

ಏಪ್ರಿಲ್-ಮೇ ಅವಧಿಯಲ್ಲಿ ಈ ವಲಯಗಳು ಶೇ 35.8ರಷ್ಟು ಬೆಳವಣಿಗೆ ಸಾಧಿಸಿವೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಶೇ (–) 29.4ರಷ್ಟು ಕುಸಿದಿದ್ದವು.

‘ಎಂಟು ಪ್ರಮುಖ ವಲಯಗಳ ಅಂಕಿ–ಅಂಶ, ಆಟೊಮೊಬೈಲ್ ಉತ್ಪಾದನೆ, ರಫ್ತು ಮತ್ತು ಜಿಎಸ್‌ಟಿ ಇ-ವೇ ಬಿಲ್ ಸಂಖ್ಯೆಯನ್ನು ಗಮನಿಸಿ ಹೇಳುವುದಾದರೆ, ಮೇ ತಿಂಗಳಿನಲ್ಲಿ ಐಐಪಿ (ಕೈಗಾರಿಕಾ ಉತ್ಪಾದನೆಯ ಸೂಚ್ಯಂಕ) ಬೆಳವಣಿಗೆ ಪ್ರಮಾಣವು ಶೇ 20 ಅಥವಾ ಶೇ 25ಕ್ಕೆ ತಲುಪಬಹುದು’ ಎಂದು ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

# ಮುಂದಿನ ಚುನಾವಣೆಗೂ ನನ್ನದೇ ನಾಯಕತ್ವ: ಬಿಎಸ್‌ವೈ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಎರಡು ವರ್ಷದ ನಂತರ 130 ಸ್ಥಾನಗಳನ್ನು ಗೆದ್ದು ರಾಜ್ಯದಲ್ಲಿ ಬಿಜೆಪಿಯನ್ನು ಮತ್ತೆ ಅಧಿಕಾರಕ್ಕೆ ತರುವ ಸವಾಲು ನನ್ನ ಮುಂದೆ ಇದೆ’ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದರು.

‘ವರಿಷ್ಠರು ಸೂಚಿಸಿದರೆ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೋಗುವೆ’ ಎಂದು ತಿಂಗಳ ಹಿಂದಷ್ಟೇ ಹೇಳಿದ್ದ ಯಡಿಯೂರಪ್ಪ, ‘ಇನ್ನೂ ಒಳ್ಳೆಯ ಕೆಲಸ ಮಾಡುವ ಪ್ರಾಮಾಣಿಕ ಪ್ರಯತ್ನಗಳನ್ನು ಬರುವಂತಹ ಎರಡು ವರ್ಷಗಳಲ್ಲಿ ಮಾಡಬೇಕಾಗಿದೆ. ಬಿಜೆಪಿಯನ್ನು ಮತ್ತೆ ಅಧಿಕಾರಕ್ಕೆ ತರುವ ಸಲುವಾಗಿ ಈಗಿನಿಂದಲೇ ಎಲ್ಲ ರೀತಿಯ ಪ್ರಯತ್ನವನ್ನು ಮಾಡುತ್ತೇನೆ ಎಂದು ಕಾರ್ಯಕರ್ತರಿಗೆ, ರಾಜ್ಯದ ಜನರಿಗೆ ಭರವಸೆ ನೀಡುತ್ತೇನೆ’ ಎಂದು ದಿಢೀರ್ ಹೇಳಿಕೆ ನೀಡಿರುವುದು ಜಿಜ್ಞಾಸೆಗೆ ಗ್ರಾಸವಾಗಿದೆ.

ರಾಜಭವನಕ್ಕೆ ಬುಧವಾರ ಸಂಜೆ ಭೇಟಿ ನೀಡಿದ್ದ ಯಡಿಯೂರಪ್ಪ, ರಾಜ್ಯಪಾಲ ವಜುಭಾಯಿ ವಾಲಾ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು. ಅಲ್ಲಿಂದ ತಮ್ಮ ಮನೆಗೆ ಹಿಂತಿರುಗುವ ಮುನ್ನ ರಾಜಭವನದ ಎದುರು ಸುದ್ದಿಗಾರರ ಜತೆ ಮಾತನಾಡಿದರು.

ನಾಯಕತ್ವ ಬದಲಾವಣೆ ವಿಷಯದ ಗೊಂದಲ ಬಿಜೆಪಿಯಲ್ಲಿ ಇನ್ನೂ ಬಗೆಹರಿದಿಲ್ಲ. ‘ಪರೀಕ್ಷೆ ಬರೆದಿದ್ದು, ವಾದ ವಿವಾದ ಮುಗಿದಿದೆ, ಫಲಿತಾಂಶವಷ್ಟೇ ಬಾಕಿ ಇದೆ’ ಎಂದು ಯಡಿಯೂರಪ್ಪ ವಿರೋಧಿ ಬಣದಲ್ಲಿ ಗುರುತಿಸಿಕೊಂಡಿರುವ ಸಚಿವ ಸಿ.ಪಿ. ಯೋಗೇಶ್ವರ್ ಮತ್ತೆ ಮತ್ತೆ ಹೇಳುತ್ತಿದ್ದಾರೆ. ಈ ವಿದ್ಯಮಾನಗಳ ಮಧ್ಯೆಯೇ ‘ಮುಂದಿನ ಎರಡು ವರ್ಷ ಯಡಿಯೂರಪ್ಪನವರೇ ಮುಖ್ಯಮಂತ್ರಿ’ ಎಂದು ಅವರ ಮಗ ಬಿ.ವೈ. ವಿಜಯೇಂದ್ರ ಬುಧವಾರ ಬೆಳಿಗ್ಗೆಯಷ್ಟೇ ಹೇಳಿದ್ದರು.

4ನೇ ಪುಟ ನೋಡಿ

ಒಳ ಪುಟಗಳು
ರ್‍ಯಾಲಿಗೆ ಅನುಮತಿ ಬೇಡ: ಹೈಕೋರ್ಟ್ 9
ಉದ್ದೇಶಪೂರ್ವಕ ಸುಸ್ತಿದಾರರ ಸಂಖ್ಯೆ ಇಳಿಕೆ 8
ಸೆರೆನಾಗೆ ಗಾಯ; ವಿಂಬಲ್ಡನ್‌ನಿಂದ ನಿರ್ಗಮನ 10

ಇಂದಿನ ಪಾಡ್‌ಕಾಸ್ಟ್ ವಿಶೇಷ
ಪ್ರಜಾವಾಣಿ ಕನ್ನಡ ಧ್ವನಿ
ಆಟ-ನೋಟ
ವನಿತಾ ಧ್ವನಿ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

‘ದುಷ್ಟ ಸಂಹಾರದಿಂದ ರಾಜ್ಯಕ್ಕೆ ಒಳಿತಾಗಲಿದೆ’ 04

## ರಾಜ್ಯ ಕೋವಿಡ್ ಅಂಕಿ–ಅಂಶ

**28,43,810** ▲ ಒಟ್ಟು ಸೋಂಕಿತರು (28,40,428 ನಿನ್ನೆಯ ವಿವರ)

**76,505** ▼ ಸಕ್ರಿಯ ಪ್ರಕರಣಗಳು

**27,32,242** ▲ ಗುಣಮುಖರಾದವರು

**35,040** ▲ ಒಟ್ಟು ಸಾವು

ದಿನದ ಏರಿಕೆ

| | | |
|---|---|---|
| ಹೊಸ ಪ್ರಕರಣ | 3,382 | ▲ |
| ಗುಣಮುಖ | 12,763 | ▼ |
| ಸಾವು | 111 | ▲ |

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

## ಚಿನಕುರಳಿ

ಪ್ರಕಾಶ್ ಶೆಟ್ಟಿ

## ಇನ್ನು ಬ್ಯಾಗ್‌ಗಳಲ್ಲಿ 50 ಕೆ.ಜಿ ಮರಳು: ನಿರಾಣಿ

ಪ್ರಜಾವಾಣಿ ವಾರ್ತೆ

ನಿರಾಣಿ

ಬೆಂಗಳೂರು: ಇನ್ನು ಮುಂದೆ ತಲಾ 50 ಕೆ.ಜಿ ಬ್ಯಾಗ್‌ಗಳಲ್ಲಿ ಮರಳು ಮಾರಾಟ ಮಾಡಲು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ನಿರ್ಧರಿಸಿದೆ.

ಕಲ್ಲು ಗಣಿಗಾರಿಕೆ, ಮರಳು ಕುರಿತು ಜಿಲ್ಲಾಧಿಕಾರಿಗಳು ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಜತೆ ವಿಡಿಯೊ ಸಂವಾದ ನಡೆಸಿದ ಬಳಿಕ ಮಾತನಾಡಿದ ಗಣಿ ಮತ್ತು ಭೂ ವಿಜ್ಞಾನ ಸಚಿವ ಮುರುಗೇಶ ನಿರಾಣಿ, 'ಮನೆ ಕಟ್ಟುವವರು ಹಾಗೂ ಇತರರಿಗೆ ಸುಲಭವಾಗಿ ಮತ್ತು ಕೈಗೆಟಕುವ ದರದಲ್ಲಿ ಮರಳು ಸಿಗುವಂತೆ ಮಾಡಲು ಈ ಯೋಜನೆ ಜಾರಿಗೆ ತರಲಾಗುತ್ತಿದೆ. 1 ಟನ್ ಮತ್ತು ಅದಕ್ಕಿಂತ ದೊಡ್ಡ ಪ್ರಮಾಣದಲ್ಲಿಯೂ ಮರಳು ಖರೀದಿಸಬಹುದು' ಎಂದರು.

'ಪ್ರಾಯೋಗಿಕವಾಗಿ ರಾಜ್ಯದ ಐದು ಕಡೆ ಮಾರಾಟ ಘಟಕಗಳನ್ನು ಆರಂಭಿಸಲಾಗುವುದು. ಬ್ಯಾಗ್‌ಗಳನ್ನು ಸಿದ್ಧಪಡಿಸುವುದು, ಸಾಗಣೆ ಸೇರಿದಂತೆ ಎಲ್ಲ ರೀತಿಯ ತರಬೇತಿಯನ್ನು ಸಂಬಂಧಪಟ್ಟವರಿಗೆ ನೀಡಲಾಗುವುದು. ಬ್ಯಾಗ್ ಮೂಲಕ ಮಾರಾಟ ಮಾಡುವಾಗ ಎ, ಬಿ ಮತ್ತು ಸಿ ಶ್ರೇಣಿ ಎಂದು ವರ್ಗೀಕರಿಸಲಾಗುವುದು. ಮೊದಲು ಸ್ಟಾಕ್ ಯಾಡ್‌ಗಳಲ್ಲಿ ಪ್ರತ್ಯೇಕಗೊಳಿಸಿ, ಬಳಿಕ ವಿತರಿಸಲಾಗುವುದು' ಎಂದು ತಿಳಿಸಿದರು.

'ಮರಳು ಸಾಗಣೆ ವೇಳೆ ಕನಿಷ್ಠ ಶೇ 25ರಿಂದ 30ರಷ್ಟು ಅನುಪಯುಕ್ತವಾಗುತ್ತಿದೆ. ಇದನ್ನು ತಪ್ಪಿಸಲು ಮದ್ಯವನ್ನು ಯಾವ ರೀತಿ ಕರ್ನಾಟಕ ರಾಜ್ಯ ಪಾನೀಯ ನಿಗಮದ ಮೂಲಕ ಮಾರಾಟ ಮಾಡಲಾಗುತ್ತದೆಯೊ ಅದೇ ರೀತಿಯಲ್ಲಿ, ತನ್ನದೇ ಸಂಸ್ಥೆಯ ಮೂಲಕ ಬ್ಯಾಗ್‌ಗಳಲ್ಲಿ ಮರಳು ಮಾರಾಟ ಮಾಡಲು ಇಲಾಖೆ ಉದ್ದೇಶಿಸಿದೆ' ಎಂದು ವಿವರಿಸಿದರು.

'₹ 5 ಲಕ್ಷಕ್ಕಿಂತ ಕಡಿಮೆ ಮೊತ್ತದಲ್ಲಿ ಮನೆ ಕಟ್ಟಿಸಿಕೊಳ್ಳುವವರಿಗೆ ಯಾವುದೇ ರೀತಿಯ ರಾಜಧನ ಕಟ್ಟಿಸಿಕೊಳ್ಳುವುದಿಲ್ಲ. ಬಡವರು, ಬಡತನರೇಖೆಗಿಂತ ಕೆಳಗಿನವರು, ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಆಶ್ರಯ ಮನೆ ಕಟ್ಟಿಸಿಕೊಳ್ಳುವವರಿಗೆ ಉಚಿತವಾಗಿ ಮರಳು ವಿತರಿಸಲಾಗುವುದು' ಎಂದು ತಿಳಿಸಿದರು.

### ಡಿಎಂಎಫ್ ಬಳಕೆಗೆ ಡಿಪಿಆರ್

ಗಣಿಬಾಧಿತ ಜಿಲ್ಲೆಗಳಾದ ತುಮಕೂರು, ಚಿತ್ರದುರ್ಗ ಮತ್ತು ಬಳ್ಳಾರಿಯ ಅಧಿಕಾರಿಗಳ ಜೊತೆ ಪ್ರತ್ಯೇಕವಾಗಿ ಸಂವಾದ ನಡೆಸಿದ ನಿರಾಣಿ, ಜಿಲ್ಲಾ ಅದಿರು ನಿಧಿಯಿಂದ (ಡಿಎಂಎಫ್) ಯೋಜನೆಗಳನ್ನು ರೂಪಿಸಲು ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸುವಂತೆ ಸೂಚಿಸಿದರು. ಈ ಜಿಲ್ಲೆಗಳಲ್ಲಿ ಡಿಎಂಎಫ್ ನಿಧಿಯಿಂದ ಶಿಕ್ಷಣ, ಆರೋಗ್ಯ, ಕುಡಿಯುವ ನೀರು, ನೈರ್ಮಲ್ಯೀಕರಣ, ಸಮುದಾಯ ಭವನ, ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಲು ಅವಕಾಶ ಇದೆ. ಈ ನಿಧಿ ಬಳಕೆ ಸಂಬಂಧ ಸುಪ್ರೀಂ ಕೋರ್ಟ್‌ಗೆ ಮನವರಿಕೆ ಮಾಡಿಕೊಡಲಾಗುವುದು' ಎಂದೂ ತಿಳಿಸಿದರು.

ಶೇ 75ರಷ್ಟು ರಿಯಾಯಿತಿ ಪಡೆಯುತ್ತಿದ್ದ 615 ಶಿಕ್ಷಣ ಸಂಸ್ಥೆಗಳು

# ಶಿಕ್ಷಣ ಸಂಸ್ಥೆಗಳಿಗೆ ಇನ್ನು ಪೂರ್ತಿ ಆಸ್ತಿ ತೆರಿಗೆ

• ಪ್ರವೀಣ್ ಕುಮಾರ್ ಪಿ.ವಿ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಶಿಕ್ಷಣ ಸಂಸ್ಥೆಗಳಿಗೆ ಆಸ್ತಿ ತೆರಿಗೆಯಲ್ಲಿ ನೀಡುತ್ತಿದ್ದ ಶೇ 75ರಷ್ಟು ರಿಯಾಯಿತಿಯನ್ನು ಬಿಬಿಎಂಪಿ 2021–22ನೇ ಸಾಲಿನಿಂದ ಸಂಪೂರ್ಣ ಸ್ಥಗಿತಗೊಳಿಸಿದೆ. 2020ರ ಬಿಬಿಎಂಪಿ ಕಾಯ್ದೆಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಆಸ್ತಿ ತೆರಿಗೆಯಲ್ಲಿ ರಿಯಾಯಿತಿ ನೀಡಿಲ್ಲ. ಹಾಗಾಗಿ ಈ ಆರ್ಥಿಕ ವರ್ಷದಿಂದ ಖಾಸಗಿ ಶಿಕ್ಷಣ ಸಂಸ್ಥೆಗಳಿಂದ ಆಸ್ತಿ ತೆರಿಗೆಯನ್ನು ಪೂರ್ಣಪ್ರಮಾಣದಲ್ಲಿ ವಸೂಲಿ ಮಾಡಲು ಬಿಬಿಎಂಪಿ ಸಿದ್ಧತೆ ನಡೆಸಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಒಟ್ಟು 615 ಶಿಕ್ಷಣ ಸಂಸ್ಥೆಗಳು ಅಧಿಕೃತ ಘೋಷಣೆ ಮಾಡಿಕೊಂಡು ಬಿಬಿಎಂಪಿಯಿಂದ ಆಸ್ತಿ ತೆರಿಗೆಯಲ್ಲಿ ವಿನಾಯಿತಿ ಪಡೆಯುತ್ತಿದ್ದವು. ಇನ್ನು ಕೆಲವು ಶಿಕ್ಷಣ ಸಂಸ್ಥೆಗಳು ಬಿಬಿಎಂಪಿಯ ಅನುಮೋದನೆ ಇಲ್ಲದಿದ್ದರೂ ಪೂರ್ತಿ ಆಸ್ತಿ ತೆರಿಗೆ ಪಾವತಿಸುತ್ತಿರಲಿಲ್ಲ. 1976ರ ಕೆಎಂಸಿ ಕಾಯ್ದೆಯಲ್ಲಿದ್ದ ಲೋಪವನ್ನು ಬಳಸಿಕೊಂಡು ಪೂರ್ತಿ ಆಸ್ತಿ ತೆರಿಗೆ ಪಾವತಿಸಲು ನಿರಾಕರಿಸುತ್ತಿದ್ದವು.

'ಕಾನೂನು ಲೋಪಗಳನ್ನು ಸರಿಪಡಿಸಿದ್ದೇವೆ. ಖಾಸಗಿ ಶಿಕ್ಷಣ ಸಂಸ್ಥೆಗಳು ಬಿಬಿಎಂಪಿಯ ಅನುಮೋದನೆ ಪಡೆದು ಆಸ್ತಿ ತೆರಿಗೆಯಲ್ಲಿ ವಿನಾಯಿತಿ ಪಡೆಯಲು 1976ರ ಕೆಎಂಸಿ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿತ್ತು. ಆದರೆ, ಬಿಬಿಎಂಪಿ ಕಾಯ್ದೆಯ ಸೆಕ್ಷನ್ 152 (ಐ) (ಬಿ) ಪ್ರಕಾರ ಸರ್ಕಾರಿ ಅಥವಾ ಸ್ಥಳೀಯ ಪ್ರಾಧಿಕಾರದ ಶಿಕ್ಷಣ ಸಂಸ್ಥೆಗಳಿಗೆ ಮಾತ್ರ ಆಸ್ತಿ ತೆರಿಗೆಯಲ್ಲಿ ವಿನಾಯಿತಿ ನೀಡಬಹುದು. ಹಾಗಾಗಿ ಇತರ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಈ ಅವಕಾಶ ಇಲ್ಲ. ಅವುಗಳು ಪ್ರಸಕ್ತ ಸಾಲಿನಿಂದ ಪೂರ್ಣ ಪ್ರಮಾಣದಲ್ಲಿ ಆಸ್ತಿ ತೆರಿಗೆ ಪಾವತಿಸಬೇಕಾಗುತ್ತದೆ' ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಕಂದಾಯ) ಎಸ್.ಬಸವರಾಜು 'ಪ್ರಜಾವಾಣಿ'ಗೆ ತಿಳಿಸಿದರು.

'ಸಂಪನ್ಮೂಲ ಸಂಗ್ರಹದ ಗುರಿ ಸಾಧನೆ ಬಗ್ಗೆ ಚರ್ಚಿಸಲು ಇತ್ತೀಚೆಗೆ ಎಲ್ಲ ವಲಯಗಳ ಜಂಟಿ ಆಯುಕ್ತರು, ಪ ಆಯುಕ್ತರು (ಕಂದಾಯ), ಕಂದಾಯ ಅಧಿಕಾರಿಗಳು ಹಾಗೂ ಸಹಾಯಕ ಕಂದಾಯ ಅಧಿಕಾರಿಗಳ ಸಭೆ ನಡೆಸಿದ್ದೇವೆ. ಈ ವೇಳೆ ಅವರ ವ್ಯಾಪ್ತಿಯಲ್ಲಿರುವ ಶಿಕ್ಷಣ ಸಂಸ್ಥೆಗಳಿಗೆ ತೆರಿಗೆ ಬೇಡಿಕೆಯ ನೋಟಿಸ್ ಜಾರಿ ಮಾಡಲು ಅಧಿಕಾರಿಗಳಿಗೆ ಸೂಚಿಸಿದ್ದೇವೆ' ಎಂದರು.

'ಖಾಸಗಿ ಸಂಸ್ಥೆಗಳಿಂದ ಪೂರ್ಣ ಪ್ರಮಾಣದಲ್ಲಿ ಆಸ್ತಿ ತೆರಿಗೆ ವಸೂಲಿ ಮಾಡುವುದರಿಂದ ಎಷ್ಟು ಹೆಚ್ಚು ಸಂಪನ್ಮೂಲ ಸಂಗ್ರಹವಾಗಲಿದೆ ಎಂಬ ಬಗ್ಗೆ ಖಚಿತ ಮಾಹಿತಿ ಇಲ್ಲ. ಶಿಕ್ಷಣ ಸಂಸ್ಥೆಗಳಿರುವ ಕಟ್ಟಡ ಇರುವ ಸ್ಥಳದ ಮಾರ್ಗಸೂಚಿ ಮೌಲ್ಯದ ಪ್ರಕಾರ ಅದು ಎ, ಬಿ, ಸಿ ಅಥವಾ ಡಿ ವರ್ಗಗಳಲ್ಲಿ ಯಾವುದರ ವ್ಯಾಪ್ತಿಯಲ್ಲಿ ಬರುತ್ತದೆ ಎಂಬ ಆಧಾರದಲ್ಲಿ ಅದರ ಆಸ್ತಿ ತೆರಿಗೆ ಮೌಲ್ಯ ನಿರ್ಧಾರವಾಗುತ್ತದೆ' ಎಂದರು.

'ಬಿಬಿಎಂಪಿ ವ್ಯಾಪ್ತಿಯಲ್ಲಿ ಸಾವಿರಾರು ಶಿಕ್ಷಣ ಸಂಸ್ಥೆಗಳಿವೆ. ಆದರೆ, 615 ಶಿಕ್ಷಣ ಸಂಸ್ಥೆಗಳು ಮಾತ್ರ ಬಿಬಿಎಂಪಿಯಿಂದ ಅನುಮೋದನೆ ಪಡೆದು ಆಸ್ತಿ ತೆರಿಗೆಯಲ್ಲಿ ರಿಯಾಯಿತಿ ಪಡೆಯುವ ಅರ್ಹತೆ ಹೊಂದಿದ್ದವು. ಇನ್ನು ಕೆಲವು ಟ್ರಸ್ಟ್‌ಗಳೂ ಶಿಕ್ಷಣ ಸಂಸ್ಥೆಗಳನ್ನು ನಡೆಸುವ ನೆಪದಲ್ಲಿ ಆಸ್ತಿ ತೆರಿಗೆಯನ್ನು ಪೂರ್ಣ ಪ್ರಮಾಣದಲ್ಲಿ ಪಾವತಿಸುತ್ತಿರಲಿಲ್ಲ. ಯಾವೆಲ್ಲ ಶಿಕ್ಷಣ ಸಂಸ್ಥೆಗಳು ಈ ಹಿಂದೆ ಬಿಬಿಎಂಪಿ ಅನುಮೋದನೆ ಪಡೆದು ತೆರಿಗೆಯಲ್ಲಿ ರಿಯಾಯಿತಿ ಪಡೆಯುತ್ತಿದ್ದವೋ ಅವುಗಳು ಈ ಆರ್ಥಿಕ ವರ್ಷದಿಂದ ಪೂರ್ಣ ಪ್ರಮಾಣದ ಆಸ್ತಿ ತೆರಿಗೆ ಪಾವತಿಸಿದರೆ ಸಾಕು' ಎಂದರು.

### 'ಶಿಕ್ಷಣ ಸಂಸ್ಥೆಗಳ ಹಿಂಬಾಕಿಯೂ ವಸೂಲಿ'

'ಬಿಬಿಎಂಪಿಯಿಂದ ಅನುಮೋದನೆ ಪಡೆಯದೆಯೇ ಕೆಲವು ಶಿಕ್ಷಣ ಸಂಸ್ಥೆಗಳು ಶೇ 25ರಷ್ಟು ಆಸ್ತಿ ತೆರಿಗೆಯನ್ನು ಮಾತ್ರ ಪಾವತಿಸುತ್ತಿದ್ದವು. ಅಂತಹ ಸಂಸ್ಥೆಗಳು ಕಾರ್ಯಾರಂಭ ಮಾಡಿದ ವರ್ಷದಿಂದಲೂ ಆಸ್ತಿ ತೆರಿಗೆಯನ್ನು ಪೂರ್ಣ ಪ್ರಮಾಣದಲ್ಲಿ ಪಾವತಿಸಬೇಕಾಗುತ್ತದೆ. ಅವುಗಳ ಹಿಂಬಾಕಿಯನ್ನು ಸೇರಿಸಿ ಪೂರ್ಣ ಪ್ರಮಾಣದ ತೆರಿಗೆಯನ್ನು ವಸೂಲಿ ಮಾಡುತ್ತೇವೆ' ಎಂದು ಎಸ್. ಬಸವರಾಜು ತಿಳಿಸಿದರು.

## ಸುದ್ದಿ 2 ನಿಮಿಷ

### ಮೆಟ್ರೊ ನಿಲ್ದಾಣಗಳಲ್ಲಿ ಇಂದಿನಿಂದ ಟೋಕನ್ ಲಭ್ಯ

ಬೆಂಗಳೂರು: ನಗರದಲ್ಲಿ ಇಂದಿನಿಂದ (ಜುಲೈ 1) ಬೆಳಿಗ್ಗೆ 7ರಿಂದ ಸಂಜೆ 6ರವರೆಗೆ ಅನಿಯಮಿತ ಮೆಟ್ರೊ ರೈಲು ಸೇವೆ ಇರಲಿದೆ. ಸ್ಮಾರ್ಟ್ ಕಾರ್ಡ್ ಹೊಂದಿದವರಿಗೆ ಮಾತ್ರ ಈವರೆಗೆ ಸಂಚಾರಕ್ಕೆ ಅನುಮತಿ ಇತ್ತು. ಗುರುವಾರದಿಂದ ಮೆಟ್ರೊ ನಿಲ್ದಾಣಗಳಲ್ಲಿ ಟೋಕನ್‌ಗಳನ್ನೂ ವಿತರಿಸಲಾಗುತ್ತದೆ.

ಜನದಟ್ಟಣೆಯ ಸಂದರ್ಭದಲ್ಲಿ ಪ್ರತಿ ಐದು ನಿಮಿಷಗಳ ಅಂತರದಲ್ಲಿ, ಜನದಟ್ಟಣೆ ಇಲ್ಲದಾಗ 15 ನಿಮಿಷಗಳ ಅಂತರದಲ್ಲಿ ರೈಲುಗಳು ಸಂಚರಿಸಲಿವೆ. ಆದಾಗ್ಯೂ, ಪ್ರಯಾಣಿಕರ ದಟ್ಟಣೆಯನ್ನು ಅವಲಂಬಿಸಿ, ರೈಲುಗಳ ಸಂಚಾರ ಸಮಯದಲ್ಲಿನ ಅಂತರವನ್ನು ಮರುಪರಿಶೀಲಿಸಲಾಗುವುದು ಎಂದು ನಿಗಮ ಹೇಳಿದೆ.

ವಾರಾಂತ್ಯ ಕರ್ಫ್ಯೂ ಇರುವುದರಿಂದ ಶನಿವಾರ ಮತ್ತು ಭಾನುವಾರ ಮೆಟ್ರೊ ರೈಲು ಸಂಚಾರ ಇರುವುದಿಲ್ಲ ಎಂದೂ ನಿಗಮ ಪ್ರಕಟಣೆಯಲ್ಲಿ ತಿಳಿಸಿದೆ.

**ಆನ್‌ಲೈನ್–ಆಫ್‌ಲೈನ್ ಸೌಲಭ್ಯ:** ಸುಮಾರು ಒಂದೂವರೆ ವರ್ಷದ ನಂತರ, ನಿಲ್ದಾಣಗಳಲ್ಲಿ ಟೋಕನ್ ವಿತರಿಸಲಾಗುತ್ತಿದೆ. ಜನರ ನಡುವೆ ಸಂಪರ್ಕವನ್ನು ಆದಷ್ಟು ಕಡಿಮೆ ಮಾಡುವ ಉದ್ದೇಶದಿಂದ ಟೋಕನ್ ವಿತರಣೆಯನ್ನು ನಿಗಮವು ಸ್ಥಗಿತಗೊಳಿಸಿತ್ತು.

ಈ ಮೊದಲಿನಂತೆ ಸ್ಮಾರ್ಟ್‌ಕಾರ್ಡ್ ಬಳಸಿಯೂ ಸಂಚಾರ ಮಾಡಬಹುದಾಗಿದೆ. ಸ್ಮಾರ್ಟ್ ಕಾರ್ಡ್‌ಗಳನ್ನು ನಿಗಮದ ವೆಬ್‌ಸೈಟ್, ಆ್ಯಪ್ ಬಳಸಿ ರಿಚಾರ್ಜ್ ಮಾಡಿ ಕೊಳ್ಳಬಹುದು. ಅಲ್ಲದೆ, ಮೆಟ್ರೊ ನಿಲ್ದಾಣಗಳಲ್ಲಿನ ಕೌಂಟರ್‌ಗಳಲ್ಲಿಯೂ ಎಟಿಎಂ ಕಾರ್ಡ್ ಅಥವಾ ನಗದು ಬಳಸಿ ಖರೀದಿ ಅಥವಾ ರಿಚಾರ್ಜ್ ಮಾಡಿಸಬಹುದು. ಟೋಕನ್‌ಗಳನ್ನು ನಗದು ನೀಡಿ ಅಥವಾ ಸ್ಟಾಟಿಕ್ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿಯೂ ಖರೀದಿಸಬಹುದು ಎಂದು ನಿಗಮ ಹೇಳಿದೆ.

ಲಾಕ್‌ಡೌನ್ ಸಡಿಲಿಕೆ ನಂತರ, ಬೆಳಿಗ್ಗೆ 7ರಿಂದ 11ರವರೆಗೆ ಮತ್ತು ಮಧ್ಯಾಹ್ನ 3ರಿಂದ 6ರವರೆಗೆ, ಅಂದರೆ ದಿನದಲ್ಲಿ 7 ತಾಸು ಮಾತ್ರ ಮೆಟ್ರೊ ರೈಲು ಸಂಚರಿಸುತ್ತಿದ್ದವು. ಇನ್ನು ಮುಂದೆ, ದಿನದಲ್ಲಿ 11 ತಾಸು ಮೆಟ್ರೊ ರೈಲು ಸೇವೆ ಲಭ್ಯವಾಗಲಿದೆ.

### ಕೃಷಿ ಪ್ರಶಸ್ತಿಗೆ ಅರ್ಜಿ ಆಹ್ವಾನ

ಯಲಹಂಕ: ಕೃಷಿ ಇಲಾಖೆಯಿಂದ 2021-22ನೇ ಸಾಲಿನಲ್ಲಿ ಕೃಷಿ ಪ್ರಶಸ್ತಿ, ಕೃಷಿಪಂಡಿತ ಪ್ರಶಸ್ತಿ ಹಾಗೂ ಆತ್ಮಶ್ರೇಷ್ಠ ಕೃಷಿಕ ಪ್ರಶಸ್ತಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಇಲಾಖೆಯ ಬೆಂಗಳೂರು ಉತ್ತರ ತಾಲ್ಲೂಕು ಸಹಾಯಕ ಕೃಷಿನಿರ್ದೇಶಕ ಇ.ಪ್ರಸನ್ನಕುಮಾರ್ ತಿಳಿಸಿದ್ದಾರೆ.

ರೈತರು ರೈತಸಂಪರ್ಕ ಕೇಂದ್ರದ ಅಥವಾ ತಾಲ್ಲೂಕಿನ ಕೃಷಿ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಅಧಿಕಾರಿಗಳನ್ನು ಸಂಪರ್ಕಿಸಿ, ನಿಗದಿತ ಅರ್ಜಿ ನಮೂನೆ ಪಡೆಯಬಹುದು. ಕನಿಷ್ಠ ಒಂದು ಎಕರೆ ಜಮೀನು ಹೊಂದಿರುವ ರೈತರು, ಅರ್ಜಿಯೊಂದಿಗೆ ಪಹಣಿ, ಶುಲ್ಕಪಾವತಿ ಚಲನ್, ಜಾತಿಪ್ರಮಾಣಪತ್ರ, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್ ಪ್ರತಿ ಹಾಗೂ ಭಾವಚಿತ್ರ ಸಲ್ಲಿಸಬೇಕು.

ಕೃಷಿ ಪಂಡಿತ ಪ್ರಶಸ್ತಿಗೆ ಅರ್ಜಿ ಸಲ್ಲಿಸಲು ಮುಂಗಾರು ಹಂಗಾಮಿಗೆ ಆಗಸ್ಟ್ 31 ಕೊನೇ ದಿನ. ಸಾಮಾನ್ಯವರ್ಗದ ರೈತರು ₹100 ಹಾಗೂ ಪರಿಶಿಷ್ಟ ಜಾತಿ-ಪಂಗಡದ ರೈತರು ₹25 ಶುಲ್ಕ ಪಾವತಿಸಲು ನಿಗದಿ ಪಡಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಗೋವಿಂದರಾಜ ನಗರದ ರಾಜಕುಮಾರ್ ವಾರ್ಡ್‌ನ ಬಡ ಕುಟುಂಬಗಳಿಗೆ ವಸತಿ ಸಚಿವ ವಿ.ಸೋಮಣ್ಣ ದಿನಸಿ ಕಿಟ್‌ಗಳನ್ನು ಬುಧವಾರ ವಿತರಿಸಿದರು. ಬಿಜೆಪಿ ಯುವ ಮುಖಂಡ ಅರುಣ್ ಸೋಮಣ್ಣ, ಗೋವಿಂದರಾಜ ನಗರ ಬಿಜೆಪಿ ಮಂಡಲ ಅಧ್ಯಕ್ಷ ವಿಶ್ವನಾಥ್ ಗೌಡ ಹಾಗೂ ಕಾರ್ಯಕರ್ತರು ಇದ್ದರು

ಬಿಬಿಎಂಪಿ: ಆಸ್ತಿ ತೆರಿಗೆ – ಶೇ 5ರಷ್ಟು ರಿಯಾಯಿತಿ ಅವಧಿ ಮುಕ್ತಾಯ

# ಸಂಗ್ರಹವಾಯಿತು ₹1700 ಕೋಟಿ ತೆರಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಒಂದೇ ಕಂತಿನಲ್ಲಿ ಆಸ್ತಿ ತೆರಿಗೆ ಪಾವತಿಸಿದವರಿಗೆ ನೀಡುವ ಶೇ 5ರಷ್ಟು ರಿಯಾಯಿತಿಯ ಅವಧಿ ಜೂನ್ 30ಕ್ಕೆ ಕೊನೆಯಾಗಿದೆ. 2021ರ ಏಪ್ರಿಲ್‌ನಿಂದ ಜೂನ್ 30ರ ನಡುವೆ ರಿಯಾಯಿತಿ ಚಾಲ್ತಿಯಲ್ಲಿತ್ತು. ಈ ಅವಧಿಯಲ್ಲಿ ಬಿಬಿಎಂಪಿಗೆ ಒಟ್ಟು ₹ 1,703 ಕೋಟಿ ಆಸ್ತಿ ತೆರಿಗೆ ಸಂಗ್ರಹವಾಗಿದೆ.

ಬಿಬಿಎಂಪಿ ಪ್ರತಿವರ್ಷವೂ ಏಪ್ರಿಲ್ ತಿಂಗಳಲ್ಲಿ ಪೂರ್ತಿ ಆಸ್ತಿ ತೆರಿಗೆ ಪಾವತಿಸಿದವರಿಗೆ ಒಟ್ಟು ವಾರ್ಷಿಕ ತೆರಿಗೆಯಲ್ಲಿ ಶೇ 5ರಷ್ಟು ರಿಯಾಯಿತಿ ನೀಡುತ್ತದೆ. ಈ ಸಲ ಕೋವಿಡ್ ಹರಡುವಿಕೆ ನಿಯಂತ್ರಿಸಲು ಸರ್ಕಾರ ಲಾಕ್‌ಡೌನ್ ಹೇರಿಕೆ ಮಾಡಿದ್ದರಿಂದ ರಿಯಾಯಿತಿ ಅವಧಿಯನ್ನು ಜೂನ್ ಅಂತ್ಯದವರೆಗೆ ವಿಸ್ತರಿಸಲಾಗಿತ್ತು. 2020–21ನೇ ಸಾಲಿನಲ್ಲೂ ರಿಯಾಯಿತಿ ಅವಧಿಯನ್ನು ಪಾಲಿಕೆ ಜೂನ್ 30ರವರೆಗೆ ವಿಸ್ತರಿಸಿತ್ತು. ಕಳೆದ ಸಾಲಿನಲ್ಲಿ ಈ ಅವಧಿಯಲ್ಲಿ ₹1,713 ಕೋಟಿ ಆಸ್ತಿ ತೆರಿಗೆ ಸಂಗ್ರಹವಾಗಿತ್ತು.

'ಹೆಚ್ಚೂ ಕಡಿಮೆ ಕಳೆದ ವರ್ಷದಷ್ಟೇ ಆಸ್ತಿ ತೆರಿಗೆ ಈ ಬಾರಿ ಸಂಗ್ರಹವಾಗಿದೆ. ಬುಧವಾರ ರಾತ್ರಿ 9 ಗಂಟೆ ವೇಳೆಗೆ ಒಟ್ಟು ₹ 1,700 ಕೋಟಿಗೂ ಅಧಿಕ ತೆರಿಗೆ ಸಂಗ್ರಹವಾಗಿದೆ. ಕಳೆದ ಸಾಲಿನಂತೆ ಈ ಸಾಲಿನಲ್ಲೂ ಆನ್ಲೈನ್ ಮೂಲಕ ಆಸ್ತಿ ತೆರಿಗೆ ಪಾವತಿ ಪ್ರಮಾಣ ಹೆಚ್ಚು ಇದೆ' ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಕಂದಾಯ) ಎಸ್.ಬಸವರಾಜು 'ಪ್ರಜಾವಾಣಿ'ಗೆ ತಿಳಿಸಿದರು.

ಆಸ್ತಿ ತೆರಿಗೆಯ ಒಟ್ಟು 11,263 ಚಲನ್‌ಗಳು ಸಕ್ರಿಯವಾಗಿವೆ. ಚಲನ್‌ಗಳಿಂದ ಇನ್ನು ₹ 45.14 ಕೋಟಿ ತೆರಿಗೆ ಪಾವತಿ ಆಗಲಿದೆ. 4,230 ಚಲನ್‌ಗಳ ಮೊತ್ತವು ಇನ್ನಷ್ಟೇ ಬಿಬಿಎಂಪಿಗೆ ಪಾವತಿಯಾಗಬೇಕಿದೆ. 2020–21ನೇ ಸಾಲಿಗೆ ಹೋಲಿಸಿದರೆ ಈ ಆರ್ಥಿಕ ವರ್ಷದಲ್ಲಿ ಬೊಮ್ಮನಹಳ್ಳಿ, ಪೂರ್ವ, ದಾಸರಹಳ್ಳಿ ಹಾಗೂ ಯಲಹಂಕ ವಲಯಗಳಲ್ಲಿ ತೆರಿಗೆ ಸಂಗ್ರಹ ಪ್ರಮಾಣದಲ್ಲಿ ತುಸು ಹೆಚ್ಚಳವಾಗಿದೆ. ಮಹದೇವಪುರ, ಆರ್.ಆರ್.ನಗರ, ದಕ್ಷಿಣ, ಪಶ್ಚಿಮ ವಲಯಗಳಲ್ಲಿ ತೆರಿಗೆ ಸಂಗ್ರಹ ಪ್ರಮಾಣದಲ್ಲಿ ಇಳಿಕೆ ಕಂಡು ಬಂದಿದೆ.

ಬಿಬಿಎಂಪಿಯು 2021–22ನೇ ಸಾಲಿನ ಅಂತಿಮ ಬಜೆಟ್‌ನಲ್ಲಿ ತೆರಿಗೆ ಮತ್ತು ಕರಗಳ ರೂಪದಲ್ಲಿ ಒಟ್ಟು ₹ 3353.20 ಕೋಟಿ ಸಂಗ್ರಹಿಸುವ ಗುರಿ ಹೊಂದಿದೆ. ₹ 1250.78 ಕೋಟಿ ತೆರಿಗೆಯೇತರ ವರಮಾನವನ್ನು ನಿರೀಕ್ಷೆ ಮಾಡಿದೆ.

### ಅಂಕಿ ಅಂಶ

**1,702. 52** ಕೋಟಿ — ಬಿಬಿಎಂಪಿಯು 2021–22ನೇ ಸಾಲಿನಲ್ಲಿ ಜೂನ್30ರ ವರೆಗೆ ಸಂಗ್ರಹಿಸಿದ ಆಸ್ತಿ ತೆರಿಗೆ

**₹948.41** ಕೋಟಿ — ಆನ್‌ಲೈನ್ ಮೂಲಕ ಪಾವತಿಯಾದ ಆಸ್ತಿ ತೆರಿಗೆ

**₹754.11** ಕೋಟಿ — ಚಲನ್ ಮೂಲಕ ಪಾವತಿಯಾದ ಆಸ್ತಿ ತೆರಿಗೆ

ಆಸ್ತಿ ತೆರಿಗೆ ಸಂಗ್ರಹ ವಲಯವಾರು ವಿವರ (₹ ಕೋಟಿಗಳಲ್ಲಿ)

(ಏಪ್ರಿಲ್1ರಿಂದ ಜೂನ್30 ರಾತ್ರಿ 8ಗಂಟೆವರೆಗೆ)

| ವಲಯ | 2020-21 | 2021-22 |
|---|---|---|
| ಬೊಮ್ಮನಹಳ್ಳಿ | 168.11 | 170.63 |
| ದಾಸರಹಳ್ಳಿ | 47.12 | 47.8 |
| ಪೂರ್ವ | 333.3 | 338.33 |
| ಮಹದೇವಪುರ | 437.77 | 426.42 |
| ಆರ್.ಆರ್.ನಗರ | 117.43 | 114.65 |
| ದಕ್ಷಿಣ | 287.91 | 275.71 |
| ಪಶ್ಚಿಮ | 191.56 | 183.91 |
| ಯಲಹಂಕ | 129.96 | 139.69 |

## ಛಾಯಾಚಿತ್ರ ಪ್ರದರ್ಶನ ಆಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈ.ಪಿ.ಎಸ್–ಯೂತ್ ಫೋಟೋಗ್ರಾಫಿಕ್ ಸೊಸೈಟಿಯು 39ನೇ ವಾರ್ಷಿಕ ಅಖಿಲ ಭಾರತ ಡಿಜಿಟಲ್ ಛಾಯಾಚಿತ್ರ ಸ್ಪರ್ಧೆ ಆಯೋಜಿಸಿದ್ದು, ಪ್ರವೇಶಿಕೆಗಳನ್ನು ಕಳುಹಿಸಲು ಜು.14 ಕಡೆಯ ದಿನಾಂಕ.

ದೇಶದ ಕಲಾತ್ಮಕ ಛಾಯಾಗ್ರಹಣ ಸಂಸ್ಥೆ 'ದಿ ಫೆಡರೇಶನ್ ಆಫ್ ಇಂಡಿಯನ್ ಫೋಟೋಗ್ರಫಿ'ಯ ಮಾನ್ಯತೆಯನ್ನು ಈ ಸ್ಪರ್ಧೆ ಪಡೆದಿದೆ. ಕಪ್ಪು–ಬಿಳುಪು, ವರ್ಣ, ಪ್ರಕೃತಿ–ವನ್ಯಜೀವಿ ಮತ್ತು ಪ್ರವಾಸಿ ಎಂಬ ನಾಲ್ಕು ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ. ಇದರಲ್ಲಿ ಭಾಗವಹಿಸಲು ಸೊಸೈಟಿಯು ಮುಕ್ತ ಅವಕಾಶ ನೀಡಿದ್ದು, ಯಾವುದೇ ಪ್ರವೇಶ ಶುಲ್ಕವಿಲ್ಲ ಎಂದು ತಿಳಿಸಿದೆ.

ಆ.21ರಿಂದ 31ರವರೆಗೆ ವರ್ಚುವಲ್ ಮಾದರಿಯಲ್ಲಿ ಪ್ರದರ್ಶನ ನಡೆಯಲಿದೆ. ₹ 1.25 ಲಕ್ಷ ಮೊತ್ತದ ನಗದು, 71 ವಿವಿಧ ಬಹುಮಾನ ಹಾಗೂ ಪ್ರಶಸ್ತಿ ಫಲಕಗಳನ್ನು ವಿಜೇತರಿಗೆ ನೀಡಲಾಗುತ್ತದೆ. ಯುವ ಪ್ರತಿಭೆಗಳಿಗೆ ವಿಶೇಷ ಬಹುಮಾನಗಳಿವೆ. ಪ್ರವೇಶಿಕೆಗಳನ್ನು salon.ypsbengaluru.in ಮೂಲಕ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕಕ್ಕೆ ಮೊ.: 99452444055

## ಮನ್‌ಮುಲ್: ಸಿಐಡಿ ತನಿಖೆಗೆ ಆದೇಶ

ಮಂಡ್ಯ: ಮನ್‌ಮುಲ್‌ನಲ್ಲಿ ಹಾಲಿಗೆ ನೀರು ಮಿಶ್ರಣ ಮಾಡಿ ಸರಬರಾಜು ಮಾಡುತ್ತಿದ್ದ ಹಗರಣವನ್ನು ರಾಜ್ಯ ಸರ್ಕಾರ ಸಿಐಡಿ ತನಿಖೆಗೆ ವಹಿಸಿ ಬುಧವಾರ ಆದೇಶ ಹೊರಡಿಸಿದೆ.

ಮನ್‌ಮುಲ್‌ನಲ್ಲಿ ನಡೆದಿದ್ದ ಹಗರಣ ಸಾಕಷ್ಟು ಸದ್ದು ಮಾಡಿತ್ತು. ಈ ಸಂಬಂಧ ಪ್ರಕರಣ ದಾಖಲಾಗಿ, ಡಿವೈಎಸ್‌ಪಿ ನೇತೃತ್ವದಲ್ಲಿ ತನಿಖೆ ನಡೆಯುತ್ತಿತ್ತು. ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಕೆಲ ದಿನಗಳ ಹಿಂದೆ ಸಿಐಡಿ ತನಿಖೆಗೆ ವಹಿಸುವ ಬಗ್ಗೆ ಘೋಷಣೆ ಮಾಡಿದ್ದರು. ಈ ಮಧ್ಯೆ, ಸಿಬಿಐ ತನಿಖೆಗೆ ವಹಿಸಬೇಕು ಎಂಬ ಒತ್ತಾಯ ವಿವಿಧ ಸಂಘಟನೆಗಳಿಂದ ಕೇಳಿ ಬಂದಿತ್ತು. ಪ್ರಕರಣ ಬೆಳಕಿಗೆ ಬಂದು ತಿಂಗಳು ಕಳೆದ ನಂತರ ತನಿಖೆಗೆ ಆದೇಶ ಹೊರಡಿಸಲಾಗಿದೆ.

### ನಗರದಲ್ಲಿ ಇಂದು

**ವೈದ್ಯಕೀಯ ವಲಯದಲ್ಲಿ ಕನ್ನಡ ಬಳಕೆ ಅಭಿಯಾನಕ್ಕೆ ಚಾಲನೆ:** ಟಿ.ಎಸ್. ನಾಗಾಭರಣ, ಆಯೋಜನೆ: ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಸ್ಥಳ: ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಳಿಗ್ಗೆ 10.30

**ಶತಮಾನೋತ್ಸವ ಭವನ ಲೋಕಾರ್ಪಣೆ:** ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ವಸತಿಗೃಹ ಲೋಕಾರ್ಪಣೆ: ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ, ಸಭಾಂಗಣ ಉದ್ಘಾಟನೆ: ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ಅಧ್ಯಕ್ಷತೆ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ, ಆಯೋಜನೆ ಹಾಗೂ ಸ್ಥಳ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನ, ಬೆಳಿಗ್ಗೆ 11

**ಕನ್ನಡ ಪತ್ರಿಕಾ ದಿನಾಚರಣೆ:** ಬಿ.ಎಸ್. ಯಡಿಯೂರಪ್ಪ ಜತೆ ಸಂವಾದ, ಆಯೋಜನೆ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಮಧ್ಯಾಹ್ನ 12.30 (ಆನ್‌ಲೈನ್ ಕಾರ್ಯಕ್ರಮ)

**'ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ದತ್ತಿ ಪ್ರಶಸ್ತಿ' ಪ್ರದಾನ:** ಸಚಿವ ಎಸ್. ಸುರೇಶ್ ಕುಮಾರ್, ಅಧ್ಯಕ್ಷತೆ: ಮನು ಬಳಿಗಾರ್, ಪ್ರಶಸ್ತಿ ಪುರಸ್ಕೃತರು: ಎಂ. ಮೋಹನ ಆಳ್ವ, ಆಯೋಜನೆ: ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಕೃಷ್ಣರಾಜ ಪರಿಷನ್ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಮಧ್ಯಾಹ್ನ 3.30



ಮೋಹನ ಆಳ್ವ

**ಅಭಿನಯ, ಸಂಗೀತ, ತಬಲ ಮತ್ತು ಕೀಬೋರ್ಡ್ ತರಗತಿಗಳ ಉದ್ಘಾಟನೆ:** ಮುಖ್ಯ ಅತಿಥಿಗಳು: ಕಾಸರಗೋಡು ಚಿನ್ನಾ, ಶಶಿಧರ ಭಾರಿಘಾಟ್, ಚಿದಾನಂದ್, ರಾಜಶ್ರೀ, ಮನೋಜವಂ ಆತ್ರೇಯ, ಆಯೋಜನೆ: ರಂಗ ವಿಜಯಾ, ರಂಗಚಂದಿರ, ಸಂಜೆ 4.30 (ಆನ್‌ಲೈನ್ ಕಾರ್ಯಕ್ರಮ)


ಪ್ರಜಾವಾಣಿ

## ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

**JOB OPPORTUNITIES**

**Teachers/ Professors**

(Affiliated To Bangalore University)
DHARMASAGARA PU & FIRST GRADE COLLEGE
Dommasandra, Sarjaupra (H), Anekal (Tq), Bangalore - 562 125.
WANTED
PRINCIPAL with relevant Qualification & experience in Academic, Administration.
Intrested may apply To dmmhs94@gmail.com
Contact No. 9448619544.
Web Site: www.dsedu.in

WANTED TRAINED LADY TEACHERS to teach ENGLISH in English Medium High school. Walk-in Interview on 02-07-2021 between 11.30AM and 12.30PM at 'PRATHIBHA SHIKSHANA SAMITHI', #9, 18th Main, BSK II Stage, B-70. Phone: 080-26710170/ 77833-77387

**Drivers**

**WANTED** driver husband and wife Cook for a family of 4 at Bangalore Good salary Accommodation and food. Call 9741900909

**Wanted**

**WANTED VEGETARIAN** COOK AT BASAVANAGUDI MORNINGS ONLY 2 PERSONS ONLY AT HOME CONTACT 9342819739.

**General**

**LEADERSHIP OPPORTUNITY** With Salary, Opportunity to earn 19,000-52,000 + Incentives upto 1Lakh/month. Contact for Registration: 8317304234.

**REAL ESTATE SELLING**

**Industrial & Factory**

**J P Nagar**

**INDUSTRIAL CONVERTED** Plot for sale 4000-6000sft, Pipeline road Jaraganahalli Near JP-Nagar Metro Station. Verna Developers, MG Road. 9620253180/ 9353128035

**BUSINESS**

**Business to Business**

**Finance**

NRI'S INVESTMENT And Finance AvailableOn LowInterest AgainstProperties, Land & Building,Sites,Flats, Converted& AgricultureLandsCall: 7411265189

**PERSONAL**

**Announcements**

**I SAROJA** KRISHNASWAMY (Deponent 1) w/o Late Ravi Shaker V, R/@, #12, K.NO.4th Street, Markham Road, Bangalore-25 . do hereby Solemnly affirm and state on behalf of myself & My Children Roshini RS & Karan RS on OATH, state that My Husband's Name is Ravi Shaker.V. In My Late Husband's Aadhar & Death Certificate, it is wrongly Mentioned as Ravi Shankar. We have Notarized for correction of his name from Ravi Shankar To Ravi Shaker .V in his Aadhar & Death Certificate Vide affidavit Dated : 30/06/2021 sworn before Notary Gangaraju B.N Bangalore.

**Change of Name**

**I, ARUN.A.P,** S/o Poovaiah.A.B. resident at No. 8/5,1st Cros, Mothinagar, R.T.Nagar Post, Bangalore-560032 have changedname to, ASHOKA. A.P. vide affidavit dated 21-06-2021 before Notary Vijayalakahmi.K Bangalore.

**I,SAKKUBAI.G** R/@,#65 , Lakshmana Murthy Nagar, Ramamurthy Nagar, Dooravaninagar Post,Bangalore-16, Have Changed My Name To SHAKUNTHALA BAI.T Vide Affidavit Dated:30/06/2021 Before Notary Gangaraju B.N, Bangalore.

**I, VAIDYANATHAN** SUNDER, R/@.#711,2'B' Cross 7th Main HRBR 1st Block, Banswadi, Bangalore-43,declare that My Minor Daughter's name is wrongly mentioned in Passport as SAIPRIYA VAIDYANATHAN instead of SAIPRIYA DIPIKA VAIDYANATHAN Vide Affidavit Dated:25/06/2021 before Notary Uday Kumar.K Bangalore

**I, GOUTHAM** L., S/oLakshmiprasad E R.,R/at #006, J D Gardens, 4th Main Road, BOB Colony, Puttenahalli,J.P.Nagar 7th Phase, Bengaluru-560078, have changed my name to GouthamLakshmiprasad,Vide Affidavit dated 29/06/2021, before Notary Devikakumari.A., Banagalore

**I,PARASARAM METRI** Residing-at Ward-No.8, Hanumantha Nagar, Malur,Kolar-563130 have-changed my-Name-to PARASHURAM GANGARAM vide-Affidavit Dated:28-06-2021 Sworn-Before Notary G.R.Rajanna,Bangalore

**MAMATA DEVI** W/o 6394278F- HAV- RAMOO at ADM/BN, PL2, ASC Centre, (South) Bangalore changed name from MAMATA DEVI to MAMTA DEVI notary KV Mani Bangalore.

**I,SYED HIDAYATHULLA** S/o Late N Syed Fazlull Haque R/@ No.136/A, 4th B Cross,Ilyas Nagar, JP Nagar Post Bangalore-560078, have changed my name to SYED HIDAYATHULLA HAQUE vide affidavit dated 30/06/2021 before notary AravindPatil.GG Bangalore.

**Lost**

**DOCUMENT LOST**

I, Sanjay C Kapoor S/o Vijay C Kapoor, R/a. # G-3, Brigade Heritage, 4/2, Cookson Road, Richards Town, Bangalore- 560084 have lost my original gift deed, gift deed number 2037/2015/16 While in Transit. **Finders Please Contact: 90082 00019**

**CAUTION NOTICE**

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

# ‘ತಪ್ಪು ನನ್ನದಾದರೂ ಪರಿತಪಿಸಿದ್ದು ರಾಹುಲ್’

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್‌ನ ಸಾಮಾಜಿಕ ಜಾಲತಾಣ ನಿರ್ವಹಣಾ ವಿಭಾಗದ ಮುಖ್ಯಸ್ಥೆಯಾಗಿದ್ದ ನಟಿ, ಮಂಡ್ಯದ ಮಾಜಿ ಸಂಸದೆ ರಮ್ಯಾ, ಆ ಸ್ಥಾನ ತೊರೆದು ಎರಡು ವರ್ಷಗಳೇ ಕಳೆದಿವೆ.

ಆದರೆ, ಪಕ್ಷದಲ್ಲಿ ಸಕ್ರಿಯರಾಗಿದ್ದ ಅವರು ಇದ್ದಕ್ಕಿದ್ದಂತೆಯೇ ಹೊರನಡೆದಿದ್ದು ಏಕೆ ಎಂಬುದು ಇದುವರೆಗೆ ರಹಸ್ಯವಾಗಿಯೇ ಉಳಿದಿತ್ತು. ಇದೀಗ ಸ್ವತಃ ರಮ್ಯಾ ಅವರೇ ತಮ್ಮ ರಾಜೀನಾಮೆಗೆ ಕಾರಣ ಏನು ಎಂಬುದನ್ನು ಇನ್‌ಸ್ಟಾಗ್ರಾಂ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

‘ನನ್ನ ಒಂದು ಸಣ್ಣ ತಪ್ಪಿನಿಂದ ರಾಹುಲ್ ಗಾಂಧಿ ಅವರು ಸೋಷಿಯಲ್ ಮೀಡಿಯಾದಲ್ಲಿ ಟ್ರೋಲ್ ಆಗುವಂತಾಗಿತ್ತು. ಆ ಘಟನೆ ಅನೇಕರ ಕೆಂಗಣ್ಣಿಗೆ ಗುರಿ ಆಗುವಂತೆ ಮಾಡಿತು’ ಎಂದು ನೆನಪಿಸಿಕೊಂಡಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷರಾಗಿದ್ದ ರಾಹುಲ್ ಗಾಂಧಿ 2018ರಲ್ಲಿ ಮಾಜಿ ಸಂಸದರೊಂದಿಗೆ ಜರ್ಮನಿಗೆ ಭೇಟಿ ನೀಡಿದ್ದರು. ಬರ್ಲಿನ್‌ನಲ್ಲಿರುವ ವಸ್ತು ಸಂಗ್ರಹಾಲಯವೊಂದರ ವೀಕ್ಷಣೆಗೆ ತೆರಳಿದಾಗಿನ ಕೆಲವು ಛಾಯಾಚಿತ್ರಗಳನ್ನು ಸೆರೆ ಹಿಡಿದಿದ್ದ ನಾನು, ಭಾರತದಲ್ಲಿನ ನಮ್ಮ ತಂಡಕ್ಕೆ ಕಳುಹಿಸಿಕೊಟ್ಟಿದ್ದೆ. ಬೇಡವಾದ ಕಾರಣಕ್ಕೆ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆದ ರಾಹುಲ್ ಅವರ ಛಾಯಾಚಿತ್ರಗಳು ಸಾಕಷ್ಟು ಟೀಕೆಗೂ ಕಾರಣವಾದವು’ ಎಂದು ರಮ್ಯಾ ಹೇಳಿಕೊಂಡಿದ್ದಾರೆ.

‘ನಾನು ಅವರ ಬಳಿ ತೆರಳಿ ಕ್ಷಮೆ ಕೋರಿ, ನನ್ನ ಸ್ಥಾನಕ್ಕೆ ರಾಜೀನಾಮೆ ನೀಡಲು ಮುಂದಾದೆ. ಆದರೆ, ರಾಜೀನಾಮೆ ಸ್ವೀಕರಿಸದ ರಾಹುಲ್, ಮುಂದಿನ ಬಾರಿ ಎಚ್ಚರಿಕೆ ವಹಿಸಿ, ಜಾಗರೂಕರಾಗಿರಿ ಎಂದಷ್ಟೇ ಹೇಳಿದರು. ನನ್ನ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತ್ತು’ ಎಂದು ರಮ್ಯಾ ವಿವರಿಸಿದ್ದಾರೆ.

## ಎಸ್‌ಡಿಎ ಪರೀಕ್ಷೆ ಸೆ. 18, 19ರಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ದರ್ಜೆ ಸಹಾಯಕ (ಎಸ್‌ಡಿಎ) ಹುದ್ದೆಗಳ ನೇಮಕಾತಿಗೆ ಸೆ. 18 ಮತ್ತು 19ರಂದು ಪರೀಕ್ಷೆ ನಡೆಸಲು ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನಿರ್ಧರಿಸಿದೆ.

ರಾಜ್ಯದ ವಿವಿಧ ಇಲಾಖೆಯಲ್ಲಿನ ಉಳಿಕೆ ಮೂಲ ವೃಂದದ ಹಾಗೂ ಹೈದರಾಬಾದ್ ಕರ್ನಾಟಕ ವೃಂದದ ಕಿರಿಯ ಸಹಾಯಕರ, ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳ ನೇಮಕಾತಿಗೆ ಫೆ. 29ರಂದು ಕೆಪಿಎಸ್‌ಸಿ ಅಧಿಸೂಚನೆ ಹೊರಡಿಸಿತ್ತು. ಬಳಿಕ ಕೋವಿಡ್ ಕಾರಣಕ್ಕೆ ಪರೀಕ್ಷೆಯನ್ನು ಮುಂದೂಡಲಾಗಿತ್ತು.

ಪರಿಷ್ಕೃತ ವೇಳಾಪಟ್ಟಿ ಪ್ರಕಾರ ಸೆ. 18ರಂದು ಬೆಳಿಗ್ಗೆ 10ರಿಂದ 11.30ರವರೆಗೆ ಪತ್ರಿಕೆ -1 ಕಡ್ಡಾಯ ಕನ್ನಡ ಭಾಷಾ ಪರೀಕ್ಷೆ ನಡೆಯಲಿದೆ. 19ರಂದು ಸ್ಪರ್ಧಾತ್ಮಕ ಪರೀಕ್ಷೆ ನಡೆಯಲಿದೆ. ಅಂದು ಬೆಳಿಗ್ಗೆ 10ರಿಂದ 11.30ರವರೆಗೆ ಪತ್ರಿಕೆ-3 ಸಾಮಾನ್ಯ ಜ್ಞಾನ, ಮಧ್ಯಾಹ್ನ 2ರಿಂದ 3.30ರವರೆಗೆ ಪತ್ರಿಕೆ -2 ಸಾಮಾನ್ಯ ಕನ್ನಡ, ಸಾಮಾನ್ಯ ಇಂಗ್ಲಿಷ್ ಪರೀಕ್ಷೆ ನಡೆಯಲಿದೆ.

## ನೆಗೆಟಿವ್ ವರದಿ, ಲಸಿಕೆ ಪ್ರಮಾಣಪತ್ರ ಕಡ್ಡಾಯ

ಹುಬ್ಬಳ್ಳಿ: ನೆರೆಯ ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಬರುವ ರೈಲು ಪ್ರಯಾಣಿಕರು 72 ಗಂಟೆಯೊಳಗೆ ಮಾಡಿಸಿರುವ ಆರ್‌ಟಿಪಿಸಿಆರ್ ಪರೀಕ್ಷೆಯ ನೆಗೆಟಿವ್ ವರದಿ ಅಥವಾ ಕೋವಿಡ್–19 ಲಸಿಕೆಯ ಒಂದು ಡೋಸ್ ಪಡೆದಿರುವ ಪ್ರಮಾಣಪತ್ರವನ್ನು ಕಡ್ಡಾಯವಾಗಿ ಹೊಂದಿರಬೇಕು ಎಂದು ನೈರುತ್ಯ ರೈಲ್ವೆ ಪ್ರಕಟಣೆಯಲ್ಲಿ ತಿಳಿಸಿದೆ.


**ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದಿಂದ ನೇಮಕವಾಗಿರುವ**
**ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ಸಮಿತಿ**
**ಡಾ. ಶಿವರಾಮಕಾರಂತ ಬಡಾವಣೆ**

ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ನ್ಯಾಯಮೂರ್ತಿಗಳಾದ ಎ.ವಿ. ಚಂದ್ರಶೇಖರ್‌ರವರ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿರುತ್ತದೆ. ಉದ್ದೇಶಿತ ಡಾ. ಶಿವರಾಮಕಾರಂತ ಬಡಾವಣೆಯ ಅಧಿಸೂಚಿತ ಪ್ರದೇಶದಲ್ಲಿ ದಿನಾಂಕ: 03.08.2018ಕ್ಕಿಂತ ಮುಂಚಿತವಾಗಿ ನಿರ್ಮಿಸಿರುವ ಕಟ್ಟಡಗಳ ಬಗ್ಗೆ ವರದಿಯನ್ನು ನೀಡಲು ಈ ಸಮಿತಿಯನ್ನು ರಚಿಸಲಾಗಿರುತ್ತದೆ. ಅರ್ಜಿಗಳನ್ನು ಸ್ವೀಕರಿಸಲು ಸಮಿತಿಯು ಈ ಕೆಳಕಂಡ ನಾಲ್ಕು ಸಹಾಯ ಕೇಂದ್ರಗಳನ್ನು ಆರಂಭಿಸಲಾಗಿತ್ತು: (1) ಸರ್ಕಾರಿ ಉರ್ದು ಪ್ರಾಥಮಿಕ ಶಾಲೆ, ಮೇಡಿ ಅಗ್ರಹಾರ (2) ಸೋಮಶೆಟ್ಟಿಹಳ್ಳಿ ಸಮುದಾಯ ಭವನ, ಸೋಮಶೆಟ್ಟಿಹಳ್ಳಿ (3) ಸರ್ಕಾರಿ ಶಾಲೆ, ಬ್ಯಾಲಕೆರೆ (4) ಡಾ. ಅಂಬೇಡ್ಕರ್ ಸಮುದಾಯ ಭವನ, ಸಿಂಗನಾಯಕನಹಳ್ಳಿ.

ಆದರೆ ಕೋವಿಡ್ ನಿರ್ಬಂಧಗಳಿಂದ ನಾಲ್ಕು ಸಹಾಯ ಕೇಂದ್ರಗಳನ್ನು ತಾತ್ಕಾಲಿಕವಾಗಿ ಮುಚ್ಚಲಾಗಿತ್ತು. ಕೋವಿಡ್ ನಿರ್ಬಂಧಗಳನ್ನು ತೆಗೆದುಹಾಕಿರುವುದರಿಂದ ಸಹಾಯ ಕೇಂದ್ರಗಳು ಮತ್ತೆ ಕಾರ್ಯ ನಿರ್ವಹಿಸಲು ಪ್ರಾರಂಭಿಸಲಿವೆ.

**ದಿನಾಂಕ: 01.07.2021ರಿಂದ ಕೆಳಕಂಡ ಸಹಾಯ ಕೇಂದ್ರಗಳು ಕಾರ್ಯಾರಂಭ ಮಾಡಲಿವೆ.**

**1) ಸರ್ಕಾರಿ ಉರ್ದು ಪ್ರಾಥಮಿಕ ಶಾಲೆ, ಮೇಡಿ ಅಗ್ರಹಾರ**

**2) ಸೋಮಶೆಟ್ಟಿಹಳ್ಳಿ ಸಮುದಾಯ ಭವನ, ಸೋಮಶೆಟ್ಟಿಹಳ್ಳಿ**

ಇನ್ನುಳಿದ ಸಹಾಯ ಕೇಂದ್ರಗಳನ್ನು ಶೀಘ್ರದಲ್ಲಿಯೇ ತೆರೆಯಲಾಗುವುದು. ಈ ಕೇಂದ್ರಗಳು ಸೀಮಿತ ಅವಧಿವರೆಗೆ ಮಾತ್ರ ತೆರೆದಿರುತ್ತವೆ. ಕಟ್ಟಡಗಳ ಮಾಲೀಕರು ಈ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳುವಂತೆ ಕೋರಲಾಗಿದೆ. ಸಾರ್ವಜನಿಕರು ತಮ್ಮ ಅರ್ಜಿಗಳನ್ನು ಸಮಿತಿಯ ಅಧಿಕೃತ ಆನ್‌ಲೈನ್ ಪೋರ್ಟಲ್ jcc-skl.in ಮೂಲಕವೂ ಸಲ್ಲಿಸಬಹುದು.

ಸಹಾಯ ಕೇಂದ್ರಗಳು ಕಚೇರಿ ಕೆಲಸದ ಎಲ್ಲಾ ದಿನಗಳಂದು ಬೆಳಿಗ್ಗೆ 10.00 ರಿಂದ ಸಂಜೆ 4.00 ಗಂಟೆಯವರೆಗೆ ಕಾರ್ಯನಿರ್ವಹಿಸಲಿವೆ.

ಸಹಿ/– ಕಾರ್ಯದರ್ಶಿ
ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ಸಮಿತಿ

ಸ್ವಚ್ಛ ಸಂಕೀರ್ಣ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಶ್ರೀ ಬಿ. ಎಸ್. ಯಡಿಯೂರಪ್ಪ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ನನ್ನ ಗ್ರಾಮ
ನನ್ನ ಸ್ವಚ್ಛತೆ
ನನ್ನ ಪ್ರತಿಜ್ಞೆ

ಗ್ರಾಮೀಣ ಕರ್ನಾಟಕದ ಜನರ ಸುಸ್ಥಿರ ನೈರ್ಮಲ್ಯ ಅಭ್ಯಾಸಗಳನ್ನು ಉತ್ತಮಪಡಿಸುವ ನಿಟ್ಟಿನಲ್ಲಿ, ದೇಶದಲ್ಲಿಯೇ ಮೊದಲ ಬಾರಿಗೆ **“ಕರ್ನಾಟಕ ರಾಜ್ಯ ಗ್ರಾಮೀಣ ನೈರ್ಮಲ್ಯ ನೀತಿ, ಕಾರ್ಯತಂತ್ರ ಮತ್ತು ಮಾದರಿ ಉಪವಿಧಿಗಳು”** ಜಾರಿಗೆ ತಂದು ಅನುಷ್ಠಾನಗೊಳಿಸಲಾಗುತ್ತಿದೆ.

“ಕರ್ನಾಟಕ ರಾಜ್ಯ ಗ್ರಾಮೀಣ ನೈರ್ಮಲ್ಯ ನೀತಿ, ಕಾರ್ಯತಂತ್ರ ಮತ್ತು ಮಾದರಿ ಉಪವಿಧಿಗಳು” ಪ್ರತಿಯನ್ನು ಡೌನ್‌ಲೋಡ್ ಮಾಡಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ ಈ ಕೆಳಕಂಡ ಜಾಲತಾಣಕ್ಕೆ ಭೇಟಿನೀಡಿ
www.english.swachhamevajayate.org/documents/

- **1883 ಗ್ರಾಮ ಪಂಚಾಯಿತಿಗಳಲ್ಲಿ** ಘನ ತ್ಯಾಜ್ಯ ನಿರ್ವಹಣಾ ಘಟಕಗಳ ಕಾರ್ಯಾಚರಣೆ 2022 ರ ವೇಳೆಗೆ 6000 ಗ್ರಾಮ ಪಂಚಾಯಿತಿಗಳಿಗೆ ಘಟಕದ ಗುರಿ.
- **4768 ಗ್ರಾಮ ಪಂಚಾಯಿತಿಗಳಲ್ಲಿ** ದ್ರವ ತ್ಯಾಜ್ಯ ನಿರ್ವಹಣೆ ಮಾಡಲು ಅನುಮೋದನೆ.
- **4 ಜಿಲ್ಲೆಗಳಲ್ಲಿ** ಮೆಟೀರಿಯಲ್ ರಿಕವರಿ ಫೆಸಿಲಿಟಿ ಕಾಮಗಾರಿ ಅನುಷ್ಠಾನಕ್ಕೆ ಚಾಲನೆ.
- **60 ಗೋಬರ್‌ಧನ್ ಘಟಕಗಳ** ಸ್ಥಾಪನೆಗೆ ಕ್ರಮ.
- **17 ಮಲ ತ್ಯಾಜ್ಯ ನಿರ್ವಹಣಾ ಘಟಕಗಳ** ನಿರ್ಮಾಣಕ್ಕೆ ಚಾಲನೆ 100 ಘಟಕಗಳ ನಿರ್ಮಾಣದ ಗುರಿ.

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಶ್ರೀ ಕೆ.ಎಸ್. ಈಶ್ವರಪ್ಪನವರು ಸ್ವಚ್ಛ ಸಂಕೀರ್ಣ ಚಾಲನೆ ನೀಡುತ್ತಿರುವುದು.

ಪರಿಹಾರ parihara
ಗ್ರಾಮೀಣ ನಾಗರೀಕರು ನೀರು ಮತ್ತು ನೈರ್ಮಲ್ಯದ ಕುರಿತಾದ ಸಮಸ್ಯೆಗಳಿಗೆ ಕರೆಮಾಡಿ
9480985555
GovtOfKarnatakaRdpr | GokRDPR | @gokRDPR

ಮಾಸ್ಕ್ ಧರಿಸಿ | ವ್ಯಕ್ತಿಗತ ಅಂತರ ಕಾಪಾಡಿ | ಆರೋಗ್ಯದಿಂದಿರಿ

ದೇಶದ ಕಾಡು, ವನ್ಯಜೀವಿ ನದಿಗಳು ಸೇರಿ ಪರಿಸರ ಉಳಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ.

ವಾಪ್ರಸಾ/ಗ್ರಾ.ಕು.ನೀ.ಇ/27/2021-22

# ವೈದ್ಯ–ರೋಗಿ ಬಾಂಧವ್ಯ ಹೆಚ್ಚಲಿ

• ಡಾ. ವಿನಯ ಶ್ರೀನಿವಾಸ್

ವೈದ್ಯೋ ನಾರಾಯಣೋ ಹರಿಃ ಎನ್ನುವ ಕಾಲವೊಂದಿತ್ತು. ವೈದ್ಯನನ್ನು ಸಾಕ್ಷಾತ್ ಭಗವಂತನ ಸ್ವರೂಪ ಎಂದು ಪರಿಗಣಿಸುತ್ತಿದ್ದ ಆ ದಿನಗಳು ಇನ್ನು ಕೇವಲ ನೆನಪಾಗಿ ಉಳಿಯುತ್ತವೆಯೇನೋ? ಕೆಲವು ದಶಕಗಳ ಹಿಂದೆ ಮೆರಿಟ್‌ನಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳೆಲ್ಲರೂ ವೈದ್ಯಕೀಯ ಶಿಕ್ಷಣದತ್ತ ಒಲವು ತೋರುತ್ತಿದ್ದರು. ಅದಕ್ಕೆ ಕಾರಣ ಆ ವೃತ್ತಿಯಲ್ಲಿ ಇದ್ದ ಮಾನವೀಯ ಸ್ಪರ್ಶ ಹಾಗೂ ಸಮಾಜದ ಸ್ವಾಸ್ಥ್ಯ ಕಾಪಾಡುವ ವಿಶೇಷ ಅವಕಾಶ. ರೋಗಿಯ ನೋವು ನಿವಾರಿಸಿದಾಗ ಸಿಗುತ್ತಿದ್ದ ಒಂದಿಷ್ಟು ಸಾರ್ಥಕ ಭಾವ ಮತ್ತು ಆ ವೃತ್ತಿಗೆ ಇದ್ದ ಉನ್ನತ ಗೌರವವೂ ಬಹಳಷ್ಟು ಜನರನ್ನು ಆಕರ್ಷಿಸಿದ್ದುಂಟು.

ಹಾಗೆಂದು ವೈದ್ಯರಾಗುವುದು ಸುಲಭವಲ್ಲ. ಅಧ್ಯಯನವೊಂದು ಹೇಳುವಂತೆ ವಿಶ್ವದ ಅತ್ಯಂತ ಕಠಿಣವಾದ ವ್ಯಾಸಂಗವಿದು. ಹತ್ತು ವರ್ಷಗಳ ಕಠಿಣ ಪರಿಶ್ರಮದ ನಂತರವೇ ಒಂದು ವಿಶೇಷ ವಿಷಯತಜ್ಞನಾಗುವುದು ಸಾಧ್ಯ. ವೃತ್ತಿಗಿಳಿದ ಮೇಲೆಯೂ ಆತನ ಬವಣೆಗಳು ಮುಗಿಯುವುದಿಲ್ಲ. ವೃತ್ತಿಯ ಒತ್ತಡದಿಂದಾಗಿ ವೈಯಕ್ತಿಕ ಹಾಗೂ ಕೌಟುಂಬಿಕ ಜೀವನದಲ್ಲಿ ಹೊಂದಾಣಿಕೆ ಮಾಡಿಕೊಳ್ಳುತ್ತಲೇ ಸಾಗಬೇಕು. ಆದರೆ ಈ ಎಲ್ಲ ಕಷ್ಟಗಳ ನಡುವೆಯೂ ಆತನಿಗೆ ಅಲ್ಲಿ ಸಂತೃಪ್ತಿ, ಸುರಕ್ಷತೆ ಇತ್ತು. ಗುಣಮುಖರಾದವರು ತೋರುತ್ತಿದ್ದ ಗೌರವ ಮತ್ತು ಕೃತಜ್ಞತೆ ಅವನನ್ನು ಇನ್ನಷ್ಟು ಸೇವೆ ಮಾಡಲು ಪ್ರೋತ್ಸಾಹಿಸುತ್ತಿತ್ತು.

ಆದರೆ ಪರಿಸ್ಥಿತಿ ಬದಲಾಗಿದೆ. ವೈದ್ಯರನ್ನು ದೇವರೆಂದು ಆರಾಧಿಸುವ ದಿನಗಳು ಕಳೆದು ಹೋಗಿವೆ. ಆತನನ್ನು ಮಾನವೀಯತೆಯಿಲ್ಲದ ವ್ಯಾಪಾರಿ ಮನೋಭಾವದವನು ಎಂದು ಬಿತ್ತರಿಸಲಾಗುತ್ತಿದೆ. ಆತನ ನಿಯಂತ್ರಣದಲ್ಲಿಲ್ಲದ ಕಾರಣದಿಂದ ರೋಗಿಯ ಸಾವು ಸಂಭವಿಸಿದರೂ ಅದಕ್ಕೂ ಅವನ ನಿರ್ಲಕ್ಷ್ಯತನವೇ ಹೊಣೆ ಎಂದು ಅರ್ಥೈಸಲಾಗುತ್ತಿದೆ. ತುರ್ತು ಚಿಕಿತ್ಸೆಯ

ಸಂದರ್ಭದಲ್ಲಿ ರೋಗಿಯ ಪ್ರಾಣಕ್ಕೆ ಹಾನಿಯಾದರೆ ಹಿಂದು ಮುಂದು ಯೋಚಿಸದೇ ಆತನ ಮೇಲೆ ಹಲ್ಲೆ ನಡೆಸಲಾಗುತ್ತಿದೆ. ಆಸ್ಪತ್ರೆಗಳ ಪರಿಕರಗಳನ್ನು ಧ್ವಂಸ ಮಾಡಲಾಗುತ್ತಿದೆ. ಇದರ ಪರಿಣಾಮವೇನು ಗೊತ್ತೆ? ಇಂದಿನ ವಿದ್ಯಾರ್ಥಿಗಳು ವೈದ್ಯವೃತ್ತಿಗೆ ಇಳಿಯಲು ಹಿಂದು ಮುಂದು ನೋಡುತ್ತಿದ್ದಾರೆ. ಒಂದು ವೇಳೆ ಪದವಿಯನ್ನು ಇಲ್ಲಿ ಪಡೆದರೂ ಹೊರ ದೇಶಗಳಲ್ಲಿ ವೃತ್ತಿಯನ್ನು ಮುಂದುವರೆಸುವುದರ ಬಗ್ಗೆ ಅನೇಕರು ವಿಚಾರ ಮಾಡುತ್ತಿದ್ದಾರೆ.



ಈ ಬದಲಾವಣೆಗೆ ಕಾರಣವೇನು ಎಂದು ಯೋಚಿಸುವುದಾದರೆ, ಎಲ್ಲೋ ಒಬ್ಬಿಬ್ಬರು ವೈದ್ಯರು ಹಣದ ಆಮಿಷಕ್ಕೊಳಗಾಗಿ ದುರಾಚಾರಗಳನ್ನೆಸಗಿರಬಹುದು. ಎಲ್ಲೋ ಒಂದರೆಡು ಸಂದರ್ಭಗಳಲ್ಲಿ ವೈದ್ಯರ ನಿರ್ಲಕ್ಷ್ಯತನದಿಂದ ರೋಗಿಗೆ ಹಾನಿಯಾಗಿರಬಹುದು. ಆದರೆ ಇದಕ್ಕಾಗಿ ಎಲ್ಲ ವೈದ್ಯರನ್ನೂ ಸಾಮಾನ್ಯೀಕರಿಸುವುದು ಎಷ್ಟರ ಮಟ್ಟಿಗೆ ಸರಿ? ಇಂದಿಗೂ ಹತ್ತು ರೂಪಾಯಿಯಷ್ಟೇ ಸಲಹಾ ಶುಲ್ಕವನ್ನು ತೆಗೆದುಕೊಂಡು ರೋಗಿಗಳ ಸೇವೆಯನ್ನು ಮಾಡುತ್ತಿರುವ ವೈದ್ಯರು ನಮ್ಮೊಂದಿಗಿದ್ದಾರೆ. ತನು-ಮನವನ್ನು ಅರ್ಪಿಸಿ ನಿಃಸ್ವಾರ್ಥವಾಗಿ ರೋಗಿಗಳ ಶುಶ್ರೂಷೆ ಮಾಡುತ್ತಿರುವ ವೈದ್ಯರು ನಮ್ಮೊಂದಿಗಿದ್ದಾರೆ. ಅದಕ್ಕೆ ಪ್ರತಿಯಾಗಿ ಅವರು ನಿರೀಕ್ಷಿಸುವುದು ಒಂದಿಷ್ಟು ಗೌರವ ಮತ್ತು ಕೃತಜ್ಞತೆಯನ್ನು.

ಇತ್ತೀಚೆಗೆ ಇಡೀ ವಿಶ್ವವನ್ನೇ ತಲ್ಲಣಗೊಳಿಸಿದ ಕೋವಿಡ್ ಸಾಂಕ್ರಾಮಿಕವನ್ನೇ ತೆಗೆದುಕೊಳ್ಳಿ. ವೈರಾಣುವಿನ ವರ್ತನೆಯೇ ಸರಿಯಾಗಿ ಗೊತ್ತಿರದ ಸಮಯದಲ್ಲಿಯೂ ಯಾವ ವೈದ್ಯನೂ ಚಿಕಿತ್ಸೆ ನೀಡುವುದಿಲ್ಲ ಎಂದು ಮನೆಯಲ್ಲಿ ಕೂರಲಿಲ್ಲ. ಬದಲಾಗಿ ಕುಟುಂಬದವರೇ ರೋಗಿಯ ಹತ್ತಿರ ಸುಳಿಯಲು ಹಿಂಜರಿದಾಗ ಈತ ಚಿಕಿತ್ಸೆಗೆ ಮುಂದಾದ. ಉಸಿರುಗಟ್ಟಿಸುವ ಪಿಪಿಇ ಉಡುಗೆಯಿಂದ ಪೂರ್ತಿ ದೇಹವನ್ನು ಮುಚ್ಚಿಕೊಂಡು ಕೋವಿಡ್ ರೋಗಿಗಳ ಆರೈಕೆಯಲ್ಲಿ ತೊಡಗಿದ. ಈ ಪ್ರಕ್ರಿಯೆಯಲ್ಲಿ ಸಾವಿರಕ್ಕೂ ಹೆಚ್ಚು ವೈದ್ಯರು ಸೋಂಕು ತಗುಲಿ ಮೃತರಾದರು. ಕೋವಿಡ್ ಯೋಧರು ಎಂದು ಸರ್ಕಾರ, ಸಮಾಜ ಗೌರವಿಸಿದರೂ ಸಾಕಷ್ಟು ಕಡೆ ವೈದ್ಯರನ್ನು ಹಿಂಸಿಸಲಾಯಿತು. ಇದರಿಂದಾಗಿ ತುರ್ತು ಚಿಕಿತ್ಸಾ ಘಟಕಗಳಲ್ಲಿ ಕೆಲಸ ನಿರ್ವಹಿಸಲು ಎಷ್ಟೋ ವೈದ್ಯರು ಹೆದರಿದ್ದುಂಟು, ಪೋಲೀಸ್ ರಕ್ಷಣೆಗಾಗಿ ಮೊರೆ ಹೋದದ್ದುಂಟು.

ಕಾಯಿಲೆಗಳ ವರ್ತನೆ ಮತ್ತು ಚಿಕಿತ್ಸೆಗೆ ರೋಗಿಯ ದೇಹದ ಸ್ಪಂದನೆ ವ್ಯಕ್ತಿಯಿಂದ ವ್ಯಕ್ತಿಗೆ ಬೇರೆಯಾಗಿರುತ್ತದೆ. ಅಲ್ಲದೆ ವೈದ್ಯರ ನಿಯಂತ್ರಣದಲ್ಲಿಲ್ಲದ ಎಷ್ಟೋ ಅಂಶಗಳೂ ಚಿಕಿತ್ಸೆಯ ವೇಳೆಯಲ್ಲಿ ತೊಡರನ್ನು ತರುತ್ತವೆ ಎಂಬುದನ್ನು ಪ್ರತಿಯೊಬ್ಬರೂ ಅರಿತಿರಬೇಕು. ರೋಗಿಗೆ ಔಷಧೋಪಚಾರದ ಜೊತೆಯಲ್ಲಿಯೇ ಮಾನವೀಯ ಸ್ಪಂದನೆಯೂ ಮುಖ್ಯ ಎಂಬುದನ್ನು ವೈದ್ಯನೂ ಮನಗಾಣಬೇಕು. ಕಾಯಿಲೆಯನ್ನು ಗುಣಪಡಿಸುವುದರ ಜೊತೆಯಲ್ಲಿ ಜನರ ಆರೋಗ್ಯವರ್ಧನೆಗೂ ಆತ ಸಲಹೆ ನೀಡಬೇಕು. ಡಾ. ಬಿ. ಸಿ. ರಾಯ್‌ರವರ ಜನ್ಮದಿನದ ನೆನಪಿಗಾಗಿ ಆಚರಿಸುತ್ತಿರುವ ವೈದ್ಯರ ದಿನದಂದು ರೋಗಿ-ವೈದ್ಯರ ನಡುವಿನ ಬಾಂಧವ್ಯ ವೃದ್ಧಿಸಲಿ ಎಂದು ಆಶಿಸೋಣವೇ? ❖

# ವೈದ್ಯ ಎಂಬ ಸಮೂಹಪ್ರಜ್ಞೆ



• ಡಾ. ವಿಜಯಲಕ್ಷ್ಮಿ ಪಿ.

**ವೈದ್ಯರನ್ನು ಗೌರವಿಸಲು, ಅವರ ಸಾಧನೆಗಳನ್ನು ಸ್ಮರಿಸಲು, ವೈದ್ಯರ ಸೇವೆಯನ್ನು ನೆನಪಿಸಿಕೊಳ್ಳುವ ಸಂದರ್ಭವೇ ವೈದ್ಯ ದಿನ. ಇದು ಇಂದಿನ ಆಚರಣೆ ಮಾತ್ರವಲ್ಲ. ಭಾರತದಲ್ಲಿ ವೈದ್ಯಶಾಸ್ತ್ರವನ್ನು ವಿಭಾಗಿಸಿ, ಶಸ್ತ್ರಚಿಕಿತ್ಸೆಗೆ ವಿಶೇಷ ಪ್ರಾಧಾನ್ಯವನ್ನು ತಂದುಕೊಟ್ಟಂತಹ, ಆಯುರ್ವೇದದ ಎಂಟೂ ವಿಭಾಗಗಳಿಗೂ ಕಾಯ ಹಾಗೂ ಶಸ್ತ್ರಚಿಕಿತ್ಸೆಯ ಅಗತ್ಯವನ್ನು ಲೋಕಕ್ಕೆ ಪರಿಚಯಿಸಿದ ಆಯುರ್ವೇದದ ವೇದವ್ಯಾಸರೇ ಆದ ಧನ್ವಂತರಿ ಜಯಂತಿಯನ್ನು ಆಚರಿಸುವ ಸಂಪ್ರದಾಯ ಹಿಂದಿನಿಂದಲೂ ಇತ್ತು, ಇಂದಿಗೂ ಮುಂದುವರೆದಿದೆ. ಆದರೆ ಅದು ಕೇವಲ ಆಯುರ್ವೇದ ವೈದ್ಯ ಗುಂಪಿಗೇ ಸೀಮಿತವಾಗಿರುವುದು ವಿಪರ್ಯಾಸ.**

ವೈದ್ಯನಾದವನು ವ್ಯವಸಾಯಿಯಾಗಿರಬೇಕೆಂದು ಹೇಳುತ್ತದೆ ವೈದ್ಯಶಾಸ್ತ್ರ. ಎಂದರೆ ಕೃಷಿಕನಲ್ಲ, ವೈದ್ಯವೃತ್ತಿಯನ್ನು ಸತತವಾಗಿ ಅಭ್ಯಾಸ ಮಾಡಿ, ಎಂತಹ ಪರಿಸ್ಥಿತಿಯಲ್ಲಿಯೂ ರೋಗಿಯ ಸ್ವಾಸ್ಥ್ಯವನ್ನು ಕಾಪಾಡುವ ಸಾಮರ್ಥ್ಯ ಹೊಂದಿರಬೇಕು ಎಂದು. ಅದರಲ್ಲೂ ದೇಶ, ಕಾಲ, ವಾಯು, ಜಲಗಳು ಅತ್ಯಂತ ದೂಷಿತವಾದಾಗ ಪ್ರಕೃತಿಯು ಸದಾಚಾರ, ಅನಾಚಾರದಲ್ಲಿರುವ ಎಲ್ಲಾ ಜನರನ್ನೂ ಏಕಕಾಲದಲ್ಲಿ ಬಾಧಿಸುತ್ತದೆ. ಇದೇ ಜನಪದೋಧ್ವಂಸ; ಇಡೀ ಜನಪದವೇ ಧ್ವಂಸವಾಗುತ್ತದೆ. ದೇಶಕಾಲಗಳ ವೈಪರೀತ್ಯವನ್ನು ಗಮನಿಸಿ ವೈದ್ಯನಾದವನು ಜನಪದೋಧ್ವಂಸಕ್ಕೆ ಮೊದಲು ಜಾಗ್ರತನಾಗಿ ಔಷಧಗಳನ್ನು ಸಂಗ್ರಹಿಸಿಕೊಳ್ಳಬೇಕು. ಇಂತಹ ಕಾಲದಲ್ಲಿ ಜನಪದವು ಭೀತಿಗೊಳಗಾಗದಂತೆ ಸಾಂತ್ವನ, ಧೈರ್ಯ ಹೇಳುವುದೂ ವೈದ್ಯನ ಕರ್ತವ್ಯ. ಇದನ್ನು ಪಾಲಿಸುವುದು, ರಾಜ ಹಾಗೂ ಜನಪದದ ಕರ್ತವ್ಯ. ಇದು ಆದಿವೈದ್ಯನ ಚಿಂತನೆ.

'ವೈದ್ಯ ಸಮೂಹೋ ನಿಸ್ಸಂಶಯಕರಾಣಾಂ' ಎಂಬುದು ಪ್ರಸಿದ್ಧ ಲೋಕೋಕ್ತಿ. ಎಂದರೆ ವೈದ್ಯ ಸಮೂಹವು ರೋಗಗಳ ಸಂಶಯಗಳ ಪರಿಹಾರವನ್ನು ತಿಳಿಸುತ್ತದೆ ಎಂದು. ಆದರೆ ಇಂದು ರೋಗ ಅಥವಾ ರೋಗಿಗಳಿಗೆ ಸಂಬಂಧಪಟ್ಟಂತಹ ಸಂಶಯಗಳಿಗೆ ವೈದ್ಯೇತರರ ಸಲಹೆಯನ್ನೇ ಪಡೆದುಕೊಂಡು, ರೋಗಿಗೆ ಚಿಕಿತ್ಸೆ ಕೊಡಬೇಕಾಗಿರುವುದು ಅನೇಕ ತೊಂದರೆಗಳಿಗೆ ಕಾರಣವಾಗಿ ಜನಪದೋಧ್ವಂಸ ಹೆಚ್ಚಾಗಲು ಕಾರಣವಾಗುತ್ತಿದೆ. ರೋಗಿಯನ್ನೇ ನೋಡದ ವೈದ್ಯೇತರರ ಸಲಹೆಗಳು ಇಂದು ಪ್ರಾಧಾನ್ಯ ಪಡೆದಿವೆ. ವೈದ್ಯಕೀಯ ಕ್ಷೇತ್ರದಲ್ಲಿ ರೋಗಿಗಳ ಜೊತೆ ವ್ಯವಹರಿಸಿ ಚಿಕಿತ್ಸೆಯ ಒಳಿತು-ಕೆಡಕು, ಬೇಕು-ಬೇಡಗಳನ್ನು ಗಮನಿಸದೆ ಪ್ರಯೋಗಾಲಯದ ಪ್ರಯೋಗಗಳನ್ನು ರೋಗಿಯ ಮೇಲೆ ಪ್ರಯೋಗಿಸುವವರು ವೈದ್ಯರಾದ್ದರಿಂದ ಜನರ ಸಿಟ್ಟು ವೈದ್ಯರ ಮೇಲೆ ಹೆಚ್ಚಾಗುತ್ತಿದೆ.

ವೈದ್ಯರ ಇನ್ನೊಂದು ಮುಖ್ಯ ಲಕ್ಷಣ ಉಪಕರಣವಂತವಾಗಿರಬೇಕು ಎಂದು. ಆದರೆ ಇಂದು ಯಾವುದೇ ಔಷಧ ಅಥವಾ ಉಪಕರಣಗಳನ್ನು ವೈದ್ಯರು ಹೊಂದಲು ಅವಕಾಶವೇ ಇಲ್ಲ. ಇದರ ಜವಾಬ್ದಾರಿ ವೈದ್ಯೇತರರದ್ದು. ಅವರಿಗೆ ಅನುಗುಣವಾಗಿ ಪ್ರವರ್ತಿಸಬೇಕಾದದ್ದು ವೈದ್ಯರ ಅನಿವಾರ್ಯತೆ. ಆದರೆ ದೂರು ಮಾತ್ರ ವೈದ್ಯನಿಗೆ. ಜನರ ಆಕ್ರೋಶ ವೈದ್ಯರ ಮೇಲೆ. ರಾಜನಿಗೆ ಸಲಹೆ ನೀಡುವವರ ಗುಂಪಿನಲ್ಲಿ ಒಬ್ಬ ವೈದ್ಯನಿದ್ದರೆ ಐದು ಮಂದಿ ವೈದ್ಯೇತರರೇ. ಹಾಗಾಗಿ ವೈದ್ಯರ ಮಾತಿಗೆ ಬೆಲೆ ಎಲ್ಲಿ?

ವೈದ್ಯನಿಗಿರಬೇಕಾದ ಮತ್ತೊಂದು ಗುಣ ಪ್ರತ್ಯುತ್ಪನ್ನಮತಿತ್ವ. ರೋಗಿಯ ಪರಿಸ್ಥಿತಿಯನ್ನರಿತು ಈ ಸಂದರ್ಭದಲ್ಲಿ, ಈ ರೋಗಿಗೆ ಯಾವ ರೀತಿಯ ಚಿಕಿತ್ಸೆ ಸೂಕ್ತ ಎಂದು ನಿರ್ಧಾರ ಮಾಡುವ ಬುದ್ಧಿವಂತಿಕೆ. ಇದನ್ನೇ ವೈದ್ಯರ ಕೈಗುಣ, ಅಥವಾ ವೈದ್ಯರ ಚಾಣಾಕ್ಷತೆ ಎಂದು ಹೇಳುವುದು. ಚಾಣಾಕ್ಷತೆಗೆ ಮಾನದಂಡ ಇಲ್ಲ, ಸಾಕ್ಷಿ ಸಾಧ್ಯವಿಲ್ಲ, ರೋಗಿ ಪ್ರೂಫ್ ಕೇಳಿದಾಗ ಚಾಣಾಕ್ಷತೆಗೆ ಬೆಲೆಯಿಲ್ಲ.

ರೋಗಿಗಿರಬೇಕಾದ ಮುಖ್ಯವಾದ ಗುಣವೇ ಭಿಷಗ್ವಶ್ಯನಾಗಿರಬೇಕು. ಎಂದರೆ ವೈದ್ಯರ ಸಲಹೆಗಳನ್ನು ಮರೆಯದಂತೆ ಪಾಲಿಸಬೇಕು. ವೈದ್ಯರು ಹೇಳುವ ಆಹಾರ, ಆಚಾರ, ವಿಹಾರಗಳ ವಿಧಿ–ನಿಷೇಧಗಳನ್ನು ಚಾಚೂ ತಪ್ಪದೆ ಪಾಲಿಸುವಂತಹವನು ಎಂತಹ ವ್ಯಾಧಿಯನ್ನಾದರೂ ಗೆಲ್ಲಬಲ್ಲಂತಹ ರೋಗಿ. ರೋಗಿಯಾದವನು ತನ್ನದೇ ಆದಂತಹ ನಿರ್ಧಾರಗಳನ್ನು ವಿವೇಚನೆ ಇಲ್ಲದೆ ತೆಗೆದುಕೊಳ್ಳುವುದು ಅಪಾಯಕಾರಿ ಪ್ರವೃತ್ತಿ. ಅನಾವಶ್ಯಕ ಭೀತಿಯನ್ನು ಬಿಟ್ಟು ಪರಿಸ್ಥಿತಿಯನ್ನು ಧೈರ್ಯವಾಗಿ ಎದುರಿಸುವ ಮನೋಬಲ ರೋಗಿಗಿದ್ದರೆ ಎಲ್ಲಾ ವ್ಯಾಧಿಗಳು ವಿಶೇಷವಾಗಿ ಜನಪದೋಧ್ವಂಸ ವ್ಯಾಧಿಗಳನ್ನು ಸಮರ್ಥವಾಗಿ ಎದುರಿಸಬಹುದು. ಮನೋಬಲವನ್ನು ಕಳೆದುಕೊಂಡ ರೋಗಿಗಳ ಅಲ್ಪವ್ಯಾಧಿಯಾದರೂ ಬೃಹತ್ತಾಗಿ ತೋರಿ ಚಿಕಿತ್ಸಾ ವ್ಯತ್ಯಯಗಳಾಗುವ ಸಂಭವ ಹೆಚ್ಚು. ಇಂದು ಆಗುತ್ತಿರುವುದೂ ಅದೇ. ಅತಿಯಾದ ವೈದ್ಯಕೀಯ ಜ್ಞಾನದಿಂದ ತನಗೇನಾಗುತ್ತಿದೆ ಎನ್ನುವ ವಿವೇಚನೆ ಮಾಡಲು ಸಾಧ್ಯವಾಗದೇ ಅತಿಯಾದ ಭೀತಿ, ಸಲಹೆಗಳ ವೈಭವೀಕರಣ, ಪ್ರತಿಯೊಬ್ಬರೂ ವೈದ್ಯಕೀಯ ಪರಿಣತರೇ ಆಗಿ, ಅವರವರದೇ ಆದ ವ್ಯಾಖ್ಯಾನಗಳಿಂದ ಅತಿಯಾದ ಅಥವಾ ವಿಕೃತವಾದ ಆಚಾರ, ಆಹಾರ, ಔಷಧಗಳ ಪರಿಣಾಮ ಜನಪದವನ್ನು ಆತಂಕಕ್ಕೆ ದೂಡಿದೆ. ಸಾಮಾಜಿಕ ಜಾಲತಾಣಗಳ ವಿವೇಚನೆ ಇಲ್ಲದ ಅವಲಂಬನೆ ಹಲವು ಸಂಕಷ್ಟಗಳಿಗೆ ಕಾರಣವಾಗಿದೆ.

ಸಾಂಕ್ರಾಮಿಕ, ಜನಪದೋಧ್ವಂಸಕರವಾದ ವ್ಯಾಧಿಯು ಹಬ್ಬುತ್ತಿರುವಾಗ ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕಾದ ರಾಜರೂ ವ್ಯವಸ್ಥೆಯೂ ಅದನ್ನು ರಾಜಕೀಯ ಲಾಭಕ್ಕೆ ಬಳಸಿಕೊಳ್ಳುತ್ತಿರುವುದು ವಿಪರ್ಯಾಸವೇ ಸರಿ. ❖

ಬೆಂಗಳೂರಿನಲ್ಲಿ 60 ಆಯುರ್ ಸೆಂಟ್ರಲ್ ಔಷಧಿ ಅಂಗಡಿಗಳಿವೆ
AyurCentral
www.ayurcentral.com



VASER LIPOSUCTION
(BODY SHAPING) @ Dr. Shetty's

Used to treat:
- Lipoma ( fat balls under the skin)
- Remove Fat bulges (like Double Chin, Arms, Abdomen, Love Handles & Thighs)
- To Get A Desired Curve.

Benefits:
- Less pain & Swelling
- Less blood loss
- Can treat multiple area in single Procedure
- Enhanced skin retraction

Popular Procedures:
- Stitch-less nose reshaping
- Stitch-less lipoma removal
- Stitch-less sebaceous cyst & Birthmark removal
- Stitch-less Gynecomastia
- Permanent cure for melasma & Dark circles
- Scar-less mole removal
- 360-degree body contouring
- Hair Transplantation

Dr. Shetty's Cosmetic Centre
Dr. Sahebgowda Shetty (MBBS. MS. M.Ch. (Plastic Surgery)
Address: Navarang Circle, Rajajinagar, Bangalore - 10.
CONTACT : 8050008855



## ವಿವಿಡಸ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ವೈದ್ಯಕೀಯ ಸೇವೆಗೆ ಒಂದು ನಿದರ್ಶನ !!!

Advertorial

**ಕೊ**ರೋನ ಎಂಬ ಸಾಂಕ್ರಾಮಿಕ ರೋಗವು ಜನರಲ್ಲಿರುವ ಭಯ ಮತ್ತು ಆರೋಗ್ಯದ ಸಮಸ್ಯೆಗಳನ್ನು ಭುಡಮೇಲು ಮಾಡಿದೆ. ಈ ರೋಗಕ್ಕೆ ಸಮರ್ಪಕವಾದ ಚಿಕಿತ್ಸೆ ಇದ್ದರು ರೋಗಿಯು ಮಾಹಿತಿ ಮತ್ತು ಕಾಳಜಿಯಿಂದ ವಂಚಿತರಾಗುತ್ತಾನೆ. ವಿವಿಡಸ್ ಅಸ್ಪತ್ರೆಯಲ್ಲಿ ಕೊರೋನ

ಸಮಸ್ಯೆಯಲ್ಲದೆ ಇತರೆ ಸಮಸ್ಯೆಗಳಿಗೆ. ಸೂಕ್ತವಾದ ಚಿಕಿತ್ಸೆಯನ್ನು ನಮ್ಮ ನೂತನವಾದ ಆಸ್ಪತ್ರೆಯಲ್ಲಿ ಕೊಡಲಾಗುತ್ತದೆ. ಗುಣಮಟ್ಟದ ಆರೋಗ್ಯ ನಿರ್ವಹಣೆ ಮತ್ತು ಉತ್ತಮ ಚಿಕಿತ್ಸೆಯ ಧ್ಯೇಯದೂಂದಿಗೆ ಆಸ್ಪತ್ರೆಯ ಸಂಸ್ಥಾಪಕರಾದ ಡಾ. ಶ್ರೀಹರಿ ಮೊದ್ಗಲ್‌ರವರು, ತಮ್ಮ ನವ್ಯ ನವೀನ 52 ಹಾಸಿಗೆಗಳ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಸಾರ್ವಜನಿಕರಿಗೆ ಸಮರ್ಪಿಸಿದ್ದಾರೆ. ಆಸ್ಪತ್ರೆಯು ಹೆಚ್ಚಿನ ನೈತಿಕ ಮಾನದಂಡವನ್ನು ಹೊಂದಿದ್ದು, ಪ್ರತಿಯೊಬ್ಬ ರೋಗಿಯ ಅಗತ್ಯವನ್ನು ಪರಿಹರಿಸಲು ಶ್ರಮಿಸುತ್ತದೆ. ನಮ್ಮ ಕಾಳಜಿ ರೋಗಿಗಳ ಬಗೆಗಿನ ಗೌರವ ಮತ್ತು ಸಹಾನುಭೂತಿಯು ಅನೇಕರಿಂದ ಶ್ಲಾಘಿಸಲ್ಪಟ್ಟಿದೆ. ವೈದ್ಯಕೀಯ ಕ್ಷೇತ್ರದಲ್ಲಿ ಅಥವಾ ಆಸ್ಪತ್ರೆಯ ಸಿಬ್ಬಂದಿಯ ಕ್ಷೇಮವನ್ನು ಪರಿಗಣಿಸಿ ಪರಿಸ್ಥಿತಿಗೆ ಅನುಗುಣವಾಗಿ ಕಾರ್ಯನಿರ್ವಹಿಸುತ್ತೇವೆ. ಆಸ್ಪತ್ರೆಯು ರೋಗಿಗಳ ಸಂಧರ್ಭಕ್ಕೆ ಅನುಗುಣವಾಗಿ ಪೊರೈಸಬಹುದಾದ ಇತ್ತೀಚಿನ ಮತ್ತು ಆಧುನಿಕ ಉಪಕರಣಗಳನ್ನು ಹೊಂದಿದೆ.

**ಆರೋಗ್ಯ ಸೌಲಭ್ಯಗಳು:** ವಿವಿಡಸ್‌ನಲ್ಲಿನ ಪ್ರಮುಖ ಸೇವೆಗಳು. ತಾಯಿ ಮತ್ತು ಮಕ್ಕಳ ಆರೈಕೆ, ಗರ್ಭಿಣಿ ಮಹಿಳೆಯ ತಪಾಸಣೆ, ಶಿಶು ಮಕ್ಕಳ ಕ್ಷೇಮವನ್ನು ಆರಾಮದಾಯಕ ವಾತಾವರಣದಲ್ಲಿ ಚಿಕಿತ್ಸೆ ನೀಡಲಾಗುತ್ತದೆ. ಆರ್ಥೋ ಸಂಬಂಧಿತ ಚಿಕಿತ್ಸೆಗೆ ನಾವು ಪ್ರಸಿದ್ಧರಾಗಿದ್ದೇವೆ. ಎಲ್ಲಾ ರೀತಿಯ ಜಂಟಿ ಬದಲಿ ಶಸ್ತ್ರಚಿಕಿತ್ಸೆ ಮತ್ತು ಸುಧಾರಿತ ಚಿಕ್ಕಿತ್ಸೆಯನ್ನು ಕೊಡಲಾಗುವುದು ಮತ್ತು ಆಸ್ಪತ್ರೆಯಿಂದ ಕೂಡಲೇ ನಿರ್ಗಮಿಸಬಹುದಾಗಿದೆ. ಮಧುಮೇಹ, ಥೈರಾಯ್ಡ್, ಅಧಿಕ ರಕ್ತದೊತ್ತಡ, ದಂತವೈದ್ಯಶಾಸ್ತ್ರ ಮತ್ತು ಇತರ ಜೀವನಶೈಲಿ ಅಸ್ವಸ್ಥತೆಗಳ ತಪಾಸಣೆಮಾಡಲಾಗುತ್ತದೆ. ಆಸ್ಪತ್ರೆಯು ಕಾರ್ಡಿಯಾಲಜಿ, ನ್ಯೂರೋಸೈನ್ಸ್, ಮೂತ್ರಪಿಂಡ ಸಂಬಂಧಿತ ಸಮಸ್ಯೆ, ಶ್ವಾಶಕೋಶ ಶಾಸ್ತ್ರ, ಜಠರಗರುಳಿನ ಸಮಸ್ಯೆಗಳು, ಪ್ಲಾಸ್ಟಿಕ್ ಸರ್ಜರಿಯನ್ನು ಮಾಡಲಾಗುತ್ತದೆ. ಮುಖವನ್ನು ಸಹ ಮರುರೂಪಿಸಬಹುದು.

**ತುರ್ತು ಚಿಕಿತ್ಸೆ**

**ನೂತನವಾಗಿ ಪ್ರಾರಂಭವಾಗಿರುವ ವಿವಿಡಸ್ ಆಸ್ಪತ್ರೆಯಲ್ಲಿ. ಅತ್ಯಾದುನಿಕ ಶ್ರೇಣಿಯ ಚಿಕಿತ್ಸೆಗಳು ಲಭ್ಯ, ರೋಗಿಗಳ ತುರ್ತು ಸೇವೆಗೆ ಆಗತ್ಯವಿರುವ, 10 ಹಾಸಿಗೆಗಳ ಐಸಿಯು, 6 ಹಾಸಿಗೆಯ ಎನ್‌ಐಸಿಯು ಒಳಗೂಂಡಿದೆ. ರೋಗಿಗಳ ಸೇವೆಯಲ್ಲಿ ಮಹತ್ವದ ಪಾತ್ರವಹಿಸಿದೆ.**

ವಿವಿಡಸ್
SUPER SPECIALITY HOSPITALS
Caring for Life

ವಿಳಾಸ: ನಂ 357, ಎಚ್‌ಎಂಟಿ ಮುಖ್ಯರಸ್ತೆ, 2ನೇ ಹಂತ, ಗೋಕುಲ ಮೊದಲ ಸ್ಟೇಜ್, ನಂಜಪ್ಪ ರೆಡ್ಡಿ ಕಾಲನಿ, ವಿಶಾಲ್‌ಮಾರ್ಟ್ ಮುಂಭಾಗ, **ಮತ್ತಿಕೆರೆ**, ಬೆಂಗಳೂರು – 54
ಸಂಪರ್ಕಿಸಿ: **18001023239** | ಎಮರ್ಜೆನ್ಸಿ: **+917470005558**

ಕೋವಿಡ್‌ನ್ ಮೂರನೇ ಅಲೆಯಿಂದ ನಾವು ಜಾಗೃತರಾಗರಿಬೇಕಾಗಿದೆ.ಅದಕ್ಕೆ ಸೂಕ್ತವಾದ ಲಸಿಕೆಗಳನ್ನು ಪಡೆಯಿರಿ ಈ ಲಸಿಕೆಗಳು ಕೋವಿಡ್ ರೂಪಾಂತರಿಗಳಿಂದ ರಕ್ಷಿಸುತ್ತದೆ ಭಯಭಿತರಾಗುಹುದು ಬೇಡ.

**ಡಾ. ಅವಿನಾಶ್ ಹೆಚ್.ಆರ್. । ಫಿಸಿಶಿಯನ್**

ನಿಮ್ಮ ಉತ್ತಮ ಆರೋಗ್ಯಕ್ಕಾಗಿ ಸದಾ ನಿಮ್ಮ ಸೇವೆಯಲ್ಲಿ. ಕೊರೋನಾವು ಎರಡನೇ ಅಲೆ ವಯಸ್ಕರಲ್ಲದೆ. ಮಕ್ಕಳನ್ನು ಆವರಿಸಿದೆ ಆದರೆ ಮೂರನೆ ಅಲೆಯು ಹೆಚ್ಚಿನ ಪ್ರಮಾಣದಲ್ಲಿ ಮಕ್ಕಳನ್ನು ರಕ್ಷಿಸಲು, ನಮ್ಮ ವೈದ್ಯರು ಸಜ್ಜಾಗಿದ್ದಾರೆ. ಮಕ್ಕಳಿಗೆ ಯಾವುದೇ ಜ್ವರ, ನೇಗಡಿ, ಕೆಮ್ಮು ಕಂಡುಬಂದರೆ ಕೂಡಲೇ ವೈದ್ಯರನ್ನು ಸಂಪರ್ಕಿಸಿ ಮಾಸ್ಕ್, ಸ್ಯಾನಿಟೈಸರ್, ಅಂತರ ಕಡ್ಡಾಯ.



**ಡಾ.ಶ್ರೀಹರಿ ಮೊದ್ಗಲ್ । ಮಕ್ಕಳ ತಜ್ಞರು**

### ಹಸಿರು ಬೆಂಗಳೂರು ಸೃಷ್ಟಿಗೆ ಹೊಸ ಹೆಜ್ಜೆ: ಕಾರ್ಯಗಳಿಗೆ ಮುಖ್ಯಮಂತ್ರಿ ಯಡಿಯೂರಪ್ಪ ಚಾಲನೆ

# ಸಸ್ಯಶಾಸ್ತ್ರೀಯ ತೋಟ, ವೃಕ್ಷೋದ್ಯಾನ, ಕೆರೆ ಅಭಿವೃದ್ಧಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹದೇವಪುರ ಕ್ಷೇತ್ರದ ವ್ಯಾಪ್ತಿಯಲ್ಲಿ 'ಹಸಿರು ಬೆಂಗಳೂರು' ಸೃಷ್ಟಿಯ ನಿಟ್ಟಿನಲ್ಲಿ ಹಲವು ಕಾರ್ಯಗಳಿಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬುಧವಾರ ಚಾಲನೆ ನೀಡಿದರು.

'ಕನ್ನಮಂಗಲದ 70 ಎಕರೆ ಪ್ರದೇಶದಲ್ಲಿ ಅಟಲ್ ಬಿಹಾರಿ ವಾಜಪೇಯಿ ಸಸ್ಯಶಾಸ್ತ್ರೀಯ ತೋಟ, ಕೆ.ಆರ್. ಪುರ ವಲಯದ ಕಾಡುಗೋಡಿಯಲ್ಲಿ ವೃಕ್ಷೋದ್ಯಾನ ಉದ್ಘಾಟಿಸಲಾಗುವುದಲ್ಲದೆ, ಕನ್ನಮಂಗಲ ಮುಳ್ಳಿನ ಕೆರೆ ಹಾಗೂ 500 ಎಕರೆ ವಿಸ್ತೀರ್ಣದ ಎಲೆ ಮಲ್ಲಪ್ಪ ಶೆಟ್ಟಿ ಕೆರೆ ಅಭಿವೃದ್ಧಿಪಡಿಸುವ ಕಾರ್ಯಗಳನ್ನು ಕೈಗೊಳ್ಳುವ ಮೂಲಕ ಬೆಂಗಳೂರು ಪೂರ್ವ ಭಾಗವನ್ನು ಹಸಿರುಮಯಗೊಳಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ ಇಡಲಾಗಿದೆ' ಎಂದು ಯಡಿಯೂರಪ್ಪ ಹೇಳಿದರು.

'ಕನ್ನಮಂಗಲದಲ್ಲಿ 18 ಎಕರೆ ವಿಸ್ತೀರ್ಣದಲ್ಲಿರುವ ಮುಳ್ಳಿನ ಕೆರೆಯನ್ನು ಅತಿಕ್ರಮಣ ಮಾಡಿಕೊಳ್ಳಲಾಗುತ್ತಿತ್ತು. ಈಗ ಸುತ್ತಲೂ ಬೇಲಿ ಹಾಕಿ ಕೆರೆಯ ರಕ್ಷಣೆಗೆ ಒತ್ತು ನೀಡಲಾಗಿದೆ. ಈ ಕೆರೆ ಅಭಿವೃದ್ಧಿಯಾಗಿರುವುದು ಸುತ್ತಮುತ್ತಲಿನ ಗ್ರಾಮಗಳಲ್ಲಿ ಅಂತರ್ಜಲ ಮಟ್ಟ ವೃದ್ಧಿಗೂ ಕಾರಣವಾಗಲಿದೆ' ಎಂದು ಅವರು ಹೇಳಿದರು.

'508 ಎಕರೆ ಪ್ರದೇಶದಲ್ಲಿನ ಎಲೆ ಮಲ್ಲಪ್ಪ ಶೆಟ್ಟಿ ಕೆರೆಯನ್ನು ಬೆಂಗಳೂರು ಮಿಷನ್–2022ರ ಅಡಿಯಲ್ಲಿ ಅಭಿವೃದ್ಧಿಪಡಿಸಲು ನಿರ್ಧಾರ ಕೈಗೊಳ್ಳಲಾಗಿದೆ. ಅದರಂತೆ ಸಮಗ್ರ ಅಭಿವೃದ್ಧಿಯ ನೀಲನಕ್ಷೆಯೊಂದಿಗೆ ಶೀಘ್ರವಾಗಿ ಕೆಲಸ ಪ್ರಾರಂಭಿಸಲಾಗುತ್ತದೆ' ಎಂದು ಅವರು ಹೇಳಿದರು.

'ನಗರದಲ್ಲಿ ಬೆಳ್ಳಂದೂರು ಕೆರೆ ಬಿಟ್ಟರೆ, ಎಲೆ ಮಲ್ಲಪ್ಪ ಶೆಟ್ಟಿ ಕೆರೆಯೇ ದೊಡ್ಡದು. ಇದರ ಅಭಿವೃದ್ಧಿಗೆ ಪೂರಕವಾದ ಅನುದಾನ ಶೀಘ್ರ ಬಿಡುಗಡೆ ಮಾಡಿದರೆ, ಈ ಭಾಗದ ಎಲ್ಲ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯೂ ಸಫಲವಾಗಲಿದೆ' ಎಂದು ಅರಣ್ಯ ಸಚಿವ, ಕ್ಷೇತ್ರದ ಶಾಸಕ ಅರವಿಂದ ಲಿಂಬಾವಳಿ ಮನವಿ ಮಾಡಿದರು.

'ಬಿಜೆಪಿ ಅಧಿಕಾರದಲ್ಲಿದ್ದಾಗೆಲ್ಲ ಬೆಂಗಳೂರು ಪೂರ್ವ ಭಾಗದ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ. ಈಗ ಸೆಂಟ್ರಲ್ ಸಿಲ್ಕ್ ಬೋರ್ಡ್, ವೈಟ್‌ಫೀಲ್ಡ್ ಮಾರ್ಗಗಳಲ್ಲಿಯೂ ಮೆಟ್ರೊ ಕಾಮಗಾರಿ ಚುರುಕಿನಿಂದ ನಡೆಯುತ್ತಿದ್ದು, ಮೆಟ್ರೊ ರೈಲು ಸಂಚಾರ ಆರಂಭವಾದರೆ ಈ ಭಾಗದ ಜನರಿಗೆ ಸಾಕಷ್ಟು ಅನುಕೂಲವಾಗಲಿದೆ' ಎಂದರು.

ತೋಟಗಾರಿಕೆ ಸಚಿವ ಆರ್. ಶಂಕರ್, ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಸಂಜಯ್ ಮೋಹನ್ ಉಪಸ್ಥಿತರಿದ್ದರು.

ಜನಪದರು ರಂಗಮಂದಿರದ ಹೊರ ನೋಟ–ಪ್ರಜಾವಾಣಿ ಚಿತ್ರ

ಮಹದೇವಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬುಧವಾರ ಕನ್ನಮಂಗಲ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕಿನಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ರವರು ಉದ್ಘಾಟಿಸಿದ ಕನ್ನಮಂಗಲ ಸಸ್ಯ ಶಾಸ್ತ್ರೀಯ ತೋಟ (ಅಟಲ್ ಬಿಹಾರಿ ಸಸ್ಯಶಾಸ್ತ್ರೀಯ ತೋಟ) –ಪ್ರಜಾವಾಣಿ ಚಿತ್ರ

### ತಿರುಗು ರಂಗಮಂಚದ ರಂಗಮಂದಿರ

- ನಿಂಬೆಕಾಯಿಪುರದಲ್ಲಿ ಜನಪದರು ರಂಗಮಂದಿರ ಉದ್ಘಾಟನೆ
- 1 ಎಕರೆ ವಿಸ್ತೀರ್ಣದಲ್ಲಿ, ₹3.5 ಕೋಟಿ ವೆಚ್ಚದಲ್ಲಿ ನಿರ್ಮಾಣ
- 20 ಅಡಿ ವ್ಯಾಸದ ತಿರುಗು ರಂಗಮಂಚದ (ರಿವಾಲ್ವಿಂಗ್ ಸ್ಟೇಜ್) ಆಕರ್ಷಣೆ
- ಮುಖ್ಯವೇದಿಕೆಯ ಮುಂಭಾಗ ಗ್ರೀಕ್ ಮಾದರಿಯ ಕಿರುವೇದಿಕೆ ನಿರ್ಮಾಣ
- ಹವಾನಿಯಂತ್ರಿತ ಗ್ರೀನ್ ರೂಮ್‌ಗಳು
- ನಿರಂತರ ರಂಗಚಟುವಟಿಕೆ ಹಮ್ಮಿಕೊಳ್ಳುವ ಗುರಿ

### ಕಾಡುಗೋಡಿಯಲ್ಲಿ ವೃಕ್ಷೋದ್ಯಾನ

- ಕೆ.ಆರ್. ಪುರ ವಲಯದಲ್ಲಿ 22 ಎಕರೆ ವಿಸ್ತೀರ್ಣದಲ್ಲಿ ಅಭಿವೃದ್ಧಿ
- ಚಿಣ್ಣರ ಉದ್ಯಾನ, ವಾಯುವಿಹಾರ ನಡಿಗೆ ಪಥ, ಮಿನಿ ಜಿಮ್ ವ್ಯವಸ್ಥೆ
- ಕುಡಿಯುವ ನೀರು, ಶೌಚಾಲಯ ಸೌಲಭ್ಯ

### ವಾಜಪೇಯಿ ಸಸ್ಯಶಾಸ್ತ್ರೀಯ ತೋಟವೆಂಬ 'ಮಿನಿ ಲಾಲ್‌ಬಾಗ್'

- ಕನ್ನಮಂಗಲದ 70 ಎಕರೆ ಪ್ರದೇಶದಲ್ಲಿ ಅಭಿವೃದ್ಧಿ
- ಸಸ್ಯಶಾಸ್ತ್ರೀಯ ತೋಟಕ್ಕೆ ಅಟಲ್ ಬಿಹಾರಿ ವಾಜಪೇಯಿ ಹೆಸರು
- ಉತ್ಕೃಷ್ಟ ತಳಿಯ ಮರಗಳು ಇಲ್ಲಿನ ವಿಶೇಷ
- ಗೋಲಂದಿ, ಹಲಸು, ನೇರಳೆ ಮರಗಳು
- ಔಷಧಿ, ಸುಗಂಧಿತ ಗಿಡಗಳು ಮತ್ತು ಅರಣ್ಯ ಜಾತಿ ಮರಗಳು
- ಕುಡಿಯುವ ನೀರು, ಶೌಚಾಲಯ ಸೇರಿದಂತೆ ಮೂಲಸೌಲಭ್ಯ ವ್ಯವಸ್ಥೆ
- ನಡಿಗೆ ಪಥ, ಕೃಷಿ ಹೊಂಡ ನಿರ್ಮಾಣ

## ಸುದ್ದಿ 2 ನಿಮಿಷ

### ಆತ್ಮಹತ್ಯೆ ಯತ್ನ ವದಂತಿ: ಉದ್ಯಮಿ ಪ್ರಭಾಕರ ರೆಡ್ಡಿ ಸ್ಪಷ್ಟನೆ

ಬೆಂಗಳೂರು: 'ನಾನು ಆತ್ಮಹತ್ಯೆಗೆ ಯತ್ನಿಸಿಲ್ಲ. ಅನಾರೋಗ್ಯ ಸಮಸ್ಯೆಯಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದೇನೆ. ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ವದಂತಿ ಹಬ್ಬಿದೆ. ಅದನ್ನು ನಂಬಬೇಡಿ' ಎಂದು ರಿಯಲ್ ಎಸ್ಟೇಟ್ ಉದ್ಯಮಿ ಆರ್. ಪ್ರಭಾಕರ ರೆಡ್ಡಿ ಸ್ಪಷ್ಟನೆ ನೀಡಿದ್ದಾರೆ.

'ಸಾಯಿ ಡೆವಲಪರ್ಸ್‌ನ ಮಾಲೀಕರೂ ಆಗಿರುವ ಪ್ರಭಾಕರ ರೆಡ್ಡಿ ರಾಜರಾಜೇಶ್ವರಿ ನಗರದ ತಮ್ಮ ನಿವಾಸದಲ್ಲಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಅವರು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದು, ವೈಯಕ್ತಿಕ ಕಾರಣದಿಂದ ಆತ್ಮಹತ್ಯೆಗೆ ಮುಂದಾಗಿದ್ದರು' ಎಂಬ ಸುದ್ದಿ ಹರಿದಾಡಿತ್ತು.

ಈ ಸಂಬಂಧ ಆಸ್ಪತ್ರೆಯಿಂದಲೇ ವಿಡಿಯೊ ಮೂಲಕ ಪ್ರತಿಕ್ರಿಯಿಸಿರುವ ಪ್ರಭಾಕರ ರೆಡ್ಡಿ, 'ನನಗೆ ಕೋವಿಡ್ ಸೋಂಕು ತಗುಲಿತ್ತು. ಬಳಿಕ ಮೊನ್ನೆ ನಡೆಸಿದ ಪರೀಕ್ಷೆಯಲ್ಲಿ ನೆಗೆಟಿವ್ ವರದಿ ಬಂದಿದ್ದು, ಶ್ವಾಸಕೋಶ ಮತ್ತು ಗಂಟಲಿನಲ್ಲಿ ಸಮಸ್ಯೆ ಕಾಣಿಸಿಕೊಂಡ ಕಾರಣ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದೇನೆ. ಸದ್ಯ ವಾರ್ಡ್‌ನಲ್ಲೇ ಇದ್ದು, ಯಾವುದೇ ಸಮಸ್ಯೆ ಇಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ.

ಎರಡು ವರ್ಷದ ಹಿಂದೆ ಆದಾಯ ತೆರಿಗೆ ವಂಚನೆ ಆರೋಪದಡಿ ಐಟಿ ಅಧಿಕಾರಿಗಳು ಪ್ರಭಾಕರ ರೆಡ್ಡಿ ಮನೆಯ ಮೇಲೆ ದಾಳಿ ನಡೆಸಿದ್ದರು. ಭೂ ಕಬಳಿಕೆ, ವಂಚನೆ ಹಾಗೂ ಜೀವ ಬೆದರಿಕೆ ಆರೋಪದಡಿ ಸಿಸಿಬಿ ಪೊಲೀಸರಿಂದ ಬಂಧನಕ್ಕೂ ಒಳಗಾಗಿದ್ದರು.

### 'ಇಂಗ್ಲಿಷ್ ಜತೆಗೆ ಕನ್ನಡದಲ್ಲಿಯೂ ಔಷಧ ಮಾಹಿತಿ ಮುದ್ರಿಸಿ'

ಬೆಂಗಳೂರು: ಔಷಧಗಳ ಉತ್ಪಾದಕರು ಔಷಧಗಳ ಮಾಹಿತಿಯನ್ನು ಇಂಗ್ಲಿಷ್ ಜತೆಗೆ ಕನ್ನಡದಲ್ಲಿಯೂ ಮುದ್ರಿಸಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಆಗ್ರಹಿಸಿದೆ.

ಪ್ರಾಧಿಕಾರವು 'ವೈದ್ಯಕೀಯ ವಲಯದಲ್ಲಿ ಕನ್ನಡ ಬಳಕೆ ಅಭಿಯಾನ'ವನ್ನು ಹಮ್ಮಿಕೊಂಡಿದ್ದು, ಇದಕ್ಕೆ ಗುರುವಾರ ಚಾಲನೆ ದೊರೆಯಲಿದೆ. ವೈದ್ಯಕೀಯ ಕ್ಷೇತ್ರದಲ್ಲಿ ಕನ್ನಡ ಅನುಷ್ಠಾನಕ್ಕೆ ಸಂಬಂಧಿಸಿದಂತೆ ನಡೆಯಬೇಕಾದ ಕೆಲಸಗಳನ್ನು ಪ್ರಾಧಿಕಾರ ಪಟ್ಟಿಮಾಡಿದೆ.

'ಆರೋಗ್ಯ ಇಲಾಖೆಯಲ್ಲಿ ಕನ್ನಡ ಬಾರದ ಅಧಿಕಾರಿಗಳಿಗೆ ಕನ್ನಡವನ್ನು ಕಲಿಸಬೇಕು. ಕನ್ನಡದಲ್ಲಿ ವ್ಯವಹರಿಸುವ ಜತೆಗೆ ಎಲ್ಲ ಪತ್ರಗಳು, ಆದೇಶಗಳು, ಸುತ್ತೋಲೆಗಳು ಹಾಗೂ ಮಾಹಿತಿಗಳನ್ನು ಕನ್ನಡದಲ್ಲಿಯೇ ಒದಗಿಸಬೇಕು. ಸಾರ್ವಜನಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ತಾಲ್ಲೂಕು ಮಟ್ಟದಲ್ಲಿ ಟೆಲಿ ವೈದ್ಯಕೀಯ ಸೌಲಭ್ಯವನ್ನು ಒದಗಿಸಬೇಕು' ಎಂದು ಪ್ರಾಧಿಕಾರ ತಿಳಿಸಿದೆ.

'ನಿಯಮಿತವಾಗಿ ಮಾರುಕಟ್ಟೆಯನ್ನು ಪ್ರವೇಶಿಸುವ ಹೊಸ ಔಷಧಗಳ ಹಾಗೂ ಮಾರುಕಟ್ಟೆಯಿಂದ ನಿರ್ಗಮಿಸುವ ಔಷಧಗಳ ಬಗ್ಗೆ ಕನ್ನಡದಲ್ಲಿ ಮಾಹಿತಿಯನ್ನು ನೀಡಬೇಕು' ಎಂದು ಪ್ರಾಧಿಕಾರ ಆಗ್ರಹಿಸಿದೆ.

'ನಿಷೇಧಿತ ಔಷಧಗಳ ಪಟ್ಟಿಯೂ ಪ್ರಕಟವಾಗಬೇಕು. ಔಷಧಗಳ ಸುರಕ್ಷಿತ ಬಳಕೆಯ ಬಗ್ಗೆ ಕನ್ನಡದಲ್ಲಿ ಮಾಹಿತಿ ಲಭ್ಯವಾಗಬೇಕು ಎಂಬುದು ಈ ಅಭಿಯಾನದ ಮುಖ್ಯ ಉದ್ದೇಶ' ಎಂದು ಪ್ರಕಟಣೆ ತಿಳಿಸಿದೆ.

# ಕೆ.ಜಿ.ಹಳ್ಳಿ ಗಲಭೆ: ಆರೋಪಿ ಸೈಯದ್ ಅಬ್ಬಾಸ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಜಿ.ಹಳ್ಳಿ ಗಲಭೆ ಪ್ರಕರಣದ ಪ್ರಮುಖ ಆರೋಪಿ ಸೈಯದ್ ಅಬ್ಬಾಸ್‌ನನ್ನು (38) ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು ಬುಧವಾರ ಬಂಧಿಸಿದ್ದಾರೆ.

ಗೋವಿಂದಪುರ ನಿವಾಸಿಯಾಗಿರುವ ಅಬ್ಬಾಸ್, ಆಗಸ್ಟ್ 11ರಂದು ಕೆ.ಜಿ.ಹಳ್ಳಿಯಲ್ಲಿ ನಡೆದಿದ್ದ ಗಲಭೆಯಲ್ಲಿ ಭಾಗಿಯಾಗಿದ್ದ. ಇದಾದ ನಂತರ ಅಬ್ಬಾಸ್ ತಲೆಮರೆಸಿಕೊಂಡಿದ್ದ.

ತನಿಖೆ ಕೈಗೆತ್ತಿಕೊಂಡಿದ್ದ ಎನ್‌ಐಎ, ಅಬ್ಬಾಸ್‌ನ ಬಗ್ಗೆ ಮಾಹಿತಿ ಕಲೆ ಹಾಕಿತ್ತು. ಅಬ್ಬಾಸ್ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾದ (ಎಸ್‌ಡಿಪಿಐ) ನಾಗವಾರ ಘಟಕದ ಅಧ್ಯಕ್ಷ ಹಾಗೂ ಈಗಾಗಲೇ ಪ್ರಕರಣದಲ್ಲಿ ಚಾರ್ಜ್‌ಶೀಟ್‌ನಲ್ಲಿರುವ ಆರೋಪಿಗಳೂ ಎಸ್‌ಡಿಪಿಐ ಘಟಕದ ಪದಾಧಿಕಾರಿಗಳು' ಎಂದು ತನಿಖೆ ವೇಳೆ ತಿಳಿದುಬಂದಿದೆ. ಇವರೆಲ್ಲರೂ ಗಲಭೆ ವೇಳೆ ಕೆ.ಜಿ.ಹಳ್ಳಿ ಠಾಣೆಯ ಬಳಿ ಇದ್ದ ವಾಹನಗಳಿಗೆ ಬೆಂಕಿ ಇಟ್ಟಿದ್ದರು. ಪೊಲೀಸರ ಮೇಲೆ ದಾಳಿ ನಡೆಸಿದ್ದರು.

'ಆರೋಪಿ ಅಬ್ಬಾಸ್‌ನನ್ನು ಬೆಂಗಳೂರಿನಲ್ಲಿರುವ ಎನ್‌ಐಎ ವಿಶೇಷ ನ್ಯಾಯಾಲಯದ ಎದುರು ಹಾಜರುಪಡಿಸಿ, ಆರು ದಿನಗಳ ಕಾಲ ಕಸ್ಟಡಿಗೆ ತೆಗೆದುಕೊಳ್ಳಲಾಗಿದೆ' ಎಂದು ಎನ್‌ಐಎ ಪ್ರಕಟಣೆಯಲ್ಲಿ ತಿಳಿಸಿದೆ.

### 41 ಕೆ.ಜಿ ಗಾಂಜಾ ಜಪ್ತಿ: ಬಂಧನ

ಅಪರಾಧ ಸುದ್ದಿ

ಬೆಂಗಳೂರು: ಅಬಕಾರಿ ಅಧಿಕಾರಿಗಳ ದಾಳಿ ವೇಳೆ ಆಂಧ್ರಪ್ರದೇಶದಿಂದ ನಗರಕ್ಕೆ ಭಾರಿ ಪ್ರಮಾಣದ ಗಾಂಜಾ ಸಾಗಿಸುತ್ತಿದ್ದ ಕಾರೊಂದು ಪತ್ತೆಯಾಗಿದ್ದು, ಈ ವೇಳೆ ₹21 ಲಕ್ಷ ಬೆಲೆ ಬಾಳುವ 41 ಕೆ.ಜಿ. ಗಾಂಜಾ ಜಪ್ತಿ ಮಾಡಿದ್ದಾರೆ.

'ದೂರವಾಣಿ ನಗರದ ಬಳಿ ಆಂಧ್ರಪ್ರದೇಶ ನೋಂದಣಿ ಸಂಖ್ಯೆಯ ಕಾರೊಂದು ಬರುತ್ತಿತ್ತು. ಅನುಮಾನದಿಂದ ವಾಹನ ತಪಾಸಣೆ ನಡೆಸಿದಾಗ ಭಾರಿ ಪ್ರಮಾಣದ ಗಾಂಜಾ ಪತ್ತೆಯಾಯಿತು' ಎಂದು ಮಹದೇವಪುರ ವಲಯದ ಅಬಕಾರಿ ನಿರೀಕ್ಷಕ ಎ.ಎ.ಮುಜಾವರ ತಿಳಿಸಿದರು.

'ಕಾರಿನಲ್ಲಿ ಇಬ್ಬರು ಪ್ರಯಾಣಿಸುತ್ತಿದ್ದರು. ಈ ಪೈಕಿ ಅನಂತಪುರ ಜಿಲ್ಲೆಯ ಕೆ.ವೀರೇಶ ಎಂಬಾತನನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ. ಕಾರಿನ ಚಾಲಕ ರಾಜೇಶ್ ಪರಾರಿಯಾಗಿದ್ದು, ಆತನಿಗಾಗಿ ಶೋಧ ಮುಂದುವರಿದಿದೆ. ಆರೋಪಿ ವಿರುದ್ಧ ಮಾದಕ ವಸ್ತುಗಳ ನಿಯಂತ್ರಣ ಕಾಯ್ದೆಯಡಿ (ಎನ್‌ಡಿಪಿಎಸ್) ಪ್ರಕರಣ ದಾಖಲಿಸಲಾಗಿದೆ' ಎಂದರು.

'ಆರೋಪಿಗಳು ವಿಶಾಖಪಟ್ಟಣದ ವಿವಿಧ ಕಡೆಗಳಿಂದ ಗಾಂಜಾ ತರಿಸಿಕೊಂಡು ಅನಂತಪುರ ಜಿಲ್ಲೆಯಲ್ಲಿ ದಾಸ್ತಾನು ಮಾಡಿಕೊಳ್ಳುತ್ತಿದ್ದರು. ಅಲ್ಲಿಂದ ಬೆಂಗಳೂರಿಗೆ ಸಾಗಿಸಿ, ಇಲ್ಲಿರುವ ವ್ಯಕ್ತಿಗಳ ಮೂಲಕ ಗಾಂಜಾ ಮಾರುತ್ತಿದ್ದರು' ಎಂದೂ ಹೇಳಿದರು.

### ಬ್ಯಾಂಕ್ ವಿವರ ನೀಡಿ ₹12 ಲಕ್ಷ ಕಳೆದುಕೊಂಡ ವೃದ್ಧೆ

ಬೆಂಗಳೂರು: ಬ್ಯಾಂಕ್ ಖಾತೆಗೆ ಕೆವೈಸಿ (ಗ್ರಾಹಕರ ಮಾಹಿತಿ) ಅಪ್‌ಡೇಟ್ ಮಾಡುವುದಾಗಿ ತಿಳಿಸಿದ ಸೈಬರ್ ವಂಚಕರು, ವೃದ್ಧೆಯೊಬ್ಬರಿಂದ ಬ್ಯಾಂಕ್ ವಿವರಗಳನ್ನು ಪಡೆದು, ₹12.89 ಲಕ್ಷ ದೋಚಿರುವ ಘಟನೆ ನಗರದಲ್ಲಿ ನಡೆದಿದೆ.

ಜೆ.ಪಿ.ನಗರದಲ್ಲಿ ವಾಸವಿದ್ದ 69 ವರ್ಷದ ವೃದ್ಧೆಯೊಬ್ಬರ ಮೊಬೈಲ್‌ಗೆ 'ತುರ್ತಾಗಿ ಕೆವೈಸಿ ಸಂಖ್ಯೆ ಅಪ್‌ಡೇಟ್ ಮಾಡಬೇಕು' ಎಂಬ ಸಂದೇಶ ಜೂ.22ರಂದು ಬಂದಿತ್ತು. ಇದರಿಂದ ಗಾಬರಿಗೊಂಡ ವೃದ್ಧೆ, ಸಂದೇಶದಲ್ಲಿದ್ದ ಸಂಖ್ಯೆಗೆ ಕರೆ ಮಾಡಿದ್ದರು.

ಕರೆ ಸ್ವೀಕರಿಸಿದ್ದ ವ್ಯಕ್ತಿ ತಾನು ಬ್ಯಾಂಕ್ ಸಿಬ್ಬಂದಿ ಎಂದು ಪರಿಚಯಿಸಿಕೊಂಡಿದ್ದ. ನಿಮ್ಮ ಕೆವೈಸಿ ಸಂಖ್ಯೆ ಅಪ್‌ಡೇಟ್ ಮಾಡದಿದ್ದರೆ, ನಿಮ್ಮ ಬ್ಯಾಂಕ್ ಖಾತೆ ಬ್ಲಾಕ್ ಆಗಲಿದೆ. ನಿಮ್ಮ ವಿವರಗಳನ್ನು ಹೇಳಿದರೆ, ಅದನ್ನು ತಡೆಯುವುದಾಗಿ ತಿಳಿಸಿದ್ದ.

ಇದನ್ನು ನಂಬಿದ್ದ ವೃದ್ಧೆ, ತನ್ನ ಬ್ಯಾಂಕ್ ಖಾತೆಯ ಸಂಪೂರ್ಣ ವಿವರಗಳನ್ನು ಹಂಚಿಕೊಂಡಿದ್ದರು. ವೃದ್ಧೆ ನೀಡಿದ್ದ ಮಾಹಿತಿಯಿಂದ ಬ್ಯಾಂಕ್‌ಗೆ ಲಿಂಕ್ ಆಗಿದ್ದ ಮೊಬೈಲ್ ಸಂಖ್ಯೆಯನ್ನು ಬದಲಿಸಿ, ಅವರ ಖಾತೆಯಿಂದ ₹12.89 ಲಕ್ಷವನ್ನು ಬೇರೆ ಖಾತೆಗೆ ವರ್ಗಾಯಿಸಿಕೊಂಡಿದ್ದ.

ಈ ಸಂಬಂಧ ವೃದ್ಧೆ ನೀಡಿರುವ ದೂರಿನ ಮೇರೆಗೆ ದಕ್ಷಿಣ ಸೆನ್ ಠಾಣೆಯಲ್ಲಿ ವಂಚನೆ ಹಾಗೂ ಮಾಹಿತಿ ತಂತ್ರಜ್ಞಾನ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

### ಬೆದರಿಸಿ ಆಟೊ ಸಹಿತ ಪರಾರಿ: ಬಂಧನ

ಬೆಂಗಳೂರು: ಪ್ರಯಾಣಿಕರ ಸೋಗಿನಲ್ಲಿ ಆಟೊ ಹತ್ತಿ, ಚಾಲಕನನ್ನು ಬೆದರಿಸಿ ಆಟೊದೊಂದಿಗೆ ಪರಾರಿಯಾಗಿದ್ದ ಮೂವರು ಆರೋಪಿಗಳನ್ನು ಕಲಾಸಿಪಾಳ್ಯ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಗೋರಿಪಾಳ್ಯದ ತಬ್ರೇಜ್ ಶರೀಫ್ (27), ಜಾಫರ್ ಪಾಷಾ (32) ಹಾಗೂ ತಬ್ರೇಜ್ ಪಾಷಾ (20) ಬಂಧಿತರು.

ಸೋಮವಾರ ರಾತ್ರಿ 8.30ರ ವೇಳೆಗೆ ಜೆ.ಜೆ.ನಗರದ ಬಳಿ ಆಟೊ ಹತ್ತಿದ್ದ ಆರೋಪಿಗಳು, ಕಲಾಸಿಪಾಳ್ಯಕ್ಕೆ ಹೋಗಲು ತಿಳಿಸಿದ್ದರು. ಪ್ರದೀಪ್ ವೃತ್ತದ ಬಳಿ ಬಂದ ಕೂಡಲೇ ಚಾಲಕನಿಗೆ ಚಾಕು ತೋರಿಸಿ ಬೆದರಿಸಿದ್ದರು. ಬಳಿಕ ಚಾಲಕನನ್ನು ಕೆಳಗೆ ಇಳಿಸಿ, ಆಟೊದೊಂದಿಗೆ ಪರಾರಿಯಾಗಿದ್ದರು.

ಈ ಸಂಬಂಧ ಆಟೊ ಚಾಲಕ ಕಲಾಸಿಪಾಳ್ಯ ಠಾಣೆಗೆ ದೂರು ನೀಡಿದ್ದರು. ಪೊಲೀಸರು ಮೂವರನ್ನೂ ಬಂಧಿಸಿದ್ದಾರೆ. ಆರೋಪಿಗಳ ಬಳಿ ಇದ್ದ ಆಟೊ ರಿಕ್ಷಾ ಹಾಗೂ ಮಾರಕಾಸ್ತ್ರ ಜಪ್ತಿ ಮಾಡಿದ್ದಾರೆ.

ಕಾಂಗ್ರೆಸ್‌ನ ಕೆ.ಆರ್.ಪುರ ಕ್ಷೇತ್ರ ಘಟಕದ ವತಿಯಿಂದ ದೇವಸಂದ್ರದ ಬಡ ಕುಟುಂಬಗಳಿಗೆ ಮತ್ತು ಪೌರಕಾರ್ಮಿಕರಿಗೆ ಆಹಾರ ಸಾಮಾಗ್ರಿಗಳನ್ನು ವಿತರಿಸಲಾಯಿತು. ವಿಧಾನಪರಿಷತ್ ಸದಸ್ಯ ಎಂ.ನಾರಾಯಣಸ್ವಾಮಿ, ಹಿರಿಯ ಮುಖಂಡ ಡಿ.ಎ.ಗೋಪಾಲ, ಕೆಪಿಸಿಸಿ ಸದಸ್ಯ ಕಲ್ಕೆರೆ ಎಸ್.ನಾರಾಯಣಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಮಂಜುನಾಥ್, ಪ್ರಸಾದ್ ರೆಡ್ಡಿ, ಗಗನ್ ಇದ್ದರು.

# ದುಬಾರಿ ಕಾರಿನಲ್ಲಿ ಬಂದು ಕಳ್ಳತನ; ಅಂತರರಾಜ್ಯ ಕಳ್ಳನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದುಬಾರಿ ಕಾರುಗಳಲ್ಲಿ ಬಂದು ನಗರದ ಮನೆಗಳಲ್ಲಿ ಚಿನ್ನಾಭರಣ ಹಾಗೂ ನಗದು ಕದಿಯುತ್ತಿದ್ದ ಅಂತರರಾಜ್ಯ ಕಳ್ಳನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಬಸವರಾಜ್ ಅಲಿಯಾಸ್ ಜಂಗ್ಲಿ ಬಂಧಿತ ಆರೋಪಿ.

'ಬಿಡದಿಯ ಸಾಮಾನ್ಯ ಕುಟುಂಬದಲ್ಲಿ ಜನಿಸಿದ್ದ ಈತ ಐಷಾರಾಮಿ ಜೀವನಕ್ಕಾಗಿ ಕಾರುಗಳನ್ನು ಖರೀದಿಸುತ್ತಿದ್ದ. ಕೆಲವೇ ತಿಂಗಳಲ್ಲಿ ಕಾರುಗಳನ್ನು ಬದಲಿಸುತ್ತಿದ್ದ. ಜತೆಗೆ, ಕಳ್ಳತನಕ್ಕೆ ಇಳಿದಿದ್ದ ಆರೋಪಿ, ಪೊಲೀಸರ ಕಣ್ತಪ್ಪಿಸಲು ಹಲವು ಕಾರುಗಳನ್ನು ಬಳಸುತ್ತಿದ್ದ' ಎಂದು ಪೊಲೀಸರು ತಿಳಿಸಿದರು.

'ಕಳವು ಮಾಡಿದ ನಂತರ ಕಾರಿನಲ್ಲಿ ತೆಲಂಗಾಣ, ತಮಿಳುನಾಡಿಗೆ ಪ್ರಯಾಣಿಸುತ್ತಿದ್ದ. ಹೈದರಾಬಾದ್‌ನಲ್ಲೂ ಈತ ಕಳ್ಳತನ ಮಾಡುತ್ತಿದ್ದ. ಬಂದ ಹಣದಲ್ಲಿ ಮೋಜಿನ ಜೀವನ ನಡೆಸುತ್ತಿದ್ದ'.

'ಬೆಂಗಳೂರು ಹಾಗೂ ಹೊರ ರಾಜ್ಯಗಳಲ್ಲಿ ದಾಖಲಾಗಿದ್ದ ಒಟ್ಟು 11 ಪ್ರಕರಣಗಳಲ್ಲಿ ಈತ ಶಿಕ್ಷೆಗೆ ಗುರಿಯಾಗಿ, ಜಾಮೀನಿನ ಮೇಲೆ ಹೊರಬಂದು ಕಳ್ಳತನ ಮುಂದುವರಿಸಿದ್ದ. ಪ್ರಕರಣವೊಂದರಲ್ಲಿ ಈತನನ್ನು ಹಿಡಿಯಲು ಮುಂದಾದಾಗ, ಹೈದರಾಬಾದ್‌ಗೆ ತೆರಳಿ ತಲೆಮರೆಸಿಕೊಂಡಿದ್ದ. ಬಸವರಾಜ್‌ನನ್ನು ಹೈದರಾಬಾದ್‌ನಲ್ಲಿ ಬಂಧಿಸಿ, ಬೆಂಗಳೂರಿಗೆ ಕರೆತರಲಾಗಿದೆ' ಎಂದೂ ಹೇಳಿದರು.'

ಆರೋಪಿ ವಿರುದ್ಧ ಬಿಡದಿ, ಕೊಡಿಗೇಹಳ್ಳಿ, ಸಿ.ಕೆ.ಅಚ್ಚುಕಟ್ಟು, ವಿಜಯನಗರ, ಗಿರಿನಗರ, ಕಾಮಾಕ್ಷಿಪಾಳ್ಯ, ಹೈದರಾಬಾದ್, ತಮಿಳುನಾಡಿನ ಹೊಸೂರು ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿದ್ದವು.

ಸಿಸಿಬಿ ಜಂಟಿ ಪೊಲೀಸ್ ಕಮಿಷನರ್ ಸಂದೀಪ್ ಪಾಟೀಲ, 'ಬಂಧಿತನಿಂದ ₹80 ಲಕ್ಷ ಮೌಲ್ಯದ 1.3 ಕೆ.ಜಿ. ಚಿನ್ನಾಭರಣ, ₹1.50 ಲಕ್ಷ ನಗದು ಹಾಗೂ ಎರಡು ಕಾರುಗಳನ್ನು ಜಪ್ತಿ ಮಾಡಲಾಗಿದೆ' ಎಂದು ತಿಳಿಸಿದರು.

ಪೊಲೀಸರು ಜಪ್ತಿ ಮಾಡಿರುವ ಚಿನ್ನಾಭರಣ ಹಾಗೂ ನಗದು.

# ಗಾಂಜಾ ಜಪ್ತಿ: ಬಂಧನ

ಬೆಂಗಳೂರು: ಲಾಕ್‌ಡೌನ್ ಅವಧಿಯಲ್ಲಿ ಬೆಂಗಳೂರಿಗೆ ಬಂದು ಭಾರಿ ಪ್ರಮಾಣದ ಗಾಂಜಾ ಮಾರಾಟ ಮಾಡುವ ಜಾಲದಲ್ಲಿ ಸಕ್ರಿಯರಾಗಿದ್ದ ಆಂಧ್ರಪ್ರದೇಶದ ಮೂವರು ಆರೋಪಿಗಳನ್ನು ಕುಮಾರಸ್ವಾಮಿ ಬಡಾವಣೆ ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ಗೋದಾವರಿ ಜಿಲ್ಲೆಯ ಕಾಲಾಶಿವ ಜಮೇಲೆ (25), ಕಲ್ಲು ಗೋವಿಂದ (25) ಹಾಗೂ ಚಿತ್ತೂರು ಜಿಲ್ಲೆಯ ಹರಿಪ್ರಸಾದ್ (31) ಬಂಧಿತರು.

'ಆರೋಪಿಗಳಿಂದ ₹21 ಲಕ್ಷ ಬೆಲೆಬಾಳುವ 70 ಕೆ.ಜಿ.ಗಾಂಜಾ ಹಾಗೂ ಒಂದು ಕೆ.ಜಿ. ವೀಡಾಯಿಲ್ (ಮಾದಕ ವಸ್ತು) ಅನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಕನಕಪುರ ಮುಖ್ಯರಸ್ತೆಯ ಜರಗನಹಳ್ಳಿ ಆಟದ ಮೈದಾನದ ಬಳಿ ಆರೋಪಿಗಳು ಗಾಂಜಾ ಮಾರುತ್ತಿದ್ದ ವಿಚಾರವನ್ನು ಸ್ಥಳೀಯರು ಪೊಲೀಸರಿಗೆ ತಿಳಿಸಿದ್ದರು. ಪೊಲೀಸರು ದಾಳಿ ನಡೆಸಿದಾಗ ಆರೋಪಿಗಳು ಸಿಕ್ಕಿಬಿದ್ದರು. ಆರೋಪಿಗಳ ವಿರುದ್ಧ ಮಾದಕ ವಸ್ತುಗಳ ನಿಯಂತ್ರಣ ಕಾಯ್ದೆಯಡಿ (ಎನ್‌ಡಿಪಿಎಸ್) ಪ್ರಕರಣ ದಾಖಲಾಗಿದೆ' ಎಂದು ಮಾಹಿತಿ ನೀಡಿದರು.

'ಮೋಜಿನ ಜೀವನ ನಡೆಸುವ ಉದ್ದೇಶದಿಂದ ಆರೋಪಿಗಳು ಮಾದಕ ವಸ್ತುಗಳ ಮಾರಾಟ ದಂಧೆಗೆ ಇಳಿದಿದ್ದರು. ಲಗೇಜ್ ಬ್ಯಾಗುಗಳಲ್ಲಿ ಗಾಂಜಾ ತುಂಬಿಕೊಂಡು ರೈಲು ಹಾಗೂ ಖಾಸಗಿ ವಾಹನಗಳ ಮೂಲಕ ಆಂಧ್ರಪ್ರದೇಶದಿಂದ ಬೆಂಗಳೂರಿಗೆ ತರುತ್ತಿದ್ದರು. ನಗರದ ವಿವಿಧೆಡೆ ಅವುಗಳನ್ನು ಮಾರಾಟ ಮಾಡಿದ ಹಣದಿಂದ ವಿಲಾಸಿ ಜೀವನ ನಡೆಸುತ್ತಿದ್ದರು' ಎಂದರು.

ಪೊಲೀಸರು ಜಪ್ತಿ ಮಾಡಿರುವ ಗಾಂಜಾ

### ಎಲ್ಲರೂ ಲಸಿಕೆ ತಗೆದುಕೊಳ್ಳಿ: ಮೋದಿ

ನವದೆಹಲಿ (ಪಿಟಿಐ): ಕೋವಿಡ್ ಪಿಡುಗಿನ ಮೂರನೇ ಅಲೆಯನ್ನು ಸಮರ್ಪಕವಾಗಿ ಎದುರಿಸಲು ದೇಶದ ಎಲ್ಲರೂ ಲಸಿಕೆ ತೆಗೆದುಕೊಳ್ಳಬೇಕು. ಕೋವಿಡ್ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಇಲ್ಲಿ ನಡೆದ ಕೇಂದ್ರ ಸಚಿವರ ಪರಿಷತ್ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

# ವಿಮಾನ ರದ್ದು ಆಕ್ರೋಶ

ದೇವನಹಳ್ಳಿ: ದುಬೈಗೆ ತೆರಳಬೇಕಿದ್ದ ವಿಮಾನ ರದ್ದಾದ ಹಿನ್ನೆಲೆಯಲ್ಲಿ ಪ್ರಯಾಣಿಕರು ಆಕ್ರೋಶ ವ್ಯಕ್ತಪಡಿಸಿದರು.

ಏರ್ ಇಂಡಿಯಾ ಎಐ 295 ವಿಮಾನ ಮಧ್ಯಾಹ್ನ 12:25ಕ್ಕೆ ತೆರಳಬೇಕಾಗಿತ್ತು. ಡಿಪಾರ್ಚರ್ ತಪಾಸಣೆ ಮುಗಿಸಿ ಒಳಗೆ ಹೋದ ಪ್ರಯಾಣಿಕರಿಗೆ ಏರ್ ಇಂಡಿಯಾ ಸಿಬ್ಬಂದಿ ವಿಮಾನ ರದ್ದು ಮಾಡಿರುವ ಮಾಹಿತಿ ನೀಡಿದರು.

### ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಭರವಸೆ

# ಮದರಸಾಗಳಲ್ಲಿ ಕನ್ನಡ ಕಲಿಕೆಗೆ ಕ್ರಮ

ಅಖಿಲ ಕರ್ನಾಟಕ ಮಹಮ್ಮದೀಯರ ಕನ್ನಡ ವೇದಿಕೆಯ ಪದಾಧಿಕಾರಿಗಳು ಟಿ.ಎಸ್.ನಾಗಾಭರಣ ಅವರಿಗೆ ಮನವಿ ಸಲ್ಲಿಸಿದರು. ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ್ ಹಾನಗಲ್ ಇದ್ದರು.

ಬೆಂಗಳೂರು: 'ಮಸೀದಿ, ಮದರಸಾಗಳಲ್ಲಿ ಕನ್ನಡ ಕಲಿಕಾ ಕೇಂದ್ರಗಳನ್ನು ಪ್ರಾರಂಭಿಸುವ ಜತೆಗೆ ಕನ್ನಡ ಸಂಸ್ಕೃತಿ ಶಿಬಿರ ನಡೆಸಲು ಕ್ರಮವಹಿಸಲಾಗುವುದು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ತಿಳಿಸಿದರು.

ಕಲಿಕಾ ಕೇಂದ್ರ ಹಾಗೂ ಸಂಸ್ಕೃತಿ ಶಿಬಿರಕ್ಕೆ ಸಂಬಂಧಿಸಿದಂತೆ ಅಖಿಲ ಕರ್ನಾಟಕ ಮಹಮ್ಮದೀಯರ ಕನ್ನಡ ವೇದಿಕೆಯು ಪ್ರಾಧಿಕಾರಕ್ಕೆ ಬುಧವಾರ ಮನವಿ ಸಲ್ಲಿಸಿತು.

ಅಲ್‌ಫೈಝ್ ಟ್ರಸ್ಟ್, ಮಸ್ಜಿದ್ ತಾಹ, ಫಲಾಹೆ ದಾರೇನ್ ಎಜುಕೇಷನಲ್ ಸೋಷಿಯಲ್ ಚಾರಿಟಬಲ್ ಟ್ರಸ್ಟ್ ಹಾಗೂ ವೇದಿಕೆಯ ಪದಾಧಿಕಾರಿಗಳು ಟಿ.ಎಸ್. ನಾಗಾಭರಣ ಜತೆಗೆ ಸಭೆ ನಡೆಸಿ, ಮಸೀದಿ,ಮದರಸಾಗಳಲ್ಲಿ ಕನ್ನಡ ಕಲಿಕಾ ಕೇಂದ್ರ ಮತ್ತು ಸಂಸ್ಕೃತಿ ಶಿಬಿರ ನಡೆಸಲು ಪ್ರಾಧಿಕಾರದ ಪ್ರಾಯೋಜಕತ್ವ ನೀಡುವಂತೆ ಮನವಿ ಮಾಡಿದರು.

'ನಮ್ಮಲ್ಲಿ ಭಾಷೆ ಕೇವಲ ವ್ಯವಹಾರಕ್ಕೆ ಸೀಮಿತವಾಗಿದ್ದರೆ ಅದು ಈಗಾಗಲೇ ತನ್ನನ್ನು ತಾನು ಕಳೆದುಕೊಳ್ಳುತ್ತಿತ್ತು. ಆದರೆ, ಅದು ವ್ಯವಹಾರಕ್ಕೆ ಮೀರಿದ ಆತ್ಮೀಯತೆ, ಸೌಹಾರ್ದ ಹಾಗೂ ಬದುಕನ್ನು ಕಟ್ಟಿಕೊಡುವಂತದ್ದು' ಎಂದು ನಾಗಾಭರಣ ತಿಳಿಸಿದರು.

ವೇದಿಕೆಯ ಅಧ್ಯಕ್ಷ ಸಮಿಉಲ್ಲಾ ಖಾನ್ ಮಾತನಾಡಿ, 'ಪ್ರೊ. ಬರಗೂರು ರಾಮಚಂದ್ರಪ್ಪ, 'ಮುಖ್ಯಮಂತ್ರಿ' ಚಂದ್ರು ಅಧ್ಯಕ್ಷರಾಗಿದ್ದ ವೇಳೆ ಪ್ರಾಧಿಕಾರದ ಪ್ರಾಯೋಜಕತ್ವದಲ್ಲಿ ಮದರಸಾ ಮತ್ತು ಮಸೀದಿಗಳಲ್ಲಿ ಕನ್ನಡ ಕಲಿಕಾ ಹಾಗೂ ಕನ್ನಡ ಸಂಸ್ಕೃತಿ ಶಿಬಿರಗಳನ್ನು ಆಯೋಜಿಸಲಾಗಿತ್ತು. ಈಗ ಮತ್ತೆ ಆಯೋಜಿಸಲು ಪ್ರಾಧಿಕಾರದಿಂದ ಸಕಾರಾತ್ಮಕ ಸ್ಪಂದನೆ ದೊರೆತಿದೆ' ಎಂದು ಸಂತಸ ವ್ಯಕ್ತಪಡಿಸಿದರು.

# ನಿರ್ವಹಣಾ ಶುಲ್ಕ ವಿನಾಯಿತಿ ನೀಡಿದ ಬಿಡಿಎ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಾಡಪ್ರಭು ಕೆಂಪೇಗೌಡ ಬಡಾವಣೆಯ ನಿವೇಶನದಾರರಿಗೆ ನಿರ್ವಹಣೆ ಶುಲ್ಕದಿಂದ ವಿನಾಯಿತಿ ಪ್ರಕಟಿಸಿದೆ.

ಮೂಲಸೌಕರ್ಯ ಕಲ್ಪಿಸದಿರುವುದರಿಂದ ನಿವೇಶನದಾರರಿಂದ ನಿರ್ವಹಣೆ ಶುಲ್ಕ ವಸೂಲಿ ಮಾಡಬಾರದು ಎಂದು ನಾಡಪ್ರಭು ಕೆಂಪೇಗೌಡ ಬಡಾವಣೆಯ ಮುಕ್ತ ವೇದಿಕೆಯ ನಿಯೋಗವು ಬಿಡಿಎ ಅಧ್ಯಕ್ಷ ಎಸ್. ಆರ್.ವಿಶ್ವನಾಥ್ ಅವರನ್ನು ಬುಧವಾರ ಭೇಟಿ ಮಾಡಿ ಒತ್ತಾಯಿಸಿತ್ತು. ಇನ್ನೊಂದೆಡೆ, ನಾಡಪ್ರಭು ಕೆಂಪೇಗೌಡ ಬಡಾವಣೆಯ ಪ್ರಗತಿಪರರ ವೇದಿಕೆಯವರು ಬಡಾವಣೆಯಲ್ಲಿ ಪ್ರತಿಭಟನೆ ನಡೆಸಿ ನಿರ್ವಹಣಾ ಶುಲ್ಕ ಕೈಬಿಡುವಂತೆ ಒತ್ತಾಯಿಸಿದ್ದರು. ಬಳಿಕ ಅಧಿಕಾರಿಗಳ ಜತೆಗೆ ಎಸ್.ಆರ್.ವಿಶ್ವನಾಥ್ ಸಭೆ ನಡೆಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಪ್ರಾಧಿಕಾರದ ಅಧ್ಯಕ್ಷ ಎಸ್. ಆರ್.ವಿಶ್ವನಾಥ್, 'ಕೆಂಪೇಗೌಡ ಬಡಾವಣೆಯಲ್ಲಿ ಮೂಲಸೌಕರ್ಯ ಕಲ್ಪಿಸುವ ಯೋಜನೆಗಳನ್ನು ಈಗಷ್ಟೇ ಅನುಷ್ಠಾನಗೊಳಿಸಲಾಗುತ್ತಿದೆ. ಪೂರ್ಣಪ್ರಮಾಣದಲ್ಲಿ ಮೂಲಸೌಕರ್ಯಗಳನ್ನು ಕಲ್ಪಿಸದಿರುವ ಕಾರಣ ಈ ಬಡಾವಣೆಗೆ ಸೀಮಿತವಾಗಿ ನಿರ್ವಹಣಾ ಶುಲ್ಕದಿಂದ ವಿನಾಯ್ತಿ ನೀಡಲು ನಿರ್ಧರಿಸಲಾಗಿದೆ. ಈ ಪ್ರಸ್ತಾಪಕ್ಕೆ ಸದ್ಯದಲ್ಲೇ ನಡೆಯಲಿರುವ ಪ್ರಾಧಿಕಾರದ ಆಡಳಿತ ಮಂಡಳಿ ಸಭೆಯಲ್ಲಿ ಘಟನೋತ್ತರ ಮಂಜೂರಾತಿ ನೀಡಲಿದ್ದೇವೆ' ಎಂದು ತಿಳಿಸಿದರು.

'ಬಿಡಿಎ ಸ್ವಚ್ಛತಾ ಸಿಬ್ಬಂದಿಯನ್ನು ಹೊಂದಿಲ್ಲ. ಹಾಗಾಗಿ ಕೆಲವು ಬಡಾವಣೆಗಳನ್ನು ಬಿಬಿಎಂಪಿ ನಿರ್ವಹಣೆ ಮಾಡುತ್ತಿದೆ. ಪ್ರಾಧಿಕಾರವು ನಿವೇಶನಗಳ ಮಾಲೀಕರಿಂದ ನಿರ್ವಹಣಾ ಶುಲ್ಕ ಸಂಗ್ರಹಿಸಿ ಬಿಬಿಎಂಪಿಗೆ ನೀಡುತ್ತದೆ. ಜನಸಾಮಾನ್ಯರಿಗೆ ಹೊರೆಯಾಗದ ರೀತಿಯಲ್ಲಿ ನಿರ್ವಹಣಾ ಶುಲ್ಕ ನಿಗದಿಪಡಿಸಲಾಗಿದೆ' ಎಂದು ಅವರು ಸ್ಪಷ್ಟಪಡಿಸಿದರು.

### 'ವಾಣಿಜ್ಯ ಸಂಕೀರ್ಣ ನಿರ್ಮಾಣ ಒಪ್ಪಂದ ಮರುಪರಿಶೀಲನೆ'

'ತನ್ನ ಜಾಗದಲ್ಲಿ ವಾಣಿಜ್ಯ ಸಂಕೀರ್ಣಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸುವ ಬಗ್ಗೆ ಬಿಡಿಎ ಈ ಹಿಂದಿನ ಸರ್ಕಾರದ ಅವಧಿಯಲ್ಲಿ ಒಪ್ಪಂದ ಮಾಡಿಕೊಂಡಿತ್ತು. ಇದರಿಂದ ಪ್ರಾಧಿಕಾರಕ್ಕೆ ನಿರೀಕ್ಷಿತ ವರಮಾನ ಬಂದಿಲ್ಲ. ಈ ಒಪ್ಪಂದ ಗುತ್ತಿಗೆ ಪಡೆದ ಖಾಸಗಿ ಕಂಪನಿಗಳಿಗೆ ಹೆಚ್ಚು ಲಾಭ ಮಾಡಿಕೊಡಲಿದೆ. ಪ್ರಾಧಿಕಾರಕ್ಕೆ ಹೆಚ್ಚಿನ ವರಮಾನ ಬರುವ ರೀತಿಯಲ್ಲಿ ಮರು ಒಪ್ಪಂದ ಮಾಡಿಕೊಳ್ಳುವ ಬಗ್ಗೆ ಗುತ್ತಿಗೆದಾರ ಕಂಪನಿಗಳ ಜೊತೆ ಚರ್ಚಿಸಲಾಗಿದ್ದು, ವಾರದೊಳಗೆ ಪ್ರತಿಕ್ರಿಯಿಸುವಂತೆ ಸೂಚಿಸಿದ್ದೇವೆ' ಎಂದು ಎಸ್.ಆರ್.ವಿಶ್ವನಾಥ್ ತಿಳಿಸಿದರು.

'ಹಳೆ ಒಪ್ಪಂದವನ್ನು ಮುಂದುವರಿಸಿದರೆ ಬಿಡಿಎಗೆ ತನ್ನ ಜಾಗದ ಮೇಲಿನ ಹಿಡಿತ ಸಡಿಲವಾಗುವುದಲ್ಲದೇ ವರಮಾನವೂ ಕಡಿತವಾಗಲಿದೆ. ಖಾಸಗಿ ಕಂಪನಿಗಳು ಬಿಡಿಎ ಷರತ್ತುಗಳಿಗೆ ಸಹಮತ ವ್ಯಕ್ತಪಡಿಸದಿದ್ದಲ್ಲಿ ಪ್ರಾಧಿಕಾರವೇ ವಾಣಿಜ್ಯ ಸಂಕೀರ್ಣಗಳನ್ನು ಅಭಿವೃದ್ಧಿಪಡಿಸಿ ಬಾಡಿಗೆಗೆ ನೀಡಲಿದೆ. ಕಂಪನಿಗಳು ನೀಡುವ ಅಭಿಪ್ರಾಯಗಳ ಬಗ್ಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ಅಂತಿಮ ನಿರ್ಧಾರ ಕೈಗೊಳ್ಳಲಿದ್ದೇವೆ' ಎಂದು ಅವರು ತಿಳಿಸಿದರು. ಬಿಡಿಎ ಆಯುಕ್ತ ಎಂ.ಬಿ. ರಾಜೇಶ್ ಗೌಡ, ಎಂಜಿನಿಯರಿಂಗ್ ಸದಸ್ಯ ಶಾಂತರಾಜಣ್ಣ ಸಭೆಯಲ್ಲಿ ಭಾಗವಹಿಸಿದರು.

## ವಾಣಿಜ್ಯ ಸಂಕೀರ್ಣ: ಮರು ನಿರ್ಮಾಣಕ್ಕೆ ವಿರೋಧ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ನಗರದ ಏಳು ವಾಣಿಜ್ಯ ಸಂಕೀರ್ಣಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ಮರು ನಿರ್ಮಾಣ ಮಾಡಲು ಮುಂದಾಗಿರುವುದಕ್ಕೆ ಆಮ್ ಆದ್ಮಿ ಪಕ್ಷ (ಎಎಪಿ) ವಿರೋಧ ವ್ಯಕ್ತಪಡಿಸಿದೆ.

'ವಾಣಿಜ್ಯ ಸಂಕೀರ್ಣಗಳನ್ನು ಒಡೆಯಲು ಹಾಗೂ ಅವು ಖಾಸಗಿಯವರ ಪಾಲಾಗಲು ಬಿಡುವುದಿಲ್ಲ. ಈ ಹಿಂದೆ ಸಿದ್ದರಾಮಯ್ಯ ಅವರ ಸರ್ಕಾರ ಕೂಡ ಇದೇ ಯೋಜನೆಗೆ ಕೈಹಾಕಿತ್ತು. ಭಾರೀ ವಿರೋಧ ವ್ಯಕ್ತವಾದ ಕಾರಣ ಯೋಜನೆಯನ್ನು ಜಾರಿಗೆ ತಂದಿರಲಿಲ್ಲ. ಆಗ ವಿರೋಧಿಸಿದ್ದ ಬಿಜೆಪಿಯವರೇ ಈಗ ಮರುನಿರ್ಮಾಣದ ಹೆಸರಿನಲ್ಲಿ ದುಡ್ಡು ಮಾಡಲು ಹೊರಟಿದ್ದಾರೆ. ವಿರೋಧ ಪಕ್ಷದಲ್ಲಿದ್ದಾಗ ಒಂದು ನಿಲುವು, ಅಧಿಕಾರದಲ್ಲಿದ್ದಾಗ ಮತ್ತೊಂದು ನಿಲುವು ತೆಗೆದುಕೊಳ್ಳುವ ಬಿಜೆಪಿಗೆ ನಾಚಿಕೆಯಾಗಬೇಕು' ಎಂದು ಎಎಪಿಯ ಬೆಂಗಳೂರು ನಗರ ಅಧ್ಯಕ್ಷ ಮೋಹನ್ ದಾಸರಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಬಿಡಿಎ ವಾಣಿಜ್ಯ ಸಂಕೀರ್ಣಗಳು ಅಮೂಲ್ಯವಾದ ಸರ್ಕಾರಿ ಸ್ವತ್ತುಗಳು. ಮರುನಿರ್ಮಾಣದ ಹೆಸರಿನಲ್ಲಿ ಬರೋಬ್ಬರಿ ₹ 5 ಸಾವಿರ ಕೋಟಿ ಮೌಲ್ಯದ ಆಸ್ತಿಯನ್ನು ಖಾಸಗಿಯವರಿಗೆ ನೀಡಲಾಗುತ್ತಿದೆ. ಇದಕ್ಕೆ ಪ್ರತಿಯಾಗಿ ಖಾಸಗಿಯವರಿಂದ ಬಿಡಿಎ ಅಧ್ಯಕ್ಷರಿಗೆ ಭಾರೀ ಪ್ರಮಾಣದ ಕಿಕ್‌ಬ್ಯಾಕ್ ಸಿಗಲಿದೆ' ಎಂದು ಪ್ರಕಟಣೆಯಲ್ಲಿ ಆರೋಪಿಸಿದ್ದಾರೆ.

ನಿಧನ ವಾರ್ತೆ

### ರಾಜ್ ಕೌಶಲ್

ಮುಂಬೈ: 'ಬಾಲಿವುಡ್ ನಟಿ, ಕಿರುತೆರೆ ನಿರೂಪಕಿ ಮಂದಿರಾ ಬೇಡಿ ಅವರ ಪತಿ, ನಿರ್ಮಾಪಕ ಹಾಗೂ ನಿರ್ದೇಶಕ ರಾಜ್ ಕೌಶಲ್ (50)ಬುಧವಾರ ಮುಂಜಾನೆ 4.30ಕ್ಕೆ ಹೃದಯಾಘಾತದಿಂದ ಸಾವಿಗೀಡಾಗಿದ್ದಾರೆ' ಎಂದು ಅವರ ಕುಟುಂಬದ ಮಿತ್ರ, ನಟ ರೋಹಿತ್ ರಾಯ್ ತಿಳಿಸಿದ್ದಾರೆ.

ರಾಜ್ ಕೌಶಲ್ ಅವರಿಗೆ ಪತ್ನಿ ಮಂದಿರಾ ಬೇಡಿ, ಮಗ ವೀರ್ ಮತ್ತು ಮಗಳು ತಾರಾ ಇದ್ದಾರೆ.

ದಾದರ್‌ನಲ್ಲಿರುವ ಶಿವಾಜಿ ಪಾರ್ಕ್ ಸ್ಮಶಾನದಲ್ಲಿ ರಾಜ್ ಅವರ ಅಂತಿಮ ವಿಧಿವಿಧಾನಗಳು ನೆರವೇರಿಸಲಾಯಿತು. ರೋನಿತ್ ರಾಯ್, ಸಮೀರ್ ಸೂರಿ, ಆಶೀಶ್ ಚೌಧರಿ, ಡಿನೊ ಮೊರಿಯಾ ಸೇರಿದಂತೆ ಚಿತ್ರರಂಗದ ಹಲವರು ಈ ಸಂದರ್ಭದಲ್ಲಿ ಹಾಜರಿದ್ದರು.



### ನಟ ನಾಸಿರುದ್ದೀನ್ ಷಾ ಆಸ್ಪತ್ರೆಗೆ ದಾಖಲು

ಮುಂಬೈ: 'ಹಿರಿಯ ಬಾಲಿವುಡ್ ನಟ ನಾಸಿರುದ್ದೀನ್ ಷಾ ಅವರಿಗೆ(70) ನ್ಯುಮೋನಿಯಾ ಇರುವುದು ಪತ್ತೆಯಾಗಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಅವರ ಪತ್ನಿ ರತ್ನಾ ಪಾಠಕ್ ಅವರು ಬುಧವಾರ ತಿಳಿಸಿದರು.

ನಾಸಿರುದ್ದೀನ್ ಅವರನ್ನು ಖಾರ್ ಹಿಂದೂಜಾ ಆಸ್ಪತ್ರೆಗೆ ಮಂಗಳವಾರ ದಾಖಲಿಸಲಾಗಿದೆ. ಅವರ ಶ್ವಾಸಕೋಶದಲ್ಲಿ ನ್ಯುಮೋನಿಯಾದ ಸಣ್ಣ ಪ್ಯಾಚ್‌ಗಳಿದ್ದು ಚಿಕಿತ್ಸೆ ನೀಡಲಾಗುತ್ತಿದೆ.

ಸದ್ಯ ಅವರ ಆರೋಗ್ಯ ಪರಿಸ್ಥಿತಿ ನಿಯಂತ್ರಣದಲ್ಲಿದೆ. ನಾಸಿರುದ್ದೀನ್ ಅವರು ಚಿಕಿತ್ಸೆಗೆ ಉತ್ತಮವಾಗಿ ಸ್ಪಂದಿಸುತ್ತಿದ್ದಾರೆ. ಆಸ್ಪತ್ರೆಯಿಂದ ಶೀಘ್ರದಲ್ಲೇ ಮನೆಗೆ ತೆರಳಲಿದ್ದಾರೆ ಎಂದು ರತ್ನಾ ಅವರು ಹೇಳಿದರು.

### ಉಸಿರಾಟದ ತೊಂದರೆ: ಆಸ್ಪತ್ರೆ ಸೇರಿದ ನಟ ದಿಲೀಪ್ ಕುಮಾರ್

ಮುಂಬೈ: ಖ್ಯಾತ ಬಾಲಿವುಡ್ ನಟ ದಿಲೀಪ್ ಕುಮಾರ್ ಅವರಿಗೆ ಉಸಿರಾಟದ ತೊಂದರೆ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಅವರನ್ನು ಮಂಗಳವಾರ ರಾತ್ರಿ ಖಾರ್ ಉಪ ನಗರದ ಹಿಂದೂಜಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ಕಳೆದ ಜೂನ್ 6ರಂದು ಇದೇ ರೀತಿ ಉಸಿರಾಟದ ತೊಂದರೆಯಿಂದಾಗಿ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಹತ್ತು ದಿನಗಳ ಹಿಂದೆ ಗುಣಮುಖರಾಗಿ ಅವರು ಮನೆಗೆ ತೆರಳಿದ್ದರು.

ಉಸಿರಾಟ ಸಂಬಂಧಿ ಸಮಸ್ಯೆ ಕಾಣಿಸಿಕೊಂಡಿದ್ದರಿಂದ, ವಯಸ್ಸು ಮತ್ತು ಇತ್ತೀಚೆಗಿನ ಅನಾರೋಗ್ಯದ ಸಮಸ್ಯೆಯನ್ನು ಗಮನಿಸಿದ ಕುಟುಂಬದ ಸದಸ್ಯರು ಮುನ್ನೆಚ್ಚರಿಕೆ ಕ್ರಮವಾಗಿ ದಿಲೀಪ್ ಕುಮಾರ್ ಅವರನ್ನು ಆಸ್ಪತ್ರೆ ದಾಖಲಿಸಿದ್ದಾರೆ. ಅವರು ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

## ಸಿಎ ಪರೀಕ್ಷೆಯಿಂದ ಹೊರಗುಳಿಯಲು 'ಸುಪ್ರೀಂ' ಅನುಮತಿ

ನವದೆಹಲಿ (ಪಿಟಿಐ): ಸಿಎ ಪರೀಕ್ಷೆಗಳನ್ನು ಬರೆಯಬೇಕಿರುವ ಅಭ್ಯರ್ಥಿಗಳು ಅಥವಾ ಅವರ ಕುಟುಂಬದ ಸದಸ್ಯರು ಕೋವಿಡ್ 19 ಸಾಂಕ್ರಾಮಿಕದಿಂದ ಬಳಲುತ್ತಿದ್ದರೆ ಅಂಥವರಿಗೆ ಪರೀಕ್ಷೆಯಿಂದ ಹೊರಗುಳಿಯಲು ಸುಪ್ರೀಂ ಕೋರ್ಟ್ ಬುಧವಾರ ಅನುಮತಿ ನೀಡಿದೆ.

ನ್ಯಾಯಮೂರ್ತಿಗಳಾದ ಎ.ಎಂ. ಖಾನ್ವಿಲ್ಕರ್, ದಿನೇಶ್ ಮಾಹೇಶ್ವರಿ ಮತ್ತು ಅನಿರುದ್ಧ ಬೋಸ್ ಅವರನ್ನೊಳಗೊಂಡ ನ್ಯಾಯಪೀಠವು ಈ ಆದೇಶ ನೀಡಿದೆ.

ಇನ್ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ (ಐಸಿಎಐ) ಪರೀಕ್ಷೆ ನಡೆಸಲು ಕೈಗೊಂಡಿರುವ ಕ್ರಮಗಳು ಸಾಕಾಗುವುದಿಲ್ಲ ಎಂಬುದನ್ನು ಸುಪ್ರೀಂ ಕೋರ್ಟ್ ಗಮನಿಸಿದ್ದು, ಸಿಎ ಪರೀಕ್ಷೆ ಅಭ್ಯರ್ಥಿಯ ಕುಟುಂಬದ ಸದಸ್ಯರಿಗೆ ಕೋವಿಡ್–19 ಇರುವುದಾಗಿ ನೋಂದಾಯಿತ ವೈದ್ಯರು ಪ್ರಮಾಣ ಪತ್ರ ನೀಡಿದ್ದರೆ ಅಂತಹ ಅಭ್ಯರ್ಥಿಗಳು ಆರ್‌ಟಿ-ಪಿಸಿಆರ್ ಪರೀಕ್ಷೆಯ ವರದಿ ಹಾಜರುಪಡಿಸಬೇಕಾದ ಅಗತ್ಯವಿಲ್ಲ ಎಂದೂ ನ್ಯಾಯಪೀಠವು ಸ್ಪಷ್ಟವಾಗಿ ಹೇಳಿದೆ.

### ವಿ.ವಿಗಳಲ್ಲಿ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಜುಲೈ 1ರಿಂದ ಪಿಎಚ್‌.ಡಿ ಕಡ್ಡಾಯ– ಯುಜಿಸಿ

# ನೇಮಕಾತಿ ವಿಳಂಬ: ಅವಕಾಶ ಕೈತಪ್ಪುವ ಆತಂಕ

• ರಾಜೇಶ್ ರೈ ಚಟ್ಲ

**ಮುಖ್ಯಾಂಶಗಳು**

- 2023 ಜೂನ್ 30ರವರೆಗೆ ವಿಸ್ತರಿಸಲು ಮನವಿ
- ಅಭ್ಯರ್ಥಿಗಳಿಗೆ ಅನ್ಯಾಯವಾಗಲಿದೆ– ವಾದ
- ನೆಟ್, ಕೆ– ಸೆಟ್ ಪಾಸಾದವರಲ್ಲಿ ಆತಂಕ

ಪ್ರಜಾವಾಣಿ ವಿಶೇಷ

ಬೆಂಗಳೂರು: ರಾಜ್ಯದ ವಿವಿಧ ವಿಶ್ವ- ವಿದ್ಯಾಲಯಗಳಲ್ಲಿ 950ಕ್ಕೂ ಹೆಚ್ಚು ಸಹಾಯಕ ಪ್ರಾಧ್ಯಾಪಕ ಹುದ್ದೆಗಳು ಖಾಲಿ ಇದ್ದು, ಸರ್ಕಾರ ನೇಮಕಾತಿ ನಡೆಸದೇ ಇದ್ದುದರಿಂದ ರಾಷ್ಟ್ರೀಯ ಅರ್ಹತಾ ಪರೀಕ್ಷೆ (ನೆಟ್) ಅಥವಾ ಕೆ- ಸೆಟ್ (ಕರ್ನಾಟಕ ರಾಜ್ಯ ಉಪನ್ಯಾಸಕರ ಅರ್ಹತಾ ಪರೀಕ್ಷೆ) ತೇರ್ಗಡೆಯಾಗಿರುವ ಅಭ್ಯರ್ಥಿಗಳು ಹುದ್ದೆ ವಂಚಿತರಾಗುವ ಆತಂಕ ಎದುರಾಗಿದೆ.

ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) 2018ರ ಜುಲೈ 18ರಂದು ಹೊರಡಿಸಿರುವ ಅಧಿಸೂಚನೆಯ ಪ್ರಕಾರ ಇದೇ ಜುಲೈ 1ರಿಂದ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಪಿಎಚ್. ಡಿ (ಡಾಕ್ಟರ್ ಆಫ್ ಫಿಲಾಸಫಿ) ಕಡ್ಡಾಯ. ಒಂದೂವರೆ ವರ್ಷದ ಹಿಂದೆಯೇ ರಾಜ್ಯ ಸರ್ಕಾರ ನೇಮಕಾತಿ ಪ್ರಕ್ರಿಯೆ ನಡೆಸಿದ್ದರೆ ನೆಟ್, ಕೆ–ಸೆಟ್ ಪಾಸಾದವರೂ ಅರ್ಹ- ರಾಗುತ್ತಿದ್ದರು. ಸರ್ಕಾರದ ವಿಳಂಬ ಧೋರಣೆಯಿಂದಾಗಿ ಸಹಾಯಕ ಪ್ರಾಧ್ಯಾಪಕ ಹುದ್ದೆಯ ಆಕಾಂಕ್ಷಿ- ಗಳಾಗಿರುವವರು ತಮ್ಮದಲ್ಲದ ತಪ್ಪಿಗೆ ಅರ್ಹತೆಯನ್ನೇ ಕಳೆದುಕೊಳ್ಳುವಂತಾಗಿದೆ. ಈಗ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯುವ ಮೂಲಕ ರಾಜ್ಯ ಸರ್ಕಾರವು ತನ್ನ ತಪ್ಪನ್ನು ಮರೆಮಾಚಿಕೊಳ್ಳಲು ಮುಂದಾಗಿದೆ ಎಂದು ಅಭ್ಯರ್ಥಿಗಳು ದೂರಿದ್ದಾರೆ.

'ಯುಜಿಸಿ 2018ರಲ್ಲಿಯೇ ಅಧಿಸೂಚನೆ ಹೊರಡಿಸಿ, ಸಹಾಯಕ ಪ್ರಾಧ್ಯಾಪಕ ಹುದ್ದೆಗಳ ನೇಮಕಾತಿಗೆ ಪಿಎಚ್‌.ಡಿ ಕಡ್ಡಾಯಗೊಳಿಸುವ ಬಗ್ಗೆ ತಿಳಿಸಿದ್ದರೂ ಸರ್ಕಾರ ನೇಮಕಾತಿ ನಡೆಸಲಿಲ್ಲ. ಇದರಿಂದಾಗಿ ಹುದ್ದೆ ಗಿಟ್ಟಿಸಿಕೊಳ್ಳಲು, ನೆಟ್, ಕೆ–ಸೆಟ್ ಪಾಸಾಗಿ, ಸರ್ಕಾರದಿಂದ ನೇಮಕಾತಿ ಪ್ರಕಟಣೆ ನಿರೀಕ್ಷೆಯಲ್ಲಿದ್ದವರ ಕನಸಿಗೆ ಸರ್ಕಾರವೇ ತಣ್ಣೀರು ಎರಚಿದೆ' ಎಂದು ಹುದ್ದೆ ಆಕಾಂಕ್ಷಿಯೊಬ್ಬರು ಅಳಲು ತೋಡಿಕೊಂಡರು.

### ಕೋವಿಡ್ ನೆಪ ಹೇಳಿದ ಸರ್ಕಾರ!

ತಡವಾಗಿ ಎಚ್ಚೆತ್ತುಕೊಂಡಿರುವ ರಾಜ್ಯ ಸರ್ಕಾರ ಜೂನ್ 15ರಂದು, ಯುಜಿಸಿ ಕಾರ್ಯದರ್ಶಿ ರಜನೀಶ್ ಜೈನ್ ಅವರಿಗೆ ಪತ್ರ ಬರೆದು, 'ಪಿಎಚ್. ಡಿ ಕಡ್ಡಾಯ ನಿಯಮವನ್ನು ಇನ್ನೂ ಎರಡು ವರ್ಷ (2023 ಜೂನ್ 30) ಮುಂದೂಡಬೇಕು' ಎಂದು ಮನವಿ ಮಾಡಿದೆ.

ಅಷ್ಟೇ ಅಲ್ಲದೆ, ಕೋವಿಡ್ ಕಾರಣದಿಂದ ಒಂದೂವರೆ ವರ್ಷದಿಂದ ನೇಮಕಾತಿ ನಡೆಸಲು ಸಾಧ್ಯ ಆಗಿಲ್ಲ ಎಂದೂ ಕಾರಣ ಹೇಳಿದೆ. ಆದರೆ, ಈ ಪತ್ರಕ್ಕೆ ಯುಜಿಸಿಯಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ ಎಂದು ಉನ್ನತ ಶಿಕ್ಷಣ ಇಲಾಖೆ ಮೂಲಗಳು ತಿಳಿಸಿವೆ.

**ಪತ್ರದಲ್ಲಿ ಏನಿದೆ:** 'ಕೋವಿಡ್ ಸಾಂಕ್ರಾಮಿಕದಿಂದ ರಾಜ್ಯದ ಆರ್ಥಿಕ ಸ್ಥಿತಿಯ ಮೇಲೆ ಗಂಭೀರ ಪರಿಣಾಮವಾಗಿದೆ. ಅಲ್ಲದೆ, ರಾಜ್ಯದ ಆರ್ಥಿಕ ಸಂಪನ್ಮೂಲವನ್ನು ಈ ಸಾಂಕ್ರಾಮಿಕದ ನಿಯಂತ್ರಣಕ್ಕೆ ಸರ್ಕಾರ ಬಳಕೆ ಮಾಡಿದೆ. ಹೀಗಾಗಿ, ಯಾವುದೇ ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕ ಹುದ್ದೆಗಳನ್ನು ಭರ್ತಿ ಮಾಡಲು ಸಾಧ್ಯವಾಗಿಲ್ಲ' ಎಂದು ಉನ್ನತ ಶಿಕ್ಷಣ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಿ. ಕುಮಾರ ನಾಯಕ ಅವರು ಯುಜಿಸಿ ಕಾರ್ಯದರ್ಶಿ ರಜನೀಶ್ ಜೈನ್ ಅವರಿಗೆ ಪತ್ರ ಬರೆದಿದ್ದಾರೆ.

'ನೆಟ್ ಮತ್ತು ಸೆಟ್ ಪಾಸಾಗಿ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಸಾವಿರಾರು ಅಭ್ಯರ್ಥಿಗಳು ಅರ್ಹತೆ ಹೊಂದಿದ್ದರೂ ಖಾಲಿ ಇರುವ ಹುದ್ದೆಗಳ ಭರ್ತಿಗೆ ಒಂದೂವರೆ ವರ್ಷದಿಂದ ಪ್ರಕಟಣೆ ಹೊರಡಿಸದೇ ಇದ್ದುದರಿಂದ ಅವರಿಗೆ ಅರ್ಜಿ ಸಲ್ಲಿಸಲು ಅವಕಾಶ ಸಿಕ್ಕಿಲ್ಲ. ಜುಲೈ 1ರಿಂದ ಪಿಎಚ್. ಡಿ ಅರ್ಹತೆ ಕಡ್ಡಾಯಗೊಳಿಸಿದರೆ ಈ ಅಭ್ಯರ್ಥಿಗಳು ಸಹಾಯಕ ಪ್ರಾಧ್ಯಾಪಕ ಹುದ್ದೆ ಪಡೆಯಲು ಅನರ್ಹರಾಗುತ್ತಾರೆ. ಈ ಅಭ್ಯರ್ಥಿಗಳಿಗೆ ಅನ್ಯಾಯ ಆಗಲಿದೆ' ಎಂದೂ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

'ಪಿಎಚ್‌.ಡಿ ಕಡ್ಡಾಯಗೊಳಿಸಿ ನಿಗದಿಪಡಿಸಿರುವ ಅವಧಿಯನ್ನು ಮುಂದೂಡುವಂತೆ ಸಂಘಟನೆಗಳು, ಜನಪ್ರತಿನಿಧಿಗಳೂ ಸೇರಿದಂತೆ ವಿವಿಧ ವಲಯಗಳಿಂದ ಹಲವು ಮನವಿಗಳು ಬಂದಿವೆ. ಖಾಲಿ ಇರುವ ಈ ಹುದ್ದೆಗಳನ್ನು ತುಂಬಲು ರಾಜ್ಯ ಸರ್ಕಾರ ಮುಂದಾಗದೇ ಇದ್ದುದರಿಂದ, ತಮ್ಮ ತಪ್ಪು ಇಲ್ಲದಿದ್ದರೂ ಅಭ್ಯರ್ಥಿಗಳು ಹುದ್ದೆ ಗಿಟ್ಟಿಸಿಕೊಳ್ಳುವ ಅವಕಾಶದಿಂದ ವಂಚಿತರಾಗಲಿದ್ದಾರೆ. ದೇಶದ ಇತರ ರಾಜ್ಯಗಳಲ್ಲೂ ಇದೇ ಪರಿಸ್ಥಿತಿ ಇರುವ ಸಾಧ್ಯತೆ ಇದೆ. ಹೀಗಾಗಿ, ನೆಟ್, ಕೆ–ಸೆಟ್ ಅರ್ಹತೆ ಹೊಂದಿವರಿಗೆ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಅರ್ಜಿ ಸಲ್ಲಿಸುವ ಅವಕಾಶ ಕಲ್ಪಿಸಬೇಕಿದೆ. ಆ ಮೂಲಕ, ಈ ಅಭ್ಯರ್ಥಿಗಳ ಹಿತ ಕಾಪಾಡಲು ಪಿಎಚ್‌.ಡಿ ಕಡ್ಡಾಯ- ಗೊಳಿಸಿರುವುದನ್ನು ಮುಂದೂಡಲೇಬೇಕು' ಎಂದೂ ಪತ್ರದಲ್ಲಿ ಮನವಿ ಮಾಡಲಾಗಿದೆ.

ರಕ್ತದಾನಿಯೊಬ್ಬರಿಗೆ ನಿರ್ಮಲಾನಂದನಾಥ ಸ್ವಾಮೀಜಿ ಹಣ್ಣು ಹಾಗೂ ಜ್ಯೂಸ್ ನೀಡಿ ಶುಭ ಕೋರಿದರು. ಸಹಕಾರ ಸಚಿವ ಎಸ್‌.ಟಿ.ಸೋಮಶೇಖರ್, ಬಿಜಿಎಸ್ ಶಿಕ್ಷಣ ಸಮೂಹದ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶನಾಥಸ್ವಾಮೀಜಿ, ರೊಟೇರಿಯನ್ ಶ್ರೀನಿವಾಸ್, ಪ್ರಾಂಶುಪಾಲ ಎಂ.ಮೋಹನ್ ಇದ್ದಾರೆ.

## 'ನಿಸ್ವಾರ್ಥದ ಕರ್ಮವೇ ಮೋಕ್ಷಕ್ಕೆ ಹಾದಿ'

ಪ್ರಜಾವಾಣಿ ವಾರ್ತೆ

ಕೆಂಗೇರಿ: ಕೊರೊನಾ ವಿರುದ್ಧದ ಹೋರಾಟದಲ್ಲಿ ಪ್ರಾಣವನ್ನು ಲೆಕ್ಕಿಸದೆ ಸೇವೆ ಸಲ್ಲಿಸುತ್ತಿರುವ ಆರೋಗ್ಯ ಸಿಬ್ಬಂದಿಗೆ ಸಮಾಜ ಕೃತಜ್ಞರಾಗಿರಬೇಕು ಎಂದು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಕೆಂಗೇರಿ ಬಳಿಯ ಬಿಜಿಎಸ್ ಜಿಮ್ಸ್ ಆಸ್ಪತ್ರೆಯಲ್ಲಿ ರೋಟರಿ ಸಂಸ್ಥೆಯ ಆರ್ಥಿಕ ನೆರವಿನೊಂದಿಗೆ ₹1.5 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿರುವ ಸುಧಾರಿತ ಬಿಜಿಎಸ್ ಬ್ಲಡ್ ಸೆಂಟರ್ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

'ನಾವು ಮಾಡುವ ಕರ್ಮವು ಪ್ರತಿಫಲ ಹಾಗೂ ವೈಯಕ್ತಿಕ ಲಾಭದ ಹಿನ್ನೆಲೆ ಹೊಂದಿರಬಾರದು. ನಿಸ್ವಾರ್ಥತೆಯ ಕರ್ಮವೇ ಮೋಕ್ಷಕ್ಕೆ ಹಾದಿ. ಯಾವುದೇ ಆಕಾಂಕ್ಷೆ ಇಲ್ಲದೆ ಸಮಾಜಕ್ಕೆ ದೇಣಿಗೆಗೆ ನೀಡುವವನೇ ದೈವ ಸ್ವರೂಪಿ' ಎಂದು ಹೇಳಿದರು.

ಸಚಿವ ಎಸ್‌.ಟಿ.ಸೋಮಶೇಖರ್ ಮಾತನಾಡಿ, 'ಕೋವಿಡ್ ವಿರುದ್ಧದ ಹೋರಾಟದಲ್ಲಿ ಆದಿಚುಂಚನಗಿರಿ ಮಠವು ಸರ್ಕಾರಕ್ಕೆ ನೀಡಿದ ಸಹಕಾರ ಶ್ಲಾಘನೀಯ. ಎಲ್ಲ ಸಂಸ್ಥೆಗಳು ಇದೇ ರೀತಿ ಸಕಾಲದಲ್ಲಿ ಸಹಾಯಹಸ್ತ ಚಾಚಿದ್ದರೆ ರಾಜ್ಯದಲ್ಲಿ ಕೊರೊನಾ ಮೊದಲನೇ ಹಂತದ ಆರ್ಭಟ ಗಣನೀಯ ಪ್ರಮಾಣದಲ್ಲಿ ಇಳಿಕೆ ಕಾಣುತ್ತಿತ್ತು. ನೂರಾರು ಪ್ರಾಣಗಳು ಉಳಿಯುವ ಸಂಭವವಿತ್ತು' ಎಂದು ಹೇಳಿದರು.

ರೋಟರಿ ಬೆಂಗಳೂರು ದಕ್ಷಿಣ ಜಿಲ್ಲಾ ಗವರ್ನರ್ ಬಿ.ಎಲ್.ನಾಗೇಂದ್ರ ಪ್ರಸಾದ್, 'ತುರ್ತು ಸಂದರ್ಭಗಳಲ್ಲಿ ರಕ್ತ ಸಿಗದೆ ಹಲವಾರು ಮಂದಿ ಅಸುನೀಗುತ್ತಾರೆ. ಇಂತಹ ಅವಘಡಗಳನ್ನು ತಪ್ಪಿಸುವ ನಿಟ್ಟಿನಲ್ಲಿ ರೋಟರಿ ಸಂಸ್ಥೆಯು ಬಿಜಿಎಸ್ ಜಿಮ್ಸ್ ಸಹಯೋಗದಲ್ಲಿ ಬ್ಲಡ್ ಬ್ಯಾಂಕ್ ಕೇಂದ್ರ ಆರಂಭಿಸಿದೆ. ಇದರಿಂದ ಹಲವಾರು ಮಂದಿಗೆ ಪ್ರಯೋಜನವಾಗಲಿದೆ' ಎಂದರು.

### ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

| | ವಿಶ್ವ | ಭಾರತ |
|---|---|---|
| ಒಟ್ಟು ಪ್ರಕರಣ | 18.27 ಕೋಟಿ ▲ | 3.03 ಕೋಟಿ |
| ಸಕ್ರಿಯ ಪ್ರಕರಣ | 1.14 ಕೋಟಿ ▼ | 5.37ಲಕ್ಷ ▲ |
| ಗುಣಮುಖ | 16.73 ಕೋಟಿ ▲ | 2.94 ಕೋಟಿ |
| ಸಾವು | 39.56 ಲಕ್ಷ ▲ | 3.98ಲಕ್ಷ |

ದಿನದ ಮಾಹಿತಿ

| | ವಿಶ್ವ | ಭಾರತ |
|---|---|---|
| ಹೊಸ ಪ್ರಕರಣ | 3.74 ಲಕ್ಷ ▲ | 47,609 ▼ |
| ಗುಣಮುಖ | 4.14 ಲಕ್ಷ ▲ | 56,793 ▼ |
| ಸಾವು | 7,660 ▲ | 986 ▲ |

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

| ಅಮೆರಿಕ | ಬ್ರೆಜಿಲ್ | ರಷ್ಯಾ |
|---|---|---|
| 11,427 ▲ | 64,903 ▲ | 20,616 ▲ |

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

| ಅಮೆರಿಕ | ಬ್ರೆಜಿಲ್ | ರಷ್ಯಾ |
|---|---|---|
| 49.00 ▼ | 12.18 ▼ | 3.74 ▲ |

(* ರಾತ್ರಿ 12ರವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

| | |
|---|---|
| ಮಹಾರಾಷ್ಟ್ರ | 1.21 ಲಕ್ಷ |
| ದೆಹಲಿ | 24,977 ▲ |
| ತಮಿಳುನಾಡು | 32,619 ▲ |

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

| | |
|---|---|
| ಮಹಾರಾಷ್ಟ್ರ | 60.61 ▲ |
| ಕೇರಳ | 29.24 ▲ |
| ತಮಿಳುನಾಡು | 24.79 ▲ |

ಪ್ರಜಾವಾಣಿ ಗ್ರಾಫಿಕ್ಸ್

# ಅನ್ಯ ಇಲಾಖೆಯವರಿಗೆ ತಹಶೀಲ್ದಾರ್ ಹುದ್ದೆ: ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನ್ಯ ಇಲಾಖೆಗಳಲ್ಲಿ ಸೇವೆ ಸಲ್ಲಿಸಿದ ಅಧಿಕಾರಿಗಳನ್ನು ಎರವಲು ಸೇವೆ ಮೇಲೆ ಕಂದಾಯ ಇಲಾಖೆಯ ತಹಶೀಲ್ದಾರ್ ಹುದ್ದೆಗೆ ನೇಮಕ ಮಾಡುವ ನಿರ್ಧಾರಕ್ಕೆ ರಾಜ್ಯ ಸರ್ಕಾರಿ ಕಂದಾಯ ಇಲಾಖೆ ನೌಕರರ ಸಂಘ ಆಕ್ಷೇಪ ವ್ಯಕ್ತಪಡಿಸಿದೆ.

'ಕಂದಾಯ ಇಲಾಖೆಯ ತಹಶೀಲ್ದಾರ್ ಹುದ್ದೆಯು ತಾಲ್ಲೂಕು ಮ್ಯಾಜಿಸ್ಟ್ರೇಟ್ ಗ್ರೇಡ್ ಹುದ್ದೆಯಾಗಿದ್ದು, ಈ ಮೊದಲಿನಂತೆ ಕೆಪಿಎಸ್‌ಸಿ ನಡೆಸುವ ಕೆಎಎಸ್ ಪರೀಕ್ಷೆಯಲ್ಲಿ ತೇರ್ಗಡೆಯಾದವರನ್ನು ಮತ್ತು ಕಂದಾಯ ಇಲಾಖೆಯಲ್ಲಿ ಕಾರ್ಯ- ನಿರ್ವಹಿಸಿ ಅನುಭವ ಪಡೆದವರನ್ನು ಮಾತ್ರ ಈ ಹುದ್ದೆಗೆ ಪರಿಗಣಿಸಬೇಕು' ಎಂದು ಸಂಘದ ಪದಾಧಿಕಾರಿಗಳು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಮನವಿ ಸಲ್ಲಿಸಿದರು.

ರಾಜ್ಯ ಸರ್ಕಾರಿ ಕಂದಾಯ ಇಲಾಖೆ ನೌಕರರ ಸಂಘದ ಸದಸ್ಯರು ಮುಖ್ಯಮಂತ್ರಿ ಬಿ.ಎಸ್‌.ಯಡಿಯೂರಪ್ಪ ಅವರಿಗೆ ಬುಧವಾರ ಮನವಿ ಸಲ್ಲಿಸಿದರು

'ಅನ್ಯ ಇಲಾಖೆಯಿಂದ ಬಂದು ರಾಜ್ಯದ ಹಲವೆಡೆ ತಹಶೀಲ್ದಾರ್ ಆಗಿ ಸೇವೆಸಲ್ಲಿಸುತ್ತಿರುವವರನ್ನು ಮಾತೃ ಇಲಾಖೆಗೆ ವಾಪಸ್ ಕಳುಹಿಸಿ, ಇದರಿಂದ ತೆರವಾಗುವ ಹುದ್ದೆಗಳಿಗೆ ಕಂದಾಯ ಇಲಾಖೆಯಲ್ಲಿ ಆರಂಭದಿಂದ ಸೇವೆ ಸಲ್ಲಿಸಿ ಮುಂಬಡ್ತಿ ಪಡೆವರನ್ನು ನೇಮಿಸಬೇಕು' ಎಂದು ಸಂಘದ ಅಧ್ಯಕ್ಷ ಕೃಷ್ಣಮೂರ್ತಿ ತಿಳಿಸಿದರು.

ಕಂದಾಯ ಇಲಾಖೆ ನೌಕರರ ಸಂಘದ ಗೌರವ ಅಧ್ಯಕ್ಷ ಸಿದ್ದರಾಜು ಮದ್ದೂರು, ಹಿರಿಯ ಉಪಾಧ್ಯಕ್ಷ ರಾಜಶೇಖರಮೂರ್ತಿ, ಕಾರ್ಯದರ್ಶಿ ತಾವರೆಕೆರೆ ಕೆ. ಸಿದ್ದರಾಜು, ಖಜಾಂಚಿ ಕೆಂಪೇಗೌಡ ಇದ್ದರು.

## ಏಳು ಐಎಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ಏಳು ಐಎಎಸ್ ಅಧಿಕಾರಿಗಳನ್ನು ರಾಜ್ಯ ಸರ್ಕಾರ ವರ್ಗಾವಣೆ ಮಾಡಿ ಆದೇಶ ಹೊರಡಿಸಿದೆ.

ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಸಿ. ಶಿಖಾ ಅವರನ್ನು ವಾಣಿಜ್ಯ ತೆರಿಗೆ ಇಲಾಖೆ ಆಯುಕ್ತರಾಗಿ ವರ್ಗಾವಣೆ ಮಾಡಲಾಗಿದೆ.

ಸ್ಥಳ ನಿರೀಕ್ಷೆಯಲ್ಲಿದ್ದ ಅಜಯ್ ನಾಗಭೂಷಣ್ ಅವರನ್ನು ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ- ಯಾಗಿ ನಿಯೋಜಿಸಲಾಗಿದೆ.

**ಉಳಿದಂತೆ ವರ್ಗಾವಣೆಗೊಂಡವರು:** ಸಲ್ಮಾ ಫಾಹಿಮಾ - ಹೆಚ್ಚುವರಿ ಕಾರ್ಯದರ್ಶಿ, ಮೂಲಸೌಕರ್ಯ ಇಲಾಖೆ, ಕನಗ ವಲ್ಲಿ ಎಂ.– ಪರೀಕ್ಷಾ ನಿಯಂತ್ರಕರು, ಕೆಪಿಎಸ್‌ಸಿ, ರಘು ನಂದನ್ ಮೂರ್ತಿ- ಹೆಚ್ಚುವರಿ ಆಯುಕ್ತ (ಜಾರಿ), ವಾಣಿಜ್ಯ ತೆರಿಗೆ ಇಲಾಖೆ, ಅರ್ಚನಾ ಎಂ.ಎಸ್– ಸದಸ್ಯರು, ಕೆಎಟಿ, ರಮ್ಯಾ ಎಸ್.– ಕಾರ್ಯಕಾರಿ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಹೆಬ್ಬಾಳದಲ್ಲಿ ಬುಧವಾರ ಶಾಸಕ ಬೈರತಿ ಸುರೇಶ್ ಅವರು ಬಡವರಿಗೆ ಆಹಾರದ ಧಾನ್ಯದ ಕಿಟ್‌ಗಳನ್ನು ವಿತರಿಸಿದರು.

# ಕಡ್ಡಾಯ ಗ್ರಾಮೀಣ ಸೇವೆಗೆ ಒತ್ತಡ ಬೇಡ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಡ್ಡಾಯ ಗ್ರಾಮೀಣ ಸೇವೆಯ ಅಧಿಸೂಚನೆಯನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸಿರುವ ಒಂದು ತಂಡದ ಎಂಬಿಬಿಎಸ್ ವಿದ್ಯಾರ್ಥಿಗಳಿಗೆ ಮುಂದಿನ ಎರಡು ವಾರಗಳವರೆಗೆ ಕಡ್ಡಾಯ ಗ್ರಾಮೀಣ ಸೇವೆಗೆ ಒತ್ತಡ ಹೇರದಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಮಧ್ಯಂತರ ಆದೇಶದಲ್ಲಿ ನಿರ್ದೇಶನ ನೀಡಿದೆ.

ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ಗೆ ಪ್ರವೇಶ ಪಡೆಯಲು ಉತ್ಸುಕರಾಗಿರುವ ಕಾರಣದಿಂದ ತಮಗೆ ಕಡ್ಡಾಯ ಗ್ರಾಮೀಣ ಸೇವೆಯಿಂದ ವಿನಾಯಿತಿ ನೀಡುವಂತೆ ಕೋರಿ ಈ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ. ಮಂಗಳವಾರ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಚಿನ್ ಶಂಕರ್ ಮಗ್ದುಮ್ ಅವರಿದ್ದ ಪೀಠ, ಮಧ್ಯಂತರ ಆದೇಶ ಹೊರಡಿಸಿತು.

'ಅರ್ಜಿದಾರ ವಿದ್ಯಾರ್ಥಿಗಳಿಗೆ ಸೀಮಿತವಾಗಿ ಕಡ್ಡಾಯ ಗ್ರಾಮೀಣ ಸೇವೆಯ ಆದೇಶ ಪಾಲನೆಗೆ ಎರಡು ವಾರಗಳವರೆಗೆ ಸರ್ಕಾರ ಒತ್ತಡ ಹೇರಬಾರದು. ಉಳಿದಂತೆ ಅಧಿಸೂಚನೆಯ ಜಾರಿಯ ವಿಚಾರದಲ್ಲಿ ಸರ್ಕಾರವು ಸ್ವತಂತ್ರವಾಗಿದೆ' ಎಂದು ನ್ಯಾಯಪೀಠ ಮಧ್ಯಂತರ ಆದೇಶದಲ್ಲಿ ತಿಳಿಸಿದೆ.

ಮಂಗಳವಾರ ಮಧ್ಯಂತರ ಆದೇಶ ಹೊರಡಿಸಿದ್ದ ನ್ಯಾಯಾಲಯ, ಬುಧವಾರ ಮತ್ತೆ ಅರ್ಜಿಯ ವಿಚಾರಣೆ ನಡೆಸಿತು.

ವಿದ್ಯಾರ್ಥಿಗಳು ಮತ್ತು ಸರ್ಕಾರದ ಪರ ವಾದ ಆಲಿಸಿದ ನ್ಯಾಯಪೀಠವು, ವಿಚಾರಣೆಯನ್ನು ಮುಂದೂಡಿತು.

2021ರಲ್ಲಿ ಎಂಬಿಬಿಎಸ್ ಪದವಿ ಪೂರ್ಣಗೊಳಿಸಿರುವ ವಿದ್ಯಾರ್ಥಿಗಳು ಕಡ್ಡಾಯ ಗ್ರಾಮೀಣ ಸೇವೆಗಾಗಿ ನೋಂದಣಿ ಮಾಡಿಕೊಳ್ಳುವಂತೆ ಜೂನ್ 8ರಂದು ಅಧಿಸೂಚನೆ ಹೊರಡಿಸಲಾ- ಗಿತ್ತು. ಜೂನ್ 30ರಿಂದಲೇ ಕಡ್ಡಾಯ ಗ್ರಾಮೀಣ ಸೇವೆ ಆರಂಭವಾಗಲಿದೆ ಎಂದು ಜೂನ್ 17ರಂದು ಮತ್ತೊಂದು ಅಧಿಸೂಚನೆ ಹೊರಡಿಸಲಾಗಿತ್ತು.

'ಮ್ಯಾನೇಜ್‌ಮೆಂಟ್ ಕೋಟಾದಡಿ ಸೀಟು ಪಡೆದು ಎಂಬಿಬಿಎಸ್ ಪದವಿ ಪೂರೈಸಿದ ವಿದ್ಯಾರ್ಥಿಗಳನ್ನು ಕಡ್ಡಾಯ ಗ್ರಾಮೀಣ ಸೇವೆಯಿಂದ ಹೊರಗಿಟ್ಟು ಅಧಿಸೂಚನೆ ಹೊರಡಿಸಲಾಗಿದೆ. ಒಂದೇ ವರ್ಷದಲ್ಲಿ ಕಲಿತ ವಿದ್ಯಾರ್ಥಿಗಳ ನಡುವೆ ತಾರತಮ್ಯ ಮಾಡಲಾಗುತ್ತಿದೆ' ಎಂದೂ ಅರ್ಜಿದಾರರು ದೂರಿದ್ದಾರೆ.

### ನಗರದ ಕೋವಿಡ್ ಅಂಕಿ–ಅಂಶ

| | |
|---|---|
| 12,13,559 ▲ | ಒಟ್ಟು ಪ್ರಕರಣಗಳು (12,12,746 ನಿನ್ನೆಯ ವಿವರ) |
| 43,698 ▼ | ಸಕ್ರಿಯ ಪ್ರಕರಣಗಳು |
| 11,54,234 ▲ | ಗುಣಮುಖರಾದವರು |
| 15,626 ▲ | ಒಟ್ಟು ಸಾವು |

ಬುಧವಾರದ ಏರಿಕೆ

| | |
|---|---|
| ಹೊಸ ಪ್ರಕರಣ | 813 ▲ |
| ಗುಣಮುಖ | 9,549 ▼ |
| ಸಾವು | 11 ▼ |

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

## ರೈತರ ಜತೆ ಬಾಂಧವ್ಯವಿರಲಿ: ಸಚಿವ ಸೋಮಶೇಖರ್

ಪ್ರಜಾವಾಣಿ ವಾರ್ತೆ

ಸೋಮಶೇಖರ್

ಬೆಂಗಳೂರು: ಸಹಕಾರ ಸಂಘಗಳಲ್ಲಿ ಕಾರ್ಯನಿರ್ವ- ಹಿಸುವ ಸಿಬ್ಬಂದಿ ರೈತರ ಜತೆ ಬಾಂಧವ್ಯದಿಂದ ವರ್ತಿಸುವುದರ ಜತೆಗೆ ಸಮಯ ಪರಿಪಾಲನೆ, ಶಿಸ್ತು, ಪಾರ್ದರ್ಶಕತೆ ಅಳವಡಿಸಿಕೊಳ್ಳುವುದು ಬಹಳ ಮುಖ್ಯ ಎಂದು ಸಹಕಾರ ಸಚಿವ ಎಸ್‌.ಟಿ. ಸೋಮಶೇಖರ್ ಹೇಳಿದರು.

ವಿಕಾಸಸೌಧದಲ್ಲಿ ಪರೀಕ್ಷಾರ್ಥ ಸಹಕಾರ ಸಂಘಗಳ ಸಹಾಯಕ ನಿಬಂಧಕರಿಗೆ ಆಡಳಿತಾತ್ಮಕ ವಿಷಯಗಳ ಕುರಿತು ಏರ್ಪಡಿಸಿದ್ದ ಕಾರ್ಯಾಗಾರ ಸಭೆಯಲ್ಲಿ ಮಾತನಾಡಿದರು.

ನೂತನವಾಗಿ ಸೇರ್ಪಡೆಯಾಗಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಇನ್ನೂ 30 ವರ್ಷಗಳ ಕಾಲ ಇಲ್ಲಿಯೇ ಕಾರ್ಯ ನಿರ್ವಹಣೆ ಮಾಡಬೇಕಿದೆ. ಹೀಗಾಗಿ ಸಹಕಾರ ಕ್ಷೇತ್ರ ಮತ್ತು ಇಲಾಖೆಗಳಲ್ಲಿ ಆರಂಭದ 2 ವರ್ಷಗಳಲ್ಲಿ ಕಲಿಯುವ ಕೆಲಸದ ಮೇಲೆ ಮುಂದಿನ ಯಶಸ್ಸು ನಿಂತಿರುತ್ತದೆ ಎಂದು ಸೋಮಶೇಖರ್ ಅವರು ತಿಳಿಸಿದರು.

'ಇಲ್ಲಿ ನೀವು ದಕ್ಷತೆಯಿಂದ ಕಾರ್ಯ- ನಿರ್ವಹಣೆ ಮಾಡಬೇಕು. ಸಹಕಾರ ಕೆಲಸದ ಜೊತೆ ಜೊತೆಯಲ್ಲಿಯೇ ನೀವು ನಿಮ್ಮ ಕುಟುಂಬದವರಿಗೂ ಸಮಯವನ್ನು ಮೀಸಲಿಡಬೇಕು. ಮತ್ತು ಅವರ, ನಿಮ್ಮ ಆರೋಗ್ಯದ ಕಡೆಯೂ ಗಮನಹರಿಸಿಕೊಳ್ಳಬೇಕು' ಎಂದೂ ಅವರು ಸಲಹೆ ನೀಡಿದರು.

### 'ನಮಗೆ ಇಬ್ಬರೇ ಕ್ಯಾಪ್ಟನ್'

'ನಮಗೆ ಪ್ರತ್ಯೇಕವಾಗಿ ಯಾವುದೇ ಕ್ಯಾಪ್ಟನ್‌ಗಳಾಗಲಿ, ನಾಯಕರಾಗಲೀ ಇಲ್ಲ. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಸರ್ಕಾರದ ಕ್ಯಾಪ್ಟನ್ ಆದರೆ, ಶಾಸಕರಾಗಿ, ಪಕ್ಷದ ಸದಸ್ಯನಾಗಿ ಬಿಜೆಪಿ ರಾಜ್ಯಾಧ್ಯಕ್ಷರಾ- ಗಿರುವ ನಳಿನ್ ಕುಮಾರ್ ಕಟೀಲ್ ಅವರು ಪಕ್ಷದ ಕ್ಯಾಪ್ಟನ್' ಎಂದು ಸೋಮಶೇಖರ್ ಹೇಳಿದರು.

'ಈ ಇಬ್ಬರನ್ನು ಬಿಟ್ಟರೆ ನಮಗೆ ಬೇರೆ ಯಾವ ಕ್ಯಾಪ್ಟನ್‌ಗಳೂ ರಾಜ್ಯದಲ್ಲಿ ಇಲ್ಲ' ಎಂದು ಸೋಮಶೇಖರ್ ಸುದ್ದಿಗಾರರ ಪ್ರಶ್ನೆ- ಯೊಂದಕ್ಕೆ ಉತ್ತರಿಸಿದರು.

## ಸಮರ್ಥನೆ ನೀಡಿದರೆ ಶಿಸ್ತುಕ್ರಮ: ಕೋಳಿವಾಡ

ಬೆಂಗಳೂರು: 'ಶಿಸ್ತು ಸಮಿತಿ ಸಭೆ ನಡೆಸಿ, ಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಿದ ಬಳಿಕ ಮುಂದಿನ ಮುಖ್ಯಮಂತ್ರಿ ವಿಚಾರವನ್ನು ಯಾರೂ ಮಾತನಾಡಿಲ್ಲ' ಎಂದು ಕಾಂಗ್ರೆಸ್ ಮುಖಂಡ ಕೆ.ಬಿ. ಕೋಳಿವಾಡ ತಿಳಿಸಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಈ ರೀತಿ ಹೇಳಿಕೆ ನೀಡಿದವರನ್ನು ಮುಂದಿನ ಸಭೆಗೆ ಕರೆಸುತ್ತೇವೆ. ತಪ್ಪು ಒಪ್ಪಿಕೊಂಡರೆ ಅಲ್ಲಿಗೆ ಮುಗಿಸುತ್ತೇವೆ. ಸಮರ್ಥನೆ ಮಾಡಿಕೊಂಡರೆ ಶಿಸ್ತು ಕ್ರಮ ಕೈಗೊಳ್ಳುತ್ತೇವೆ. ಅಮಾನತು ಮಾಡುವ ಅಧಿಕಾರವೂ ಸಮಿತಿಗಿದೆ' ಎಂದರು.

'ಮುಖ್ಯಮಂತ್ರಿ ಆಗುವ ಸಾಮರ್ಥ್ಯ ಇರುವ ಹತ್ತಕ್ಕೂ ಹೆಚ್ಚು ಹಿರಿಯ ನಾಯಕರು ಪಕ್ಷದಲ್ಲಿದ್ದಾರೆ. ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಒಂದಾಗಿ ಹೋದರೆ ನಾವು (ಕಾಂಗ್ರೆಸ್) ಅಧಿಕಾರಕ್ಕೆ ಬರುತ್ತೇವೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಕಾಂಗ್ರೆಸ್ ಸೇರಿದವರು ಕಾಂಗ್ರೆಸ್ಸಿಗರು. ವಲಸಿಗ, ಮೂಲ ಎನ್ನುವುದು ಇಲ್ಲ. ದಲಿತ ಮುಖ್ಯಮಂತ್ರಿ ಕೂಗು ಸದ್ಯಕ್ಕೆ ಅಪ್ರಸ್ತುತ. ಕೆ.ಎಚ್. ಮುನಿಯಪ್ಪ, ಜಿ. ಪರಮೇಶ್ವರ ಪಕ್ಷದ ನಿಷ್ಠರು. ದಲಿತರಿಗೆ ಮುಖ್ಯಮಂತ್ರಿ ಸ್ಥಾನ ನೀಡುವ ಬಗ್ಗೆ ಹೈಕಮಾಂಡ್ ನಿರ್ಣಯ ತೆಗೆದುಕೊಳ್ಳುತ್ತದೆ' ಎಂದೂ ಅವರು ತಿಳಿಸಿದರು.

## ಬಿಪಿಎಲ್ ಕುಟುಂಬಗಳಿಗೆ ₹10 ಸಾವಿರ ಪರಿಹಾರಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್‌ನಿಂದ ಸಂಕಷ್ಟಕ್ಕೆ ಸಿಲುಕಿದ ಬಿಪಿಎಲ್ ಕುಟುಂಬಗಳಿಗೆ ತಲಾ ₹10 ಸಾವಿರ ಪರಿಹಾರ ನೀಡಬೇಕು' ಎಂದು ಹೆಬ್ಬಾಳ ಶಾಸಕ ಬೈರತಿ ಸುರೇಶ್ ಆಗ್ರಹಿಸಿದರು.

ಕೋವಿಡ್ ಹಾಗೂ ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ಸಿಲುಕಿದವರಿಗೆ ಹೆಬ್ಬಾಳದಲ್ಲಿ ಬುಧವಾರ ಆಹಾರದ ಕಿಟ್‌ಗಳನ್ನು ವಿತರಿಸಿ ಮಾತನಾಡಿದ ಅವರು, 'ರಾಜ್ಯ ಸರ್ಕಾರ ಘೋಷಿಸಿರುವ ಪರಿಹಾರದ ಪ್ಯಾಕೇಜ್ ಏನೇನೂ ಸಾಲದು. ₹2 ಸಾವಿರ ನೆರವು ಪಡೆಯಲು ಅದಕ್ಕಿಂತ ಹೆಚ್ಚು ಖರ್ಚು ಮಾಡಬೇಕಾದ ಸ್ಥಿತಿ ಇದೆ. ಕಾಟಾಚಾರಕ್ಕೆ ಸರ್ಕಾರ ಪ್ಯಾಕೇಜ್ ಘೋಷಿಸಿದೆ' ಎಂದು ಟೀಕಿಸಿದರು.

'ಕೋವಿಡ್‌ನಿಂದ ಮೃತಪಟ್ಟ ಬಿಪಿಎಲ್ ಕುಟುಂಬಗಳಿಗೆ ತಲಾ ₹1 ಲಕ್ಷ ಪರಿಹಾರ ನೀಡುವುದಾಗಿ ಸರ್ಕಾರ ಪ್ರಕಟಿಸಿದೆ. ಪರಿಹಾರ ಮೊತ್ತವನ್ನು ಕನಿಷ್ಠ ₹5 ಲಕ್ಷಕ್ಕೆ ಏರಿಸಬೇಕು ಹಾಗೂ ಎಲ್ಲ ಕುಟುಂಬಗಳಿಗೆ ಪರಿಹಾರ ನೀಡಬೇಕು' ಎಂದೂ ಅವರು ಒತ್ತಾಯಿಸಿದರು.

**50 ಸಾವಿರ ಕುಟುಂಬಗಳಿಗೆ ಕಿಟ್:** 'ನನ್ನ ಕ್ಷೇತ್ರದಲ್ಲಿ ಬಡವರು ಹಾಗೂ ಮಧ್ಯಮ- ವರ್ಗದವರು ಹೆಚ್ಚಿನ ಸಂಖ್ಯೆಯಲ್ಲಿ- ದ್ದಾರೆ. ಲಾಕ್‌ಡೌನ್‌ನಿಂದಾಗಿ ಅವರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೊರೊನಾ ಎರಡನೇ ಅಲೆ ವ್ಯಾಪಿಸಿದ ಕೂಡಲೇ 50 ಸಾವಿರ ಕುಟುಂಬಗಳಿಗೆ ಆಹಾರದ ಕಿಟ್ ವಿತರಿಸಲಾಯಿತು' ಎಂದು ಬೈರತಿ ಸುರೇಶ್ ಹೇಳಿದರು.

'ಅದೇ ಕುಟುಂಬಗಳಿಗೆ ಕಳೆದ ವಾರದಿಂದ ಎರಡನೇ ಬಾರಿಗೆ ಆಹಾರದ ಕಿಟ್ ನೀಡಲಾಗುತ್ತಿದೆ. ದಿನಕ್ಕೆ 5000 ಕುಟುಂಬಗಳಿಗೆ ಕಿಟ್ ನೀಡಲಾಗುತ್ತಿದ್ದು, ಇನ್ನೂ ಕೆಲವು ದಿನ ವಿತರಿಸಲಾಗುವು- ದು. ಜತೆಗೆ, ಕಳೆದ 43 ದಿನಗಳಿಂದ ಪ್ರತಿನಿತ್ಯ 4,000 ಬಡವರಿಗೆ ಊಟ ವಿತರಿಸಲಾಗುತ್ತಿದೆ' ಎಂದು ಅವರು ಹೇಳಿದರು.

'ಕೋವಿಡ್ ಸೇನಾನಿಗಳಿಗೆ ಎರಡು ತಿಂಗಳಿಗೆ ಆಗುವಷ್ಟು ಆಹಾರ ಧಾನ್ಯಗಳನ್ನು ನೀಡಲಾಗಿದೆ. ಕ್ಷೇತ್ರದ ದೇವಸ್ಥಾನಗಳ ಅರ್ಚಕರು, ಮಸೀದಿಗಳ ಮೌಲ್ವಿಗಳು ಹಾಗೂ ಚರ್ಚ್‌ಗಳ ಪ್ಯಾಸ್ಟರ್‌ಗಳಿಗೆ ಸಹ ದಿನಸಿ ಕಿಟ್ ವಿತರಣೆ ಮಾಡಲಾಗಿದೆ. ಈ ಎಲ್ಲ ಕಾರ್ಯಗಳಿಗೆ ₹2 ಕೋಟಿಗೂ ಅಧಿಕ ಖರ್ಚು ಮಾಡಲಾಗಿದೆ' ಎಂದೂ ಅವರು ತಿಳಿಸಿದರು.

### ಆರೋಗ್ಯ ವಿ.ವಿ: ಹಿಂದಿನ ಸದಸ್ಯರನ್ನೇ ಮುಂದುವರಿಸುವಂತೆ ಹೈಕೋರ್ಟ್ ಆದೇಶ

# ಸಿಂಡಿಕೇಟ್, ಸೆನೆಟ್ ಸದಸ್ಯರ ನೇಮಕಾತಿ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ (ಆರ್‌ಜಿಯುಎಚ್‌ಎಸ್) ಸಿಂಡಿಕೇಟ್ ಮತ್ತು ಸೆನೆಟ್ ಸದಸ್ಯರನ್ನು ನೇಮಿಸಿ ಈಗಿನ ಬಿಜೆಪಿ ಸರ್ಕಾರ 2020ರ ಅಕ್ಟೋಬರ್‌ನಲ್ಲಿ ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ರದ್ದು ಮಾಡಿದೆ.

ಹಿಂದಿನ ಅವಧಿಯಲ್ಲಿ ನೇಮಕಗೊಂಡಿದ್ದ ಸಿಂಡಿಕೇಟ್ ಮತ್ತು ಸೆನೆಟ್ ಸದಸ್ಯರನ್ನು ಹುದ್ದೆಯಲ್ಲಿ ಮುಂದುವರಿಸಿರುವ ನ್ಯಾಯಪೀಠ, ಈ ಸದಸ್ಯರು ಗೌರವಯುತವಾಗಿ ತಮ್ಮ ಅವಧಿ ಪೂರೈಸಲು ಅವಕಾಶ ಕಲ್ಪಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ಡಾ. ದೀಪ್ತಿ ಭಾವಾ ಮತ್ತು ಇತರರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ಪೂರ್ಣಗೊಳಿಸಿ ಆದೇಶ ಪ್ರಕಟಿಸಿರುವ ನ್ಯಾಯಮೂರ್ತಿ ಜಿ. ನರೇಂದರ್ ನೇತೃತ್ವದ ಪೀಠ, 'ಸಿಂಡಿಕೇಟ್ ಮತ್ತು ಸೆನೆಟ್ ಸದಸ್ಯರು ತಮ್ಮ ಆಸ್ತಿ ಎಂದು ಭಾವಿಸುವುದು ಸಲ್ಲದು. ಅತ್ಯುನ್ನತ ಶಿಕ್ಷಣ ಸಂಸ್ಥೆಗಳನ್ನು ರಾಜಕೀಯ ಪಕ್ಷಗಳು ಮತ್ತು ಸಿದ್ಧಾಂತಗಳ ಆಧಾರದಲ್ಲಿ ನಡೆಸುವುದು ಅಪಾಯಕಾರಿ. ಇಂತಹ ಬೆಳವಣಿಗೆ ಈ ಸಂಸ್ಥೆಗಳಲ್ಲಿನ ಸ್ಥಿತಿಗೆ ಕನ್ನಡಿ ಹಿಡಿಯುತ್ತದೆ. ಅದು ಸಮಾಜದ ಮೇಲೂ ಪರಿಣಾಮ ಬೀರುತ್ತದೆ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

**ಮುಖ್ಯಾಂಶಗಳು**

- 2020ರ ಅಕ್ಟೋಬರ್ ಆದೇಶ ರದ್ದುಪಡಿಸಿದ ಹೈಕೋರ್ಟ್
- ರಾಜಕೀಯ ಪಕ್ಷದ ಸದಸ್ಯರಾದ ಮಾತ್ರಕ್ಕೆ ಮೌಲ್ಯ ಕಡಿಮೆಯಾಗದು
- ಸರಿಯಾದ ಕಾರಣವಿಲ್ಲದೇ ಅವಧಿಗೂ ಮುನ್ನ ತೆರವುಗೊಳಿಸಲು ಅಸಾಧ್ಯ

ತಮ್ಮನ್ನು ಆರ್‌ಜಿಯುಎಚ್‌ಎಸ್‌ನ ಸಿಂಡಿಕೇಟ್ ಮತ್ತು ಸೆನೆಟ್ ಸದಸ್ಯರನ್ನಾಗಿ 2018ರ ಅಕ್ಟೋಬರ್ 16ರಂದು ನೇಮಿಸಲಾಗಿತ್ತು. 2020ರ ಅಕ್ಟೋಬರ್ 23ರಂದು ತಮ್ಮ ಸ್ಥಾನಕ್ಕೆ ಬೇರೆ ಸದಸ್ಯರನ್ನು ನೇಮಿಸಿ ಆದೇಶ ಹೊರಡಿಸಲಾಗಿದೆ. ಅವಧಿ ಪೂರ್ಣಗೊಳ್ಳುವ ಮೊದಲೇ ಹುದ್ದೆಯಿಂದ ತೆರವು ಮಾಡಲಾಗಿದೆ ಎಂದು ಅರ್ಜಿದಾರರು ದೂರಿದ್ದರು.

'ಈ ವ್ಯಕ್ತಿಗಳ ಶೈಕ್ಷಣಿಕ ಸಾಮರ್ಥ್ಯವನ್ನು ಪರಿಗಣಿಸದೇ ಅವರನ್ನು ರಾಜಕೀಯ ವ್ಯಕ್ತಿಗಳಾಗಿ ನೋಡುತ್ತಿರುವುದರಿಂದ ಅವರ ನೇಮಕಾತಿಯ ವಿಚಾರ ವಿವಾದವಾಗಿ ಮಾರ್ಪಟ್ಟಿರು- ವುದು ನೋವಿನ ಸಂಗತಿ. ಯಾವುದೇ ಅತ್ಯುನ್ನತ ವ್ಯಕ್ತಿಗಳು ಯಾವುದೋ ಒಂದು ರಾಜಕೀಯ ಪಕ್ಷ ಅಥವಾ ಸಂಘಟನೆಯ ಸದಸ್ಯರಾದ ಮಾತ್ರಕ್ಕೆ ಅವರ ಮೌಲ್ಯ ಕಡಿಮೆಯಾಗುವುದಿಲ್ಲ. ಅವರ ಅರ್ಹತೆಗೆ ಅನುಗುಣವಾಗಿ ಯಾವತ್ತೂ ಅತ್ಯುನ್ನತ ವ್ಯಕ್ತಿಗಳಾಗಿಯೇ ಇರುತ್ತಾರೆ' ಎಂದು ನ್ಯಾಯಪೀಠ ಹೇಳಿದೆ.

ಆಡಳಿತಾತ್ಮಕ ಅನುಕೂಲಕ್ಕಾಗಿ ಸಿಂಡಿಕೇಟ್ ಮತ್ತು ಸೆನೆಟ್ ಸದಸ್ಯರ ಬದಲಾವಣೆ ಮಾಡಲಾಗಿದೆ ಎಂದು ಸರ್ಕಾರದ ವಕೀಲರು ಸರ್ಕಾರದ ತೀರ್ಮಾನವನ್ನು ಸಮರ್ಥಿಸಿಕೊಂಡಿದ್ದರು.

ಅದನ್ನು ಮಾನ್ಯ ಮಾಡದ ನ್ಯಾಯಪೀಠ, 'ಅರ್ಜಿದಾರರ ಬದಲಾಗಿ ನೇಮಿಸಿರುವ ವ್ಯಕ್ತಿಗಳು ಇವರಿಗಿಂತಲೂ ಹೆಚ್ಚು ಅರ್ಹತೆ ಹೊಂದಿದ್ದಾರೆ ಎಂಬುದನ್ನು ಸಾಬೀತುಪಡಿಸುವ ಯಾವ ದಾಖಲೆಗಳನ್ನೂ ನ್ಯಾಯಾಲಯದ ಮುಂದೆ ಇಟ್ಟಿಲ್ಲ. ಇಂತಹ ಕಾರಣಗಳು ಕೇವಲ ನೆಪಕ್ಕಷ್ಟೇ' ಎಂದು ಪ್ರತಿಕ್ರಿಯಿಸಿದೆ.

'ಒಂದು ನಿಗದಿತ ಅವಧಿಗೆ ನೇಮಕಗೊಂಡ ವ್ಯಕ್ತಿಗಳನ್ನು ಸರಿಯಾದ ಕಾರಣಗಳಿಲ್ಲದೇ ಅವಧಿಗೂ ಮುನ್ನ ತೆರವುಗೊಳಿಸಲು ಸಾಧ್ಯವಿಲ್ಲ. ಹುದ್ದೆಯಿಂದ ತೆರವು ಮಾಡುವ ಮುನ್ನ ಸಕ್ಷಮ ಪ್ರಾಧಿಕಾರ ಅಥವಾ ರಾಜ್ಯ ಸರ್ಕಾರ, ಸಕಾರಣ- ಗಳನ್ನು ದಾಖಲಿಸುವುದು ಕಡ್ಡಾಯ. ಅರ್ಜಿದಾರರ ನೇಮಕಾತಿಯಿಂದ ಆಡಳಿತಾತ್ಮಕವಾಗಿ ಯಾವ ತೊಡಕುಗಳು ಸೃಷ್ಟಿಯಾಗಿದ್ದವು ಎಂಬುದನ್ನು ಪ್ರತಿವಾದಿಗಳಾದ ಆರ್‌ಜಿಯುಎಚ್‌ಎಸ್ ಅಥವಾ ರಾಜ್ಯ ಸರ್ಕಾರ ಮನವರಿಕೆ ಮಾಡಿಕೊಟ್ಟಿಲ್ಲ' ಎಂದೂ ನ್ಯಾಯಾಲಯ ಆದೇಶದಲ್ಲಿ ತಿಳಿಸಿದೆ.

ಇನ್ನು ಅತಿ ಕಡಿಮೆ ಅವಧಿ ಉಳಿದಿರುವುದರಿಂದ ಅರ್ಜಿದಾರರನ್ನು ಹುದ್ದೆಯಲ್ಲಿ ಮುಂದುವರಿಸುವಂತೆ ಆದೇಶ ನೀಡಬಾರದು ಎಂದು ವಿಶ್ವವಿದ್ಯಾಲ- ಯದ ವಕೀಲರು ಮನವಿ ಮಾಡಿದ್ದರು.

ಅದನ್ನು ತಿರಸ್ಕರಿಸಿರುವ ನ್ಯಾಯಪೀಠವು, 'ಅರ್ಜಿದಾರರನ್ನು ಅಗೌರವಯುತವಾಗಿ ಹುದ್ದೆಯಿಂದ ತೆರವು ಮಾಡಲಾಗಿತ್ತು. ಅವರು ಅವಧಿ ಪೂರೈಸಿ ಗೌರವಯುತವಾಗಿ, ತಲೆ ಎತ್ತಿಕೊಂಡು ನಿರ್ಗಮಿಸಲು ಅವಕಾಶ ಒದಗಿಸಬೇಕು' ಎಂದು ತಾಕೀತು ಮಾಡಿದೆ.

### ಕುಡಿಯುವ ನೀರು ಘಟಕ ಅಳವಡಿಕೆಯಲ್ಲಿ ಅವ್ಯವಹಾರ ಆರೋಪ

# 3 ತಿಂಗಳಲ್ಲಿ ವರದಿ; ಆರಗ ಜ್ಞಾನೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿನ ಶುದ್ಧ ಕುಡಿಯುವ ನೀರಿನ ಘಟಕಗಳ ಅಳವಡಿಕೆ ಮತ್ತು ನಿರ್ವಹಣೆ- ಯಲ್ಲಿ ನಡೆದಿರುವ ಅವ್ಯವಹಾರ- ಗಳ ಆರೋಪಗಳ ಬಗ್ಗೆ ಸಮೀಕ್ಷೆ ಆರಂಭಿಸಿದ್ದು, ಮೂರು ತಿಂಗಳ ಒಳಗೆ ವರದಿ ಸಲ್ಲಿಸಲಾಗುವುದು' ಎಂದು ವಿಧಾನ ಮಂಡಲದ ಜಂಟಿ ಸದನ ಸಮಿತಿಯ ಅಧ್ಯಕ್ಷ ಆರಗ ಜ್ಞಾನೇಂದ್ರ ತಿಳಿಸಿದರು.

ಬುಧವಾರ ನಡೆದ ಸಮಿತಿಯ ಮೊದಲ ಸಭೆಯ ಬಳಿಕ ಮಾತನಾಡಿದ ಅವರು, 'ಈ ಅವ್ಯವಹಾರದ ಬಗ್ಗೆ ಸಮಗ್ರವಾಗಿ ವಿಚಾರಣೆ ನಡೆಸಿ ವರದಿ ನೀಡಲಾಗುವುದು' ಎಂದರು.

'ಟೆಂಡರ್ ಪ್ರಕ್ರಿಯೆ, ಹೆಚ್ಚುವರಿ ಮೊತ್ತ ಪಾವತಿ, ಘಟಕಗಳ ಗುಣಮಟ್ಟದ ಬಗ್ಗೆ ಸಮಿತಿ ವಿಚಾರಣೆ ನಡೆಸಲಿದೆ. ಹಲವು ಕಡೆಗಳಲ್ಲಿ ಅಳವಡಿಸಿರುವ ಘಟಕಗಳು ಯೋಗ್ಯವಾಗಿಲ್ಲ. ಘಟಕಗಳ ಅಳವಡಿಕೆಯಲ್ಲಿ ಮಧ್ಯ- ವರ್ತಿಗಳು ಭಾಗಿಯಾಗಿದ್ದು, ಭಾರಿ ಪ್ರಮಾಣ ಭ್ರಷ್ಟಾಚಾರ ನಡೆದಿರುವುದು ಮೇಲ್ನೋಟಕ್ಕೇ ಕಾಣಿಸುತ್ತದೆ' ಎಂದರು.

ಶುದ್ಧ ಕುಡಿಯುವ ನೀರಿನ ಘಟಕಗಳ ಅಳವಡಿಕೆ ಮತ್ತು ನಿರ್ವಹಣೆ ವಿಚಾರದಲ್ಲಿ ನಡೆದಿರುವ ಅವ್ಯವ- ಹಾರಗಳ ಬಗ್ಗೆ ವಿಧಾನಸಭೆಯ- ಲ್ಲಿ ಪಕ್ಷಾತೀತವಾಗಿ ಶಾಸಕರು ಧ್ವನಿ ಎತ್ತಿದಾಗ (2020 ಡಿಸೆಂಬರ್), ಈ ಬಗ್ಗೆ ಸದನ ಸಮಿತಿಯಿಂದ ತನಿಖೆ ನಡೆಸುವುದಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಘೋಷಿಸಿದ್ದರು.

ಶುದ್ಧ ಕುಡಿಯುವ ನೀರಿನ ಘಟಕಗಳ ಅಳವಡಿಕೆಯಲ್ಲಿ ನಡೆದ ಅವ್ಯವಹಾರ ಆರೋಪದ ಬಗ್ಗೆ 'ಪ್ರಜಾವಾಣಿ'ಯಲ್ಲಿ ವಿಶೇಷ ವರದಿ ಪ್ರಕಟವಾಗಿತ್ತು.

## ಬೀದಿಯಲ್ಲಿ ಮಾತನಾಡುವವರಿಗೆ ಪ್ರತಿಕ್ರಿಯಿಸಲ್ಲ: ಮುರುಗೇಶ್ ನಿರಾಣಿ

ಬೆಂಗಳೂರು: 'ಹಾದಿಬೀದಿಯಲ್ಲಿ ಮಾತನಾಡುವವರಿಗೆ ನಾನು ಉತ್ತರ ಕೊಡುವುದಿಲ್ಲ' ಎಂದು ಗಣಿ ಮತ್ತು ಭೂ ವಿಜ್ಞಾನ ಸಚಿವ ಮುರುಗೇಶ್ ನಿರಾಣಿ ಹೇಳಿದರು.

ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಸಮಾಜದ ಬಗ್ಗೆ ಮಾತನಾಡುವುದಿಲ್ಲ. ವೀರಶೈವ ಲಿಂಗಾಯತ ಸಮಾಜ ಪ್ರಜ್ಞಾವಂತ ಸಮಾಜ' ಎಂದರು.

'ಪಂಚಮಸಾಲಿ ಹೋರಾಟವನ್ನು ಯಾರು ದುರ್ಬಳಕೆ ಮಾಡಿದ್ದಾರೆ ಎಂಬುದು ಚುನಾವಣೆಯಲ್ಲಿ ನಿರ್ಧಾ- ರವಾಗಲಿದೆ. ಪಂಚಮಸಾಲಿ ಅಷ್ಟೇ ಅಲ್ಲ, ಇಡೀ ವೀರಶೈವ ಲಿಂಗಾಯತ ಹೋರಾಟದ ಬಗ್ಗೆ ನಾವು ಹೋರಾಟ ಮಾಡಬೇಕಾಗುತ್ತದೆ. ಇಡೀ ಸಮುದಾಯದಲ್ಲಿ ಆರ್ಥಿಕವಾಗಿ ಹಿಂದುಳಿದವರಿದ್ದಾರೆ, ಸಣ್ಣಸಣ್ಣ ಜಾತಿಗಳಿವೆ. ಅವುಗಳೆಲ್ಲದರ ಬಗ್ಗೆ ಅಧಿಕಾರದಲ್ಲಿ ಇರುವವರು ಗಮನ ಹರಿಸಬೇಕು' ಎಂದು ಮುರುಗೇಶ್ ನಿರಾಣಿ ಹೇಳಿದರು.

## 'ಕೈ'ಸೇರುವ ನಿರ್ಣಯ ತೆಗೆದುಕೊಂಡಿಲ್ಲ'

ಬೆಂಗಳೂರು: 'ಮುಂದಿನ ವಿಧಾನಸಭಾ ಚುನಾವಣೆಗೆ ಇನ್ನೂ ಎರಡು ವರ್ಷ ಬಾಕಿ ಇರುವುದರಿಂದ ಕಾಂಗ್ರೆಸ್ ಅಥವಾ ಇನ್ನಾವುದೇ ಪಕ್ಷ ಸೇರುವ ಬಗ್ಗೆ ಯಾವುದೇ ನಿರ್ಣಯ ತೆಗೆದುಕೊಂಡಿಲ್ಲ. ಕೊರೊನಾ ಬಗ್ಗೆ ಗಮನಹರಿಸಿದ್ದೇ- ನೆ' ಎಂದು ಶಾಸಕ ಜಿ.ಟಿ.ದೇವೇಗೌಡ ಅವರು ಹೇಳಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, 'ನಾನು ಶಾಸಕನಾಗಿ ಕೆಲಸ ಮಾಡುವ ಬಗ್ಗೆ ಮಾತ್ರ ಗಮನಹರಿಸಿದ್ದೇನೆ' ಎಂದು ಹೇಳಿದರು.

## ಕೆಪಿಸಿಸಿ ಒಬಿಸಿ ಘಟಕ: ಲಕ್ಷ್ಮೀನಾರಾಯಣ ಮುಂದುವರಿಕೆ

ಪ್ರಜಾವಾಣಿ ವಾರ್ತೆ



ಎಂ.ಡಿ. ಲಕ್ಷ್ಮೀನಾರಾಯಣ

ಬೆಂಗಳೂರು: 'ಕೆಪಿಸಿಸಿ ಹಿಂದುಳಿದ ವರ್ಗಗಳ ಘಟಕದ ಅಧ್ಯಕ್ಷ- ರಾಗಿದ್ದ ಎಂ.ಡಿ. ಲಕ್ಷ್ಮೀನಾರಾ- ಯಣ ಅವರನ್ನು ಅದೇ ಹುದ್ದೆಯಲ್ಲಿ ಮುಂದುವರಿಯಲು ಸೂಚಿಸಿದ್ದೇನೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ರೇಸ್ ಕೋರ್ಸ್ ರಸ್ತೆಯ ಕಾಂಗ್ರೆಸ್ ಭವನದ ಆವರಣದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ನೂತನ ಕಚೇರಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, 'ಮೂರು ವರ್ಷ ಎಂಟು ತಿಂಗಳಿಂದ ಕೆಪಿಸಿಸಿ ಒಬಿಸಿ ಘಟಕದ ಅಧ್ಯಕ್ಷರಾಗಿ ಲಕ್ಷ್ಮೀ- ನಾರಾಯಣ ಕೆಲಸ ಮಾಡುತ್ತಿದ್ದಾರೆ. ರಾಜೀನಾಮೆ ಅಂಗೀಕರಿಸುವಂತೆ ಪತ್ರದಲ್ಲಿ ಮನವಿ ಮಾಡಿಕೊಂಡಿದ್ದರೂ ಅದನ್ನು ಅಂಗೀಕರಿಸಿಲ್ಲ' ಎಂದರು.

ಪಕ್ಷದ ಹಿರಿಯ ನಾಯಕ ವೀರಪ್ಪ ಮೊಯಿಲಿ, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ರಾಮಲಿಂಗಾರೆಡ್ಡಿ, ಸಲೀಂ ಅಹಮದ್, ವಿಧಾನ ಪರಿಷತ್ ಸದಸ್ಯ ಎಸ್. ರವಿ ಹಾಗೂ ಡಿಸಿಸಿ ಅಧ್ಯಕ್ಷ ಮುನಿಶಾಮಣ್ಣ ಇದ್ದರು.

ಮಸಾಲೆ ಹಾಡು
ಬದುಕಿನ ಇಳಿ ಸಂಜೆಯಲ್ಲಿ...
ನಿಮ್ಮ Prajavani.net ನಲ್ಲಿ ಮತ್ತೊಂದು ವಿಶೇಷ
ವಿಡಿಯೊ ನೋಡಲು QR ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಯಡಿಯೂರಪ್ಪ ವಿರುದ್ಧ ಪರೋಕ್ಷವಾಗಿ ಹರಿಹಾಯ್ದ ಯತ್ನಾಳ

# ‘ದುಷ್ಟ ಸಂಹಾರದಿಂದ ರಾಜ್ಯಕ್ಕೆ ಒಳಿತಾಗಲಿದೆ’

ಪ್ರಜಾವಾಣಿ ವಾರ್ತೆ

ಯತ್ನಾಳ

ಬೆಂಗಳೂರು: ‘ದುಷ್ಟಸಂಹಾರಆಗಬೇಕು. ಅದರಿಂದ ದೇಶ, ರಾಜ್ಯ ಮತ್ತು ಪಕ್ಷಕ್ಕೆ ಒಳ್ಳೆಯದಾಗುತ್ತದೆ’ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಬುಧವಾರ ನಡೆದ ಹಕ್ಕು ಬಾಧ್ಯತಾ ಸಮಿತಿ ಸಭೆಯ ಬಳಿಕ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಇತಿಹಾಸದಲ್ಲಿ ಆದಿಲ್‌ಶಾಹಿ, ಮೊಗಲ್ ಮನೆತನಗಳು ಮರೆದಾಡಿ ನಾಶ ಆಗಿ ಹೋಯಿತಲ್ಲ. ಅದೇ ರೀತಿ ಆಗಲಿದೆ’ ಎಂದರು. ಮುಖ್ಯಮಂತ್ರಿ ಯಡಿಯೂರಪ್ಪ ಕುಟುಂಬದವರನ್ನು ಕುರಿತು ಯತ್ನಾಳ ಈ ಹೇಳಿಕೆ ನೀಡಿದ್ದಾರೆ ಎಂದೇ ವಿಶ್ಲೇಷಿಸಲಾಗುತ್ತಿದೆ.

‘ಪಕ್ಷವು ಭ್ರಷ್ಟಾಚಾರವನ್ನು ಸಹಿಸುವುದಿಲ್ಲ. ನಮ್ಮ ಹೋರಾಟ ಶೀಘ್ರವೇ ಫಲ ಕೊಡಲಿದೆ. ರಾಜ್ಯದಲ್ಲಿ ನಾಯಕತ್ವ ಬದಲಾವಣೆ ನಿಶ್ಚಿತ. ಅದಕ್ಕೆ ಕಾಲ ಕೂಡಿ ಬರಬೇಕು. ನಾಯಕತ್ವ ಬದಲಾವಣೆ ವಿಚಾರದಲ್ಲಿ ಈ ಹಿಂದೆ ನೀಡಿದ ಹೇಳಿಕೆಗೆ ಈಗಲೂ ಬದ್ಧನಾಗಿದ್ದೇನೆ. ಒಳಗೊಂದು ಹೊರಗೊಂದು ಮಾತನಾಡುವ ಜಾಯಮಾನ ನನ್ನದಲ್ಲ’ ಎಂದರು.

ನಾಯಕತ್ವ ಬದಲಾವಣೆ ಮುಗಿದ ಅಧ್ಯಾಯ ಎಂದು ಬಿ.ವೈ. ವಿಜಯೇಂದ್ರ ಮೈಸೂರಿನಲ್ಲಿ ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿದ ಯತ್ನಾಳ, ‘ನಾನೂ ಮುಖ್ಯಮಂತ್ರಿಯ ಮಗ ಆಗಿದ್ದರೆ ಅದೇ ರೀತಿ ಹೇಳಿಕೆ ಕೊಡುತ್ತಿದ್ದೆ’ ಎಂದು ವ್ಯಂಗ್ಯವಾಡಿದರು.

ಹಾನಗಲ್ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ವಿಜಯೇಂದ್ರ ಅವರನ್ನು ಕಣಕ್ಕೆ ಇಳಿಸಲು ಕೆಲವರು ಪ್ರಯತ್ನ ನಡೆಸಿದ್ದಾರೆ. ಅದಕ್ಕಾಗಿ ಅಭಿಪ್ರಾಯ ಸಂಗ್ರಹಿಸಲು ವಿಜಯೇಂದ್ರ ಅವರ ಇಬ್ಬರು ಏಜೆಂಟರು ಇದ್ದಾರೆ. ದಿನ ಬೆಳಗಾದರೆ ಅವರನ್ನು ಹೊಗಳುತ್ತಲೇ ಇರುತ್ತಾರೆ ಎಂದು ಲೇವಡಿ ಮಾಡಿದರು.

‘ಇತ್ತೀಚೆಗೆ ಅರುಣ್‌ಸಿಂಗ್ ಅವರು ರಾಜ್ಯಕ್ಕೆ ಬಂದಾಗ ನಾಯಕತ್ವ ಬದಲಾವಣೆ ಇಲ್ಲ ಮತ್ತು ಆ ವಿಷಯ ಚರ್ಚಿಸುವುದಿಲ್ಲ ಎಂದೂ ಹೇಳಿಕೆಯನ್ನು ನೀಡಿದ್ದರು. ಈ ಹೇಳಿಕೆಯ ಫಲಿತಾಂಶವನ್ನು ಏನಾಗಬಹುದು ಎಂದು ಊಹಿಸಿಯೇ ಅವರ ಭೇಟಿಗೆ ಹೋಗಲಿಲ್ಲ. ಭೇಟಿಯಾದರೂ ಯಾವುದೇ ಪ್ರಯೋಜನ ಆಗುವುದಿಲ್ಲ ಎಂಬುದು ಗೊತ್ತಿತ್ತು’ ಎಂದು ಯತ್ನಾಳ ಹೇಳಿದರು.

‘ಸಚಿವ ಸಿ.ಪಿ.ಯೋಗೇಶ್ವರ್ ಅವರು ಪರೀಕ್ಷೆ ಬರೆದಿದ್ದೇನೆ ಎಂದಿದ್ದಾರೆ. ಅವರು ವರಿಷ್ಠರಿಗೆ ಉತ್ತರ ಪತ್ರಿಕೆ ಕೊಟ್ಟಿದ್ದಾರೋ ಇಲ್ಲವೊ ಗೊತ್ತಿಲ್ಲ. ಕಾಗದದ ಮೂಲಕ ಉತ್ತರ ಕೊಟ್ಟಿದ್ದಾರೋ, ರೌಂಡ್ ರೌಂಡ್ (ಸಿ.ಡಿ) ಅದನ್ನು ಕೊಟ್ಟಿದ್ದಾರೋ ಗೊತ್ತಿಲ್ಲ. ಒಟ್ಟಿನಲ್ಲಿ ಪಕ್ಷಕ್ಕೆ ಒಳ್ಳೆಯದಾದರೆ ಸಾಕು’ ಎಂದರು.

## ‘ಬಿಎಸ್‌ವೈ ಬಗ್ಗೆ ಮಾತನಾಡಿದರೆ ನಾವು ಸುಟ್ಟು ಹೋಗುತ್ತೇವೆ’

ಯೋಗೇಶ್ವರ್

ಕೊಪ್ಪಳ: ‘ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಬದಲಾಯಿಸಲು ನಾವು ದೆಹಲಿಗೆ ಹೋಗುತ್ತಿಲ್ಲ. ನಮ್ಮ ಆಂತರಿಕ ಸಮಸ್ಯೆ ಹೇಳಿಕೊಳ್ಳಲು ಹೋಗುತ್ತೇವೆ. ನನ್ನನ್ನು ಬಿಎಸ್‌ವೈ ವಿರೋಧಿ ಎಂಬಂತೆ ಬಿಂಬಿಸಬೇಡಿ. ಅವರ ಬಗ್ಗೆ ಮಾತನಾಡಿದರೆ ನಾವು ಸುಟ್ಟು ಹೋಗುತ್ತೇವೆ’ ಎಂದು ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ್ ಹೇಳಿದರು.

ಗಂಗಾವತಿ ತಾಲ್ಲೂಕಿನ ಅಂಜನಾದ್ರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನಮ್ಮಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಕೆಲವು ವೈಯಕ್ತಿಕ ಸಮಸ್ಯೆಗಳನ್ನು ವರಿಷ್ಠರ ಮುಂದೆ ಹೇಳಿಕೊಂಡಿದ್ದೇನೆ. ಇದಕ್ಕೆ ಪರೀಕ್ಷೆ ಬರೆದಿದ್ದು ಎಂದು ಹೇಳಿದ್ದು, ಫಲಿತಾಂಶಕ್ಕೆ ಕಾಯುತ್ತೇವೆ’ ಎಂದು ಸ್ಪಷ್ಟಪಡಿಸಿದರು.

# ಯಡಿಯೂರಪ್ಪ ವಿರುದ್ಧ ದೂರು: ಜುಲೈ 8ಕ್ಕೆ ಭವಿಷ್ಯ?

ಮೊದಲ ಪುಟದಿಂದ...

ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಬಿ. ಜಯಂತ್ ಕುಮಾರ್, ಬುಧವಾರ ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆ ನಡೆಸಿದರು.

‘ಝೂಮ್’ ತಂತ್ರಾಂಶದ ಮೂಲಕ ನಡೆದ ವಿಚಾರಣೆಯಲ್ಲಿ ವಾದ ಮಂಡಿಸಿದ ಅಬ್ರಹಾಂ, ಪ್ರಕರಣವನ್ನು ಎಸಿಬಿ ತನಿಖೆಗೆ ಒಪ್ಪಿಸುವಂತೆ ಮನವಿ ಮಾಡಿದರು. ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಬಿ. ರಾಜೇಶ್ವರಿ ಮತ್ತು ಎಸಿಬಿ ಡಿವೈಎಸ್‌ಪಿ ರಾಜೇಂದ್ರ ಕೂಡ ವಿಚಾರಣೆ ವೇಳೆ ಆನ್‌ಲೈನ್ ಮೂಲಕ ಹಾಜರಿದ್ದರು. ವಾದ ಆಲಿಸಿದ ನ್ಯಾಯಾಧೀಶರು, ದೂರನ್ನು ವಿಚಾರಣೆಗೆ ಅಂಗೀಕರಿಸುವುದಕ್ಕೆ ಸಂಬಂಧಿಸಿದ ಆದೇಶ ಪ್ರಕಟಣೆಯನ್ನು ಜುಲೈ 8ಕ್ಕೆ ಕಾಯ್ದಿರಿಸಿದರು.

**ಆರೋಪಗಳೇನು?:** ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಕೋನದಾಸನಪುರದಲ್ಲಿ ಬಹುಮಹಡಿ ವಸತಿ ಸಮುಚ್ಚಯಗಳ ನಿರ್ಮಾಣಕ್ಕೆ ₹ 567 ಕೋಟಿ ಮೊತ್ತದ ಕಾಮಗಾರಿಗೆ 2017ರಲ್ಲಿ ಟೆಂಡರ್ ಪ್ರಕ್ರಿಯೆ ನಡೆಸಿತ್ತು. ಆಗ ರಾಮಲಿಂಗಂ ಕನ್‌ಸ್ಟ್ರಕ್ಷನ್ ಕಂಪನಿಗೆ ₹ 666.22 ಕೋಟಿ ಮೊತ್ತಕ್ಕೆ ಟೆಂಡರ್ ಅಂತಿಮಗೊಳಿಸಲಾಗಿತ್ತು. ಆದರೆ, ಬಿಡಿಎ ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿದ್ದ ಕಾರಣಕ್ಕೆ ಕಾಮಗಾರಿ ಆರಂಭವಾಗಿರಲಿಲ್ಲ ಎಂಬ ಉಲ್ಲೇಖ ದೂರಿನಲ್ಲಿದೆ.

‘ಜೆಡಿಎಸ್– ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಬಿಡಿಎ ಅಧ್ಯಕ್ಷರಾಗಿದ್ದ ಎಸ್.ಟಿ. ಸೋಮಶೇಖರ್ ಸರ್ಕಾರ ಪತನಗೊಳ್ಳುವ ಹಂತದಲ್ಲಿ ಪ್ರಭಾವ ಬೀರಿ ರಾಮಲಿಂಗಂ ಕಂಪನಿಗೆ ಕಾರ್ಯಾದೇಶ ಕೊಡಿಸಲು ಯತ್ನಿಸಿದ್ದರು. ಈ ಕುರಿತು ಆಗಿನ ಬಿಡಿಎ ಆಯುಕ್ತ ರಾಕೇಶ್ ಸಿಂಗ್ ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದರು. ನಂತರದ ದಿನಗಳಲ್ಲಿ ಬಿಡಿಎ ಆಯುಕ್ತರ ವಿರೋಧದ ಮಧ್ಯೆಯೂ ಕಾರ್ಯಾದೇಶ ನೀಡಲಾಗಿತ್ತು’ ಎಂದು ದೂರಿನಲ್ಲಿ ಅಬ್ರಹಾಂ ಆರೋಪಿಸಿದ್ದಾರೆ.

**ಸಿಎಂಗೆ ಮೋಸ:** ‘ನಂತರ ಬಿಡಿಎ ಆಯುಕ್ತರಾಗಿದ್ದ ಜಿ.ಸಿ. ಪ್ರಕಾಶ್, ಮುಖ್ಯಮಂತ್ರಿ ಮತ್ತು ಅವರ ಮಗನ ಪರವಾಗಿ ಚಂದ್ರಕಾಂತ್ ಬಳಿ ₹ 12 ಕೋಟಿ ಲಂಚ ಪಡೆದಿದ್ದರು. ಗುತ್ತಿಗೆದಾರ ಈ ಹಣವನ್ನು ಕ್ರೆಸೆಂಟ್ ಹೋಟೆಲ್ ಮಾಲೀಕರಿಗೆ ನೀಡಿದ್ದರು. ಅವರಿಂದ ₹ 12 ಕೋಟಿ ಪಡೆದುಕೊಂಡಿದ್ದ ಪ್ರಕಾಶ್, ಮುಖ್ಯಮಂತ್ರಿ ಮತ್ತು ಅವರ ಮಗನಿಗೆ ತಲುಪಿಸದೇ ವಂಚಿಸಿದ್ದರು. ಬಳಿಕ ಅವರನ್ನು ಬಿಡಿಎ ಆಯುಕ್ತರ ಹುದ್ದೆಯಿಂದ ಎತ್ತಂಗಡಿ ಮಾಡಲಾಗಿತ್ತು’ ಎಂಬ ಆರೋಪವೂ ದೂರಿನಲ್ಲಿದೆ.

ಬಳಿಕ ಮತ್ತೆ ಚಂದ್ರಕಾಂತ್ ರಾಮಲಿಂಗಂ ಮುಂದೆ ಹಣಕ್ಕಾಗಿ ಬೇಡಿಕೆ ಇಡಲಾಗಿತ್ತು. ಬಿಡಿಎ ಸೇರಿದಂತೆ ಸರ್ಕಾರದ ವಿವಿಧ ಇಲಾಖೆ, ಸಂಸ್ಥೆಗಳಲ್ಲಿ ಕಾಮಗಾರಿಗಳ ಗುತ್ತಿಗೆ ಪಡೆದಿರುವ ಅವರು, ಅವುಗಳ ವಿಚಾರದಲ್ಲಿ ಪ್ರಭಾವ ಬೀರುವುದಕ್ಕಾಗಿ ಯಡಿಯೂರಪ್ಪ ಅವರ ಮೊಮ್ಮಗ ಶಶಿಧರ ಮರಡಿಗೆ ₹ 12.5 ಕೋಟಿ ಪಾವತಿಸಿದ್ದಾರೆ. 2019ರ ಅಕ್ಟೋಬರ್ 14ರಿಂದ 2020ರ ಆಗಸ್ಟ್ 17ರ ನಡುವೆ ಏಳು ಸಂಶಯಾಸ್ಪದ ಕಂಪನಿಗಳ ಮೂಲಕ ಹಣ ವರ್ಗಾವಣೆ ನಡೆದಿದೆ ಎಂದು ದೂರಿನಲ್ಲಿ ಆರೋಪಿಸಿದ್ದಾರೆ.

## ‘ಮುಂದಿನ ಚುನಾವಣೆಗೂ ನನ್ನದೇ ನಾಯಕತ್ವ’

ಒಂದನೇ ಪುಟದಿಂದ...

ಈ ರಾಜಕೀಯ ಹೇಳಿಕೆಗಳ ಮಧ್ಯೆಯೇ ಯಡಿಯೂರಪ್ಪ, ಮುಂದಿನ ಚುನಾವಣೆಯ ನಾಯಕತ್ವವೂ ತಮ್ಮದೇ ಎಂದು ಹೇಳಿರುವುದು ನಾನಾ ರೀತಿಯ ರಾಜಕೀಯ ವಿಶ್ಲೇಷಣೆಗೂ ಕಾರಣವಾಗಿದೆ. ಹೀಗೆ ಹೇಳುವ ಮೂಲಕ ‘ಮುಖ್ಯಮಂತ್ರಿ ಸ್ಥಾನದಿಂದ ತಮ್ಮನ್ನು ಅಲುಗಾಡಿಸಲು ಸಾಧ್ಯವಿಲ್ಲ’ ಎಂಬ ಸ್ಪಷ್ಟ ಸಂದೇಶವನ್ನು ಅವರು ವರಿಷ್ಠರಿಗೆ ರವಾನಿಸಿದ್ದಾರೆ ಎಂದೂ ಹೇಳಲಾಗುತ್ತಿದೆ.

ಬಿಜೆಪಿಯವರೇ ತಮ್ಮ ವಿರುದ್ಧ ಪಿತೂರಿ ನಡೆಸಿದ್ದಾರೆ ಎಂದು ರಮೇಶ ಜಾರಕಿಹೊಳಿ ಆರೋಪಿಸಿದ್ದಾರಲ್ಲ ಎಂಬ ಪ್ರಶ್ನೆಗೆ, ‘ಅವರು ಹೇಳಿದ್ದೆಲ್ಲವನ್ನೂ ಮಾಧ್ಯಮಗಳಲ್ಲಿ ಓದಿದ್ದೇನೆ. ಇತ್ತೀಚಿನ ದಿನಗಳಲ್ಲಿ ನಾನು ಯಾವುದಕ್ಕೂ ಪ್ರತಿಕ್ರಿಯೆ ನೀಡುವುದನ್ನು ನಿಲ್ಲಿಸಿದ್ದೇನೆ’ ಎಂದರು.

ರಾಜ್ಯದಲ್ಲಿ ನಾಯಕತ್ವ ಬದಲಾವಣೆಯ ವಿಷಯದಲ್ಲಿ ಗೊಂದಲ ಮುಂದುವರಿದಿದೆಯಲ್ಲವೇ ಎಂಬ ಪ್ರಶ್ನೆಗೆ ಉತ್ತರಿಸಲು ನಿರಾಕರಿಸಿದ ಅವರು, ಕೈ ಮುಗಿದು ಹೊರಟೇ ಬಿಟ್ಟರು.

ಪ್ರಜಾವಾಣಿ facebook LIVE
FB.com/prajavani.net
ಪಿಯುಸಿ ಗೊಂದಲಗಳಿಗೆ ಇಲ್ಲಿದೆ ಪರಿಹಾರ
ಪಿಯುಸಿ ಮತ್ತು ಸಿಬಿಎಸ್‌ಇ ಹನ್ನೆರಡನೇ ತರಗತಿ ಪರೀಕ್ಷೆ ರದ್ದಾಗಿದ್ದು ಗ್ರೇಡ್ ಆಧಾರದ ಮೇಲೆ ಎಲ್ಲರನ್ನೂ ಉತ್ತೀರ್ಣ ಮಾಡುವುದಾಗಿ ಸರ್ಕಾರ ಹೇಳಿದೆ. ಆದರೆ ಗ್ರೇಡ್, ಮುಂದಿನ ಶಿಕ್ಷಣ ಮೊದಲಾದವುಗಳ ಕುರಿತು ವಿದ್ಯಾರ್ಥಿಗಳಲ್ಲಿ ಆತಂಕವಿದೆ. ಈ ಆತಂಕ, ಗೊಂದಲವನ್ನು ಪರಿಹರಿಸಲಿದ್ದಾರೆ ಡಾ. ಚಂದ್ರಶೇಖರ್ ಎಚ್. ಬಿ., ಹಿರಿಯ ಸಹಾಯಕ ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ (ಡಿ.ಎಸ್. ಇ. ಆರ್. ಟಿ), ಬೆಂಗಳೂರು

ಸಂದರ್ಶಕರು: ನಾಗರಾಜ ಕೆ. ಎಲ್, ಉಪನ್ಯಾಸಕರು, ಪ್ರಾರ್ಥನ ಪಿಯು ಕಾಲೇಜ್, ವಿಜಯಪುರ

ನೀವೂ ಪ್ರಶ್ನೆಗಳನ್ನು ಕೇಳಬಹುದು
2 ನೇ ಜುಲೈ 2021, ಸಂಜೆ 7ಕ್ಕೆ

ಪ್ರಜಾವಾಣಿ LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರ ಪ್ರಸಾರ
ಸಂವಾದ
ಮಾಧ್ಯಮ ಸ್ವಾತಂತ್ರ್ಯ: ಇಕ್ಕಟ್ಟು - ಬಿಕ್ಕಟ್ಟು
ಸಂವಾದದಲ್ಲಿ ಭಾಗವಹಿಸುವವರು

ನಾಗೇಶ ಹೆಗಡೆ, ಹಿರಿಯ ಪತ್ರಕರ್ತ ಅಂಕಣಕಾರ

ಎನ್.ಎಸ್. ಶಂಕರ್, ಸಿನಿಮಾ ನಿರ್ದೇಶಕ ಮಾಧ್ಯಮ ತಜ್ಞ

ಬಿ.ವಿ.ವಸಂತಕುಮಾರ್, ಅಧ್ಯಕ್ಷ, ಕರ್ನಾಟಕ ಸಾಹಿತ್ಯ ಅಕಾಡೆಮಿ
ಇಂದು ಮಧ್ಯಾಹ್ನ 12 ರಿಂದ 1

## ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

| ಜಲಾಶಯ | ಗರಿಷ್ಠ ಮಟ್ಟ (ಅಡಿಗಳಲ್ಲಿ) | ಇಂದಿನ ಮಟ್ಟ | ಒಳಹರಿವು (ಕ್ಯುಸೆಕ್‌ಗಳಲ್ಲಿ) | ಹೊರಹರಿವು (ಕ್ಯುಸೆಕ್‌ಗಳಲ್ಲಿ) |
|---|---|---|---|---|
| ಕೆಆರ್‌ಎಸ್* | 124.80 | 93.10 | 1,569 | 786 |
| ಹಾರಂಗಿ | 2,859 | 2,841.08 | 423 | 80 |
| ಕಬಿನಿ | 2284.00 | 2,275.77 | 1,137 | 700 |
| ಹೇಮಾವತಿ | 2,922 | 2,895.69 | 1,355 | 200 |
| ಲಿಂಗನಮಕ್ಕಿ | 1,819 | 1,785.20 | 1,680 | - |
| ಸೂಪಾ (ಮೀ) | 564 | 538.96 | 2,025 | 6,108 |
| ಮಾಣಿ | 594 | 573.80 | 325 | - |
| ತುಂಗಭದ್ರಾ | 1,633 | 1,608.64 | 3,472 | 252 |
| ಮಲಪ್ರಭಾ | 2079.5 | 2,062.70 | 1,189 | 194 |
| ಘಟಪ್ರಭಾ | 2175 | 2,134.50 | 3,479 | 124 |
| ಭದ್ರಾ | 186 | 154.7 | 1,726 | 82 |
| ಆಲಮಟ್ಟಿ (ಮೀ) | 519.6 | 517.37 | 11,273 | 20,451 |
| ನಾರಾಯಣಪುರ (ಮೀ) | 492.25 | 489.48 | 22,000 | - |

* ನೆಲಮಟ್ಟದಿಂದ

## ಡಾ.ಮಂಜುನಾಥ್ ಸೇವಾವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಅವರ ಸೇವೆಯನ್ನು ಇನ್ನೂ ಒಂದು ವರ್ಷಗಳ ಕಾಲ ಅಂದರೆ, 2022 ಜೂನ್‌ವರೆಗೆ ವಿಸ್ತರಿಸಲಾಗಿದೆ.

ಡಾ.ಮಂಜುನಾಥ್ ಅವರ ಸೇವಾ ಅವಧಿ ಬುಧವಾರ (ಜೂನ್ 30) ಕೊನೆಯಾಗಬೇಕಿತ್ತು. ಕೋವಿಡ್ ಅವಧಿಯಲ್ಲಿ ಸರ್ಕಾರಕ್ಕೆ ಸಾಕಷ್ಟು ಉಪಯುಕ್ತ ಸಲಹೆಗಳನ್ನು ಅವರು ನೀಡಿದ್ದಾರೆ. ಮುಂದೆಯೂ ಅವರ ಸಲಹೆ ಸೂಚನೆಗಳು ಅಗತ್ಯವಿರುವುದರಿಂದ ಅವರ ಸೇವಾ ಅವಧಿ ವಿಸ್ತರಿಸುವಂತೆ ಹಲವು ಪ್ರಮುಖರು ಮುಖ್ಯಮಂತ್ರಿ ಯಡಿಯೂರಪ್ಪ ಅವರಲ್ಲಿ ಮನವಿ ಮಾಡಿದ್ದರು. ಈ ಕಾರಣಕ್ಕೆ ಸೇವಾವಧಿ ವಿಸ್ತರಿಸಿ ಆದೇಶ ಹೊರಡಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ
Ref. VTU/BGM/SAP/CW1/07/T-558/2021-22/998 dtd.29-06-2021
ಇ–ಟೆಂಡರ ಪ್ರಕಟಣೆ
ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಕೆಳಕಂಡ ಕೆಲಸಗಳಿಗೆ (ದ್ವಿ ಲಕೋಟೆ ಪದ್ಧತಿಯಲ್ಲಿ) ಇ–ಟೆಂಡರ ಮೂಲಕ ಮೊಹರ ಬಂದ ದರಖಾಸ್ತುಗಳನ್ನು ಅರ್ಹ ತಯಾರಕರು / ಪೂರೈಕೆದಾರರಿಂದ ಅಹ್ವಾನಿಸಲಾಗಿದೆ. ಕೆಲಸದ ಹೆಸರು: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಪರೀಕ್ಷಾ ವಿಭಾಗಕ್ಕೆ ಮುದ್ರಣ ಸಾಮಗ್ರಿಗಳನ್ನು ಡಿಸೆಂಬರ–2021 / ಜೂನ–2022 ರ ಪರೀಕ್ಷೆಗಳಿಗೆ ವಾರ್ಷಿಕ ದರ ಒಪ್ಪಂದದ ಮೆರೆಗೆ ಮುದ್ರಣ ಮಾಡಿ ಪೂರೈಸುವುದು.

| ಕ್ರ ಸಂ | ವಿವರಣೆ | ಟೆಂಡರಿಗಿಟ್ಟ ಮೊತ್ತ | ಮುಂಗಡ ಠೇವಣಿ |
|---|---|---|---|
| 1 | Schedule – I | 22,50,000/– | 45,000/– |
| 2 | Schedule – II | 20,79,000/– | 42,000/– |
| 3 | Schedule – III | 6,65,000/– | 17,000/– |
| | Total Value = | 49,94,000/– | |

ಟೆಂಡರ ಸಲ್ಲಿಸಲು ಕೊನೆಯ ದಿನಾಂಕ:13–07–2021 ರ 2.30 ರ ವರೆಗೆ. ಟೆಂಡರ ತೆರೆಯುವ ದಿನಾಂಕ:15–07–2021 ರ 4.00 ಘಂಟೆಗೆ. ಹೆಚ್ಚಿನ ಮಾಹಿತಿಗಾಗಿ www.eproc.karnataka.gov.in ಮತ್ತು www.vtu.ac.in ನೋಡಬಹುದು.
DIPR/BGM/RO-NO-299/MCA/2021-22 ಸಹಿ/–ಕುಲಸಚಿವರು

ಕರ್ನಾಟಕ ಸರ್ಕಾರ
(ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ.
No:EE/RWSS/Dvn/SMG/JE/JJM/E-proc/656/2021-22
Date: 28.06.2021
ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)
ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕ ಅಧಿನಿಯಮ 2000ರ ಪ್ರಕಾರ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ ವ್ಯಾಪ್ತಿಯಲ್ಲಿ ಜಲಜೀವನ್ ಮಿಷನ್ ಯೋಜನೆಯಡಿಯಲ್ಲಿ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರ್ ಆಹ್ವಾನಿಸಲಾಗಿರುತ್ತದೆ.
**ಇಂಡೆಂಟ್ ಸಂಖ್ಯೆ :** 1) 30138/call 2, 2) 30728/call 2, 3)28093/call-4, 4) 29230/call-2
ಟೆಂಡರ್ ವಿವರಗಳು, ಷರತ್ತುಗಳು ಮತ್ತು ತಿದ್ದುಪಡಿಗಳು ಅಥವಾ ಬದಲಾವಣೆಗಳು https://www.eproc.karnataka.gov.in ಜಾಲತಾಣದಲ್ಲಿ ಲಭ್ಯವಿದ್ದು, ಅರ್ಹ ಗುತ್ತಿಗೆದಾರರು/ಬಿಡ್ದುದಾರರು ಅಗತ್ಯ ದಾಖಲೆಗಳನ್ನು ಮತ್ತು ತಮ್ಮ ಬಿಡ್ ಅನ್ನು ಸದರಿ ಜಾಲತಾಣದಲ್ಲಿಯೇ ಸಲ್ಲಿಸುವುದು.
**ಟೆಂಡರ್‌ನ ಕೆಲವು ಷರತ್ತುಗಳು :** 1. ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 02.07.2021ರ 2. ಏಕ–ಲಕೋಟೆಯ ಆರ್ಥಿಕ ಬಿಡ್ ತೆರೆಯುವ ದಿನಾಂಕ: 05.07.2021 3. ದ್ವಿ–ಲಕೋಟೆಯ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 05.07.2021 4. ದ್ವಿ–ಲಕೊಟೆಯ ಆರ್ಥಿಕ ಬಿಡ್ ತೆರೆಯುವ ದಿನಾಂಕ: 07.07.2021 5. ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿಪಡಿಸಿದ ಕಾಲಾವಧಿ: 2 ತಿಂಗಳು(60 ದಿನಗಳು)
ಸಹಿ/– ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ&ನೈ ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಶಿ/ಸಂ–86/06/ಎಂಸಿಎ/21–22

KMF ಧಾರವಾಡ, ಹಾವೇರಿ, ಗದಗ ಮತ್ತು ಉತ್ತರಕನ್ನಡ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ.,
ಲಕ್ಕಮ್ಮನಹಳ್ಳಿ ಕೈಗಾರಿಕಾ ಪ್ರದೇಶ, ಪಿ ಬಿ ರಸ್ತೆ, ವಿದ್ಯಾಗಿರಿ ಅಂಚೆ, ಧಾರವಾಡ–580004
☎:-0836-2467603, 2468380, Fax:0836-2468268 E-mail : dharwarnin@gmail.com
IFT NO: KMF/2021-22/IND9179 DATE: 29-06-2021
ಇ–ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ಧಾರವಾಡ, ಹಾವೇರಿ, ಗದಗ ಮತ್ತು ಉತ್ತರಕನ್ನಡ ಜಿಲ್ಲಾ ಹಾಲು ಒಕ್ಕೂಟ ನಿಯಮಿತ., ಧಾರವಾಡದ ವ್ಯಾಪ್ತಿಯಲ್ಲಿ ಬರುವ ಮಹಿಳಾ ಹಾಲು ಉತ್ಪಾದಕರ ವಿವಿಧ ಸಂಘಗಳಲ್ಲಿ ಈ ಕೆಳಕಂಡ ಸಾಮಗ್ರಿಗಳ ಪೂರೈಕೆ, ಸ್ಥಾಪನೆ & ಚಾಲನೆ ಮಾಡುವುದು ಸೇರಿದಂತೆ ಟೆಂಡರ ದಾಖಲಾತಿಗಳಲ್ಲಿ ನಮೂದಿಸಲಾದ ತಾಂತ್ರಿಕ ತಪಶೀಲುಪಟ್ಟಿ ಪ್ರಕಾರ ಪೂರೈಸಲು ಆಸಕ್ತಿಯುಳ್ಳ ಮತ್ತು ಅರ್ಹ ಮೂಲ ಉತ್ಪಾದಕರಿಂದ / ಪೂರೈಕೆದಾರರಿಂದ ಟೆಂಡರ ಅಹ್ವಾನಿಸಲಾಗಿರುತ್ತದೆ.

| ಕ್ರ. ಸಂ. | ವಿವರ | ಪ್ರಮಾಣ | ಇಎಂಡಿ ಮೊತ್ತ (ರೂ.ಗಳಲ್ಲಿ) |
|---|---|---|---|
| 01 | Supply, Installation, Testing & Commissioning of 200Kg Cap Electronic Weighing Scale (EWS) at Various WMCPS | 19 ಸಂಖ್ಯೆ | 9,000/- |
| 02 | Supply, Installation, Testing & Commissioning of Automatic Electronic Milko Tester (AEMT) at Various WMCPS. | 19 ಸಂಖ್ಯೆ | 20,000/- |

ಇ–ಟೆಂಡರ ಪ್ರೊಸೆಸಿಂಗ್ ಶುಲ್ಕ (ಮರು ಪಾವತಿಸಲಾಗದ) ಮತ್ತು ಇಎಂಡಿ ಮೊತ್ತವನ್ನು ಇ–ಪೋರ್ಟಲ್ ನಿಯಮಾನುಸಾರ ಟೆಂಡರ ದಾಖಲಾತಿಯಲ್ಲಿ ನಮೂದಿಸಿದಂತೆ ಪಾವತಿಸಬಹುದಾಗಿದೆ. ಹೆಚ್ಚಿನ ವಿವರಗಳಾದ ಭದ್ರತಾ ಠೇವಣಿ, ಟೆಂಡರ ಕರಾರು ಮತ್ತು ಷರತ್ತುಗಳನ್ನು ವೆಬ್‌ಸೈಟ್ http://eproc.karnataka.gov.in ನಲ್ಲಿ ಲಾಗ್‌ಇನ್ ಆಗಿ ಅಥವಾ ಸಹಾಯವಾಣಿ ಸಂಖ್ಯೆ:–080–460110000, 080–22631200, email: support@ihelpdsk.com ರ ಮೂಲಕ ಸಂಪರ್ಕಿಸಿ ಟೆಂಡರ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ವೆಬ್‌ಸೈಟ್‌ನ ಯಾವುದೇ ತಾಂತ್ರಿಕ ಅಡಚಣೆಯಿಂದ, ಕೊನೆ ಘಳಿಗೆಯಲ್ಲಿ ಟೆಂಡರ ಸಲ್ಲಿಸುವಿಕೆಯಲ್ಲಿ ಅಥವಾ ಸ್ವೀಕರಿಸುವಲ್ಲಿ ಏನಾದರೂ ತೊಂದರೆ ಆದಲ್ಲಿ ಒಕ್ಕೂಟವು ಯಾವುದೇ ರೀತಿ ಜವಾಬ್ದಾರರಲ್ಲ.

| | | |
|---|---|---|
| 1. | ಇ–ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ & ವೇಳೆ | ದಿ:–29.07.2021 ರ ಸಂಜೆ 4.00 ರವರೆಗೆ |
| 2. | ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ವೇಳೆ | ದಿ:–30.07.2021 ರ ಸಂಜೆ 4.30 ನಂತರ |
| 3. | ವಾಣಿಜ್ಯ ಬಿಡ್ ತೆರೆಯುವ ದಿನಾಂಕ & ವೇಳೆ | ದಿ:–07.08.2021 ರ ಬೆಳಿಗ್ಗೆ 10.00 ರ ನಂತರ |

ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ) KSIIDC
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
4ನೇ ಮಹಡಿ, ಪೂರ್ವ ಭಾಗ, ''ಖನಿಜ ಭವನ'', ನಂ. 49, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560 001.
ಟೆಂಡರ್ ಆಹ್ವಾನ ಪ್ರಕಟಣೆ
(ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ https://www.eproc.karnataka.gov.in ಮೂಲಕ)
ಕರ್ನಾಟಕ ಸರ್ಕಾರವು ಹಾಸನದ ಭುವನಹಳ್ಳಿ ಗ್ರಾಮಕ್ಕೆ ಹೊಂದಿಕೊಂಡಿರುವ ಅಂದಾಜು 536 ಎಕರೆಗಳ ಜಮೀನಿನಲ್ಲಿ ಹಾಸನ ವಿಮಾನ ನಿಲ್ದಾಣ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲು ಅಪೇಕ್ಷಿಸಿದೆ. ''ಹಾಸನ ವಿಮಾನ ನಿಲ್ದಾಣ ನಿರ್ಮಾಣ ಕಾರ್ಯ(ಪ್ಯಾಕೇಜ್-1) ಭುವನಹಳ್ಳಿ ಗ್ರಾಮ, ಹಾಸನ ತಾಲ್ಲೂಕು ಮತ್ತು ಜಿಲ್ಲೆ'' ಕಾಮಗಾರಿಗೆ ಕೆಪಿಡಬ್ಲ್ಯೂಡಿ/ಎನ್‌ಎಚ್/ಎನ್‌ಎಚ್‌ಎಐ/ಸಿಪಿಡಬ್ಲ್ಯೂಡಿಯಲ್ಲಿ ಅಥವಾ ಇತರೆ ಕೇಂದ್ರ/ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ನೋಂದಣಿ ಮಾಡಿಸಿರುವ ಅರ್ಹ ಗುತ್ತಿಗೆದಾರರುಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಮೂಲಕ ಐಟಂ ದರದ ಆಧಾರದಲ್ಲಿ ಟೆಂಡರನ್ನು (ದ್ವಿ ಲಕೋಟೆ ಪದ್ಧತಿ) ಕೆಎಸ್‌ಐಐಡಿಸಿ ಆಹ್ವಾನಿಸಿದೆ. ಟೆಂಡರ್ ದಸ್ತಾವೇಜನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಇಲ್ಲಿಂದ ಪಡೆದುಕೊಳ್ಳಬಹುದು. ಟೆಂಡರ್‌ನ ಅಂದಾಜು ಮೊತ್ತ: ರೂ.92.42 ಕೋಟಿ. ಇಎಂಡಿ ಮೊತ್ತ: ರೂ.92.42 ಲಕ್ಷಗಳು. ಪ್ರಮುಖ ದಿನಾಂಕಗಳು: ಟೆಂಡರ್ ದಸ್ತಾವೇಜುಗಳನ್ನು ದಿನಾಂಕ:05.07.2021ರ ನಂತರದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಬಿಡ್ ಪೂರ್ವ ಸಭೆ ದಿನಾಂಕ:14.07.2021ರಂದು ಬೆಳಿಗ್ಗೆ 11.00 ಗಂಟೆಗೆ. ಟೆಂಡರ್ ದಸ್ತಾವೇಜನ್ನು ಸಲ್ಲಿಸುವ ಕಡೆಯ ದಿನಾಂಕ:20.07.2021ರಂದು ಸಂಜೆ 5.30 ಗಂಟೆಯವರೆಗೆ. ಹೆಚ್ಚಿನ ವಿವರಗಳನ್ನು ಮೇಲಿನ ಕಚೇರಿಯಿಂದ ಕಚೇರಿ ಕೆಲಸದ ಸಮಯದಲ್ಲಿ ಅಥವಾ ವೆಬ್‌ಸೈಟ್: https://eproc.karnataka.gov.in ಇಲ್ಲಿಂದ ಪಡೆದುಕೊಳ್ಳಬಹುದು. ಸದರಿ ಟೆಂಡರಿಗೆ ಸಂಬಂಧಿಸಿದಂತೆ ಮುಂದೆ ಯಾವುದಾದರೂ ಬದಲಾವಣೆಗಳನ್ನು ಮಾಡಿದಲ್ಲಿ ಅದನ್ನು ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂನಲ್ಲಿ ಮಾತ್ರ ಅಪ್‌ಲೋಡ್ ಮಾಡಲಾಗುವುದು. ಸಂಪರ್ಕ ಸಂಖ್ಯೆ: ಡಿಜಿಎಂ(ಐಪಿಡಿ), 080–22258123 ಇ–ಮೇಲ್: bic3@ksiidc.com ಮತ್ತು info@ksiidc.com
ಸಹಿ/– ವ್ಯವಸ್ಥಾಪಕ ನಿರ್ದೇಶಕರು, ಕೆಎಸ್‌ಐಐಡಿಸಿ ಮತ್ತು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ
ವಾಸಾಇ/ಬೆಂ.ನ/702/ಎಂಸಿಎ/2021-22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಕನೀನಿನಿ, ತುಂ.ಭ.ಎ.ಕಾ. ವಿಭಾಗ ನಂ.3 ಸಿಂಧನೂರು–584128
ಸಂ: ಕನೀನಿನಿ/ಕಾನಿಅ–3/ತಾಶಾ/SR/ಟೆಂಡರ್ ನೋಟಿಫಿಕೇಷನ್/2020–21/393 ದಿನಾಂಕ : 21–06–2021
ಟೆಂಡರ್ ಪ್ರಕಟಣೆ 2ನೇ ಕರೆ (ಇ–ಪ್ರಕ್ಯೂರಮೆಂಟ್ ಮುಖಾಂತರ ಮಾತ್ರ)
ಈ ವಿಭಾಗದ ವ್ಯಾಪ್ತಿಯಲ್ಲಿನ ಲೆಕ್ಕ ಶೀರ್ಷಿಕೆ 4701ರ ಅಡಿಯಲ್ಲಿ **ಸೇವಾ ರಸ್ತೆ ಸುಧಾರಣೆ** (ಆಯ್ದ ಭಾಗಗಳಲ್ಲಿ) ಕಾಮಗಾರಿಗಾಗಿ ಈ ಕಚೇರಿಯಿಂದ ಇ–ಪ್ರೋಕ್ಯೂರಮೆಂಟ್ ವೇದಿಕೆ ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ ಅರ್ಹ ಕನೀನಿನಿ ಕೆಟಗರಿ–2 & ಮೇಲ್ಪಟ್ಟ ಗುತ್ತೇದಾರರಿಂದ ಟೆಂಡರನ್ನು ಆವಹ್ವಾನಿಸಲಾಗಿದೆ. ಟೆಂಡರಿಗಿಟ್ಟ ಮೊತ್ತ ರೂ. **804.40** ಲಕ್ಷಗಳು ಗಳಿರುತ್ತದೆ. ಭರ್ತಿ ಮಾಡಿದ ಟೆಂಡರನ್ನು ದಿನಾಂಕ **14–07–2021 ರ ಸಂಜೆ 4–00 ಗಂಟೆವರೆಗೆ** ಸಲ್ಲಿಸಬಹುದಾಗಿದೆ. ಹಾಗೂ ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಕಛೇರಿಯ ಸಮಯದಲ್ಲಿ ಅಥವಾ ಇ–ಪ್ರೋಕ್ಯೂರಮೆಂಟ್ ಅಂತರ್ಜಾಲದಲ್ಲಿ www.eprockarnataka.gov.in ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಕನೀನಿನಿ, ತುಂ. ಭ.ಎ.ಕಾ. ವಿಭಾಗ ನಂ.3, ಸಿಂಧನೂರು– 584128
ವಾ.ಸಾ.ಸಂ.ಇ/ರಾಯಚೂರು/174/ಎಂ.ಸಿ&ಎ/2021–22

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಕ.ನೀ.ನಿ.ನಿ. ಭೀಮಾ ಏತ ನೀರಾವರಿ ಯೋಜನೆ, ವಿಭಾಗ, ಅಫಜಲಪೂರ– 585301 Email: eeblis@rediffmail.com
No: EE/KNNL/BLIS/AFZ/FRL/2021-22/317 ದಿನಾಂಕ: 23/06/2021
ಶೇಕಡಾವಾರು ಅಲ್ಪಾವಧಿ ಟೆಂಡರ ಅಧಿಸೂಚನೆ (ಇ–ಪ್ರೋಕ್ಯೂರಮೆಂಟ್ ಮುಖಾಂತರ ಮಾತ್ರ)
ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಕ.ನೀ.ನಿ.ನಿ., ಭೀಮಾ ಏತ ನೀರಾವರಿ ಯೋಜನೆ, ವಿಭಾಗ ಅಫಜಲಪೂರ ಇವರಿಂದ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ.
1) ಕಾಮಗಾರಿಯ ಹೆಸರು : Consultancy Service for Fixing FRL of Sonna Barrage on Ground, Conducting Aerial Drone Survey, Super-imposition of FRL Contour on R.S. Map & Providing Necessary Drawings. (Id-31360), 2) ಟೆಂಡರ್‌ಗಿಟ್ಟ ಮೊತ್ತ (ರೂ.) ಲಕ್ಷಗಳಲ್ಲಿ : **91.77,** 3) ಇ.ಎಂ.ಡಿ. ಮೊತ್ತ (ರೂ.) : 108300/–, 4) ಟೆಂಡರ್ ಶುಲ್ಕ : ಇ–ಪೋರ್ಟಲನಲ್ಲಿದ್ದಂತೆ : 5) ಅರ್ಹ ಗುತ್ತಿಗೆದಾರ : Survey & Design Consultant Registration certificate Category-I& Above, Empanelled under KNNL, 6) ಕಾಮಗಾರಿಯ ಅವಧಿ : 06 ತಿಂಗಳು
ಇ–ಪ್ರೋಕ್ಯೂರಮೆಂಟ್ ಮುಖಾಂತರ ಟೆಂಡರ ಸಲ್ಲಿಸಲು ದಿನಾಂಕ **29.06.2021** ರಿಂದ **07.07.2021**ರ **4.00** ಗಂಟೆಯ ವರೆಗೆ ನಿಗದಿಪಡಿಸಲಾಗಿದೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ 08.07.2021 4.15 ಗಂಟೆಗೆ ಇರುತ್ತದೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ 12.07.2021 4.15 ಗಂಟೆಗೆ ಇರುತ್ತದೆ, ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿದವರಿಗೆ ಕಛೇರಿ ಸಮಯದಲ್ಲಿ ಮತ್ತು website: www.eproc.karnataka.gov.in ನೋಡಬಹುದಾಗಿದೆ. HP ಸಂಸ್ಥೆಯ ಸಹಾಯವಾಣಿ ದೂರವಾಣಿ ಸಂಖ್ಯೆ 080–23010900 / 080–23010901 ಸಂಪರ್ಕಿಸುವುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಕ.ನೀ.ನಿ.ನಿ. ಭೀಮಾ ಏತ ನೀರಾವರಿ ಯೋಜನೆ, ವಿಭಾಗ, ಅಫಜಲಪೂರ– 585301
ವಾ.ಸಾ.ಸಂ.ಇ/ಕಲಬುರಗಿ/375/ಎಂ.ಸಿ&ಎ/2021–22

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 001.
website: www.kiadb.in
ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–10/2905/2021–22 ದಿನಾಂಕ: 28.06.2021
ಟೆಂಡರ್ ಆಹ್ವಾನ ಪ್ರಕಟಣೆ
(ಜಿ.ಓ.ಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕೆ.ಐ.ಎ.ಡಿ.ಬಿ ಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ ಹಾಗೂ ಇದೇ ರೀತಿಯ ಕಾಮಗಾರಿಯಲ್ಲಿ ಸಾಕಷ್ಟು ಅನುಭವ ಹೊಂದಿರುವ ಕೆ.ಸಿ.ಇ.ಐ ದರ್ಜೆ–1 (ವಿದ್ಯುತ್) ಗುತ್ತಿಗೆದಾರರಿಂದ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ಟೆಂಡರ್ ಆಹ್ವಾನಿಸಲಾಗಿದೆ.
ಕಾಮಗಾರಿಯ ಹೆಸರು: ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿಯ ಹೈ ಟೆಕ್ ಡಿಫೆನ್ಸ್ ಅಂಡ್ ಏರೋಸ್ಪೇಸ್ ಪಾರ್ಕ್ ಕೈಗಾರಿಕಾ ಪ್ರದೇಶದಲ್ಲಿನ ಏರೋಸ್ಪೇಸ್ ಕಾಂಪೋನೆಂಟ್ ಪಾರ್ಕಿನಲ್ಲಿರುವ ಉಪಬಡಾವಣೆಗೆ ವಿದ್ಯುತ್ ಮೂಲಭೂತ ಸೌಕರ್ಯ ಒದಗಿಸುವ ಕಾಮಗಾರಿ
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 26.07.2021, ಸಂಜೆ 4.00 ಗಂಟೆವರೆಗೆ.
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/–
DIPR/DDU/Zen/R.O: 694/2021-22 ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಸಂಚಾರ ವಾಣಿಜ್ಯ ಶಾಖೆ, ಕೇಂದ್ರ ಕಛೇರಿ, ಶಾಂತಿನಗರ, ಬೆಂಗಳೂರು–27
ಸಂಖ್ಯೆ: ಬೆಂಮಸಾಸಂ/ಕೇಕ/ಸಂ/ವಾ/489/2021–22 ದಿನಾಂಕ: 26.06.2021
ಟೆಂಡರ್/ಸಂಧಾನ ಪ್ರಕಟಣೆ ಸಂಖ್ಯೆ– 06/2021–22
(ಇ–ಪ್ರೊಕ್ಯರ್‌ಮೆಂಟ್ ಮೂಲಕ)
ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ವಿವಿಧ ಬಸ್ ನಿಲ್ದಾಣಗಳಲ್ಲಿನ ಸಾಮಾನ್ಯ ಮಳಿಗೆ / ಉಪಹಾರ ಗೃಹ / ಪಾರ್ಕಿಂಗ್ ಕ್ಷೇತ್ರ / ವಾಣಿಜ್ಯ / ಕಛೇರಿ ಕ್ಷೇತ್ರಗಳ ನಿರ್ವಹಣೆಗೆ ಹಾಗೂ ಸಂಸ್ಥೆಯ ವೈಟ್‌ಫೀಲ್ಡ್ ಟಿಟಿಎಂಸಿ ಬಸ್ ನಿಲ್ದಾಣ ಸಂಕೀರ್ಣದಲ್ಲಿ ವಾಣಿಜ್ಯ / ಕಛೇರಿ ಕ್ಷೇತ್ರಗಳನ್ನು **“ಎಲ್ಲಿ ಹೇಗಿದೆಯೋ ಅದೇ ಸ್ಥಿತಿಯಲ್ಲಿ”** ನೀಡುವ ನಿಬಂಧನೆಗೆ ಒಳಪಟ್ಟಂತೆ 12 ವರ್ಷಗಳ ಅವಧಿಗೆ ಪರವಾನಗಿ / ಗುತ್ತಿಗೆದಾರರ ಆಯ್ಕೆಗಾಗಿ ವ್ಯಕಿ / ಏಜೆನ್ಸಿ / ಕಂಪನಿ ಗಳಿಂದ ಆಸಕ್ತರಿಂದ ಬಿಡ್‌ಗಳನ್ನು ಆಹ್ವಾನಿಸಿದೆ ಮತ್ತು ಕೋರಮಂಗಲ (ತಾವರೆಕೆರೆ ರೋಡ್) ದಲ್ಲಿನ Ebony ಪ್ರೆಸ್ಟೀಜ್ ಸೆಂಟ್ ಜಾನ್ ವುಡ್ ಅಪಾರ್ಟ್‌ಮೆಂಟ್‌ನಲ್ಲಿರುವ 02 BHK flats ಗಳನ್ನು ವಾಸಕ್ಕಾಗಿ ಪರವಾನಗಿ ನೀಡಲು ಇ–ಸಂಗ್ರಹಣಾ ವೇದಿಕೆ ಮುಖಾಂತರ ಬಿಡ್‌ಗಳನ್ನು ಆಹ್ವಾನಿಸಿದೆ.
(1) ಬಿಡ್ ಸಲ್ಲಿಸುವ ಕೊನೆಯ ದಿನಾಂಕ: **19.07.2021**ರಂದು **12:00 ಗಂಟೆ**ಯವರೆಗೆ.
(2) ಆರ್ಥಿಕ/ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **23.07.2021**ರಂದು **12:30 ಗಂಟೆ**ಗೆ.
(3) ಆರ್ಥಿಕ ಬಿಡ್ ತೆರೆಯುವ ದಿನಾಂಕ: **27.07.2021**ರಂದು **12:30 ಗಂಟೆ**ಗೆ. ಮಾಸಿಕ ಪರವಾನಗಿ ಶುಲ್ಕ, ಇಎಂಡಿ ಮೊತ್ತ ಹಾಗೂ ವಿಸ್ತೀರ್ಣಗಳ ಮಾಹಿತಿಗಾಗಿ **https://eproc.karnataka.gov.in** ಗೆ ಲಾಗಾನ್ ಆಗಿ ಅಥವಾ ಇ–ಸಂಗ್ರಹಣಾ ಕೋಶ ದೂರವಾಣಿ ಸಂಖ್ಯೆ: 080–23010900; 23010901; 22371090; 22340060; 22340948 ಅಥವಾ 7760991026 & 7760991222. ಇ–ಮೇಲ್: **ctmc@mybmtc.com** ಗೆ ಸಂಪರ್ಕಿಸಬಹುದು.
ಸಹಿ/–
ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ) (ಟೆಂಡರ್ ಕರೆಯುವ ಪ್ರಾಧಿಕಾರಿ)
ವಾಸಾಸಂಇ/ಬೆಂನ/696/ಅಲಕ್‌ನಂದ/2021–22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರಕಾರ
ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳಗಾವಿ
(ಸ್ವಾಯತ್ತ ಸಂಸ್ಥೆ)
ಡಾ॥ ಬಿ.ಆರ್. ಅಂಬೇಡ್ಕರ ರಸ್ತೆ, ಬೆಳಗಾವಿ–590 001, (ಆಸ್ಪತ್ರೆ) ದೂರವಾಣಿ ಸಂಖ್ಯೆ: 0831–2420320, ಫ್ಯಾಕ್ಸ್ ಸಂ: 0831–2420173 (ಕಾಲೇಜ) ದೂರವಾಣಿ ಸಂಖ್ಯೆ: 0831–2421464 ಫ್ಯಾಕ್ಸ್ ಸಂ: 0831–2403126
ವೆಬ್‌ಸೈಟ್: www.bimsbelgaum.org ಇ–ಮೇಲ್ : belgaum.bims@gmail.com
ಸಂ: ಬಿಮ್ಸ್/ಟೆಂಡರ್/ಡ್ರಗ್ಸ್/ಸಿಆರ್/08/2021–22 ದಿನಾಂಕ: 30–06–2021
SHORT TERM TENDER NOTIFICATION
(ಅಲ್ಪಾವಧಿ ಟೆಂಡರ್) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ
ಮುಖ್ಯ ಆಡಳಿತಾಧಿಕಾರಿಗಳು ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ ಬೆಳಗಾವಿ ಇಲ್ಲಿಗೆ ನೊಂದಾಯಿತ ಉತ್ಪಾದಕರು / ಅಧಿಕೃತ ಏಜೇಂಟರಿಂದ ಡ್ರಗ್ಸ್ ಮತ್ತು ಕೆಮಿಕಲ್ಸ್ ಹಾಗೂ ಡಿಸ್ಪೋಜೆಬಲ್‌ಗಳನ್ನು ಒಂದು ವರ್ಷದ ಅವಧಿಗೆ ಪೂರೈಸಲು ಈ ಕೆಳ ಕಾಣಿಸಿದಂತೆ ಕೆ.ಟಿ.ಪಿ.ಪಿ. ನಿಯಮಾವಳಿ 1999 & 2000 ಗಳನ್ವಯ ದ್ವಿ–ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಇ–ಟೆಂಡರ್ ಮೂಲಕ ಪ್ರಕಟಣೆಯನ್ನು ಆಹ್ವಾನಿಸಲಾಗಿದೆ.

| Sl. No. | TENDER NOTIFICATION | Description of Tender | Tender Value (Approximate) (Rs. In Lakhs) | Downloading of Tender Document |
|---|---|---|---|---|
| 1 | No: BIMSHOSP/Tender/sup-1/Drug/Cr-08/2021-22 | Drugs | Rs: 90.00 Lakhs | 01-07-2021 |
| 2 | No: BIMSHOSP/Tender/sup-1/Disp/CR-09/2021-22 | Disposables | Rs: 90.00 Lakhs | 01-07-2021 |
| 3 | No: BIMSHOSP/Tender/sup-1/Chem/CR-10/2021-22 | Chemicals | Rs: 90.00 Lakhs | 01-07-2021 |

ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಿದ ಟೆಂಡರ್‌ದಾರರು ಟೆಂಡರ್ ಪ್ರೊಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ https://www.e-proc.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ನಿರ್ದೇಶಕರು, ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ ಇವರನ್ನು ಕಚೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು. ಟೆಂಡರ್‌ನ್ನು ಸ್ವೀಕರಿಸುವ ಅಧಿಕಾರಿಗಳು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.
ಸಹಿ/–
ಮುಖ್ಯ ಆಡಳಿತಾಧಿಕಾರಿಗಳು ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳಗಾವಿ
DIPO/RO No. 301/2021-22

# ಸೂಕ್ತ ಸಮಯ ನಿರ್ವಹಣೆ ಯಶಸ್ಸಿಗೆ ಮುನ್ನುಡಿ

ಅರುಣ ಬ. ಚೂರಿ

ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿಯ ವೇಳಾಪಟ್ಟಿಯಲ್ಲಿ ನಿದ್ರೆಗಾಗಿ ಮೀಸಲಿಟ್ಟ ಅವಧಿ ಹೆಚ್ಚಾಯಿತು ಎಂಬ ಕಾರಣದಿಂದ ಹಿಡಿದು ಪರೀಕ್ಷೆಯಲ್ಲಿ ಉತ್ತರ ತಿಳಿದಿದ್ದರೂ ಸಹ ಸಮಯದ ಅಭಾವದಿಂದ ಕೊನೆಯ ಎರಡು ಪ್ರಶ್ನೆಗಳಿಗೆ ಉತ್ತರಿಸಲಾಗಲಿಲ್ಲ ಎಂಬುದರವರೆಗೂ ವೈಫಲ್ಯಕ್ಕೆ ಅನೇಕ ಕಾರಣಗಳು ದೊರಕುತ್ತವೆ. ಇದಕ್ಕೆಲ್ಲ ಉತ್ತಮ ಸಮಯ ನಿರ್ವಹಣಾ ತಂತ್ರದ ಕೊರತೆಯೇ ಕಾರಣ. ಉದಾಹರಣೆಗೆ ಮೊದಲ ಬಾರಿಗೆ ಪರೀಕ್ಷೆಯನ್ನು ಎದುರಿಸುತ್ತಿರುವ ಅಭ್ಯರ್ಥಿಗಳು ಆರೋಗ್ಯದ ದೃಷ್ಟಿಯಿಂದ ನಿದ್ರೆಗಾಗಿ ಎಂಟು ಗಂಟೆಗಳನ್ನು ಮೀಸಲಿಡುವ ನೆಪ ಇಟ್ಟುಕೊಳ್ಳುವ ಬದಲು ಹಂತ ಹಂತವಾಗಿ ಕಡಿಮೆಗೊಳಿಸಿ ನಿತ್ಯ ಆರು ಗಂಟೆಗಳ ಕಾಲ ನಿದ್ರೆ ಮಾಡಿದರೂ ಸಾಕು, ಪ್ರತಿನಿತ್ಯ ದೊರೆತ ಎರಡು ಗಂಟೆಗಳ ಕಾಲವನ್ನು ಹೆಚ್ಚಿನ ಪರೀಕ್ಷಾ ತಯಾರಿಗಾಗಿ ವಿನಿಯೋಗಿಸಿ ಇದೇ ವರ್ಷ ಪರೀಕ್ಷೆಯಲ್ಲಿ ಅರ್ಹರಾಗಬೇಕೇ ಹೊರತು ಮುಂದಿನ ವರ್ಷದವರೆಗೂ ನೀವು ಮತ್ತೆ ಓದಿಕೊಳ್ಳಬೇಕಾದ ಅನಿವಾರ್ಯತೆ ತಂದುಕೊಳ್ಳಬಾರದು.

**● ವಿಷಯಾಧಾರಿತ ಅಧ್ಯಯನಕ್ಕೆ ಒತ್ತು ನೀಡಿ**

ಪ್ರತಿಯೊಬ್ಬ ವಿದ್ಯಾರ್ಥಿಯೂ ಒಂದೊಂದು ವಿಷಯದಲ್ಲಿ ಒಂದೊಂದು ವಿಧದ ನೈಪುಣ್ಯದ ಮಟ್ಟ ಹೊಂದಿರುತ್ತಾನೆ. ಉದಾಹರಣೆಗೆ ಕೆಲವರು ಕ್ವಾಂಟಿಟೇಟಿವ್ ಆಪ್ಟಿಟ್ಯೂಡ್, ಕೆಲವರು ರೀಸನಿಂಗ್, ಕೆಲವರು ಇಂಗ್ಲಿಷ್, ಇನ್ನು ಕೆಲವರು ಜನರಲ್ ನಾಲೆಜ್/ ಜನರಲ್ ಸೈನ್ಸ್ ವಿಷಯದಲ್ಲಿ ಪ್ರಾವೀಣ್ಯ ಹೊಂದಿರುತ್ತಾರೆ. ಆಗ ಅವರು ತಾವು ನೈಪುಣ್ಯ ಹೊಂದಿರುವ ವಿಷಯ ಬಿಟ್ಟು ದೌರ್ಬಲ್ಯ ಇರುವ ವಿಷಯಗಳತ್ತ ಹೆಚ್ಚು ಒತ್ತು ಕೊಡುತ್ತಾರೆ. ಹೀಗೆ ಅಧ್ಯಯನ ನಡೆಸಿದಾಗ ದೌರ್ಬಲ್ಯ ಇರುವ ವಿಷಯದಲ್ಲಿ ಸರಾಸರಿ ಹಾಗೂ ಬಹಳ ದಿನಗಳ ಕಾಲ ಅಭ್ಯಾಸದ ಅಂತರ ಕಾಯ್ದುಕೊಂಡ ಕಾರಣ ನೈಪುಣ್ಯ ಇರುವ ವಿಷಯಗಳಲ್ಲಿ ಕೂಡ ಸರಾಸರಿ ಅಂಕ ಗಳಿಸಲು ಆರಂಭಿಸುತ್ತಾರೆ. ಇದರಿಂದಾಗಿ ಯಾವುದಾದರೂ ಒಂದು ವಿಷಯದಲ್ಲಿ ಹೆಚ್ಚಿನ ಅಂಕಗಳನ್ನು ಗಳಿಸಿ ಒಟ್ಟಾರೆ ಅಂಕಗಳನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗುವುದೇ ಇಲ್ಲ. ಇದಲ್ಲದೆ ನೀವು ಹೆಚ್ಚು ಜ್ಞಾನ ಇರುವ ವಿಷಯದಲ್ಲಿ ಅಧ್ಯಯನ ಕಡಿಮೆಗೊಳಿಸಿದಾಗ ಅಥವಾ ತ್ಯಜಿಸಿದಾಗ ಹೊಸ ಮಾದರಿಯ ಪ್ರಶ್ನೆಗಳು ಆ ವಿಷಯದಲ್ಲಿ ಕಂಡು ಬಂದಲ್ಲಿ ಖಂಡಿತ ಉತ್ತರಿಸಲು ಸಾಧ್ಯವಿಲ್ಲ. ಹಾಗಾಗಿ ಮೊದಲು ಹೆಚ್ಚು ಪರಿಣತಿ ಇರುವ ವಿಷಯಗಳನ್ನು ಪ್ರತಿನಿತ್ಯ ಅಭ್ಯಾಸಿಸಿ ಹಾಗೂ ಹೊಸ ಮಾದರಿಯ ಪ್ರಶ್ನೆಗಳನ್ನು ಬಿಡಿಸಿ. ಅಲ್ಲಿ ಕಷ್ಟಕರ ಪ್ರಶ್ನೆಗಳು ಬಂದಲ್ಲಿ ಉತ್ತರಿಸುತ್ತೇನೆ ಹಾಗೂ ಸುಲಭ ಪ್ರಶ್ನೆಗಳು ಬಂದಲ್ಲಿ ಅತಿ ಕಡಿಮೆ ಸಮಯದಲ್ಲಿ ಉತ್ತರಿಸುತ್ತೇನೆ ಎಂಬ ಆತ್ಮವಿಶ್ವಾಸವನ್ನು ಹೆಚ್ಚುಹೆಚ್ಚು ಪ್ರಶ್ನೆಗಳನ್ನು ಬಿಡಿಸುವುದರ ಮುಖಾಂತರ ತಂದುಕೊಳ್ಳಿ.

> ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕೇವಲ ಉತ್ತರ ಗೊತ್ತಿರುವ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸುವುದು ಮಾತ್ರ ಜಾಣತನವಲ್ಲ, ಉತ್ತರ ಗೊತ್ತಿಲ್ಲದಿರುವ ಹಾಗೂ ಉತ್ತರಿಸಲು ಜಾಸ್ತಿ ಸಮಯ ತೆಗೆದು ಕೊಳ್ಳುವ ಪ್ರಶ್ನೆಗಳನ್ನು ಕೈ ಬಿಡುವುದು ಕೂಡ ಜಾಣತನ.

**● ಪ್ರಚಲಿತ ವಿದ್ಯಮಾನದಂತಹ (ಕರೆಂಟ್ ಅಫೇರ್ಸ್) ವಿಷಯಗಳ ಅಭ್ಯಾಸಕ್ಕಾಗಿ ನಿತ್ಯ ಕಡಿಮೆ ಸಮಯ ಮೀಸಲಿಡಿ**

ಪ್ರಚಲಿತ ವಿದ್ಯಮಾನದಂತಹ ಪ್ರಶ್ನೆಗಳು ಮೇನ್ಸ್ ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನು ಗಳಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತವೆ ಹಾಗೂ ನಿಖರತೆ ಇದ್ದರೆ ಅತೀ ಕಡಿಮೆ ಸಮಯದಲ್ಲಿ ಹೆಚ್ಚಿನ ಪ್ರಶ್ನೆಗಳಿಗೆ ಉತ್ತರಿಸಬಹುದು. ಇಂತಹ ಪ್ರಶ್ನೆಗಳನ್ನು ಪ್ರಿಲಿಮ್ಸ್ ಪರೀಕ್ಷೆಯಲ್ಲಿ ಅರ್ಹರಾದ ನಂತರ ಕಡಿಮೆ ಸಮಯದಲ್ಲಿ ಹೆಚ್ಚು ಸಮಯ ಮೀಸಲಿಟ್ಟು ಅಭ್ಯಾಸಿಸುತ್ತೇನೆ ಎಂದರೆ ಅದು ಖಂಡಿತ ವ್ಯರ್ಥ ಪ್ರಯತ್ನ. ಈ ವಿಭಾಗಕ್ಕೆ ಅವಶ್ಯಕವಿರುವ ಅಂದರೆ ಅವು ಕಳೆದ ಆರು ತಿಂಗಳುಗಳ ಪ್ರಚಲಿತ ವಿದ್ಯಮಾನಗಳ ಪ್ರಶ್ನೆಗಳು. ಹಾಗಾಗಿ ಇವುಗಳನ್ನು ಈಗಿನಿಂದಲೇ ಪ್ರತಿನಿತ್ಯ ದಿನದಲ್ಲಿ ಗರಿಷ್ಠ ಒಂದು ಗಂಟೆಯ ಕಾಲ ಅಭ್ಯಾಸ ಮಾಡಿದರೆ ಸಾಕು, ಆ ದಿನದ ಎಲ್ಲಾ ಅಂದಾಜು ಹದಿನೈದರಿಂದ ಇಪ್ಪತ್ತು ಪ್ರಶ್ನೆಗಳನ್ನು ವಿಶ್ಲೇಷಿಸಿ ಅಂಕಿ-ಅಂಶಗಳ ಸಮೇತ ನೆನಪಿನಲ್ಲಿಟ್ಟುಕೊಳ್ಳಬಹುದು. ಹಾಗಾಗಿ ಇಂತಹ ವಿಷಯಗಳನ್ನು ಪ್ರತಿನಿತ್ಯ ಎರಡರಿಂದ ಮೂರು ಗಂಟೆಗಳ ಕಾಲ ಕೊನೆಯಲ್ಲಿ ಅಭ್ಯಾಸಿಸುವುದು ಸೂಕ್ತವಲ್ಲ ಹಾಗೂ ಈ ರೀತಿ ಅಧ್ಯಯನ ತಂತ್ರ ರೂಪಿಸಿದಲ್ಲಿ ವರ್ಷಗಳು ಮತ್ತು ಅಂಕಿ-ಅಂಶಗಳು ನಿಖರವಾಗಿ ತಿಳಿಯದಿರುವುದು ಹಾಗೂ ಗೊಂದಲವಾಗುವ ಸಾಧ್ಯತೆಯೇ ಹೆಚ್ಚು.

**● ಅಧ್ಯಯನ ಸಾಮಗ್ರಿ ಹಾಗೂ ಕಾಲಮಿತಿಯನ್ನು ನಿಗದಿಪಡಿಸಿಕೊಳ್ಳಿ**

ಆಫ್‌ಲೈನ್ ಮುಖಾಂತರ ಅಭ್ಯಾಸಿಸುತ್ತಿರುವ ಪುನರಾವರ್ತಿತ ಅಭ್ಯರ್ಥಿಗಳು ನವೀಕರಿಸಿದ ಆಫ್‌ಲೈನ್ ಅಧ್ಯಯನ ಸಾಮಗ್ರಿಗಳನ್ನು ಸಂಗ್ರಹಿಸಿ ಅಥವಾ ಆನ್‌ಲೈನ್ ಮುಖಾಂತರ ಅಧ್ಯಯನ ನಡೆಸಿ. ಇನ್ನು ಆನ್‌ಲೈನ್ ಮುಖಾಂತರ ಅಭ್ಯಾಸ ನಡೆಸುತ್ತಿರುವ ಅಭ್ಯರ್ಥಿಗಳಿಗೆ ನವೀಕರಿಸಿದ ಅಧ್ಯಯನ ಸಾಮಗ್ರಿಗಳೇ ದೊರೆಯುತ್ತವೆ. ಹಾಗಾಗಿ ದಿನನಿತ್ಯದ ವೇಳಾಪಟ್ಟಿಯಂತೆ ಅಭ್ಯಾಸ ನಡೆಸಿ. ಇದಲ್ಲದೆ ವಿಷಯಕ್ಕೆ ಅನುಸಾರವಾಗಿ ಅಧ್ಯಯನದ ಕಾಲಮಿತಿಯನ್ನು ನಿಗದಿಪಡಿಸಿಕೊಳ್ಳಿ. ಜನರಲ್ ನಾಲೆಜ್/ ಕರೆಂಟ್ ಅಫೇರ್ಸ್ ಮತ್ತು ಇಂಗ್ಲಿಷ್ ವಿಷಯಗಳ ಅಭ್ಯಾಸಕ್ಕಾಗಿ ಬೆಳಿಗ್ಗೆ ಹತ್ತು ಗಂಟೆಯ ಒಳಗೆ ಸಮಯ ನಿಗದಿ ಮಾಡಿಕೊಂಡರೆ ಒಳ್ಳೆಯದು.

**● ಓದುವ ಕೌಶಲದ ಮುಖಾಂತರ ಇಂಗ್ಲಿಷ್ ವಿಷಯದ ನೈಪುಣ್ಯ ಹೆಚ್ಚಿಸಿಕೊಳ್ಳಿ**

ಆರಂಭದಲ್ಲಿ ಗರಿಷ್ಠ ಒಂದು ವಾರದವರೆಗೂ ಇಂಗ್ಲಿಷ್ ವಿಷಯದ ವ್ಯಾಕರಣ ಮತ್ತು ನಿಯಮಗಳನ್ನು ಅಭ್ಯಾಸಿಸಿ. ನಂತರ ಪ್ರತಿದಿನ ಗರಿಷ್ಠ ಒಂದು ಗಂಟೆ ಸಂಪಾದಕೀಯ ಒಳಗೊಂಡಂತೆ ದಿನಪತ್ರಿಕೆಯನ್ನು ಓದುವುದಕ್ಕಾಗಿ ಮೀಸಲಿಡಿ. ಇದೊಂದು ಭಾಷೆಯಾಗಿರುವ ಕಾರಣ ನೀವು ಹೆಚ್ಚು ಹೆಚ್ಚು ಓದಿದಷ್ಟೂ ನಿಪುಣರಾಗುತ್ತೀರೇ ಹೊರತು ವ್ಯಾಕರಣ ನಿಯಮಗಳು ನಿರೀಕ್ಷಿತ ಫಲಿತಾಂಶ ನೀಡಲಾರವು ಹಾಗೂ ಸಮಯ ವ್ಯರ್ಥವಾಗುವುದು. ಹೀಗಾಗಿ ದಿನನಿತ್ಯ ಈ ಒಂದು ಗಂಟೆಯಲ್ಲಿ ಸಂಪಾದಕೀಯವನ್ನು ಓದಿ ಹಾಗೂ ಹೊಸ ಶಬ್ದಗಳನ್ನು ಪಟ್ಟಿಮಾಡಿ. ವಾರಕ್ಕೊಮ್ಮೆ ಪುನರ್‌ಮನನ ಮಾಡಿ.

**● ಸಮಯ ನಿರ್ವಹಣೆಯೊಂದಿಗೆ ತಯಾರಿ ನಡೆಸಿ**

ಪರೀಕ್ಷಾ ತಯಾರಿ ನಡೆಸುತ್ತಿರುವ ಗರಿಷ್ಠ ಆರು ಗಂಟೆಗಳ ಕಾಲ ನಿದ್ರೆ, ಬೆಳಿಗ್ಗೆ ಪ್ರಚಲಿತ ವಿದ್ಯಮಾನ ಹಾಗೂ ಇಂಗ್ಲಿಷ್ ವಿಷಯಗಳಿಗಾಗಿ ತಲಾ ಒಂದು ಗಂಟೆಯ ಕಾಲ ಹಾಗೂ ಇತರೆ ಕೆಲಸಗಳಿಗೆ ನಾಲ್ಕು ಗಂಟೆಗಳ ಕಾಲ ಸಮಯ ಮೀಸಲಿಟ್ಟರೆ ಪ್ರತಿನಿತ್ಯ ಸುಲಭವಾಗಿ ನಿಮಗೆ 12 ಗಂಟೆಗಳು ಅಭ್ಯಾಸಕ್ಕಾಗಿ ದೊರೆಯುತ್ತವೆ. ಇದರಲ್ಲಿ ನೀವು ಪ್ರಾವೀಣ್ಯ ಹೊಂದಿದ ವಿಷಯಕ್ಕೆ 7 ಗಂಟೆಗಳ ಕಾಲ ಹಾಗೂ ಉಳಿದ ವಿಷಯಗಳಿಗೆ 5 ಗಂಟೆಗಳ ಕಾಲ ಅಭ್ಯಾಸಕ್ಕೆ ಮೀಸಲಿಟ್ಟು ನಿಮ್ಮ ಕೌಶಲವನ್ನು ಹೆಚ್ಚಿಸಿಕೊಳ್ಳಿ ಹಾಗೂ ಪರೀಕ್ಷೆಯಲ್ಲಿ ಯಶಸ್ವಿಯಾಗಿ.

# ಯೋಜನಾಧಾರಿತ ಓದು ಸಾಫಲ್ಯಕ್ಕೆ ದಾರಿ

ಸಂದರ್ಶನ: ಚನ್ನಬಸಪ್ಪ ರೊಟ್ಟಿ

ಮೂಲತಃ ಬೆಳಗಾವಿ ಜಿಲ್ಲೆ, ರಾಯಬಾಗ ತಾಲ್ಲೂಕಿನ ಖನದಾಳ ಗ್ರಾಮದವರಾದ ಲೋಕೇಶ ಜಗಲಾಸರ, 2014 ರ ಬ್ಯಾಚ್‌ನ ಐ.ಪಿ.ಎಸ್ ಅಧಿಕಾರಿ. ಅವರು ಪ್ರಸ್ತುತ ಬಾಗಲಕೋಟೆ ಎಸ್.ಪಿ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. 23 ನೇ ವಯಸ್ಸಿನಲ್ಲಿಯೇ ಐ.ಪಿ.ಎಸ್ ಅಧಿಕಾರಿ ಆದ ಹೆಗ್ಗಳಿಕೆ ಅವರದ್ದು. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶ ಸಾಧಿಸಿ, ಉನ್ನತ ಹುದ್ದೆ ಗಿಟ್ಟಿಸುವ ನಿಟ್ಟಿನಲ್ಲಿ ಅವರು ತಮ್ಮ ಅನುಭವವನ್ನು ಇಲ್ಲಿ ಹಂಚಿಕೊಂಡಿದ್ದಾರೆ.

**● ಶೈಕ್ಷಣಿಕ ಜೀವನ ಹೇಗಿತ್ತು?**

ಆರಂಭಿಕ ಪ್ರಾಥಮಿಕ ಶಿಕ್ಷಣವನ್ನು ಬೆಳಗಾವಿ ಜಿಲ್ಲೆಯ ಅಥಣಿಯಲ್ಲಿ ಪಡೆದ ನಂತರ 10 ನೇ ತರಗತಿವರೆಗೆ ಓದಿದ್ದು ಬೆಳಗಾವಿಯ ಸೇಂಟ್ ಫಾಲ್ಸ್ ಶಾಲೆಯಲ್ಲಿ. ಪಿಯು ವಿಜ್ಞಾನ ಓದಿದ್ದು ಬೆಂಗಳೂರಿನ ಜೈನ್ ಕಾಲೇಜಿನಲ್ಲಿ. ಬಿ.ಟೆಕ್ ಪದವಿ ಪಡೆದದ್ದು ಸುರತ್ಕಲ್‌ನಲ್ಲಿ.

**● ಸ್ಪರ್ಧಾತ್ಮಕ ಪರೀಕ್ಷೆಗಳತ್ತ ಒಲವು ಬೆಳೆದಿದ್ದು ಹೇಗೆ?**

ಮನೆಯಲ್ಲಿ ಪೋಷಕರು ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ಯಾವಾಗಲೂ ಹೇಳುತ್ತಿದ್ದರು. ಹೀಗಾಗಿ, ಈ ಕುರಿತು ಆಸಕ್ತಿ ಇತ್ತು. ಹೀಗಾಗಿ, ಬಿ.ಟೆಕ್ ಪಾಸಾದ ನಂತರ ನಾನು ನಾಗರಿಕ ಸೇವಾ ಪರೀಕ್ಷೆಗಳತ್ತ ಗಮನವಹಿಸಿದೆ. ಯು.ಪಿ.ಎಸ್.ಸಿ ಪರೀಕ್ಷೆ ಪಾಸಾದರೆ ಸಿಗುವ ಹುದ್ದೆ, ಅವಕಾಶಗಳ ಬಗ್ಗೆ ಅರಿತಾಗ ಆ ಕುರಿತು ಆಸಕ್ತಿ ಹೆಚ್ಚಾಯಿತು.

**● ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ಹೇಗಿತ್ತು?**

ಬಿ.ಟೆಕ್ ಓದುವಾಗ ನಾನು ಸರಾಸರಿ ವಿದ್ಯಾರ್ಥಿಯೇ ಆಗಿದ್ದೆ. ಆದರೆ, ಸ್ಪರ್ಧಾತ್ಮಕ ಪರೀಕ್ಷೆಗೆ ಓದುವಾಗ ಗಂಭೀರನಾದೆ. ನಾನು ಕೋಚಿಂಗ್ ಎಂದು ದೆಹಲಿ, ಹೈದರಾಬಾದ್‌ಗೆ ಹೋಗಲಿಲ್ಲ. ಸ್ಥಳೀಯ ಸಾಧಕರ ಜೊತೆ ಸಮಾಲೋಚನೆ ನಡೆಸಿ, ಅವರು ನೀಡಿದ ಸಲಹೆ ಮತ್ತು ನನ್ನ ಆಸಕ್ತಿಯಂತೆ ಯು.ಪಿ.ಎಸ್.ಸಿ.ಯಲ್ಲಿ ಭೂಗೋಳವನ್ನು ಐಚ್ಛಿಕ ವಿಷಯವನ್ನಾಗಿ ಆಯ್ದುಕೊಂಡೆ. ದಿನಕ್ಕೆ ಕನಿಷ್ಠ 7 ರಿಂದ 8 ಗಂಟೆ ಓದುತ್ತಿದ್ದೆ. ಕನಿಷ್ಠ 8 ಗಂಟೆ ನಿದ್ರಿಸುತ್ತಿದ್ದೆ. ಪ್ರತ್ಯೇಕ ನೋಟ್ಸ್ ಮಾಡಿಕೊಳ್ಳುತ್ತಿರಲಿಲ್ಲ. ಉತ್ತಮವಾದ ಆಕರ ಗ್ರಂಥಗಳನ್ನೇ ಪದೇಪದೇ ಓದುತ್ತಿದ್ದೆ. ಪುಸ್ತಕದಲ್ಲಿಯೇ 'ಸೈಡ್ ನೋಟ್' ಮಾಡಿಕೊಳ್ಳುತ್ತಿದ್ದೆ. ಇದು ಪರೀಕ್ಷೆಯಲ್ಲಿ 'ಮೈಂಡ್ ಮ್ಯಾಪ್' ಆಗಿ ಕೆಲಸ ಮಾಡಿತು.

ಪ್ರಚಲಿತ ವಿದ್ಯಮಾನಗಳಿಗಾಗಿ ಪ್ರತಿದಿನ ಇಂಗ್ಲಿಷ್ ದಿನಪತ್ರಿಕೆ ಹಾಗೂ ಯೋಜನಾ, ಕುರುಕ್ಷೇತ್ರದಂತಹ ನಿಯತಕಾಲಿಕೆಗಳನ್ನು ಓದುತ್ತಿದ್ದೆ. ಇದರಿಂದ ಒಂದು ವಿಷಯದ ಪರ-ವಿರೋಧ ನಿಲುವು, ವಿಮರ್ಶೆ, ವಿಶ್ಲೇಷಣೆ, ನಿರೂಪಣಾ ವಿಧಾನ ಎಲ್ಲವೂ ಅರಿವಾಗುತ್ತಿತ್ತು.

**● ವೃತ್ತಿ ಜೀವನ ಆರಂಭಿಸಿದ್ದು ಯಾವ ಹುದ್ದೆಯಿಂದ?**

2012 ರಲ್ಲಿ ಬಿ.ಟೆಕ್ ಮುಗಿಸಿದ ನಂತರ 6 ತಿಂಗಳವರೆಗೆ ಗಂಭೀರ ಅಧ್ಯಯನ ನಡೆಸಿ, ಯು.ಪಿ.ಎಸ್.ಸಿ ಪರೀಕ್ಷೆಯನ್ನು ಮೊದಲ ಬಾರಿಗೆ ಎದುರಿಸಿದೆ. ಮೊದಲ ಯತ್ನದಲ್ಲಿ ರೈಲ್ವೇಸ್‌ನಲ್ಲಿ 'ಅಸಿಸ್ಟೆಂಟ್ ಸೆಕ್ಯೂರಿಟಿ ಕಮಾಂಡೆಂಟ್' ಹುದ್ದೆ ಗಿಟ್ಟಿಸಿಕೊಂಡೆ. ರೈಲ್ವೆ ಇಲಾಖೆಯಲ್ಲಿ ತರಬೇತಿ ಪಡೆಯುತ್ತಿರುವಾಗಲೇ 2013 ರಲ್ಲಿ ಮತ್ತೊಮ್ಮೆ ಯು.ಪಿ.ಎಸ್.ಸಿ ಪರೀಕ್ಷೆ ಬರೆದೆ. 2ನೇ ಪ್ರಯತ್ನದಲ್ಲಿ ಐ.ಪಿ.ಎಸ್ ಹುದ್ದೆ ಒಲಿಯಿತು. 2014 ರಲ್ಲಿ ರಾಯಚೂರಿನಲ್ಲಿ ಟ್ರೇನಿಂಗ್ ಅವಧಿಯನ್ನು ಪೂರೈಸಿ, ಕಲಬುರ್ಗಿ ಸಬ್ ಡಿವಿಷನ್‌ನಲ್ಲಿ ಎ.ಎಸ್.ಪಿ ಆಗಿ 2017 ರವರೆಗೆ ಸೇವೆ ಸಲ್ಲಿಸಿದೆ. ನಂತರ ಮುಂಬಡ್ತಿಯೊಂದಿಗೆ ಬೆಂಗಳೂರಿಗೆ ತೆರಳಿ ಆಂತರಿಕ ಸುರಕ್ಷಾ ವಿಭಾಗದಲ್ಲಿ ಎಸ್.ಪಿ ಆಗಿ ಸೇವೆ ಸಲ್ಲಿಸಿದೆ. ಇದೇ ಅವಧಿಯಲ್ಲಿ ಚುನಾವಣಾ ಸೆಲ್‌ನಲ್ಲೂ ಕಾರ್ಯಾನುಭವ ಪಡೆದೆ. ಪ್ರಸ್ತುತ 2019 ರಿಂದ ಬಾಗಲಕೋಟೆ ಜಿಲ್ಲೆಯಲ್ಲಿ ಎಸ್.ಪಿ ಆಗಿ ಸೇವೆಯಲ್ಲಿದ್ದೇನೆ.

**● ಸಂದರ್ಶನದ ಅನುಭವವೇನು?**

ಸಂದರ್ಶನದಲ್ಲಿ ನಾವು ಭರ್ತಿ ಮಾಡಿದ್ದ 'ಡಿಟೇಲ್ಡ್ ಅಪ್ಲಿಕೇಷನ್ ಫಾರ್ಮ್' ಆಧರಿಸಿಯೇ ಪ್ರಶ್ನೆಗಳನ್ನು ಕೇಳುತ್ತಾರೆ. ಹೀಗಾಗಿ, ನಿಮ್ಮ ಕುರಿತಾದ ವಾಸ್ತವಿಕ ವಿಚಾರಗಳನ್ನು ಮಾತ್ರ ಅದರಲ್ಲಿ ಉಲ್ಲೇಖಿಸಿ. ಸುಳ್ಳು ಮಾಹಿತಿ ಕೊಡಬೇಡಿ.

**● ಸ್ಪರ್ಧಾರ್ಥಿಗಳಿಗೆ ನಿಮ್ಮ ಸಲಹೆ ಏನು?**

ನಿಮ್ಮ ಓದು ಯೋಜನಾಬದ್ಧವಾಗಿರಬೇಕು. ಪರೀಕ್ಷೆಗೆ ಮೂರು ತಿಂಗಳು ಇದೆ ಎನ್ನುವಾಗ ಮೂರು ತಿಂಗಳಲ್ಲಿ, ಎರಡು ತಿಂಗಳಲ್ಲಿ, ಒಂದು ತಿಂಗಳಲ್ಲಿ, ಒಂದು ವಾರದಲ್ಲಿ, ಒಂದು ದಿನದಲ್ಲಿ ಏನು ಓದಬೇಕು ಎಂಬ ಸ್ಪಷ್ಟತೆ ಇರಬೇಕು.

ಇದಲ್ಲದೆ, ಏನು ಓದಬಾರದು ಎಂಬ ವಿವೇಚನೆಯೂ ಇರಬೇಕು. ಒಂದು ವಿಷಯಕ್ಕೆ ಸಂಬಂಧಿಸಿ, 2–3 ಪುಸ್ತಕಗಳನ್ನು ಓದದೇ, ಗುಣಮಟ್ಟದ ಒಂದೇ ಪುಸ್ತಕವನ್ನು ಪದೇಪದೇ ಓದಿ, ಉಜ್ಜಲನೆಗೆ ಆದ್ಯತೆ ನೀಡಿ. ಯು.ಪಿ.ಎಸ್.ಸಿ.ಯ ಹಳೆಯ ಪ್ರಶ್ನೆಪತ್ರಿಕೆ, ಮಾದರಿ ಉತ್ತರಗಳನ್ನು ಕಡ್ಡಾಯವಾಗಿ ಅವಲೋಕಿಸಿ. ಕಷ್ಟಪಟ್ಟು ಓದದೇ, ಬುದ್ಧಿವಂತಿಕೆಯಿಂದ ಓದಿ.

ಒಂದು ಹುದ್ದೆಯ ಗುರಿ ಇಟ್ಟುಕೊಂಡಿದ್ದೀರಿ ಎಂದಾದರೆ, ಒಂದು ಅಥವಾ ಎರಡು ಪ್ರಯತ್ನದಲ್ಲಿ ಆ ಹುದ್ದೆಯನ್ನು ಪಡೆಯಬೇಕು. ಇಲ್ಲದಿದ್ದರೆ, ಬೇರೆ ಹುದ್ದೆಗೆ ಪ್ರಯತ್ನಿಸಬೇಕು. ಅದೇ ಹುದ್ದೆಗೆ ಪದೇಪದೇ ಯತ್ನಿಸುತ್ತ ನಿಮ್ಮ ಶ್ರಮ, ಸಮಯ ವ್ಯಯಿಸದಿರಿ.

**● ಪೊಲೀಸ್ ಇಲಾಖೆಯ ಹುದ್ದೆ ಆಕಾಂಕ್ಷಿಗಳಿಗೆ ನಿಮ್ಮ ಕಿವಿ ಮಾತೇನು?**

ಪೊಲೀಸ್ ಇಲಾಖೆ ಜನಸಾಮಾನ್ಯರಿಗೆ ಹತ್ತಿರವಾದ ಇಲಾಖೆ. 24x7 ಜನಸೇವೆ ಅಪೇಕ್ಷಿಸುವ, ಪ್ರತಿದಿನ ಹೊಸ ಸವಾಲೊಡ್ಡುವ ಇಲಾಖೆ. ಹೀಗಾಗಿ, ಈ ಇಲಾಖೆಗೆ ನೌಕರಿಗೆಂದೋ ಅಥವಾ ದುಡ್ಡು ಮಾಡಬೇಕೆಂದೋ ಬರಬೇಡಿ. ಜನರು ಪೊಲೀಸರನ್ನು ಅತಿ ಹೆಚ್ಚು ಗಮನಿಸುತ್ತಾರೆ. ಪೊಲೀಸರು ಪ್ರಾಮಾಣಿಕ, ದಕ್ಷರಾಗಿರಬೇಕು ಎಂದು ನಿರೀಕ್ಷಿಸುತ್ತಾರೆ. ಹೀಗಾಗಿ, ಶೇ 100 ರಷ್ಟು ಬದ್ಧತೆ ಇದ್ದವರು ಮಾತ್ರ ಪೊಲೀಸ್ ಆಗಬೇಕು.

(ಸಂದರ್ಶಕರು: ನಿರ್ದೇಶಕರು, ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ಮಾರ್ಗದರ್ಶನ ಕೇಂದ್ರ, ಧಾರವಾಡ)

# ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

**ಭಾಗ -16**

**218. ಜೀವಶಾಸ್ತ್ರಜ್ಞರಾದ ಡುಯೊ ಜೇಮ್ಸ್ ಡಿ ವ್ಯಾಟ್ಸನ್ (ಅಮೆರಿಕ) ಮತ್ತು ಫ್ರಾನ್ಸಿಸ್ ಕ್ರಿಕ್ (ಯು.ಕೆ) ಅವರು 1953ರಲ್ಲಿ ಏನನ್ನು ಕಂಡುಹಿಡಿದರು?**

ಎ) ಪೆನ್ಸಿಲಿನ್ ಬಿ) ಡಿ.ಎನ್.ಎ. ಸಂರಚನೆ

ಸಿ) ಸಿಂಥೆಟಿಕ್ ಆ್ಯಂಟಿಜೆನ್ ಡಿ) ಮಲೇರಿಯಾ ಜರ್ಮ್ಸ್

**219. ಆಪ್ಟಿಕಲ್ ಫೈಬರ್ ಯಾವ ತತ್ವದ ಮೇಲೆ ಕೆಲಸ ಮಾಡುತ್ತದೆ?**

ಎ) ವಕ್ರೀಭವನ

ಬಿ) ಒಟ್ಟು ಆಂತರಿಕ ಪ್ರತಿಬಿಂಬ

ಸಿ) ಹರಡುವಿಕೆ ಡಿ) ವ್ಯತಿಕರಣ

**220. ನಗಿಸುವ ಅನಿಲ ಯಾವುದು?**

ಎ) ನೈಟ್ರೋಜನ್ ಬಿ) ನೈಟ್ರಸ್ ಆಕ್ಸೈಡ್

ಸಿ) ಕಾರ್ಬನ್ ಡೈ ಆಕ್ಸೈಡ್ ಡಿ) ಆಕ್ಸಿಜನ್

**221. 'ವಾಷಿಂಗ್ ಸೋಡಾ' ಇದು ಯಾವುದರ ಸಾಮಾನ್ಯ ಹೆಸರು?**

ಎ) ಸೋಡಿಯಂ ಕಾರ್ಬೋನೇಟ್

ಬಿ) ಕ್ಯಾಲ್ಸಿಯಂ ಬೈ ಕಾರ್ಬೋನೇಟ್

ಸಿ) ಸೋಡಿಯಂ ಬೈ ಕಾರ್ಬೋನೇಟ್

ಡಿ) ಕ್ಯಾಲ್ಸಿಯಂ ಕಾರ್ಬೋನೇಟ್

**222. ಪೆನ್ಸಿಲ್‌ನಲ್ಲಿ ಉಪಯೋಗಿಸುವ ವಸ್ತು**

ಎ) ಗ್ರ್ಯಾಫೈಟ್ ಬಿ) ಸಿಲಿಕಾನ್

ಸಿ) ಚಾರ್ಕೋಲ್ ಡಿ) ಫಾಸ್ಪರಸ್

**223. ಬಲೂನ್‌ಗಳಲ್ಲಿ ಯಾವ ಅನಿಲವನ್ನು ತುಂಬಿರುತ್ತಾರೆ?**

ಎ) ನೈಟ್ರೋಜನ್ ಬಿ) ಹೀಲಿಯಂ

ಸಿ) ಆಕ್ಸಿಜನ್ ಡಿ) ಆರ್ಗಾನ್

**224. 'ಪೆಟ್ರೋಲಿಯಂ' ಎಂಬ ಪದವು 'ಪೆಟ್ರಾ' ಮತ್ತು 'ಓಲಿಯಂ' ಎಂಬ ಎರಡು ಪದಗಳಿಂದ ಆಗಿದೆ. ಈ ಪದಗಳು ಯಾವ ಭಾಷೆಯವು?**

ಎ) ಗ್ರೀಕ್ ಪದಗಳು ಬಿ) ಫ್ರೆಂಚ್ ಪದಗಳು

ಸಿ) ಲ್ಯಾಟಿನ್ ಪದಗಳು ಡಿ) ರಷ್ಯನ್ ಪದಗಳು

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

**ಭಾಗ– 15 ರ ಉತ್ತರ:** 201. ಬಿ, 202. ಸಿ, 203. ಬಿ, 204. ಎ, 205. ಡಿ, 206. ಬಿ, 207. ಡಿ, 208. ಡಿ, 209. ಬಿ, 210. ಡಿ, 211. ಎ, 212. ಎ, 213. ಬಿ, 214. ಎ, 215. ಎ

ಸ್ಪರ್ಧಾತ್ಮಕ ಪರೀಕ್ಷೆ ಗಳ ಬೈಬಲ್

ಚಾಣಕ್ಯ ಕಣಜ

ಮಹಾಗುರು ಎನ್.ಎಂ. ಬಿರಾದಾರ ಅವರ ಸಂಪಾದಕತ್ವ

ಎಲ್ಲಾ ವಿಷಯಗಳನ್ನೊಳಗೊಂಡ ಸಮಗ್ರ ಮಾಹಿತಿ ಭಂಡಾರ




ವಿಜಯಪುರ: ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಉತ್ತಮ ಅಂಕಗಳೊಂದಿಗೆ ತೇರ್ಗಡೆ ಹೊಂದಬೇಕಾದರೆ ಸಾಕಷ್ಟು ಶ್ರಮ ಹಾಕಬೇಕು. ವಿವಿಧ ಪುಸ್ತಕಗಳನ್ನು ಅವಲೋಕಿಸಬೇಕು. ಅದಕ್ಕಾಗಿಯೇ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದೇ ಕಳೆದ 25 ವರ್ಷಗಳಿಂದ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ನೀಡುತ್ತಾ, ಸಾವಿರಾರು ಅಭ್ಯರ್ಥಿಗಳ ಪಾಲಿಗೆ ಮಹಾಗುರು ವಾಗಿರುವ ಎನ್.ಎಂ. ಬಿರಾದಾರ ಅವರ ಸಂಪಾದಕತ್ವದಲ್ಲಿ ಪ್ರಕಟಗೊಂಡಿರುವ ಹಾಗೂ ರಾಜ್ಯದಾದ್ಯಂತ ಮನೆ ಮಾತಾಗಿರುವ, ಆರು ವರ್ಷಗಳಲ್ಲಿ 2.5 ಲಕ್ಷಕ್ಕೂ ಅಧಿಕ ಪ್ರತಿಗಳು ಮಾರಾಟಗೊಂಡಿರುವ 'ಚಾಣಕ್ಯ ಕಣಜ' ಸ್ಪರ್ಧಾತ್ಮಕ ಪರೀಕ್ಷೆಗಳ ವಿದ್ಯಾರ್ಥಿಗಳಿಗೆ ಅತ್ಯುತ್ತಮ ಮಾರ್ಗದರ್ಶಿಯಾಗಿ ಹೊರಹೊಮ್ಮಿದೆ.

ಪೊಲೀಸ್ ಕಾನ್‌ಸ್ಟೆಬಲ್, ಪಿ.ಎಸ್.ಐ, ಎಸ್.ಡಿ.ಎ, ಎಫ್.ಡಿ.ಎ, ಕೆ.ಎ.ಎಸ್, ಶಿಕ್ಷಕರ ನೇಮಕಾತಿ, ಬ್ಯಾಂಕ್, ರೈಲ್ವೆ, ಪದವಿ ಕಾಲೇಜು ಉಪನ್ಯಾಸಕರ ನೇಮಕಾತಿ ಸೇರಿದಂತೆ ಎಲ್ಲಾ ಪರೀಕ್ಷೆಗಳಿಗೆ ಉಪಯುಕ್ತವಾಗಿದೆ. ಲಾಕ್‌ಡೌನ್ ನಿಮಿತ್ತ ಎಲ್ಲಾ ಕೋಚಿಂಗ್ ಕೇಂದ್ರಗಳು ಮುಚ್ಚಿದ್ದರಿಂದ ಪರೀಕ್ಷಾರ್ಥಿಗಳು ಚಿಂತೆಗೆ ಒಳಗಾಗಬೇಕಿಲ್ಲ. ಪ್ರತಿಯೊಬ್ಬರೂ 'ಚಾಣಕ್ಯ ಕಣಜ' ಪುಸ್ತಕವನ್ನು ಪರಿಪೂರ್ಣವಾಗಿ ಅವಲೋಕಿಸಿ, ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಪಡೆಯಬಹುದಾಗಿದೆ.

ಪುಸ್ತಕದಲ್ಲೇನಿದೆ

ಚಾಣಕ್ಯ ಕಣಜ ಪುಸ್ತಕ ಇತಿಹಾಸ, ಭೂಗೋಳ, ಸಂವಿಧಾನ, ಅರ್ಥಶಾಸ್ತ್ರ, ವಿಜ್ಞಾನ, ಕಂಪ್ಯೂಟರ್, ಕ್ರೀಡೆ, ಕಲೆ, ಸಾಹಿತ್ಯ, ವ್ಯಕ್ತಿ ವಿಶೇಷ, ಸ್ಥಳ ವಿಶೇಷ... ಹೀಗೆ ಮುಂತಾದ ವಿಷಯಗಳನ್ನು ಒಳಗೊಂಡಿದೆ. ಇದರಿಂದಾಗಿ ಪರೀಕ್ಷಾರ್ಥಿಗಳಿಗೆ ಹೆಚ್ಚಿನ ಪುಸ್ತಕಗಳನ್ನು ಅವಲೋಕಿಸುತ್ತಾ ಸಮಯ ವ್ಯರ್ಥ ಮಾಡಬೇಕಾದ ಅವಶ್ಯಕತೆಯೇ ಇರುವುದಿಲ್ಲ. ಹೀಗಾಗಿ ಈ ಪುಸ್ತಕ ಪ್ರತಿಯೊಬ್ಬ ಸ್ಪರ್ಧಾರ್ಥಿಗಳ ಮನೆಯಲ್ಲಿ ಇರಲೇಬೇಕಾದ ಹೊತ್ತಿಗೆಯಾಗಿದೆ.

ಪುಸ್ತಕ ಪಡೆಯುವ ಬಗೆ

ಪುಸ್ತಕಗಳನ್ನು ಅಂಚೆ ಅಥವಾ ಕೋರಿಯರ್ ಮೂಲಕ ಕಳುಹಿಸಿ ಕೊಡಲಾಗುತ್ತಿದೆ. ಇದರ ಬೆಲೆ ₹750 ನಿಗದಿ ಪಡಿಸಲಾಗಿದೆ. ಆಸಕ್ತರು ಗೂಗಲ್ ಪೇ/ಫೋನ್ ಪೇ/ಪೇಟಿಎಂ ಮೂಲಕ ತರಿಸಿಕೊಳ್ಳಲು: 9880957562ಗೆ ಹಣ ಸಂದಾಯ ಮಾಡಬಹುದಾಗಿದೆ.

**ಇನ್ನಷ್ಟು ಮಾಹಿತಿಗಾಗಿ 08352-222197, 240197, ಮೊಬೈಲ್ ಸಂಖ್ಯೆ: 9448179762, 9900056218 ಸಂಪರ್ಕಿಸಬಹುದಾಗಿದೆ.**

**ಪ್ರತಿಗಳಿಗಾಗಿ ಸಂಪರ್ಕಿಸಿ: 9538628531**

## ಸಿಇಟಿ ದಿಕ್ಸೂಚಿ

# Maths – Quadratic Equations

**1.** If $\alpha,\beta \,\&\, \gamma$ are roots of $x^3-2x+1=0$, then the value of $\sum\left(\frac{1}{\alpha+\beta-\gamma}\right)$ is

(1) $-\frac{1}{2}$ (2) $-1$

(3) 0 (4) $\frac{1}{2}$

**2.** If $\alpha,\beta,\gamma$ are the roots of the equation, $x^3+4x+2=0$, then $\alpha^3+\beta^3+\gamma^3=$

(1) 2 (2) 6

(3) -2 (4) -6

**3.** If $x-1$ is a factor of, $x^5-4x^3+2x^2-3x+k=0$, then k is

(1) 4 (2) -4

(3) 2 (4) 3

**4.** The least and the greatest distances of the point (10, 7) from the circle $x^2+y^2-4x-2y-20=0$ are

(1) 10, 5 (2) 15, 20

(3) 12, 16 (4) 5, 15

**5.** If the roots of the equation $x^3+ax^2+bx+c=0$ are in A.P., then $2a^3-9ab=$ _________

(1) 9c (2) 18c

(3) 27c (4) –27c

**6.** If $\alpha$ and $\beta$ are the roots of $x^2-ax+b^2=0$ then $\alpha^2+\beta^2$ is equal to_____

(1) $a^2-2b^2$ (2) $2a^1-b^2$

(3) $a^2-b^2$ (4) $a^2+b^2$

**7.** The order of the differential equation $y=C_1e^{C_2+x}+C_3e^{C_4+x}$ is

(1) 2 (2) 4

(3) 1 (4) 3

**Answers**

**1. Answer : (2)**

**Sol.:** Given cubic equation is, $x^3-2x+1=0,(\alpha,\beta,\gamma)$ are roots of this equation.

Then, sum of roots

$$\Sigma\alpha=0\Rightarrow\alpha+\beta+\gamma=0$$

$$\Sigma\alpha\beta=-2,\alpha\beta\gamma=-1$$

$$\Sigma\frac{1}{\alpha+\beta-\gamma}=-\frac{1}{2}\Sigma\frac{1}{\gamma}=-1$$

**2. Answer: (4)**

**Sol:-** $-\alpha+\beta+\gamma=0,\alpha\beta\gamma=-2$

$$\therefore\alpha^3+\beta^3+\gamma^3=3\alpha\beta\gamma$$

$$=-6$$

**3. Answer: (1)**

**Sol:-** $f(1)=0$ if $x-1$ if is factor of $f(x)$

$\therefore 1-4+2-3+k=0$

$k=4$

**4. Answer: (4)**

**Sol:-**center C(2, 1) radius (r) = 5, p(10, 7)

Greatest distance = CP + r = 15

least distance = C P-r = 5

**5. Answer : (4)**

**Sol :**

$$2\beta=\alpha+\gamma$$

$$\Rightarrow 3\beta=\alpha+\beta+\gamma=-a$$

$$\beta=\frac{-a}{3}\text{ is one root}$$

$$\Rightarrow\beta^3+a\beta^2+b\beta+c=0$$

$$\Rightarrow 2a^3-9ab=-27c$$

**6. Answer (1)**

**Hint :** $\alpha^2+\beta^2=(\alpha+\beta)^2-2\alpha\beta$

$=a^2-2b^2$

**7. Answer. (3)**

**Hint:** $y=c_1e^{c_2+x}+c_3e^{c_4+x}$

$$=(c_1e^{c_2}+c_3e^{c_4})e^x=Ae^x$$

$$\Rightarrow\frac{dy}{dx}=Ae^x\ \Rightarrow\frac{dy}{dx}=y\ \Rightarrow\text{order}=1.$$

(ಪ್ರಶ್ನೋತ್ತರ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

## ಸುಭಾಷಿತ

ಸವಾಲುಗಳನ್ನು ಬದಲಿಸಲು ಹೋಗಬೇಡಿ. ಅದರ ಬದಲು, ಬದಲಾವಣೆಗಳನ್ನು ಸವಾಲಾಗಿ ಸ್ವೀಕರಿಸಿ.

**–ಅಮಿತಾಭ್ ಬಚ್ಚನ್**

# ಕೇಂದ್ರದ ಆರ್ಥಿಕ ಪ್ಯಾಕೇಜ್ ಉದ್ದೇಶ ಈಡೇರುವುದೇ?

**ಕೋವಿಡ್** ಸಾಂಕ್ರಾಮಿಕ ಹಾಗೂ ಅದು ಹರಡುವುದನ್ನು ತಡೆಯುವ ಉದ್ದೇಶದಿಂದ ಜಾರಿಗೆ ತಂದ ಲಾಕ್‌ಡೌನ್‌ನಿಂದಾಗಿ ತೀವ್ರ ತೊಂದರೆಗೆ ಒಳಗಾದ ಕೆಲವು ಉದ್ಯಮ ವಲಯಗಳ ಪುನಶ್ಚೇತನವನ್ನು ಗಮನದಲ್ಲಿ ಇರಿಸಿಕೊಂಡು ಕೇಂದ್ರ ಸರ್ಕಾರವು ಸೋಮವಾರ ಕೆಲವು ಆರ್ಥಿಕ ಕ್ರಮಗಳನ್ನು ಘೋಷಿಸಿದೆ. ಈ ಆರ್ಥಿಕ ಪ್ಯಾಕೇಜ್‌ನ ಒಟ್ಟು ಮೊತ್ತವು ₹ 6.29 ಲಕ್ಷ ಕೋಟಿ ಎಂದು ಕೇಂದ್ರ ಸರ್ಕಾರ ಹೇಳಿದೆ. ಆದರೆ, ಇದು ಬಹಳ ತಡವಾಗಿ ಘೋಷಣೆ ಆಗಿರುವ, ಉದ್ದೇಶವನ್ನು ಪೂರ್ತಿಯಾಗಿ ಈಡೇರಿಸಲಾರದ ಪ್ಯಾಕೇಜ್ ಎಂಬಂತೆ ಮೇಲ್ನೋಟಕ್ಕೆ ಕಾಣಿಸುತ್ತಿದೆ. ಈ ಪ್ಯಾಕೇಜ್‌ನಿಂದಾಗಿ ಆರ್ಥಿಕ ಪುನಶ್ಚೇತನ ನಿಜಕ್ಕೂ ಸಾಧ್ಯವಾಗುತ್ತದೆಯೇ ಎಂಬ ಅನುಮಾನ ಇರುವುದಾಗಿಯೂ ಪ್ಯಾಕೇಜ್‌ನಿಂದಾಗಿ ಈ ವರ್ಷದಲ್ಲಿ ದೇಶದ ವಿತ್ತೀಯ ಕೊರತೆಯು ಜಾಸ್ತಿ ಆಗುವುದು ಖಚಿತ ಎಂಬುದಾಗಿಯೂ ಅರ್ಥಶಾಸ್ತ್ರಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಕೆಲವು ವಲಯಗಳಲ್ಲಿ ಮೂಲ ಸೌಕರ್ಯ ಹೆಚ್ಚಿಸುವುದು, ಕೆಲವು ವಲಯಗಳಿಗೆ ಸಾಲ ನೀಡಲು ಬ್ಯಾಂಕ್‌ಗಳಿಗೆ ಸರ್ಕಾರವೇ ಖಾತರಿದಾರನಾಗಿ ನಿಲ್ಲುವುದು, ಒಂದಿಷ್ಟು ಉದ್ಯಮಗಳಿಗೆ ಹೊಸ ನೇಮಕಾತಿ ಹೆಚ್ಚಿಸಲು ಪ್ರೋತ್ಸಾಹಕ ಕ್ರಮಗಳನ್ನು ಮುಂದುವರಿಸುವುದು ಪ್ಯಾಕೇಜ್‌ನ ಮುಖ್ಯ ಅಂಶಗಳು. ಆರೋಗ್ಯ ಸೇವಾ ವಲಯ, ಪ್ರವಾಸೋದ್ಯಮ, ಕೃಷಿ ವಲಯ ಗುರಿಯಾಗಿ ಇರಿಸಿಕೊಂಡು ಪ್ಯಾಕೇಜ್ ರೂಪಿಸಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಇಂಟರ್ನೆಟ್ ಮೂಲಸೌಕರ್ಯ ವೃದ್ಧಿಗೆ ಕೂಡ ಇದು ಆದ್ಯತೆ ನೀಡಿದೆ. ಉದ್ಯಮಗಳಿಗೆ ತುರ್ತಾಗಿ ಸಾಲ ನೀಡುವ ಉದ್ದೇಶದಿಂದ ಈಗಾಗಲೇ ಜಾರಿಗೆ ತಂದಿರುವ ತುರ್ತು ಸಾಲ ಖಾತರಿ (ಇಸಿಎಲ್‌ಜಿಎಸ್) ಯೋಜನೆಗೆ ನಿಗದಿ ಮಾಡಿದ್ದ ಮೊತ್ತವನ್ನು ₹ 3 ಲಕ್ಷ ಕೋಟಿಯಿಂದ ₹ 4.5 ಲಕ್ಷ ಕೋಟಿಗೆ ಹೆಚ್ಚಿಸಲಾಗಿದೆ. ಪ್ರವಾಸೋದ್ಯಮ ವಲಯದಲ್ಲಿ ಕೆಲಸ ಮಾಡುವ ಏಜೆನ್ಸಿಗಳಿಗೆ ಹಾಗೂ ಪ್ರವಾಸಿ ಗೈಡ್‌ಗಳಿಗೆ ಸಾಲ ನೀಡುವ ಉದ್ದೇಶ ಸರ್ಕಾರಕ್ಕೆ ಇದೆ.

**ದೇಶವು ಅಸಾಮಾನ್ಯ ಸಮಸ್ಯೆಗಳನ್ನು ಎದುರಿಸುತ್ತಿರುವ ಸಂದರ್ಭ ಇದು. ಇಂತಹ ಹೊತ್ತಿನಲ್ಲಿ ಸಾಂಪ್ರದಾಯಿಕ ಕ್ರಮಗಳು ಹೆಚ್ಚಿನ ಪ್ರಯೋಜನ ಉಂಟುಮಾಡಲಾರವು**

ಕೋವಿಡ್ ಮತ್ತು ಲಾಕ್‌ಡೌನ್ ಕ್ರಮಗಳಿಂದಾಗಿ ಸಂಕಷ್ಟಕ್ಕೆ ಸಿಲುಕಿರುವುದು ಒಂದೆರಡು ಉದ್ಯಮ ವಲಯಗಳು ಮಾತ್ರವೇ ಅಲ್ಲ. ಆರ್ಥಿಕ ಚಕ್ರದ ಚಾಲಕ ಶಕ್ತಿಗಳಂತೆ ಇದ್ದ ಬಹುತೇಕ ಎಲ್ಲ ವಲಯಗಳೂ ಏಟು ತಿಂದಿವೆ. ಸೇವಾ ವಲಯ ಹಾಗೂ ತಯಾರಿಕಾ ವಲಯದ ಉದ್ದಿಮೆಗಳು ತಾವು ಒದಗಿಸುವ ಸೇವೆಗೆ, ತಾವು ತಯಾರಿಸುವ ಉತ್ಪನ್ನಕ್ಕೆ ಮಾರುಕಟ್ಟೆಯೂ ಇಲ್ಲ, ಗ್ರಾಹಕರು ಕೋವಿಡ್‌ಗೂ ಮೊದಲಿನಂತೆ ಖರೀದಿಸುತ್ತಲೂ ಇಲ್ಲ ಎಂದು ಹೇಳುತ್ತಿವೆ. ಸಗಟು ಮತ್ತು ಚಿಲ್ಲರೆ ಹಣದುಬ್ಬರವು ಭಾರಿ ಪ್ರಮಾಣದಲ್ಲಿ ಏರಿಕೆ ಕಂಡು ಉದ್ದಿಮೆಗಳ ಖರ್ಚುವೆಚ್ಚಗಳು ಏರಿಕೆ ಆಗಿವೆ, ಜನಸಾಮಾನ್ಯರ ದೈನಂದಿನ ಖರ್ಚುಗಳು ಗಗನಮುಖಿಯಾಗಿವೆ. ಸಗಟು ಹಣದುಬ್ಬರವು ಸಾರ್ವಕಾಲಿಕ ದಾಖಲೆ ಸೃಷ್ಟಿಸಿದೆ. ಇದು ಇಂದಿನ ಸಮಸ್ಯೆಯ ಒಂದು ಚಿತ್ರಣ. ಕೋವಿಡ್ ಆವರಿಸುವುದಕ್ಕೂ ಮೊದಲು ಭಾರತದ ಅರ್ಥ ವ್ಯವಸ್ಥೆಯಲ್ಲಿ ಸೇವೆಗಳನ್ನು ಒದಗಿಸುವ ವಿಚಾರದಲ್ಲಿ, ಸಿದ್ಧ ವಸ್ತುಗಳ ಉತ್ಪಾದನೆಯ ವಿಚಾರದಲ್ಲಿ ದೊಡ್ಡ ಸಮಸ್ಯೆ ಇರಲಿಲ್ಲ. ಆದರೆ, ಗ್ರಾಹಕರಿಂದ ಹೆಚ್ಚಿನ ಬೇಡಿಕೆ ಸೃಷ್ಟಿಯಾಗುತ್ತಿರಲಿಲ್ಲ. ಕೋವಿಡ್ ನಂತರದಲ್ಲಿ ಉತ್ಪಾದನೆ ಹಾಗೂ ಬೇಡಿಕೆ ಇವೆರಡರ ಮೇಲೆಯೂ ತೀರಾ ಕೆಟ್ಟ ಪರಿಣಾಮ ಉಂಟಾಗಿದೆ. ವಾಸ್ತವದಲ್ಲಿ, ಉದ್ದಿಮೆಗಳು ಹಾಗೂ ಗ್ರಾಹಕರಿಗೆ ಹೆಚ್ಚು ಹೆಚ್ಚು ಸಾಲ ಕೊಡುವುದರಲ್ಲಿ ಭಾರತದಲ್ಲಿನ ಇಂದಿನ ಸಮಸ್ಯೆಗೆ ಪರಿಹಾರ ಇದ್ದಂತಿಲ್ಲ. ದೇಶ ಎದುರಿಸುತ್ತಿರುವುದು ತೀರಾ ಅಸಾಮಾನ್ಯ ಸಂದರ್ಭ. ಇಂತಹ ಹೊತ್ತಿನಲ್ಲಿ ಸಾಂಪ್ರದಾಯಿಕ ಕ್ರಮಗಳು ಹೆಚ್ಚಿನ ಪ್ರಯೋಜನ ಉಂಟುಮಾಡಲಾರವು.

ಎಲ್ಲ ಉದ್ದಿಮೆಗಳ ಶಕ್ತಿಯೂ ಉಡುಗಿರುವಾಗ, ಯಾವುದೋ ಒಂದೆರಡು ಉದ್ಯಮ ವಲಯಗಳನ್ನು ಮಾತ್ರ ಗುರುತಿಸಿ ಆ ವಲಯಕ್ಕೆ ಹೆಚ್ಚು ಸಾಲ, ಸುಲಭ ಸಾಲ ಒದಗಿಸುವುದರಿಂದ ದೊಡ್ಡ ಪ್ರಯೋಜನವೇನೂ ಆಗಲಿಕ್ಕಿಲ್ಲ. ಸುಲಭ ಸಾಲದಿಂದ ಪ್ರಯೋಜನವೇ ಇಲ್ಲವೆಂದು ಅಲ್ಲ. ಅವು ಉದ್ದಿಮೆಗಳ ದುಡಿಯುವ ಬಂಡವಾಳದ ಅಗತ್ಯವನ್ನು ತಕ್ಷಣಕ್ಕೆ ಪೂರೈಸಬಹುದು. ಆದರೆ, ಅದಕ್ಕಿಂತ ಹೆಚ್ಚಾಗಿ ಆಗಬೇಕಿರುವುದು ಮಾರುಕಟ್ಟೆಯಲ್ಲಿ ಬೇಡಿಕೆ ಸೃಷ್ಟಿಸುವ ಕೆಲಸ. ಅದನ್ನು ಸಾಲ ಕೊಟ್ಟು ಮಾಡಲು ಈಗಿನ ಸಂದರ್ಭದಲ್ಲಿ ಆಗುವುದಿಲ್ಲ. ಸಾಲ ಪಡೆಯಲು, ಅದನ್ನು ತೀರಿಸಲು ಅಗತ್ಯವಿರುವ ಆತ್ಮವಿಶ್ವಾಸ ಕೂಡ ಕುಗ್ಗಿರುವ ಹೊತ್ತು ಇದು. ಹಲವು ಅರ್ಥಶಾಸ್ತ್ರಜ್ಞರು ಈಗಾಗಲೇ ಹೇಳಿರುವಂತೆ ಆರ್ಥಿಕವಾಗಿ ದುರ್ಬಲರನ್ನು ಗುರುತಿಸಿ, ಅವರಿಗಾಗಿ ನೇರ ನಗದು ವರ್ಗಾವಣೆಯಂತಹ ಕ್ರಮಗಳನ್ನು ಜಾರಿಗೆ ತಂದು, ಆ ಮೂಲಕ ಮಾರುಕಟ್ಟೆಯಲ್ಲಿ ಎಲ್ಲ ಬಗೆಯ ಸೇವೆಗಳಿಗೆ, ಉತ್ಪನ್ನಗಳಿಗೆ ಬೇಡಿಕೆ ಸೃಷ್ಟಿಯಾಗುವಂತೆ ಮಾಡಲು ಪ್ರಯತ್ನಿಸಬಹುದು. ಆರ್ಥಿಕವಾಗಿ ತೀರಾ ದುರ್ಬಲರಲ್ಲದವರು ಕೂಡ ಬೆಲೆ ಏರಿಕೆಯ ಪ್ರತಾಪಕ್ಕೆ ತತ್ತರಿಸಿದ್ದಾರೆ. ಕೋವಿಡ್‌ಗೂ ಮೊದಲಿನ ಕಾಲಘಟ್ಟದಲ್ಲಿ ಮಾಡುತ್ತಿದ್ದ ಬಗೆಯಲ್ಲೇ ಈಗಲೂ ಖರ್ಚು ಮಾಡುವ ಬಯಕೆ ಅವರಲ್ಲಿ ಉಳಿದುಕೊಂಡಿದೆ ಎನ್ನಲಾಗದು. ಪೆಟ್ರೋಲ್, ಡೀಸೆಲ್ ಬೆಲೆಯನ್ನು ತಕ್ಷಣಕ್ಕೆ ತಗ್ಗಿಸಿ, ಆ ಮೂಲಕ ಇತರ ಅಗತ್ಯ ವಸ್ತುಗಳ ಬೆಲೆಯೂ ಇಳಿಯುವಂತೆ ಮಾಡಿ, ಈ ವರ್ಗದವರು ಕೂಡ ಹೆಚ್ಚೆಚ್ಚು ವಸ್ತುಗಳನ್ನು ಖರೀದಿಸುವಂತೆ, ಬಗೆಬಗೆಯ ಸೇವೆಗಳನ್ನು ಪಡೆದುಕೊಳ್ಳುವಂತೆ ಕೇಂದ್ರ ಸರ್ಕಾರ ಮಾಡಬಹುದು. ಈ ಕಾರ್ಯಕ್ಕೆ ರಾಜ್ಯ ಸರ್ಕಾರಗಳೂ ಕೈಜೋಡಿಸಬಹುದು. ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಾದರೆ ಉದ್ಯಮಗಳ ಆರ್ಥಿಕ ಆರೋಗ್ಯ ಸುಧಾರಿಸಬಹುದು. ಉದ್ಯಮಗಳಲ್ಲಿ ಕೆಲಸ ಮಾಡುವವರ ಆರ್ಥಿಕ ಬದುಕಿಗೆ ಒಂದಿಷ್ಟು ಭದ್ರತೆ ದೊರೆಯಬಹುದು. ಸಂಕಷ್ಟದಲ್ಲಿ ಇರುವ ಉದ್ದಿಮೆಗಳಿಗೆ ಸಾಲ ನೀಡಲು ಬ್ಯಾಂಕ್‌ಗಳು ತೀರಾ ಉತ್ಸುಕತೆಯನ್ನೇನೂ ತೋರಿಸುತ್ತಿಲ್ಲ ಎಂಬ ವರದಿಗಳು ಇವೆ. ಹೀಗಾಗಿ, ಸಾಲಕ್ಕೆ ಖಾತರಿದಾರನಾಗಿ ಕೇಂದ್ರ ಸರ್ಕಾರ ನಿಲ್ಲುವುದರಿಂದ ನಿಜಕ್ಕೂ ಆಗುತ್ತಿರುವ ಪ್ರಯೋಜನ ಏನು ಎಂಬ ಪ್ರಶ್ನೆ ಇದೆ.

## ದಿನದ ಟ್ವೀಟ್

### ಇದು ವಾಸ್ತವ...!

ನನ್ನ ಬೀದಿ ದಾಟಿ ಹೊರಹೋದೆ
ಅವರು ನನ್ನ ಜಾತಿಯ ಬಗ್ಗೆ ಕೇಳಿದರು.
ನನ್ನ ಜಿಲ್ಲೆ ದಾಟಿ ಹೊರಹೋದೆ
ಅವರು ನನ್ನ ಧರ್ಮದ ಬಗ್ಗೆ ಕೇಳಿದರು.
ನನ್ನ ರಾಜ್ಯ ದಾಟಿ ಹೊರಹೋದೆ
ಅವರು ನನ್ನ ಭಾಷೆಯ ಬಗ್ಗೆ ಕೇಳಿದರು.
ನನ್ನ ದೇಶವನ್ನು ದಾಟಿಹೋದ ನಂತರವಷ್ಟೇ
ನಾನು ಭಾರತೀಯಳಾದೆ...

**ಶ್ರೇಯಾ,** ಯುವತಿ

## 50 ವರ್ಷಗಳ ಹಿಂದೆ

ಗುರುವಾರ, 1-7-1971

● **ಜಮೀನು ಹೋದರೆ ಬದಲು ಭೂಮಿ**

**ಬೆಂಗಳೂರು, ಜೂನ್ 30–** ಹೇಮಾವತಿ ಜಲಾಶಯ ನಿರ್ಮಾಣ ಕಾರಣ ಜಮೀನು ಕಳೆದುಕೊಳ್ಳುವವರಿಗೆ ಬದಲು ಜಮೀನು ಒದಗಿಸುವ ಸಂಬಂಧದ ನಿಯಮಗಳಿಗೆ ಸರ್ಕಾರ ಒಪ್ಪಿಗೆ ನೀಡಿದೆ.

4 ಎಕರೆಗಿಂತ ಕಡಿಮೆ ಕುಷ್ಕಿ ಜಮೀನು ಮುಳುಗಡೆಯಾಗುವ ರೈತರಿಗೆ 4 ಎಕರೆ ಕುಷ್ಕಿ ಜಮೀನನ್ನು ಬೇರೆ ಕಡೆ ಒದಗಿಸಲಾಗುವುದು.

ನಾಲ್ಕು ಎಕರೆಗಿಂತ ಹೆಚ್ಚು ಪ್ರದೇಶ ಮುಳುಗಡೆಯಾದ ಸಂದರ್ಭಗಳಲ್ಲಿ, ಮುಳುಗಡೆಯಾದ ಪ್ರದೇಶದ ಅರ್ಧದಷ್ಟು ಜಮೀನನ್ನು ಕನಿಷ್ಠ 4 ಎಕರೆ ಹಾಗೂ ಪರಮಾವಧಿ 10 ಎಕರೆಗಳ ಮಿತಿಗೊಳಪಟ್ಟು ಒದಗಿಸಲಾಗುವುದು.

● **ಮೂವರೂ ‘ಸೋಯುಜ್’ ಗಗನಗಾಮಿಗಳ ಮರಣ**

**ಮಾಸ್ಕೋ, ಜೂನ್ 30–** ಅಂತರಿಕ್ಷದಲ್ಲಿ 24 ದಿನಗಳಷ್ಟು ದೀರ್ಘಕಾಲ ಬೀಡುಬಿಟ್ಟು ಹೊಸ ವಿಕ್ರಮ ಸಾಧಿಸಿದ ರಷ್ಯಾದ ಅಂತರಿಕ್ಷ ನೌಕೆ ಸೋಯುಜ್–11ರ ಮೂವರು ಗಗನ ಯಾತ್ರಿಗಳು ಇಂದು ತಮ್ಮ ನೌಕೆಯಲ್ಲೇ ಮೃತರಾದರು.

ಕಾರ್ಯಕ್ರಮದಂತೆ ಕರಾರುವಾಕ್ಕಾಗಿ ಭೂಮಿಗೆ ವಾಪಸು ಇಳಿದು ಬಂದಂತೆ ಕಂಡುಬಂದ ಸೋಯುಜ್ ನೌಕೆ ಭೂಸ್ಪರ್ಶ ಮಾಡಿದ ತಕ್ಷಣದಲ್ಲೇ, ಹೆಲಿಕಾಪ್ಟರಿನಲ್ಲಿ ಬಂದು ಅದನ್ನು ಸಂಧಿಸಿದ ಸಹಾಯಕರು ನೌಕೆಯ ಬಾಗಿಲನ್ನು ತೆಗೆದಾಗ, ಅದರಲ್ಲಿದ್ದ ಮೂವರು ಗಗನಯಾತ್ರಿಗಳೂ ಸತ್ತು ಹೋಗಿದ್ದುದು ಕಂಡುಬಂತು.

ಸುದೀರ್ಘ ಯಾನ ಕೈಗೊಂಡಿದ್ದ ಜಾರ್ಜಿ ಡೊಬ್ರೋವೋಲ್‌ಸಿ, ವ್ಲಾಡಿಸ್ಲಾವ್ ವೋಲ್ಕೋವ್ ಮತ್ತು ವಿಕ್ಟರ್ ಪ್ಯಾಟ್ಸೆಯೇವ್ ಈ ಮೂವರು, ಅಂತರಿಕ್ಷದಲ್ಲಿ ಮಾನವ ಎಂದೂ ನಡೆಸದಿದ್ದಂಥ ಅತ್ಯಂತ ವಿವರಪೂರ್ಣ ವೈಜ್ಞಾನಿಕ ಸಂಶೋಧನೆಗಳನ್ನು ನಡೆಸಿದ್ದರು.

● **ಶಾಖ ರಕ್ಷಣಾ ಕವಚದ ವಿಫಲತೆ ಸಾವಿಗೆ ಕಾರಣ ಅಮೆರಿಕ ತಜ್ಞರ ಊಹೆ**

**ಹ್ಯೂಸ್ಟನ್, ಜೂನ್ 30–** ಗಗನ ನೌಕೆ ‘ಸೋಯುಜ್–11’ ಭೂಮಿಯ ವಾತಾವರಣವನ್ನು ಮತ್ತೆ ಪ್ರವೇಶಿಸುವುದರಲ್ಲಿದ್ದಾಗ ಶಾಖ ರಕ್ಷಣಾ ಕವಚದ ವ್ಯವಸ್ಥೆ ವಿಫಲವಾದುದೇ ರಷ್ಯಾ ಗಗನ ಯಾತ್ರಿಗಳ ಸಾವಿಗೆ ಕಾರಣವಾಗಿರಬಹುದೆಂದು ಅಂತರಿಕ್ಷಯಾನ ಕುರಿತ ಇಲ್ಲಿಯ ತಜ್ಞರು ಊಹಿಸಿದ್ದಾರೆ.

‘ಮರ್ಯಾದೆ’ ಎಂಬ ವಿಶೇಷಣ ಕಳೆದುಕೊಂಡರೆ ಮರ್ಯಾದೆಗೇಡು ಹತ್ಯೆಯ ನಿಗ್ರಹ ಸುಲಭ

# ಅಂತಃಸಾಕ್ಷಿ ಮತ್ತು ಮರ್ಯಾದೆಗೇಡು ಕೃತ್ಯ

ವಿಶ್ಲೇಷಣೆ

**ಟಿ.ಎನ್.ವಾಸುದೇವಮೂರ್ತಿ**

**ಇಂಗ್ಲಿಷಿನಲ್ಲಿ** ‘ಅವನ ಕುತ್ತಿಗೆಗೆ ನಾಯಿ ಎಂಬ ನಾಮಫಲಕವನ್ನು ಹಾಕಿ, ಬಳಿಕ ನೇಣುಹಾಕಿಬಿಡಿ’ ಎಂಬ ಗಾದೆ ಮಾತಿದೆ. ಸಮಾಜ ತನ್ನ ಹಿತಾಸಕ್ತಿಗಾಗಿ ಯಾರಿಗೆ ಬೇಕಾದರೂ ಬೇಕಾದ ಸಿದ್ಧಫಲಕಗಳನ್ನು ತೊಡಿಸಬಲ್ಲದು. ಈ ನರಬಲಿ ನಿಲ್ಲಬೇಕೆಂದರೆ, ಬಲಿಪೀಠದ ಮುಂದೆ ನಿಂತವರು ತಮ್ಮ ಕುತ್ತಿಗೆಯ ಫಲಕಗಳನ್ನು ಮೊದಲು ಕಿತ್ತೆಸೆಯಬೇಕಾಗುತ್ತದೆ.

ಇಂದು ಭಾರತದಲ್ಲಿ ಪ್ರತಿವರ್ಷ ಹತ್ತು ಸಾವಿರಕ್ಕೂ ಹೆಚ್ಚು ಮರ್ಯಾದೆಗೇಡು ಹತ್ಯೆಗಳಾಗುತ್ತಿವೆ. ವಿಜಯಪುರ ಜಿಲ್ಲೆಯ ದೇವರಹಿಪ್ಪರಗಿ ತಾಲ್ಲೂಕು ಹಾಗೂ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಗ್ರಾಮಗಳಲ್ಲಿ ಇತ್ತೀಚೆಗೆ ಮರ್ಯಾದೆಗೇಡು ಹತ್ಯೆಯ ಎರಡು ಪ್ರಕರಣಗಳು ವರದಿಯಾಗಿದ್ದವು. ಈ ಹತ್ಯೆಗಳಿಗೆ ಬಹುತೇಕ ಹೆಣ್ಣುಮಕ್ಕಳೇ ಹೆಚ್ಚಾಗಿ ಗುರಿಯಾದರೂ ಅಪರೂಪಕ್ಕೆ ಪುರುಷರು ಹಾಗೂ ಸಲಿಂಗಿಗಳೂ ಬಲಿಯಾಗುವುದುಂಟು. ಆದರೆ ಹತ್ಯೆಯ ಹಿಂದಿನ ಧೋರಣೆ ಮಾತ್ರ ಒಂದೇ.

ಭೀಕರವಾದ ಇಂತಹ ಹತ್ಯೆಗಳಿಗೆ ‘ಮರ್ಯಾದೆ’ ಎಂಬ ವಿಶೇಷಣದ ಸೇರ್ಪಡೆ ನಮ್ಮ ಸಾಂಸ್ಕೃತಿಕ ರಚನೆಯನ್ನು ಪರಿಚಯಿಸಿಕೊಡುತ್ತದೆ. ಎಲ್ಲ ಸಂಸ್ಕೃತಿಗಳೂ ಹೆಣ್ಣನ್ನು ಸ್ವತ್ತಿನಂತೆ ಕಾಣುತ್ತವೆ ಮತ್ತು ಅದನ್ನು ಪ್ರಮಾಣೀಕರಿಸಲು ಅವಳಿಗೆ ಕೆಲವು ಲಾಂಛನಗಳನ್ನು ನಿಗದಿಪಡಿಸುತ್ತವೆ. ಅದು ತಾಳಿ, ಕಾಲುಂಗುರದಂತಹ ಮುತ್ತೈದೆತನದ ಸಂಕೇತಗಳಾಗಿರಬಹುದು ಅಥವಾ ಬುರ್ಖಾ, ಪರ್ದಾ, ಹಿಜಾಬ್‌ಗಳಿರಬಹುದು. ಜಗತ್ತಿನ ಒಂದೊಂದು ಧರ್ಮ, ಸಂಸ್ಕೃತಿ, ಸಮಾಜವೂ ಹೆಣ್ಣಿಗೆ ಒಂದೊಂದು ಬಗೆಯ ವಸ್ತ್ರಸಂಹಿತೆಯನ್ನು ಕಡ್ಡಾಯ ಮಾಡಿರುತ್ತದೆ. ವಸ್ತ್ರಸಂಹಿತೆಯಷ್ಟೇ ಅಲ್ಲ ಅವಳಿಗೆಂದೇ ಪ್ರತ್ಯೇಕ ವರ್ತನೆ, ನಡಾವಳಿಗಳನ್ನು ಸಿದ್ಧಪಡಿಸಿರುತ್ತದೆ.

ಮೊನ್ನೆ ಲಾಕ್‌ಡೌನ್ ಸಮಯದಲ್ಲಿ ಮದ್ಯದಂಗಡಿಗಳ ಮುಂದೆ ಸಾಲುಗಟ್ಟಿ ನಿಂತಿದ್ದ ಜನರ ಮಧ್ಯೆ ಇಬ್ಬರು ಮಾಸ್ಕ್‌ಧಾರಿ ಹುಡುಗಿಯರು ನಿಂತಿದ್ದ ದೃಶ್ಯವನ್ನು ಟಿ.ವಿ ಮಾಧ್ಯಮದವರು, ಯಾವುದೋ ಅನ್ಯಗ್ರಹ ಜೀವಿಗಳು ನಿಂತಿವೆ ಎಂಬಂತೆ ಪ್ರಸಾರ ಮಾಡುತ್ತಿದ್ದರು. ಹೆಣ್ಣು ಒಂದು ಅಪೇಕ್ಷಿತ ಮಾದರಿಯಲ್ಲೇ ಕಾಣಿಸಬೇಕೆಂಬ ನಮ್ಮ ಸಂಸ್ಕಾರರೂಪದ ಪೂರ್ವಗ್ರಹವೇ ಇಂತಹ ಸುದ್ದಿಗಳು ವೈರಲ್ ಆಗಲು ಕಾರಣ.

ಇಂದು ಭಾರತದಲ್ಲಿ ಬಹುತೇಕ ಮರ್ಯಾದೆಗೇಡು ಹತ್ಯೆಗಳು ನಡೆಯುತ್ತಿರುವುದು ಗ್ರಾಮೀಣ ಪ್ರದೇಶಗಳಲ್ಲಿ. ಉತ್ತರ ಭಾರತದ ಎಷ್ಟೋ ಕಡೆಗಳಲ್ಲಿ ಖಾಪ್ ಪಂಚಾಯಿತಿಗಳೇ ಮರ್ಯಾದೆಗೇಡು ಹತ್ಯೆಗೆ ತೀರ್ಪು ನೀಡಿರುವ ಉದಾಹರಣೆಗಳಿವೆ. ಹೆಣ್ಣು ತನಗೆ ನಿಗದಿಪಡಿಸಿದ ಪುರುಷಪ್ರಣೀತವಾದ ವಸ್ತ್ರಸಂಹಿತೆ, ಶಿಷ್ಟಾಚಾರಗಳನ್ನು ಪಾಲಿಸುವ ಮೂಲಕ, ಹೆಣ್ಣನ್ನು ಸ್ವತ್ತಿನಂತೆ ಕಾಣುವ ಪುರುಷರ ಧೋರಣೆಯನ್ನು ಪರೋಕ್ಷವಾಗಿ ಅನುಮೋದಿಸುತ್ತಿರುತ್ತಾಳೆ. ಈ ಮನಃಸ್ಥಿತಿ ಬದಲಾಗುವವರೆಗೂ ಹೆಣ್ಣಿನ ಶೋಷಣೆ ನಿಲ್ಲುವುದಿಲ್ಲ.

ಹೀಗೆ ಅನುಮೋದಿಸುವುದನ್ನು ನಿಲ್ಲಿಸಿದ ಮಾತ್ರಕ್ಕೆ ಮರ್ಯಾದೆಗೇಡು ಹತ್ಯೆಗಳು ನಿಂತುಬಿಡುತ್ತವೆ ಎಂದಲ್ಲ. ಆದರೆ ಆಗ ಅಂತಹ ಹತ್ಯೆಗಳು ತಮ್ಮ ಮರ್ಯಾದೆಯನ್ನು ಅಥವಾ ಮರ್ಯಾದೆ ಎಂಬ ವಿಶೇಷಣವನ್ನು ಕಳೆದುಕೊಂಡು ಕೇವಲ ಹತ್ಯೆ ಎನಿಸಿಕೊಳ್ಳುತ್ತವೆ. ಆಗ ಇದನ್ನು ನಿಗ್ರಹಿಸುವುದು ಸುಲಭವಾಗುತ್ತದೆ. ಆದ್ದರಿಂದ ಮರ್ಯಾದೆಗೇಡು ಹತ್ಯೆಗಳನ್ನು ನಿಲ್ಲಿಸುವ ಉಪಕ್ರಮವನ್ನು ಮೊದಲು ಹೆಣ್ಣೇ ಸಂಘಟಿತ ನೆಲೆಯಲ್ಲಿ ಕೈಗೆತ್ತಿಕೊಳ್ಳಬೇಕಾಗುತ್ತದೆ. ಶೈಕ್ಷಣಿಕ ಜಾಗೃತಿಯಿಂದ ಇದು ಸಾಧ್ಯವಾಗಬಲ್ಲದು.

ಇದರರ್ಥ ಪ್ರತಿಷ್ಠಿತ ಶಕ್ತಿಗಳು ಸಂಪ್ರದಾಯದ ಹೆಸರಿನಲ್ಲಿ ಹೆಣ್ಣಿನ ಮೇಲೆ ಹೇರುವ ವಸ್ತ್ರಸಂಹಿತೆ, ಸಾಮಾಜಿಕ ಶಿಷ್ಟಾಚಾರಗಳನ್ನು ಅವಳು ಬಿಡಲೇಬೇಕು ಎಂದೇನೂ ಅಲ್ಲ. ವಸ್ತ್ರಸಿಂಗಾರಗಳು ಅವಳ ಆಯ್ಕೆಯಾಗಬೇಕೇ ವಿನಾ ಹೇರಿಕೆಯಾಗಬಾರದು, ಕುತ್ತಿಗೆಗೆ ತೂಗುಹಾಕಿದ ಫಲಕವಾಗಬಾರದು. ಆಯ್ಕೆ ಎಂದರೆ, ಬೇಡವೆನಿಸಿದಾಗ ಅವಳಿಗೆ ಅದನ್ನು ಕಳಚಿಡುವ ಅಧಿಕಾರವಿದೆ ಎಂದರ್ಥ. ಹಾಗೆ ಕಳಚಲು ನಿರ್ಧರಿಸಿದಾಗ ಅಥವಾ ತನಗೆ ಬೇಕಾದದ್ದನ್ನು ಧರಿಸಲು ಬಯಸಿದಾಗ ಅದನ್ನು ಸಮಸ್ಯೆಯಂತೆ ಅಥವಾ ಸುದ್ದಿಯಂತೆ ಕಾಣಬಾರದೆಂಬ ವಿವೇಕವನ್ನು ಸಮಾಜ ಬೆಳೆಸಿಕೊಳ್ಳಬೇಕಾಗುತ್ತದೆ.

ದೇವರು ಹೆಣ್ಣನ್ನು ಗರ್ಭಸಹಿತವಾಗಿ ಭೂಮಿಗೆ ಕಳುಹಿಸಿದ್ದಾನೆ. ಗರ್ಭವು ಸಂಕೇತಕ್ಕಿಂತಲೂ ಮಿಗಿಲಾದ ಜೀವಧಾರಣಾ ಅಂಗವಾಗಿದೆ. ಮಕ್ಕಳನ್ನು ಹೆತ್ತು ಸಲಹುವ ಹೆಣ್ಣಿಗೆ ಸಹಜವಾಗಿ ಪುರುಷನ ಸಹಕಾರ, ಸಹಾಯ ಬೇಕಾಗುತ್ತದೆ. ಅದೇ ರೀತಿ ಪುರುಷನಿಗೂ ಹೆಣ್ಣಿನ ಸಹಕಾರ, ಸಹಾಯ ಬೇಕು. ಆದರೆ, ಪುರುಷ ನೆನೆಸಿದವನು ಇದನ್ನೇ ಬಂಡವಾಳ ಮಾಡಿಕೊಂಡು, ‘ಹಾಗಿದ್ದರೆ ನಾನು ನಿನ್ನನ್ನು ಸ್ವತ್ತಿನಂತೆ, ಸಂಪತ್ತಿನಂತೆ ನಡೆಸಿಕೊಳ್ಳುತ್ತೇನೆ, ಇದಕ್ಕೆ ನೀನು ಸಮ್ಮತಿಸಬೇಕು...’ ಎಂದು ಷರತ್ತು ವಿಧಿಸುವುದು ಪುರುಷತನವಲ್ಲ, ಅದು ಕಾಪುರುಷತನವಾಗುತ್ತದೆ.

ಪಾಕಿಸ್ತಾನಿ ಕವಯಿತ್ರಿ ಇಮ್ತಿಯಾಜ್ ಧಾರ್ಕರ್ ತನ್ನ ಚರ್ಮವನ್ನು, ಮಾಂಸವನ್ನು, ಮುಖವನ್ನು ಕೊನೆಗೆ ಗರ್ಭವನ್ನೂ ಸದ್ಯಕ್ಕೆ ಕಳಚಿಡುವ, ಭವಿಷ್ಯದಲ್ಲಿ ತಾನೇ ಸೃಷ್ಟಿಸಿಕೊಳ್ಳುವ ಜಗತ್ತಿನೊಳಗೆ ಹೊಸ ಸೃಷ್ಟಿಕ್ರಿಯೆಯಲ್ಲಿ ತೊಡಗುವ ಕನಸು ಕಾಣುತ್ತಾಳೆ. ಹೆಣ್ಣು ಅಂತಹುದೊಂದು ಜಗತ್ತನ್ನು ಸೃಷ್ಟಿಸಿಕೊಳ್ಳಲು ಸುದೀರ್ಘಕಾಲ ಬೇಕಾಗುತ್ತದೆ. ಆದರೆ ಅದು ಅಸಾಧ್ಯವಾದ ಕನಸೇನಲ್ಲ.

ಮರ್ಯಾದೆಗೇಡು ಹತ್ಯೆಯ ಸಂಬಂಧವಾಗಿ ಯೇಸುವಿನ ಬದುಕಿನಲ್ಲೊಂದು ಕತೆಯಿದೆ. ಒಂದು ಸಂಜೆ ಕೆಲವು ಯಹೂದಿ ರಬಾಯ್‌ಗಳು ನ್ಯಾಯತೀರ್ಮಾನಕ್ಕಾಗಿ ಒಬ್ಬ ವ್ಯಭಿಚಾರಿಣಿಯನ್ನು ತಂದು ಯೇಸುವಿನ ಮುಂದೆ ನಿಲ್ಲಿಸುತ್ತಾರೆ. ‘ಈಕೆ ಪರಪುರುಷನ ಸಂಗದಲ್ಲಿದ್ದಾಗಲೇ ಹಿಡಿದು ಇಲ್ಲಿಗೆ ಕರೆತಂದಿದ್ದೇವೆ. ಇಂತಹವಳ ಮೇಲೆ ಕಲ್ಲು ತೂರಾಟ ನಡೆಸಿ ಕೊಲ್ಲಬೇಕು ಎಂದು ಮೋಸೆಸ್ ಆದೇಶಿಸಿದ್ದಾನೆ. ಇದಕ್ಕೆ ನೀನೇನೆನ್ನುವೆ?’ ಎಂದು ಕೇಳುತ್ತಾರೆ.

ಅವರ ಉದ್ದೇಶ ಬರೀ ಅವಳನ್ನು ಶಿಕ್ಷಿಸುವುದಾಗಿರಲಿಲ್ಲ. ಅದೊಂದೇ ಆಗಿದ್ದಿದ್ದರೆ ಆ ಕೆಲಸವನ್ನು ಅವರು ಅಲ್ಲೇ ಮಾಡಿ ಮುಗಿಸಿರುತ್ತಿದ್ದರು. ಯೇಸುವನ್ನು ಇಕ್ಕಟ್ಟಿಗೆ ಸಿಲುಕಿಸುವುದು ಅವರ ಉದ್ದೇಶವಾಗಿತ್ತು. ಅವನಿಗೆ ಆ ರಬಾಯ್‌ಗಳ ಹುನ್ನಾರ ಗೊತ್ತಾಗದಿರಲಿಲ್ಲ. ಒಂದು ವೇಳೆ ಯೇಸು ಕೊಲ್ಲಬಾರದು ಎಂದು ಹೇಳಿದರೆ ‘ಈತ ಪ್ರಾಚೀನ ಪ್ರವಾದಿಗಳನ್ನು ಅವಹೇಳನ ಮಾಡುತ್ತಿದ್ದಾನೆ’ ಎಂದು ಪುಕಾರೆಬ್ಬಿಸುತ್ತಿದ್ದರು. ಒಂದು ವೇಳೆ ಕೊಲ್ಲಿರಿ ಎಂದು ಹೇಳಿದರೆ ಆಗ ಇವನ ಪ್ರೇಮ, ಕರುಣೆಯ ಉಪದೇಶಗಳು ಬರೀ ಟೊಳ್ಳೆಂದು ಪ್ರಚಾರ ಮಾಡಿರುತ್ತಿದ್ದರು. ಯೇಸುವಿಗೆ ಅವಳು ತಪ್ಪಿತಸ್ಥಳೇ ಅಲ್ಲ ಎಂದು ವಾದಿಸಲೂ ಅವಕಾಶವಿರಲಿಲ್ಲ. ಏಕೆಂದರೆ ಆ ಕೃತ್ಯದ ಪ್ರತ್ಯಕ್ಷ ಸಾಕ್ಷಿಗಳೇ ಅವಳನ್ನು ಅಲ್ಲಿಗೆ ಎಳೆದು ತಂದಿದ್ದರು.

ಆಗ ಯೇಸು ಒಂದು ಉಪಾಯ ಮಾಡಿದ. ಕೆಳಗೆ ಬಾಗಿ ಮರಳಿನ ಮೇಲೆ ಏನನ್ನೋ ಬರೆಯಲಾರಂಭಿಸಿದ. ಅಲ್ಲಿ ನೆರೆದಿದ್ದ ಪ್ರತಿಯೊಬ್ಬ ರಬಾಯ್‌ಯ ಚರಿತ್ರೆ, ವ್ಯಭಿಚಾರ, ಭ್ರಷ್ಟಾಚಾರ, ಸೋಗಲಾಡಿತನಗಳು ಮರಳ ಮೇಲೆ ಯೇಸುವಿನ ಬೆರಳಿನಿಂದ ಅಕ್ಷರ ರೂಪದಲ್ಲಿ ಮೂಡಲಾರಂಭಿಸಿದವು. ನಿಧಾನವಾಗಿ ಕತ್ತಲೆ ಆವರಿಸುತ್ತಿತ್ತು. ಇನ್ನೆಲ್ಲಿ ತನ್ನ ಬಂಡವಾಳ ಬಯಲಾಗುತ್ತದೋ ಎಂದು ಹೆದರಿ ಅಲ್ಲಿದ್ದ ಒಬ್ಬೊಬ್ಬ ರಬಾಯ್‌ಯೂ ಸದ್ದಿಲ್ಲದೇ ಅಲ್ಲಿಂದ ಪರಾರಿಯಾದ. ಯೇಸು ತನ್ನ ಬರವಣಿಗೆಯನ್ನು ಪೂರ್ತಿಯಾಗಿ ಮುಗಿಸಿ ತಲೆಯೆತ್ತಿ ನೋಡಿದರೆ ಅಲ್ಲಿ ಒಬ್ಬನೂ ಕಾಣಿಸಲಿಲ್ಲ. ಆ ಹೆಂಗಸು ಮಾತ್ರ ತಲೆತಗ್ಗಿಸಿ ನಿಂತೇ ಇದ್ದಳು. ಯೇಸು ಅವಳನ್ನು ಕುರಿತು ‘ಅವರೆಲ್ಲರೂ ಹೊರಟು ಹೋದರೇ? ನಿನ್ನನ್ನು ಶಿಕ್ಷಿಸಲಿಲ್ಲವೇ? ಹಾಗಿದ್ದರೆ ಇನ್ನೂ ಏಕೆ ಇಲ್ಲೇ ನಿಂತಿರುವೆ? ಮನೆಗೆ ಹೋಗು. ಮತ್ತೆ ಅವರ ಕೈಗೆ ಸಿಕ್ಕಿಹಾಕಿಕೊಳ್ಳಬೇಡ’ ಎಂದು ಹೇಳಿ ಕಳಿಸುತ್ತಾನೆ. ಮುಂದೆ ಅವಳು ಅವನ ಅಂತರಂಗದ ಶಿಷ್ಯೆಯಾಗುತ್ತಾಳೆ.

ಬೈಬಲ್ ಆಧರಿಸಿ ಖಲೀಲ್ ಗಿಬ್ರಾನ್‌ನ ಕಲ್ಪನೆಯಲ್ಲಿ ಮೂಡಿದ ಈ ಕತೆಯ ಸತ್ಯಾಸತ್ಯತೆ ತಿಳಿಯದು. ಆದರೆ ಯೇಸು ಅಲ್ಲಿದ್ದ ರಬಾಯ್‌ಗಳ ಅಂತಃಸಾಕ್ಷಿಯೇ ಮೂರ್ತಿವೆತ್ತಂತೆ ಅಲ್ಲೊಂದು ಪವಾಡ ನಡೆಸಿದ್ದ. ಈ ಅಂತಃಸಾಕ್ಷಿ ಜಾಗೃತವಾದರೂ ಸಾಕು, ಅದೆಷ್ಟೋ ಮರ್ಯಾದೆಗೇಡು ಹತ್ಯೆಗಳು ಪವಾಡಸದೃಶವಾಗಿ ನಿಲ್ಲಬಹುದು. ಆದರೆ ಸದ್ಯಕ್ಕೆ ಅಂತಹ ಪವಾಡಕ್ಕಾಗಿ ಕಾಯುತ್ತ ಕೂರುವಷ್ಟು ವ್ಯವಧಾನವಿಲ್ಲ.

ಕೊಪ್ಪಳದ ಸಾಮಾಜಿಕ ಕಾರ್ಯಕರ್ತ ವಿಜಯ್ ಅಮೃತರಾಜ್ ‘ಹೊಸ ತಲೆಮಾರಿನವರು ಕ್ಯಾಂಡಲ್ ಶ್ರದ್ಧಾಂಜಲಿ ಸಭೆ, ಪ್ರತಿಭಟನೆ, ರ‍್ಯಾಲಿಗಳ ಸಂಘಟನೆ, ಸಹಿ ಅಭಿಯಾನ ಮುಂತಾದವುಗಳ ಮೂಲಕ ಮರ್ಯಾದೆಗೇಡು ಹತ್ಯೆಗಳನ್ನು ಸಾರ್ವಜನಿಕರ ಮತ್ತು ನ್ಯಾಯಾಲಯದ ಗಮನಕ್ಕೆ ತರಬೇಕು’ ಎಂದು ಹೇಳುತ್ತಾರೆ.

ಲೇಖಕ: ಸಹಾಯಕ ಪ್ರಾಧ್ಯಾಪಕ, ಜ್ಯೋತಿನಿವಾಸ್ ಕಾಲೇಜ್, ಬೆಂಗಳೂರು

## ಚುರುಮುರಿ

### ಪರೀಕ್ಷೆ ಡಿಸ್ಕಷನ್ನು

● ಸಿದ್ದಯ್ಯ ಹಿರೇಮಠ

**ದ್ಯಾಮವ್ವನ** ಗುಡಿಕಟ್ಟಿ ಮ್ಯಾಲೆ ಹರಟೀ ಹೊಡಿಯೂ ಗುಂಪು, ಇವತ್ತ ‘ಪರೀಕ್ಷೆ’ ವಿಷಯದ ಮ್ಯಾಲೆ ಡಿಸ್ಕಷನ್ ಇಟಗ್ಯಂಡಿತ್ತು. ‘ಯಾಡ್ ವರ್ಸಾತು ನಮ್ ಹುಡುಗೂರಿಗೆ ಸಾಲಿಲ್ಲಾ, ಮೂಲಿಲ್ಲಾ. ಆದ್ರೂ ನೀ ಪಾಸ್, ನೀ ಪಾಸ್ ಅಂತ ಹೇಳಿ ಎಲ್ಲಾರ್ನೂ ಪಾಸ್ ಮಾಡಿಬಿಟ್ಟಾರ’ ಅಂತ ಗುಡಸಲಮನೀ ಈರೇಶಿ ಹೇಳಿದ.

‘ಹೌದೌದು ನಮ್ಮ ಹುಡಗ್ನೂ ಪಾಸ್ ಅನಕೋಂತ ಅಡ್ಯಾಡಾಕ್ಹತ್ತಿದ್ದಾ. ನಾವು ಹಗಲೂರಾತ್ರಿ ಓದಿದ್ರೂ ಪಾಸ್ ಆಗ್ತಿರ್ಲಿಲ್ಲ. ನಿಮ್ಮನ್ನ ಅದ್ಹೆಂಗ್ ಪಾಸ್ ಮಾಡಿದ್ರಲೇ ಅಂತ ಕೇಳಿದ್ರ, ನಿಮಗ್ಯೆಲ್ಲಾ ಗೊತ್ತಾಗಂಗಿಲ್ಲ ಬಿಡಪಾ ಅಂತ್ಹೇಳಿ ಓಡಿ ಹೋತು’ ಅಂತ ಬಡಿಗ್ಯಾರ ಮಾನಪ್ಪ ದನಿಗೂಡಿಸಿದ.

‘ಬಿಡ್ರ್ಯಲೇ, ಈ ಸಲಾ ಪಿಯುಸಿ ಹುಡುಗೂರಿಗೇ ಪರೀಕ್ಷೆ ಇಲ್ಲ. ಇನ್ನ ಐದ್ನೆತ್ತ, ಆರ್‌ನೆತ್ತದ ಸಣ್‌ಸಣ್ ಹುಡುಗೂರಿಗೆ ಎಲ್ಲಿಂದ ಪರೀಕ್ಷೆ ತರತೀ’ ಅನಕೋತ ಗಂಗಪ್ಪ ಬಂದ್ ಕುಂತ.

‘ಹೌದಲ್ಲೋ, ಸರ್ಕಾರದೌರು ಪಿಯುಸಿ ಹುಡುಗೂರದು ಪರೀಕ್ಷೆ ಕ್ಯಾನ್ಸಲ್ ಮಾಡಿ, ಈ ಸಲಾ ಅಡ್ಮಿಷನ್ ಮಾಡ್ಸಿದೌರ್ ಎಲ್ಲಾರೂ ಪಾಸ್, ಹ್ವಾದ್ ವರ್ಸ ಪರೀಕ್ಷೆ ಬರದು ಫೇಲ್ ಆದವ್ರು ಈ ಸಲಾ ಮತ್ ಫೇಲ್ ಅಂತ ಹೇಳಿದ್ರು. ಪಾಪ, ಹ್ವಾದ್ ವರ್ಸ ಫೇಲ್ ಆಗಿದ್ವು, ನಮ್ಮಂಗ ಏನ್ ಪಾಪಾ ಮಾಡ್ಯಾವೋ ಏನೋ? ಅವುಕ್ಕ ಪಾಸ್ ಆಗೂ ನಸೀಬನ ಇಲ್ಲ ಅಂತ ಕಾಣತೈತಿ’ ಅಂದ ಬಸರೀಕಟ್ಟಿ ಬಸಣ್ಣ.

‘ಆದ್ರ ಎಸ್ಸೆಸ್ಸೆಲ್ಸಿಯವ್ರಿಗೆ ಯಾಡ್ ದಿನಾ ಅಷ್ಟಾ ಪರೀಕ್ಷೆ ನಡಸ್ತಾರಂತ. ಈ ಹುಡ್ರೆಲ್ಲಾ ಯಾಡ್ ದಿನಾ ಒಂದ್ ಕಡೆ ಸೇರಿದ್ರ ಕೊರೊನಾ ಬರಂಗಿಲ್ಲಾ?’ ಅಂತ ಅಂವಾ ಕ್ವಶ್ಚನ್ ಹಾಕಿದ.

‘ನೋಡ್ರಿಪಾ, ಈ ಪಿಯುಸಿಯವ್ರಿಗೆ ಇರಲಾರ್ದ್ ಎಕ್ಸಾಮು ಔರಿಗಿಂತ ಸಣ್ ವಯಸ್ಸಿನ ಎಸ್ಸೆಸ್ಸೆಲ್ಸಿ ಹುಡುಗೂರಿಗೆ ಯಾಕ? ಇದನ್ಯಾರೂ ಕೇಳಾವ್ರ ಇಲ್ ನೋಡು’ ಅಂತ ಸಂತ್ಯಾ ಅಬ್ಜೆಕ್ಷನ್ ಎತ್ತಿದ.

‘ಅಲ್ಲಲೇ, ನಮ್ ಮಂತ್ರಿ ಯೋಗೀಸ್ವರನೂ ಪರೀಕ್ಷೆ ಬರದಾನಂತ. ಯಾರಿಗೂ ಇಲ್ಲದ ಪರೀಕ್ಷೆ ಅವ್ನಿಗೆ ಯಾರ್ ಇಟ್ಟದ್ರೂ ಅಂತೇನಿ! ಪರೀಕ್ಷೆ ಮುಗದೈತಿ ರಿಜಲ್ಟಿಗೆ ಕಾಯಕತ್ತೇನಿ, ಇನ್ನೇನ್ ಬಂದ ಬಿಡತೈತಿ ಅಂತ ಹೇಳ್ಯಾನ. ಬೌಶ ಅವನ ರಿಜಲ್ಟ್ ಬಂದು ಪಾಸ್ ಆದ್ನಪಂದ್ರ, ನಮ್ ಯಡಿಯೂರಜ್ಜ ಫೇಲ್ ಆಗೂದು ಗ್ಯಾರಂಟಿ’ ಅಂದ ಮಡಿವಾಳಿಯ ಮಾತಿಗೆ ಎಲ್ಲರೂ ಹೌದ್ಹೌದು ಅನ್ನುತ್ತಾ ತಲೆಯಾಡಿಸಿದರು.

## ಸಂಗತ

# ತುಂತುರು... ಪ್ರೀತಿ ಹನಿಯ ಕಾರುಬಾರು

**ಮಲೆನಾಡಿನಲ್ಲೀಗ ಮಳೆಗಾಲದ ಸೊಗಸು, ಭೂಮಿಗಿಳಿದ ಈ ಮಾಯಾ ಲೋಕದಲ್ಲಿ ಕಾಮನಬಿಲ್ಲಿಗೆ ಬಣ್ಣಗಟ್ಟುವ ಸಂಭ್ರಮ**

● ಸತೀಶ್ ಜಿ.ಕೆ. ತೀರ್ಥಹಳ್ಳಿ

**ಮತ್ತೆ** ಶುರುವಾಗಿದೆ ಮುಂಗಾರು, ಮತ್ತೊಮ್ಮೆ ತೋಯುತ್ತಿದೆ ಮಲೆನಾಡು... ಅದು ಮಾನ್ಸೂನ್ ಮಾರುತಗಳು ನೈರುತ್ಯ ದಿಕ್ಕಿನಿಂದ ಹೊತ್ತು ತಂದ ಮಳೆರಾಯನ ಸಂದೇಶ, ಮಳೆಕಾಡಿನಲ್ಲೀಗ ಅದರದೇ ಚಿಟಪಟ... ಒಮ್ಮೊಮ್ಮೆ ಭೋರ್ಗರೆತ...

ಮಳೆಯೆಂದರೆ ಅದು ಆಕಾಶ- ಭೂಮಿ ನಡುವಿನ ಆಪ್ತ ಅನುಸಂಧಾನ. ಭೂರಮೆಗೀಗ ಮಳೆಯೆಂಬ ಅಮೃತಧಾರೆಯ ಹನಿಹನಿ ಸಿಂಚನ. ಅಲ್ಲಿ ಜಲಬಿಂದುವಿನ ಸ್ಪರ್ಶಕ್ಕೆ ನೆಲದ ಬೇರುಗಡ್ಡೆಗಳಿಗೆಲ್ಲಾ ಹಸಿರಾಗುವ ಹರುಷ. ಮುಂಗಾರಿಗೆ ಕಾತರಿಸುವ ಮನಸುಗಳ ಪಾಲಿಗದು ಮುಗಿಯದ ಹಬ್ಬ, ಮಳೆ ವೈಭವದಲ್ಲಿ ಮಿಂದೇಳುವ ಮೈಮನಸುಗಳಿಗೆ ಹಿತಾನುಭವ. ಕಾಡಂಚಲ್ಲಿ ಕಿವಿಗಳ ಮೇಲೆ ಜೀರುಂಡೆಗಳ ಮುಗಿಯದ ತೋಂ... ತನನ ಗಾನ... ನಿಜಕ್ಕೂ ಮಳೆಯೆಂಬುದು ಪ್ರಕೃತಿಯ ಜೀವಂತಕಾವ್ಯ.

ಮಲೆನಾಡಿನಲ್ಲಂತೂ ಮಳೆಗಾಲದ ಸೊಗಸೇ ಚಂದ. ವರ್ಷಾಭಿಷೇಕಕ್ಕಾಗಿ ವರ್ಷಗಟ್ಟಲೆ ಕಾಯುವ, ಮಾಯುವ, ಬೀಗುವ ಬೆರಗು ಮಳೆಕಾಡಿನದ್ದು. ಇಲ್ಲೀಗ ವಾರದಿಂದಲೂ ಪೂರ್ತಿ ಹಗಲುಗತ್ತಲು, ಆವತ್ತಿಂದ ಕಳೆದುಹೋದ ಸೂರ್ಯನ ಸುಳಿವಿಲ್ಲ. ಮೇ ತಿಂಗಳು ಕಳೆದರೆ ಸಾಕು, ಶುರುವಾಗುತ್ತದೆ ಋತುಮಾನಗಳ ಚಲನೆಯ ರುಜುವಾಗಿ ಪ್ರಕೃತಿಯಲ್ಲೊಂದು ಗುರುತರ ಸ್ಥಿತ್ಯಂತರ. ಅಲ್ಯಾವುದೋ ಜೀವಜಂತುವಿಗೆ ಮುದುಡಿಕೊಂಡು ಬೆಚ್ಚನೆಯ ಬಿಲದೊಳಗೆ ಸೇರಿಕೊಳ್ಳುವ ಅವಸರ, ಇನ್ಯಾವುದಕ್ಕೋ ಗೂಡಿನಿಂದ ಮೈಮುರಿದು ಹೊರಬರಲು ಕಾತರ, ಹೋದವರ್ಷ ಕಣ್ಮರೆಯಾಗಿದ್ದ ಬೇಲಿಸಾಲಿನ ಡೇಲಿಯ ಗಡ್ಡೆಗಳಿಗೆ ಮತ್ತೆ ಜೀವತಳೆಯುವ ಕಾಲ...

ಹೌದು, ಮುಂಗಾರಿನಲ್ಲಿ ಮುಗಿಲ ತುಂತುರು ನೆಲತಾಕುವ ಹೊತ್ತಿಗೆ ಹೊಲದ ರೈತಾಪಿ ಮೈಮನಸ್ಸುಗಳಲ್ಲೊಂದು ವಿದ್ಯುತ್‌ಸಂಚಾರ ಶುರುವಾಗಿರುತ್ತದೆ. ತಾವು ಹದಗೊಳಿಸುವ ನೆಲದಲ್ಲಿ ಊರುವ ಭರವಸೆಯ ಬೀಜಗಳು ತೇವವುಂಡು ಮೊಳಕೆಯೊಡೆಯುವ ಹೊತ್ತಿದು. ಆಗುಂಬೆ ಎಂಬ ಪಶ್ಚಿಮಘಟ್ಟದ ನಿತ್ಯಬೆರಗು ಈಗ ಮುಂಗಾರಿನ ದೃಶ್ಯವೈಭವಕ್ಕೆ ಸಾಕ್ಷಿಯಾಗಿದೆ. ಮಳೆಯ ಚೆಲುವು ಒಂದು ಬಗೆಯಾದರೆ ಮಳೆಹೊಯ್ದು ಹೋದ ಮೇಲಿನದ್ದು ನಗು ನಿಲ್ಲಿಸಿ ಕಣ್ಣು ಮಿಟುಕಿಸುವ ಮಗುವಿನ ಹಾಗೆ, ಎದುರಿನವರನ್ನು ಕಾಣಲಾಗದ ಮಂಜಿನ ಮುಸುಕು. ಜೋರುಮಳೆಯಲ್ಲಿ ನಿತ್ಯಹರಿದ್ವರ್ಣವನ್ನು ಹಾಸಿಹೊದ್ದ ಅಪ್ಪಟ ಚೆಲುವೆ ಆಗುಂಬೆಯ ಘಾಟಿಯೊಳಗೆ ನಾನು ದಿನಂಪ್ರತಿ ಎರಡೆರಡು ಬಾರಿ ನುಸುಳುವಾಗೆಲ್ಲಾ ತಣ್ಣನೆಯ ರೋಮಾಂಚನ. ಮೌನವನ್ನೂ ಧ್ಯಾನವನ್ನೂ ಆರಾಧಿಸುವ ಮನಸಿಗೆ ಅದು ಹಿತಕರ ಸಮಯ. ಅಲ್ಲಿಯ ಗೂಡಂಗಡಿಯಲ್ಲಿ ಹಬೆಯಾಡುವ ಕಾಫಿ ಹೀರಿ ಮಂಜಿನಹಾದಿಯಲ್ಲಿ ಮಂದಾನಿಲದೊಟ್ಟಿಗೆ ನಡೆದು ಹೋಗುವ ಮಜವೇ ಬೇರೆ. ಹಾವು ಸರಿದಂತಿರುವ ದಾರಿಯಲ್ಲಿ ವಕ್ರತೆಯೇ ಸೌಂದರ್ಯ!

ಕಾಡುಮೇಡು, ಗುಡ್ಡಬೆಟ್ಟಗಳನ್ನು ಸುತ್ತಿಬಳಸಿ ಏದುಸಿರಲ್ಲಿ ಬಸ್ಸು-ಕಾರುಗಳು ಮೇಲೇರುವ ಹಸಿರು ಹಾದಿಯದು. ಗಿರಿಶೃಂಗವನ್ನು ಚುಂಬಿಸುವ ಮುಗಿಲು. ಅಂಕುಡೊಂಕಿನ ಹಾದಿಗುಂಟ ಸಾಗುವ ಹೊತ್ತಲ್ಲಿ, ನೆತ್ತಿಮೇಲಿಂದ ಹತ್ತಾರು ನೀರಝುರಿ... ಜುಳುಜುಳು ನಿನಾದ. ವರಕವಿಯನ್ನು ತೋಯ್ದಂತಹ ‘ಜಲಲ ಜಲಲ ಜಲಧಾರೆ...’ ಹೀಗೆ ಎಲ್ಲವೂ ಚೆಂದವೇ ಎಲ್ಲವೂ ಸ್ಫುಟವೇ. ಕಣ್ಣಳತೆಗೆ ನಿಲುಕದ ದಕ್ಷಿಣ ಕಾಶ್ಮೀರದ ಮಂಜು ಮುಸುಕಿದಾ ಕಾಡು.

ಮರವನ್ನಪ್ಪಿಕೂತ ಅಪರೂಪದ ಸಿಂಹಬಾಲದ ಕೋತಿಗಳು. ಮೈಕೊರೆಯುವ ಸುಳಿಗಾಳಿ, ಮುತ್ತಿಕ್ಕುವ ಮೋಡಗಳು, ಝುಮ್ಮೆನಿಸುವಾ ಚಳಿ, ಎದೆಯೊಳಗೆ ಎದ್ದುಕೂರುವ ಬೆಚ್ಚನೆ ನೆನಪು, ಕಣ್ತುಂಬಾ ತೇವಭಾವ...



ಇಂತಹದ್ದೊಂದು ಮಳೆಗಾಲವೆಂಬ ನೈಸರ್ಗಿಕ ದೃಶ್ಯವೈಭವದ ಬೆರಗಿಗೆ ಮನಸೋಲದವರ್‍ಯಾರು? ಹಸಿ ನೆಲಕ್ಕಿದು ಹಸಿರೂಡುವ ಕಾಲ, ಪಶು-ಪಕ್ಷಿಗಳಿಗೆಲ್ಲಾ ಶೃಂಗಾರದ ಸಮಯ. ಹಾದಿಬದಿಯಲ್ಲಿ ತತ್ತಿಯೊಡೆದು ಮೆರವಣಿಗೆ ಹೊರಡುವ ಥರಥರದ ಹುಳುಜಂತುಗಳು, ಬೆಳಗಾಗುವಷ್ಟರಲ್ಲಿ ಪೊದೆಯೊಳಗೆ ಪುಟಿದೇಳುವ ರಾಶಿ ಅಣಬೆ. ಈ ಮಳೆಯೆಂಬ ಮಾಯಾವಿಗೆ ಅಲ್ಲೆಲ್ಲೋ ನೆಲವ ಹದಗೊಳಿಸಿ ಬೀಜದೊಳಗೆ ಮೊಳೆವ ಕಾತರ. ಮತ್ತೆಲ್ಲೋ ಚಿಪ್ಪಿನೊಳಗೆ ಮುತ್ತಾಗುವ ಸಡಗರ. ಹೊಂಬಿಸಿಲಿಗೊಂದು ಹೂಮಳೆ ಚೆಲ್ಲಿ ಕಾಮನಬಿಲ್ಲಿಗೆ ಬಣ್ಣಗಟ್ಟುವ ಸಂಭ್ರಮ... ಒಟ್ಟಾರೆ ನಿಜಕ್ಕೂ ಮಳೆಗಾಲ ಅನ್ನುವುದು ಭೂಮಿಗಿಳಿದ ಮಾಯಾಲೋಕ.

ಬದುಕು ನಿಂತ ನೀರಲ್ಲ ಅನ್ನುವ ಮಾತಿದೆ. ಅಂದಹಾಗೆ ನೀರು ಎಂದೂ ಒಂದೆಡೆ ನಿಂತುಕೊಂಡಿಲ್ಲ! ಕಡಲ ನೀರಿಗೆ ಮೇಗಡೆ ಹಾರಿ ಮುಗಿಲಾಗುವಾಸೆ. ಮುಗಿಲಿಗೋ... ಜಾರಿ ಮಳೆಯಾಗಿ ಹನಿಯಾಗಿ ನೆಲತಾಕುವಾಸೆ. ನೆಲದ ಹನಿಹನಿಗೂ ಓಡಿಓಡಿ ಕಡಲಾಗುವಾಸೆ. ಚಮತ್ಕಾರವೆನಿಸುತ್ತದೆ ಈ ಚಕ್ರೀಯ ಚಲನೆ. ಶಾಖದೊಟ್ಟಿಗೆ ನೀರಿನದ್ದು ಸ್ಥಿತ್ಯಂತರಗೊಳ್ಳುವ ಜಮಾನ. ಹಿಮಗಲ್ಲಾಗಿ ಘನೀಭವಿಸುವ, ಕರಗಿ ಹರಿದು ನದಿಯಾಗಿ ಸಾಗಿ, ಆರಿ ಆವಿಯಾಗಿ ಮೇಲೇರುವಂಥಾ ಬಹುವಿಧದ ಯಾನ. ಸೃಷ್ಟಿ ಸಂದೇಶವೂ ಅದೇ. ಚಲನೆಯೇ ಬದುಕು.

ಹಾಗಾಗಿ ಮಳೆಯಲ್ಲಿ ಮುದಗೊಳ್ಳುವಾಗೆಲ್ಲಾ ಮನಸು ಬಯಸುವುದು... ಎಲ್ಲಿಯದೋ ಮಾರುತಗಳು ನಮ್ಮೂರಿಗೆ ಹೊತ್ತುತರುವ ಮುಂಗಾರಿನ ಸೊಬಗು ಹೀಗೇ ಹಸಿಹಸಿಯಾಗಿರಲಿ. ಮಲೆನಾಡು, ಮಳೆಕಾಡು ಎಂದಿಗೂ ಹಸಿರಾಗಿಯೇ ಇರಲಿ. ಪ್ರಕೃತಿಪ್ರೀತಿಯ ಭವ್ಯ ಕುರುಹಾಗಿ ಮುಂಗಾರು ತುಂತುರು ಎಲ್ಲೆಡೆಯೂ ಹನಿಸುತಿರಲಿ...

## ವಾಚಕರ ವಾಣಿ

### ನಿತ್ಯವೂ ಒಬ್ಬೊಬ್ಬರು ಮುಖ್ಯಮಂತ್ರಿ ಅಭ್ಯರ್ಥಿ!

ನಿತ್ಯವೂ ಒಬ್ಬೊಬ್ಬ ರಾಜಕಾರಣಿ ತಾನೂ ಮುಖ್ಯಮಂತ್ರಿ ಆಕಾಂಕ್ಷಿ ಎಂದು ಇತ್ತೀಚೆಗೆ ಇಂಗಿತ ವ್ಯಕ್ತಪಡಿಸುತ್ತಿದ್ದಾರೆ. ಮಂತ್ರಿ, ಮುಖ್ಯಮಂತ್ರಿ ಸ್ಥಾನಗಳು ವ್ಯಕ್ತಿಯ ನಾಯಕತ್ವವನ್ನು ಗುರುತಿಸಿ ಶಾಸಕರು ವಹಿಸುವ ಜವಾಬ್ದಾರಿ ಅಷ್ಟೇ! ಆದರೆ, ಇಂಥ ಸ್ಥಾನಗಳಿಗೆ ಮುಗಿಬೀಳುವುದು ಒಪ್ಪುವಂಥದ್ದಲ್ಲ. ಮುಖ್ಯಮಂತ್ರಿ ಸ್ಥಾನ ಕುರಿತು ಚುನಾವಣೆಯ ನಂತರ ಚರ್ಚೆ ನಡೆಯುವುದು ಸೂಕ್ತ.

**ಡಾ. ಪ್ರದೀಪ ಕುಮಾರ ಸಿ.ಎಸ್.,** ಮಂಡ್ಯ

### ಬರಹಕ್ಕೆ ಪುಷ್ಟಿ ನೀಡದ ಕತೆ

ಕೋವಿಡ್– 19 ಕಾರಣದಿಂದ ರಾಜ್ಯದ ಜನರ ಬದುಕಿಗೆ ಅಕ್ಷರಶಃ ಬೆಂಕಿ ಬಿದ್ದಿದ್ದರೂ ನಮ್ಮ ರಾಜಕಾರಣಿಗಳು ಮಾತ್ರ ತಮಗೆ ಬೇಕಾದವರನ್ನು ರಕ್ಷಿಸುವ ಕಾರ್ಯದಲ್ಲಿ ತೊಡಗಿರುವ ಬಗ್ಗೆ ರವೀಂದ್ರ ಭಟ್ಟ ಅವರು ತಮ್ಮ ಅನುಸಂಧಾನ ಅಂಕಣದಲ್ಲಿ (ಪ್ರ.ವಾ., ಜೂನ್ 29) ವಸ್ತುನಿಷ್ಠವಾಗಿ, ಸ್ವಾರಸ್ಯಕರವಾಗಿ ಬರೆದಿದ್ದಾರೆ. ಬಹುಶಃ ಸುಲಭದಲ್ಲಿ ಸಂದರ್ಭವನ್ನು ವಿವರಿಸಲು ವಿದ್ಯಾರ್ಥಿಯೊಬ್ಬನ ಕತೆಯ ಉದಾಹರಣೆ ನೀಡಿದ್ದಾರೆ. ಇದರಲ್ಲಿ, ಗ್ರಂಥಾಲಯಕ್ಕೆ ಬೆಂಕಿ ಬಿದ್ದಾಗ ಗ್ರಂಥಾಲಯದ ಬಾಗಿಲ ಬಳಿಯ ಪುಸ್ತಕಗಳನ್ನು ರಕ್ಷಿಸಲು ಮುನ್ನುಗ್ಗುವ ಹುಡುಗನ ಸಾಮಾನ್ಯ ಜ್ಞಾನದ ಬಗ್ಗೆ ಮೆಚ್ಚುಗೆಯ ಕತೆ ಇದೆ. ಈ ಕತೆ ಅವರ ವಿಚಾರಗಳಿಗೆ ಹೆಚ್ಚಿನ ಪುಷ್ಟಿ ನೀಡುವ ಬದಲು ಸ್ವಲ್ಪ ಗೊಂದಲ ಹುಟ್ಟಿಸುವುದಲ್ಲದೆ, ಅವರಿಂದ ಹೆಚ್ಚಿನ ವಿವರಣೆ ಬೇಡುವಂತಿದೆ. ಅವರು ಅಂಕಣದಲ್ಲಿ ಮಂಡಿಸಿರುವ ಎಲ್ಲ ವಿಚಾರಗಳೂ ನೇರ ಹಾಗೂ ಸುಲಭವಾಗಿ ಅರ್ಥವಾಗುವ ಹಾಗಿರುವುದರಿಂದ, ಗ್ರಂಥಾಲಯಕ್ಕೆ ಬೆಂಕಿ ಬಿದ್ದ ಕತೆಯ ಅವಶ್ಯಕತೆ ಇರಲಿಲ್ಲ ಎಂಬುದು ನನ್ನ ಭಾವನೆ. ಏಕೆಂದರೆ, ಬೆಂಕಿ ಬಿದ್ದಾಗ ಮಾಡಬೇಕಾದ ಮುಖ್ಯ ಕೆಲಸಗಳೇನು ಎಂಬ ಬಗ್ಗೆ ಅನವಶ್ಯಕ ಚರ್ಚೆಗೆ ಇದು ಆಸ್ಪದ ನೀಡುತ್ತದೆ.

**ಡಾ. ಎಂ.ರವೀಂದ್ರ,** ಬೆಂಗಳೂರು

### ಬೆಟ್ಟಗುಡ್ಡ ಏರಿ, ಮನೆ ಮಾಡು ಸೇರಿ...

ವರ್ಕ್ ಫ್ರಂ ಹೋಂ ಉದ್ಯೋಗಿಗಳಿಗೆ ಹಾಗೂ ಶಾಲಾ ಕಾಲೇಜುಗಳ ಆನ್‌ಲೈನ್ ತರಗತಿಗಳಿಗೆ ಇಂಟರ್‌ನೆಟ್ ಸಂಪರ್ಕ ಈಗ ಅತ್ಯವಶ್ಯಕವಾಗಿದೆ. ಕರಾವಳಿ ಭಾಗದಲ್ಲಂತೂ ವಿದ್ಯಾರ್ಥಿಗಳು ನೆಟ್‌ವರ್ಕ್‌ಗಾಗಿ ಬೆಟ್ಟಗುಡ್ಡ ಏರುತ್ತಿದ್ದಾರೆ. ಬಯಲುಸೀಮೆಯಲ್ಲಿ ಮನೆ ಮೇಲಕ್ಕೆ ಹೋಗುತ್ತಿದ್ದಾರೆ. ನೆಟ್‌ವರ್ಕ್ ಎಂಬುದೀಗ ಮೂಲ ಸೌಲಭ್ಯಗಳಲ್ಲಿ ಒಂದಾಗಿದೆ. ಹೀಗಾಗಿ ಸರ್ಕಾರವು ರಾಜ್ಯದ ಎಲ್ಲ ಕಡೆ ಸುಲಭವಾಗಿ ಮನೆಯೊಳಗೆ ಮೊಬೈಲ್ ನೆಟ್‌ವರ್ಕ್ ಸಿಗುವಂತೆ ಅಗತ್ಯ ಕ್ರಮ ಕೈಗೊಳ್ಳಬೇಕಾದ ಅನಿವಾರ್ಯ ಇದೆ.

**ಲಕ್ಷ್ಮೀಕಾಂತರಾಜು ಎಂ.ಜಿ.,** ಮಠಗ್ರಾಮ, ಗುಬ್ಬಿ

### ಮುದ ನೀಡಿದ ಸುದ್ದಿ

ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ, ಅಡುಗೆ ಎಣ್ಣೆ, ಬೇಳೆಕಾಳುಗಳ ಬೆಲೆ ಏರಿಕೆ, ವಿದ್ಯುತ್ ದರ ಏರಿಕೆ, ಆಸ್ತಿ ತೆರಿಗೆ ಏರಿಕೆ... ಹೀಗೆ ಬೆಲೆ ಏರಿಕೆ ಬಗ್ಗೆಯೇ ಕಳೆದ ಕೆಲವಾರು ತಿಂಗಳುಗಳಿಂದಲೂ ಓದಿ, ಕೇಳಿ ಬೇಸತ್ತಿದ್ದ ಜನರಿಗೆ ‘ನಂದಿನಿ ತುಪ್ಪ, ಹಾಲಿನ ಪುಡಿ ದರ ಇಳಿಕೆ’ ಸುದ್ದಿ (ಪ್ರ.ವಾ., ಜೂನ್ 30) ಓದಿ ಮನಸ್ಸಿಗೆ ಅದೆಷ್ಟೋ ಆನಂದವಾಯಿತು.

ಅಂದಹಾಗೆ, ಈ ಕ್ರಮದಿಂದ ನಮ್ಮ ರೈತಾಪಿ ಜನರಿಗೆ ನೀಡುವ ಹಾಲು ಶೇಖರಣಾ ದರದಲ್ಲಿ ಮಾತ್ರ ಕಡಿತಗೊಳಿಸದಿರಿ. ಕರ್ನಾಟಕ ಹಾಲು ಮಹಾಮಂಡಳಿ ನಿಯಮಿತವು (ಕೆಎಂಎಫ್) ಗ್ರಾಹಕ, ಉತ್ಪಾದಕ ಮತ್ತು ಕಾರ್ಮಿಕ ಮೂವರನ್ನೂ ಸರಿದೂಗಿಸಿಕೊಂಡು ಹೋಗುತ್ತಾ, ತನ್ನ ಇತರ ಅನಗತ್ಯ ಆಡಳಿತಾತ್ಮಕ ವೆಚ್ಚಗಳನ್ನು ಕಡಿಮೆ ಮಾಡಿ ಜನಮನ್ನಣೆ ಗಳಿಸಲಿ. ಒಟ್ಟಾರೆ, ಬೆಲೆ ಏರಿಕೆಯ ಭರಾಟೆಯ ನಡುವೆ ಈ ದರ ಇಳಿಕೆ ಮನಸ್ಸಿಗೆ ಮುದ ನೀಡಿದ್ದಂತೂ ದಿಟ.

**ವಿಜಯ್ ಹೆಮ್ಮಿಗೆ,** ಮೈಸೂರು

### ಲಸಿಕೆ ಲಭ್ಯತೆ: ವಸ್ತುಸ್ಥಿತಿ ಹೀಗೂ ಇರಬಹುದು

ಇತ್ತೀಚಿನ ಕಾಲಮಾನದಲ್ಲಿ ಜನರಿಗೆ ಇದ್ದದ್ದನ್ನು ಇದ್ದಂತೆ ನೋಡುವ, ನಿಷ್ಪಕ್ಷಪಾತವಾಗಿ ಅಥವಾ ಸ್ವಲ್ಪ ವಿಚಾರ ಮಾಡಿ ಯೋಚಿಸುವ, ತಿಳಿದುಕೊಳ್ಳುವ ವ್ಯವಧಾನವೇ ಇಲ್ಲವೇನೋ ಎನಿಸುತ್ತಿದೆ. ಪ್ರತಿಯೊಂದು ಆಗುಹೋಗನ್ನೂ ತಿರುಚಿ ತಮಗೆ ಬೇಕಾದಂತೆ ವ್ಯಾಖ್ಯಾನಿಸುವ ಮನಃಸ್ಥಿತಿಯನ್ನು ಇಂಥ ಕಷ್ಟಕಾಲದಲ್ಲೂ ನಮ್ಮ ಜನ ಬಿಡಲಿಲ್ಲವಲ್ಲ ಎಂದು ವ್ಯಥೆ ಆಗುತ್ತದೆ. ಇದಕ್ಕೆ ಒಂದು ಉದಾಹರಣೆ: ಕೋವಿಡ್ ಲಸಿಕೆ ಪೂರೈಕೆಯ ನೀತಿಯಂತೆ, ರಾಜ್ಯ ಸರ್ಕಾರ ಗಳಿಗೆ ನಿಗದಿ ಮಾಡಲಾಗಿದ್ದ ಶೇ 25ರಷ್ಟು ಡೋಸ್ ಲಸಿಕೆಗಳು ಸೇರಿದಂತೆ ಶೇ 75ರಷ್ಟು ಡೋಸ್ ಲಸಿಕೆಗಳನ್ನು ಕೇಂದ್ರ ಸರ್ಕಾರ ಖರೀದಿಸುತ್ತದೆ ಮತ್ತು ಉಳಿದ ಶೇ 25ರಷ್ಟು ಡೋಸ್ ಲಸಿಕೆಗಳು ಖಾಸಗಿ ಆಸ್ಪತ್ರೆಗಳಿಗೆ ಲಭ್ಯವಾಗುತ್ತವೆ. ಆದರೆ ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆ ಭರಪೂರ ಲಭ್ಯವಾಗುತ್ತಿದ್ದರೆ ಸರ್ಕಾರಿ ಆಸ್ಪತ್ರೆಗಳಲ್ಲಿ ಲಸಿಕೆ ಕೊರತೆಯಿಂದ ಜನ ಹೈರಾಣಾಗಿದ್ದಾರೆ.

ಈ ಸ್ಥಿತಿಯನ್ನು, ಸರ್ಕಾರಿ ಕೋಟಾದ ಲಸಿಕೆಯನ್ನು ಖಾಸಗಿ ಆಸ್ಪತ್ರೆಗಳಲ್ಲಿ ಮಾರಿಕೊಳ್ಳುತ್ತಿದ್ದಾರೆ ಅಥವಾ ಪೂರೈಕೆದಾರರು ಹೆಚ್ಚಿನ ಬೆಲೆ ಸಿಗುವುದರಿಂದ ಖಾಸಗಿಯವರಿಗೇ ಹೆಚ್ಚು ಲಸಿಕೆ ಪೂರೈಸುತ್ತಿದ್ದಾರೆ ಎಂದು ಪ್ರಚಾರ ಮಾಡಲಾಗುತ್ತಿದೆ. ಒಂದು ಉದಾಹರಣೆ: ಸರ್ಕಾರಿ ಆಸ್ಪತ್ರೆಗೆ 10 ಡೋಸ್ ಲಸಿಕೆ ಹಾಗೂ ಖಾಸಗಿ ಆಸ್ಪತ್ರೆಗೆ 10 ಡೋಸ್ ಲಸಿಕೆ ಪೂರೈಕೆ ಆಗಿದೆ ಎಂದು ಇಟ್ಟುಕೊಳ್ಳೋಣ. ಖಾಸಗಿ ಆಸ್ಪತ್ರೆಯಲ್ಲಿ ದುಬಾರಿ ಬೆಲೆ ಕೊಟ್ಟು ಲಸಿಕೆ ತೆಗೆದುಕೊಳ್ಳಬೇಕು ಮತ್ತು ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿ ಸಿಗುತ್ತದೆ. ಹೀಗಾಗಿ, ಸರ್ಕಾರಿ ಆಸ್ಪತ್ರೆಗೆ 20 ಜನ ಹೋದರೆ, ಖಾಸಗಿ ಆಸ್ಪತ್ರೆಗೆ ಇಬ್ಬರಷ್ಟೇ ಹೋಗುತ್ತಾರೆ. ಆಗ ಇವರ ಪೈಕಿ ಸರ್ಕಾರಿ ಆಸ್ಪತ್ರೆಗೆ ಹೋದವರಲ್ಲಿ 10 ಜನರಿಗೆ ಲಸಿಕೆ ಸಿಗುವುದಿಲ್ಲ. ಆದರೆ ಖಾಸಗಿ ಆಸ್ಪತ್ರೆಯಲ್ಲಿ ಇನ್ನೂ 8 ಡೋಸ್ ಲಸಿಕೆ ಬಾಕಿ ಉಳಿದಿರುತ್ತದೆ. ವಸ್ತುಸ್ಥಿತಿ ಇದು ಆಗಿರಬಾರದೇಕೆ?

**ಟಿ.ವಿ.ಬಿ.ರಾಜನ್,** ಬೆಂಗಳೂರು

Printed and published by B A Ravi on behalf of The Printers (Mysore ) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

# ಸಾಂಕ್ರಾಮಿಕ ಸಂಕಷ್ಟದ ನಡುವೆ ವೈದ್ಯರಿಗೆ ನಮನ

ಭಾರತದ ಹೆಸರಾಂತ ವೈದ್ಯ ಬಿ.ಸಿ.ರಾಯ್ ಅವರ ಜನ್ಮದಿನ ಮತ್ತು ನಿಧನದ ದಿನವಾದ ಜುಲೈ 1 ಅನ್ನು ರಾಷ್ಟ್ರೀಯ ವೈದ್ಯರ ದಿನವನ್ನಾಗಿ ಆಚರಿಸಲಾಗುತ್ತದೆ. ವೈದ್ಯರ ಸೇವೆಯನ್ನು ಪ್ರಶಂಸಿಸುವುದು ಮತ್ತು ಆ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು ರಾಷ್ಟ್ರೀಯ ವೈದ್ಯರ ದಿನದ ಉದ್ದೇಶ.

1882ರ ಜುಲೈ 1ರಂದು ಪಟ್ನಾದಲ್ಲಿ ಜನಿಸಿದ ಬಿ.ಸಿ.ರಾಯ್ ಅವರು, ವೈದ್ಯಕೀಯ ಕ್ಷೇತ್ರದಲ್ಲಿ ಭಾರಿ ಸಾಧನೆ ಮಾಡಿದ್ದಾರೆ. ಭಾರತೀಯ ವೈದ್ಯಕೀಯ ಪರಿಷತ್ತಿನ ಸ್ಥಾಪನೆಯಲ್ಲಿ ಅವರ ಕೊಡುಗೆ ಅಪಾರ. ಸ್ವಾತಂತ್ರ್ಯ ಚಳುವಳಿಯಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದ ಅವರು, ಮಹಾತ್ಮಾ ಗಾಂಧಿ ಅವರ ಅಸಹಕಾರ ಚಳವಳಿಯಲ್ಲಿ ಭಾಗಿಯಾಗಿದ್ದರು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ನಾಯಕರಾಗಿದ್ದ ರಾಯ್ ಅವರು ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಿಯೂ ಸೇವೆ ಸಲ್ಲಿಸಿದ್ದಾರೆ.

ಭಾರತದ ವೈದ್ಯಕೀಯ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆಗಳನ್ನು ತರುವಲ್ಲಿ ಅವರು ಶ್ರಮಿಸಿದ್ದರು. ಸಕ್ರಿಯ ರಾಜಕಾರಣಿಯೂ ಆಗಿದ್ದ ಕಾರಣ ವೈದ್ಯಕೀಯ ಶಿಕ್ಷಣ ಮತ್ತು ಸೇವೆಗೆ ಸಂಬಂಧಿಸಿದಂತೆ ನೀತಿಗಳನ್ನು ರೂಪಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು. 1962ರ ಜುಲೈ 1ರಂದು ಅವರು ನಿಧನರಾದರು. ವೈದ್ಯಕೀಯ ಕ್ಷೇತ್ರಕ್ಕೆ ಅವರು ನೀಡಿದ ಕೊಡುಗೆಯ ಸ್ಮರಣಾರ್ಥ ಪ್ರತಿ ವರ್ಷ ಜುಲೈ 1 ಅನ್ನು ರಾಷ್ಟ್ರೀಯ ವೈದ್ಯರ ದಿನವನ್ನಾಗಿ ಆಚರಿಸುವುದಾಗಿ 1991ರಲ್ಲಿ ಕೇಂದ್ರ ಸರ್ಕಾರ ಘೋಷಿಸಿತು. ಆ ಪ್ರಕಾರ 1991ರ ಜುಲೈ 1ರಂದು ಮೊದಲ ರಾಷ್ಟ್ರೀಯ ವೈದ್ಯರ ದಿನವನ್ನು ಆಚರಿಸಲಾಯಿತು. ನಂತರ ಅದನ್ನು

ಮುಂದುವರಿಸಿಕೊಂಡು ಬರಲಾಗುತ್ತಿದೆ.

ಪ್ರತಿ ವರ್ಷ ಜುಲೈ 1ರಂದು ಸರ್ಕಾರಗಳು ಮತ್ತು ಹಲವು ಖಾಸಗಿ ಸಂಸ್ಥೆಗಳು ಹಾಗೂ ಸಂಘಟನೆಗಳು ರಾಷ್ಟ್ರೀಯ ವೈದ್ಯರ ದಿನವನ್ನು ಆಚರಿಸುತ್ತವೆ. ಅಂದು ದೇಶದಾದ್ಯಂತ ಹಲವೆಡೆ ಉಚಿತ ಆರೋಗ್ಯ ತಪಾಸಣಾ ಶಿಬಿರ, ರಕ್ತದಾನ ಶಿಬಿರ ನಡೆಸಲಾಗುತ್ತದೆ. ರೋಗಿಗಳು ತಮ್ಮ ವೈದ್ಯರಿಗೆ ಶುಭಾಶಯ ಕೋರುವ, ಉಡುಗೊರೆ ನೀಡುವ ಪದ್ಧತಿಯೂ ರೂಢಿಯಲ್ಲಿದೆ.

ಕೋವಿಡ್‌ನ ಕಾರಣದಿಂದ 2020ರ ಮತ್ತು 2021ರ ರಾಷ್ಟ್ರೀಯ ವೈದ್ಯರ ದಿನ ಹೆಚ್ಚು ಮಹತ್ವ ಪಡೆದುಕೊಂಡಿದೆ. ಕೋವಿಡ್ ಸಾಂಕ್ರಾಮಿಕದಲ್ಲಿ ಸಾವಿನ ಭಯ ಇದ್ದರೂ, ತಮ್ಮ ಮತ್ತು ತಮ್ಮ ಕುಟುಂಬದವರ ಸುರಕ್ಷತೆಯನ್ನು ಗಣನೆಗೆ ತೆಗೆದುಕೊಳ್ಳದೆ ವೈದ್ಯರು ದೇಶದ ಜನರಿಗಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಎಲ್ಲಾ ಅಪಾಯಗಳನ್ನು ಎದುರು ಹಾಕಿಕೊಂಡು ಜನರಿಗೆ ಚಿಕಿತ್ಸೆ ನೀಡಲು ವೈದ್ಯರು ದಿನವಿಡೀ ದುಡಿಯುತ್ತಿದ್ದಾರೆ.

## ರಕ್ಷಣೆಗೆ ಬೇಕು ಕಾನೂನಿನ ಬಲ

**ಜನರ** ಜೀವ ರಕ್ಷಿಸುವ ವೈದ್ಯರು, ರೋಗಿಗಳ ಸಂಬಂಧಿಕರು ಅಥವಾ ಸ್ನೇಹಿತರಿಂದ ಹಲ್ಲೆಗೆ ಒಳಗಾದ ಸಂದರ್ಭಗಳು ಸಾಕಷ್ಟು ಇವೆ. ತಮಗೆ ರಕ್ಷಣೆ ನೀಡುವಂತೆ ಒತ್ತಾಯಿಸಿ ವೈದ್ಯರು ಬೀದಿಗಿಳಿದು ಅನೇಕ ಬಾರಿ ಪ್ರತಿಭಟನೆ ನಡೆಸಿದ್ದಿದೆ. ಕೋವಿಡ್ ಸಂದರ್ಭದಲ್ಲೂ ಇಂಥ ಪ್ರಕರಣಗಳು ನಡೆದು, ನಾಲ್ಕಾರು ರಾಜ್ಯಗಳಲ್ಲಿ ವೈದ್ಯರು ಹಲವು ದಿನಗಳ ಕಾಲ ಪ್ರತಿಭಟನೆ ನಡೆಸಿದ್ದು ಇನ್ನೂ ಹಸಿರಾಗಿದೆ.

ಹಾಗೆಂದು ವೈದ್ಯರಿಗೆ ರಕ್ಷಣೆ ನೀಡಬಲ್ಲಂಥ ಕಾನೂನೇ ಇರಲಿಲ್ಲ ಎಂದೂ ಹೇಳುವಂತಿಲ್ಲ. ವೈದ್ಯರ ಮೇಲೆ ಹಲ್ಲೆ ನಡೆಸಿದವರಿಗೆ ಗರಿಷ್ಠ ₹50,000 ದಂಡ ಹಾಗೂ ಮೂರು ವರ್ಷಗಳ ಜೈಲು ವಿಧಿಸಬಹುದಾದಂಥ ಕಾನೂನನ್ನು ಅನೇಕ ರಾಜ್ಯಗಳು ರೂಪಿಸಿ ದಶಕವೇ ಕಳೆದಿದೆ. ಆದರೆ ಆ ಕಾನೂನು ಕಾಗದದಿಂದ ಹೊರಗೆ ಬಂದಿಲ್ಲ ಎಂಬುದು ವೈದ್ಯರ ದೂರು.

ಮೇಲ್ನೋಟಕ್ಕೆ ಇದು ಕಠಿಣ ಕಾನೂನಿನಂತೆ ಕಂಡರೂ, ಆರೋಪಿಯ ವಿರುದ್ಧ ಕ್ರಮ ಕೈಗೊಳ್ಳಲು ಐಪಿಸಿಯಲ್ಲಾಗಲಿ, ಸಿಆರ್‌ಪಿಸಿಯಲ್ಲಾಗಲಿ ಅವಕಾಶ ಇರುವುದಿಲ್ಲ. ಇದರಿಂದಾಗಿ ದೂರು ನೀಡಲು ಹೋದರೆ ಪೊಲೀಸರೇ ಅಸಹಾಯಕತೆ ವ್ಯಕ್ತಪಡಿಸುತ್ತಾರೆ. ವೈದ್ಯರಿಗೆ ರಕ್ಷಣೆ ನೀಡುವುದು ರಾಜ್ಯಗಳಿಗೆ ಸಂಬಂಧಿಸಿದ ವಿಷಯವಾಗಿರುವುದರಿಂದ ಕೇಂದ್ರ ಸರ್ಕಾರವು ಕಾನೂನು ರೂಪಿಸುವಂತೆಯೂ ಇಲ್ಲ ಎಂದು ವೈದ್ಯರು ಹೇಳುತ್ತಾರೆ. ಆ ಕಾರಣಕ್ಕೇ ವೈದ್ಯರ ರಕ್ಷಣೆಗೆ ಕೇಂದ್ರವೇ ಕಾನೂನು ರೂಪಿಸುವಂತಾಗಬೇಕು ಎಂದು ಭಾರತೀಯ ವೈದ್ಯಕೀಯ ಸಂಘ (ಐಎಂಎ) ಒತ್ತಾಯಸುತ್ತಿದೆ.

ಭಾರತೀಯ ವೈದ್ಯಕೀಯ ಸಂಘವು 2017ರಲ್ಲಿ ಬಿಡುಗಡೆ ಮಾಡಿದ್ದ ಅಧ್ಯಯನ ವರದಿಯೊಂದರ ಪ್ರಕಾರ, ದೇಶದಲ್ಲಿ ಶೇ 75ರಷ್ಟು ವೈದ್ಯರು ಒಂದಲ್ಲ ಒಂದು ರೀತಿಯಲ್ಲಿ ಹಿಂಸೆ ಅನುಭವಿಸಿದ್ದಾರೆ. ‘ಅದು ದೈಹಿಕವೇ ಆಗಬೇಕೆಂದಿಲ್ಲ. ಪ್ರತಿನಿತ್ಯವೂ ನಾವು ರೋಗಿಗಳ ಕಡೆಯವರಿಂದ ನಿಂದನೆ, ಬೈಗುಳಗಳನ್ನು ಕೇಳಿಸಿಕೊಳ್ಳಬೇಕಾಗಿದೆ. ಅನೇಕ ಬಾರಿ ಬೇರೆ ದಾರಿ ಕಾಣದೆ ಪೊಲೀಸರನ್ನು ಕರೆಯಿಸಬೇಕಾಗುತ್ತದೆ’ ಎಂದು ವೈದ್ಯರು ಹೇಳುತ್ತಾರೆ.

ದೇಶದ ಯಾವ ಆಸ್ಪತ್ರೆಯಲ್ಲೂ ರೋಗಿಗಳ ಸಂಖ್ಯೆಗೆ ಅನುಗುಣವಾಗಿ ವೈದ್ಯರಿಲ್ಲ. ಇದರಿಂದಾಗಿ ಅನೇಕ ಬಾರಿ ಊಟ–ತಿಂಡಿ ಇಲ್ಲದೆಯೇ ಕೆಲಸ ಮಾಡಬೇಕಾಗತ್ತದೆ. ಚಿಕಿತ್ಸೆ ಸ್ವಲ್ಪ ತಡವಾದರೂ ರೋಗಿಯ ಕಡೆಯವರು ಹಲ್ಲೆಗೆ ಮುಂದಾಗುತ್ತಾರೆ. ಗ್ರಾಮೀಣ ಪ್ರದೇಶದ ವೈದ್ಯರು ಹೆಚ್ಚಾಗಿ ಇಂಥ ಹಲ್ಲೆ ಅನುಭವಿಸಬೇಕಾಗುತ್ತದೆ ಎಂದು ವೈದ್ಯರು ಹೇಳುತ್ತಾರೆ.

### ಕೋವಿಡ್ ಸಮಯದಲ್ಲಿ ಕಾನೂನು

**ಕೋವಿಡ್** ಸಂದರ್ಭದಲ್ಲಿ ವೈದ್ಯರ ಮೇಲೆ ಹಲ್ಲೆಯ ಪ್ರಕರಣಗಳು ಹೆಚ್ಚಾದಾಗ, ಐಎಂಎ ಒತ್ತಾಯದ ಮೇರೆಗೆ ಕೇಂದ್ರವು ಅವರ ರಕ್ಷಣೆಗೆ ವಿಶೇಷ ಕಾನೂನು ರೂಪಿಸಿತು. 2020ರ ಎಪ್ರಿಲ್‌ನಲ್ಲಿ ಆ ಕುರಿತ ಸುಗ್ರೀವಾಜ್ಞೆಯೊಂದನ್ನು ಹೊರಡಿಸಿತು.

ಸುಮಾರು 123 ವರ್ಷಗಳಷ್ಟು ಹಳೆಯದಾದ (1897ರ) ಸಾಂಕ್ರಾಮಿಕ ರೋಗಗಳ ಕಾಯ್ದೆಗೆ ತಿದ್ದುಪಡಿ ಮಾಡಿ, ವೈದ್ಯರ ಮೇಲೆ ಹಲ್ಲೆ ನಡೆಸುವವರ ವಿರುದ್ಧ ಕ್ರಮ ಕೈಗೊಳ್ಳಲು ಅಲ್ಲಿ ಅವಕಾಶ ನೀಡಲಾಯಿತು.

ಹೊಸ ಕಾನೂನಿನ ಪ್ರಕಾರ ಈಗ ವೈದ್ಯರ ಮೇಲಿನ ಹಲ್ಲೆಯು ಜಾಮೀನುರಹಿತ ಅಪರಾಧ ಎನಿಸಿದೆ. ದೂರು ದಾಖಲಾಗಿ 30 ದಿನದೊಳಗೆ ತನಿಖೆ ನಡೆಸಬೇಕಾಗುತ್ತದೆ. ಅಪರಾಧಿಗೆ ಕನಿಷ್ಠ 3 ತಿಂಗಳು ಮತ್ತು ಗರಿಷ್ಠ ಐದು ವರ್ಷಗಳ ಜೈಲು ಶಿಕ್ಷೆ ಹಾಗೂ ಕನಿಷ್ಠ ₹50,000ದಿಂದ ಗರಿಷ್ಠ ₹2 ಲಕ್ಷದವರೆಗೆ ದಂಡ ವಿಧಿಸಲು ಅವಕಾಶ ಇದೆ. ವೈದ್ಯರಿಗೆ ಗಂಭೀರ ಸ್ವರೂಪದ ಗಾಯಗಳಾದರೆ ಅಪರಾಧಿಗೆ ಗರಿಷ್ಠ 7 ವರ್ಷ ಜೈಲು ಮತ್ತು ₹5ಲಕ್ಷದ ವರೆಗೆ ದಂಡ ವಿಧಿಸಲೂ ಅವಕಾಶ ಇದೆ. ಆಸ್ತಿಗೆ ಹಾನಿ ಉಂಟುಮಾಡಿದರೆ, ಅದರ ಮಾರುಕಟ್ಟೆ ಮೌಲ್ಯದ ಎರಡರಷ್ಟು ದಂಡ ವಿಧಿಸಲೂ ಅವಕಾಶ ಕಲ್ಪಿಸಲಾಗಿದೆ. ಈ ಕಾಯ್ದೆಗೆ 2020ರ ಸೆಪ್ಟೆಂಬರ್‌ನಲ್ಲಿ ರಾಜ್ಯಸಭೆಯೂ ಅನುಮೋದನೆ ನೀಡಿದೆ.

## ಪಕ್ಷದಲ್ಲಿ ಹುದ್ದೆ ಅಥವಾ ಸಚಿವ ಸ್ಥಾನಕ್ಕೆ ಬೇಡಿಕೆ

# ಪ್ರಿಯಾಂಕಾ–ರಾಹುಲ್ ಭೇಟಿಯಾದ ಸಿಧು

ಪ್ರಜಾವಾಣಿ ವಾರ್ತೆ

**ನವದೆಹಲಿ:** ಕಾಂಗ್ರೆಸ್ ಮುಖಂಡ ನವಜೋತ್‌ಸಿಂಗ್ ಸಿಧು ಅವರು ಪಕ್ಷದ ಮುಖಂಡರಾದ ರಾಹುಲ್ ಗಾಂಧಿ ಹಾಗೂ ಪ್ರಿಯಾಂಕಾ ಗಾಂಧಿ ಅವರನ್ನು ಬುಧವಾರ ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ವಿಧಾನಸಭಾ ಚುನಾವಣೆಗೂ ಮುನ್ನ ಪಂಜಾಬ್‌ನಲ್ಲಿ ಕಾಂಗ್ರೆಸ್ ಪಕ್ಷವನ್ನು ಪುನಾರಚಿಸುವ ಚಿಂತನೆ ನಡೆದಿದ್ದು, ಅದರಲ್ಲಿ ತಮ್ಮ ಸ್ಥಾನದ ಬಗ್ಗೆ ಸಿಧು ಅವರು ಚರ್ಚಿಸಿದ್ದಾರೆ ಎಂದು ತಿಳಿದುಬಂದಿದೆ.

ಪಂಜಾಬ್‌ನ ಉಪಮುಖ್ಯಮಂತ್ರಿಯಾಗಿದ್ದ ಸಿಧು, ತಮಗೆ ನೀಡಿರುವ ಖಾತೆಯ ವಿಚಾರದಲ್ಲಿ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಜತೆಗೆ ಮುನಿಸಿಕೊಂಡು ಹುದ್ದೆಗೆ ರಾಜೀನಾಮೆ ಸಲ್ಲಿಸಿದ್ದರು. ಈಗ ಪಕ್ಷದಲ್ಲಿ ಗೌರವಯುತ ಸ್ಥಾನ ಅಥವಾ ಸಚಿವ ಸ್ಥಾನಕ್ಕಾಗಿ ಪಟ್ಟುಹಿಡಿದಿದ್ದಾರೆ ಎನ್ನಲಾಗಿದೆ.

ಪ್ರಿಯಾಂಕಾ ಜತೆಗೆ ಮಾತುಕತೆಯ ನಂತರ ಅವರ ಜತೆಗೆ ನಿಂತು ತೆಗೆಸಿದ ಚಿತ್ರವನ್ನು ಬುಧವಾರ ಟ್ವಿಟರ್‌ನಲ್ಲಿ ಪೋಸ್ಟ್ ಮಾಡಿರುವ ಸಿಧು, ‘ಪ್ರಿಯಾಂಕಾ ಅವರ ಜತೆಗೆ ಸುದೀರ್ಘ ಮಾತುಕತೆ ನಡೆಸಿದ್ದೇನೆ. ಇನ್ನು ರಾಹುಲ್ ಅವರನ್ನು ಭೇಟಿಯಾಗುವೆ’ ಎಂದು ಬರೆದಿದ್ದರು. ಆದರೆ ಸಿಧು ಜತೆಗೆ ಭೇಟಿ ನಿಗದಿಯಾಗಿಲ್ಲ ಎಂದು ರಾಹುಲ್, ಆ ನಂತರ ಹೇಳಿದ್ದರು. ಆದರೂ ಸಂಜೆಯ ವೇಳೆಗೆ ಸಿಧು ಅವರು ರಾಹುಲ್ ನಿವಾಸಕ್ಕೆ ಬಂದಿದ್ದರು.

ಮುಂಬರುವ ಲೋಕಸಭಾ ಚುನಾವಣೆಗೂ ಮುನ್ನ ಪಕ್ಷದಲ್ಲಿ ಒಗ್ಗಟ್ಟು ಪ್ರದರ್ಶಿಸಲು ಕಾಂಗ್ರೆಸ್‌ನ ಕೇಂದ್ರದ ನಾಯಕತ್ವವು ಪ್ರಯತ್ನಿಸುತ್ತಿದ್ದರೆ, ಸಿಧು ಅವರು ಅಮರಿಂದರ್ ವಿರುದ್ಧ ಬಂಡಾಯವೆದ್ದು ವಾಗ್ದಾಳಿ ನಡೆಸುತ್ತಿದ್ದಾರೆ. ಇದು ಪಕ್ಷಕ್ಕೆ ಸಮಸ್ಯೆಯಾಗಿ ಪರಿಣಮಿಸಿದೆ. ‘ಸಿಧು ವರ್ತನೆಯು ಸಂಪೂರ್ಣ ಅಶಿಸ್ತಿನದ್ದು’ ಎಂದು ಅಮರಿಂದರ್ ಟೀಕಿಸಿದ್ದಾರೆ.

ಸಿಧು– ಸಿಂಗ್ ನಡುವಿನ ಸಂಘರ್ಷಕ್ಕೆ ಪರಿಹಾರ ಕಂಡುಕೊಳ್ಳಲು ಮಲ್ಲಿಕಾರ್ಜುನ ಖರ್ಗೆ ನೇತೃತ್ವದ ಮೂವರು ಸದಸ್ಯರ ಸಮಿತಿಯನ್ನು ಕಾಂಗ್ರೆಸ್ ಹೈಕಮಾಂಡ್ ರಚಿಸಿದೆ. ಇಬ್ಬರೂ ನಾಯಕರು ಈಗಾಗಲೇ ಈ ಸಮಿತಿಯ ಮುಂದೆ ಹಾಜರಾಗಿ ತಮ್ಮ ವಾದವನ್ನು ಮಂಡಿಸಿದ್ದಾರೆ.

ಪ್ರಿಯಾಂಕಾ ಭೇಟಿಯ ನಂತರ ಸಿಧು ಅವರು ತಮ್ಮ ಟ್ವಿಟರ್ ಖಾತೆಯಲ್ಲಿ ಪೋಸ್ಟ್ ಮಾಡಿರುವ ಚಿತ್ರ

# ಆರೋಗ್ಯ ಸೇವೆಗೆ ಶ್ಲಾಘನೆಯ ಸುರಿಮಳೆ

## ವೈದ್ಯರ ಕಾಳಜಿ ಅಪಾರ

**ಕೊರೊನಾ** ಸೋಂಕು ವ್ಯಾಪಿಸಿದ ಕಾಲದಲ್ಲಿ ವೈದ್ಯರು ಹಗಲಿರುಳು ಶ್ರಮಿಸಿದರು. ಸೋಂಕಿತರನ್ನು ಅತ್ಯಂತ ಕಾಳಜಿಪೂರ್ವಕವಾಗಿ ಆರೈಕೆ ಮಾಡಿದರು. ಇಡೀ ಜಗತ್ತನ್ನೇ ಕಂಗೆಡಿಸಿರುವ ಈ ಸೋಂಕು ಎದುರಿಸುವಲ್ಲಿ ವೈದ್ಯರ ಪಾತ್ರ ಮಹತ್ವದ್ದಾಗಿದೆ. ಅತ್ಯಂತ ಕಷ್ಟದ ಕಾಲದಲ್ಲಿ ದುಡಿದ ವೈದ್ಯರಿಗೆ ಸನ್ಮಾನ ಆಗಬೇಕು. ಅವರ ವೇತನವನ್ನು ಇನ್ನಷ್ಟು ಹೆಚ್ಚಿಸಿ, ಅವರ ವಿದ್ವತ್ ಹಾಗೂ ಸೇವೆಯನ್ನು ಮತ್ತಷ್ಟು ಉಪಯೋಗ ಮಾಡಿಕೊಳ್ಳಬೇಕಿದೆ.

**ಡಾ. ಚೆನ್ನವೀರ ಕಣವಿ,** ಹಿರಿಯ ಕವಿ

## ಮಾನವೀಯ ಸೇವೆ



**ವೈದ್ಯ ವೃತ್ತಿ** ಅತ್ಯಂತ ಪವಿತ್ರವಾದುದು. ಪ್ರೀತಿ, ತ್ಯಾಗ ಮತ್ತು ಸೇವಾ ಮನೋಭಾವದಿಂದ ಚಿಕಿತ್ಸೆ ನೀಡಿ, ರೋಗಿಗಳ ಭಯ, ಆತಂಕ ನಿವಾರಿಸಿ, ಅವರು ಪೂರ್ಣ ಆರೋಗ್ಯ ಭಾಗ್ಯವನ್ನು ಹೊಂದುವಂತೆ ಮಾಡುವುದೇ ವೈದ್ಯರ ಗುರಿಯಾಗಿದೆ. ಕೋವಿಡ್ ಸಂಕಷ್ಟದ ದಿನಗಳಲ್ಲಂತೂ ಎಲ್ಲ ವೈದ್ಯರು ತಮ್ಮ ಮನೆ ಹಾಗೂ ಕುಟುಂಬದ ಸಂಪರ್ಕವೂ ಇಲ್ಲದೆ ಆಹಾರ, ವಿಶ್ರಾಂತಿ ಮತ್ತು ಸಮಯದ ಮಿತಿಯನ್ನೂ ಮರೆತು ಮಾನವೀಯತೆಯಿಂದ ರೋಗಿಗಳ ಸೇವೆ ಮಾಡಿದ್ದಾರೆ.

**ಡಿ.ವೀರೇಂದ್ರ ಹೆಗ್ಗಡೆ,** ಧರ್ಮಸ್ಥಳದ ಧರ್ಮಾಧಿಕಾರಿ

## ನಿತ್ಯವೂ ವೈದ್ಯರ ದಿನವೇ...

**ಪ್ರತಿಯೊಬ್ಬ** ವ್ಯಕ್ತಿಯ ಶರೀರದೊಳಗಿನ ದಿವ್ಯತೆ ಕೊಂಡಾಡುವ ಸಾಮರ್ಥ್ಯ, ಈ ಸೌಭಾಗ್ಯದ ಸತ್ಕಾರ್ಯ ಮಾಡುವ ಅವಕಾಶ ವೈದ್ಯರಿಗಷ್ಟೇ ಲಭ್ಯ. ನಿತ್ಯವೂ ಇದನ್ನು ಸ್ಮರಿಸಿಕೊಂಡು ವೈದ್ಯರು ಸೇವೆಯಲ್ಲಿ ತಲ್ಲೀನರಾಗಬೇಕು. ರೋಗಿಗಳಿಗೆ ಚಿಕಿತ್ಸೆ ನೀಡಬೇಕು. ನಮ್ಮ ಸಮಾಜವು ಸಾಂಕೇತಿಕವಾಗಿ ವೈದ್ಯರ ದಿನ ಆಚರಿಸುವುದು, ವೈದ್ಯ ಸಮೂಹವನ್ನು ಗೌರವಿಸಿ–ಅವರ ಸೇವೆ ಕೊಂಡಾಡುವುದು ಜುಲೈ 1ರಂದು. ಆದರೆ, ವೈದ್ಯ ಸಮೂಹಕ್ಕೆ ಪ್ರತಿ ದಿನವೂ ವೈದ್ಯರ ದಿನವೇ. ನಿತ್ಯವೂ ತಮ್ಮ ಪಾಲಿನ ಪವಿತ್ರ ಜವಾಬ್ದಾರಿ ನಿಭಾಯಿಸಬೇಕಾದ ಹೊಣೆಗಾರಿಕೆ ಅವರದು.

**ಡಾ.ಆರ್.ಬಾಲಸುಬ್ರಹ್ಮಣ್ಯ,** ಮೈಸೂರು

## ವೈದ್ಯರ ಸಂತತಿ ಸಾವಿರವಾಗಲಿ

**ಕೋವಿಡ್** ನಿಯಂತ್ರಣದಲ್ಲಿ ವೈದ್ಯರ ಪಾತ್ರ ಅನನ್ಯ. ಅವರ ಮಹೋನ್ನತ ಕಾರ್ಯವನ್ನು ಪ್ರಶಂಸಿಸುವುದಕ್ಕೆ ಜನರ ಕೃತಜ್ಞತೆಯ ಕಣ್ಣೀರನ್ನು ಬಿಟ್ಟರೆ ಬಹುಶಃ ನಿಘಂಟಿನ ಯಾವ ಪದಗಳಿಗೂ ಸಾಧ್ಯವಿಲ್ಲವೇನೋ. ವೈದ್ಯರ ಸಂತತಿ ಸಾವಿರವಾಗಲಿ. ಭಗವಂತ ಸದಾ ಅವರ ಪಾಲಿಗಿರಲಿ. ಬೈಬಲ್‌ನಲ್ಲಿ ಯೇಸುಕ್ರಿಸ್ತರನ್ನು ಮಹೋನ್ನತ ವೈದ್ಯ ಎಂದು ಕರೆಯಲಾಗಿದೆ. ತಮ್ಮ ಕಾಲಘಟ್ಟದಲ್ಲಿ ಕುಂಟರು, ಕಿವುಡರು, ಮೂಕರು, ಕುಷ್ಠರೋಗಿಗಳಾದಿಯಾಗಿ ರೋಗಗ್ರಸ್ಥರಿಗೆ ಸೌಖ್ಯವನ್ನು ನೀಡಿದ್ದು ಕ್ರಿಸ್ತ. ಅವರಂತೆಯೇ ನಮ್ಮ ವೈದ್ಯರು ಹಗಲು ಇರುಳುಗಳೆನ್ನದೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಎಲ್ಲ ರೋಗಗಳ ವಿರುದ್ಧ ಹೋರಾಡಿದ, ಹೋರಾಡಿ ಮಡಿದ, ಹೋರಾಡುತ್ತಲೇ ಇರುವ ಸಮಸ್ತ ವೈದ್ಯರ ಅನನ್ಯ ಅನುಪಮ ಸೇವೆಯನ್ನು ಸ್ಮರಿಸುವ ಹಾಗೂ ಕೊಂಡಾಡುವ ಸುದಿನ ಈ ವೈದ್ಯರ ದಿನ. ಜನರ ಜೀವ ಉಳಿಸುವ ಕಾರ್ಯದಲ್ಲಿ ಸಾಕಷ್ಟು ವೈದ್ಯರು ಅಸುನೀಗಿದರೂ ಧೃತಿಗೆಡದೆ, ಜನಸೇವೆಯೇ ಜನಾರ್ದನ ಸೇವೆ ಎಂಬ ದಿಸೆಯಲ್ಲಿ ಕಾರ್ಯನಿರ್ವಹಿಸಿದ ನಮ್ಮ ವೈದ್ಯರುಗಳು ನಮ್ಮ ಹೆಮ್ಮೆ.

**ಡಾ. ಪೀಟರ್ ಮಚಾಡೊ,** ಬೆಂಗಳೂರಿನ ಆರ್ಚ್‌ಬಿಷಪ್

## ಕಣ್ಣಿಗೆ ಕಾಣುವ ದೇವರು

**ಇಂದು** ವೈದ್ಯರ ದಿನ. ಜನರ ಅಮೂಲ್ಯ ಜೀವ ರಕ್ಷಿಸುವ ವೈದ್ಯರನ್ನು ಗೌರವಿಸುವ ದಿನ. ಹಾಗಾಗಿ ಈ ದಿನವಷ್ಟೇ ಅಲ್ಲದೆ ಪ್ರತಿದಿನವೂ ವೈದ್ಯರನ್ನು ಕೃತಜ್ಞತೆಯಿಂದ ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯ. ನಮ್ಮ ರಾಜ್ಯ- ದೇಶ ಅಷ್ಟೇ ಅಲ್ಲ. ಇಡೀ ಜಗತ್ತಿನಲ್ಲಿ ವೈದ್ಯರು ಜನರ ಆರೋಗ್ಯ ಕಾಪಾಡಲು ದೊಡ್ಡ ಹೋರಾಟವನ್ನೇ ನಡೆಸುತ್ತಿದ್ದಾರೆ. ಕೋವಿಡ್ ಸಂಕಷ್ಟದ ನಡುವೆ ವೈದ್ಯರು ಜೀವ ಒತ್ತೆ ಇಟ್ಟು ಕರ್ತವ್ಯ ನಿರ್ವಹಣೆ ಮಾಡುತ್ತಿದ್ದಾರೆ. ‘ದೇವರಿಲ್ಲದ ದೇವಾಲಯ, ವೈದ್ಯರಿಲ್ಲದ ಸಮಾಜ’ವನ್ನು ಊಹಿಸಿಕೊಳ್ಳುವುದೂ ಕಷ್ಟ. ಕಣ್ಣಿಗೆ ಕಾಣದ ಭಗವಂತ ನಮ್ಮೆಲ್ಲರನ್ನೂ ಮುನ್ನಡೆಸುತ್ತಿದ್ದರೆ, ಕಣ್ಣಿಗೆ ಕಾಣುವ ದೇವರಾದ ವೈದ್ಯರು ಸದಾ ಕಾಲ ನಮ್ಮ ಆರೋಗ್ಯ- ಆರೈಕೆ ಮಾಡುತ್ತಾ ಕಾಪಾಡುತ್ತಿದ್ದಾರೆ. ಮಾನವೀಯತೆಯನ್ನೇ ಮೈವೆತ್ತ ವೈದ್ಯರಿಗೆ ನಮಿಸೋಣ.

**ಡಾ.ಸಿ.ಎನ್. ಅಶ್ವತ್ಥನಾರಾಯಣ,** ಉಪ ಮುಖ್ಯಮಂತ್ರಿ

## ಜೀವ ರಕ್ಷಕರಿಗೆ ನಮಿಸೋಣ

**ಸದಾಕಾಲ** ಜನರ ಆರೋಗ್ಯವನ್ನು ಕಾಪಾಡುವ ಸೇವಕರು ಮತ್ತು ಆರೋಗ್ಯ ವಲಯದ ಪ್ರಮುಖ ಸ್ತಂಭಗಳು ಎಂದರೆ ವೈದ್ಯರು. ಹಗಲು ರಾತ್ರಿ ಎನ್ನದೇ ರೋಗಿಗಳ ಜೀವ ಉಳಿಸುವ ಜೀವ ರಕ್ಷಕರು ವೈದ್ಯರು. ಕೋವಿಡ್ ಸಾಂಕ್ರಾಮಿಕ ಆರಂಭವಾದ ಬಳಿಕ ವೈದ್ಯರ ಕಾರ್ಯದ ಒತ್ತಡ ಹೆಚ್ಚಿದೆ. ಕೊರೊನಾ ನಿರ್ಮೂಲನೆಯಲ್ಲಿ ತೊಡಗಿದ ಅನೇಕ ವೈದ್ಯರು ಜೀವ ಕಳೆದುಕೊಂಡಿದ್ದಾರೆ. ಇಂತಹ ಹುತಾತ್ಮ ವೈದ್ಯರಿಗೆ ಈ ದಿನದಂದು ನಮಿಸೋಣ. ಕೋವಿಡ್ ಸುರಕ್ಷತಾ ಕ್ರಮಗಳನ್ನು ಪಾಲಿಸಿ ಹಾಗೂ ಲಸಿಕೆ ಪಡೆದು ಆ ಮೂಲಕವೇ ವೈದ್ಯರ ಕಾರ್ಯದ ಒತ್ತಡ ಕಡಿಮೆ ಮಾಡೋಣ. ಕೊರೊನಾ ಯೋಧರಾಗಿ ಕೆಲಸ ಮಾಡುತ್ತಿರುವ ನಮ್ಮ ವೈದ್ಯ ಸಮೂಹಕ್ಕೆ ಕೃತಜ್ಞತೆ ಸಲ್ಲಿಸೋಣ.

**ಡಾ.ಕೆ.ಸುಧಾಕರ್,** ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವರು

## ಜಗತ್ತಿನ ಸಾರ್ವಕಾಲಿಕ ಬಂಧು!

**ಸಾಂಕ್ರಮಿಕ** ರೋಗ ನಮ್ಮನ್ನು ಕಾಡಿದಾಗ ಹತ್ತಿರದವರು ಇರಲಿ ಹೆತ್ತವರೂ ಕೂಡ ನಮ್ಮ ಸಮೀಪ ಸುಳಿಯುವುದಿಲ್ಲ ಎಂಬುದನ್ನು ಕೋವಿಡ್-19 ಸ್ಪಷ್ಟವಾಗಿ ತೋರಿಸಿಕೊಟ್ಟಿದೆ. ರೋಗಿಗಳ ಸಮೀಪದಲ್ಲೇ ನಿಂತು, ಹಗಲು-ಇರುಳು, ಮನೆ ಮಕ್ಕಳನ್ನು ಮರೆತು ವಾರಗಟ್ಟಲೆ ಆಸ್ಪತ್ರೆಯಲ್ಲಿ ಉಳಿದು ವ್ರತಬದ್ಧರಾಗಿ, ಸೇವೆಗೈದು ನಮ್ಮ ಪ್ರಾಣಗಳನ್ನು ಉಳಿಸಿಕೊಟ್ಟರಲ್ಲ ವೈದ್ಯರು! ಇವರನ್ನು ನಡೆದಾಡುವ ದೇವರೆನ್ನದೇ ಮತ್ತೇನೆನ್ನಬೇಕು! ಆದ್ದರಿಂದ ವೈದ್ಯನನ್ನು ‘ವೈದ್ಯೋ ನಾರಾಯಣ ಹರಿಃ’ ಎಂದು ಭಾರತೀಯ ಸಂಸ್ಕೃತಿ ಶತಶತಮಾನಗಳಷ್ಟು ಹಿಂದೆಯೇ ಮುಕ್ತ ಕಂಠದಿಂದ ಶ್ಲಾಘಿಸಿದೆ. ಆ ನಾರಾಯಣ, ಆ ಹರಿ ಜಗತ್ತಿಗೆ ಸಾರ್ವಕಾಲಿಕ ಬಂಧು! ಅವನು ಸುಖವಾಗಿರಲಿ!

**ಸ್ವಾಮಿ ನಿರ್ಭಯಾನಂದ,** ಅಧ್ಯಕ್ಷರು, ರಾಮಕೃಷ್ಣ ವಿವೇಕಾನಂದ ಆಶ್ರಮ, ವಿಜಯಪುರ–ಗದಗ

## ನಾರುಬೇರಿನ ವೈದ್ಯರ ಮರೆಯಲುಂಟೆ?

**ಒಮ್ಮೆ** ತೆಂಗಿನ ನಾರು ಗಂಟಲಲ್ಲಿ ಸಿಲುಕಿಕೊಂಡು ಒದ್ದಾಡುತ್ತಾ ಇನ್ನೇನು ಡಾಕ್ಟರ್ ಬಳಿ ಓಡಬೇಕು ಎನ್ನುವ ಸ್ಥಿತಿಯಲ್ಲಿ ನನ್ನ ಅಜ್ಜಿ ಎರಡು ಚಮಚ ಒಣ ಅವಲಕ್ಕಿ ತಿನ್ನಿಸಿ ಕ್ಷಣ ಮಾತ್ರದಲ್ಲಿ ನನ್ನ ಕಷ್ಟ ಪರಿಹರಿಸಿದ್ದಳು! ಒಮ್ಮೆ ಕೋಳಿಮೊಟ್ಟೆ ಪೆಪ್ಪರಮೆಂಟ್ ಗಂಟಲಲ್ಲಿ ಸಿಲುಕಿ ತೇಲುಗಣ್ಣು ಮೇಲುಗಣ್ಣಾದಾಗ ನನ್ನ ತಾಯಿ ಬೆನ್ನಿಗೆ ಗುದ್ದಿ ಕ್ಷಣಮಾತ್ರದಲ್ಲಿ ಉಸಿರು ಪಡೆದು ಬಚಾವಾಗಿದ್ದೆನು! ಬಾಲ್ಯದಲ್ಲಿ ಚಂದಮಾಮದಲ್ಲಿ ಸರ್ಪ ಯಜ್ಞದ ಕತೆ ಓದಿ ಮನಸಿಗೆ ತೆಗೆದುಕೊಂಡು ರಾತ್ರಿಯೆಲ್ಲಾ ಭಯದಿಂದ ಚೀರುತ್ತಿದ್ದೆನಂತೆ. ಆಗ ಪಕ್ಕದ ಮನೆಯ ಮಂತ್ರದ ಭಾಗೀರಥಿ ಕಲ್ಲುಸಕ್ಕರೆ ನೀಡಿ ಮೈದಡವಿ ‘ಇವತ್ತಿನಿಂದ ನಿನಗೆ ಕನಸಿನಲ್ಲಿ ಹಾವು ಕಾಣಿಸುವುದಿಲ್ಲ’ ಎಂದದ್ದೇ ಕೆಟ್ಟ ಕನಸು ಬೀಳುವುದು ನಿಂತೇ ಬಿಟ್ಟಿತಲ್ಲ!

ನಾನು ಸದಾ ನಾರುಬೇರಿನ ವೈದ್ಯರ ಪಕ್ಷಪಾತಿ. ಹಲ್ಲುನೋವಿಗೆ, ಕೀಲುನೋವಿಗೆ ಅಲೋಪಥಿ. ನೋವು ನೀಗಿದ ಈ ಮಂದಿಯನ್ನು ಮರೆಯಲುಂಟೆ?

**ಸವಿತಾ ನಾಗಭೂಷಣ**

## ಬೆರಗಿನ ಬೆಳಕು

ಗುರುರಾಜ ಕರಜಗಿ

### ನಗು – ಅಳು

ನಗುವೊಂದು ರಸಪಾಕವಳುವೊಂದು ರಸಪಾಕ |
ನಗುವಾತ್ಮಪರಿಮಳವ ಪಸರಿಸುವ ಕುಸುಮ ||
ದುಗುಡವಾತ್ಮವ ಕಡೆದು ಸತ್ತ್ವವೆತ್ತುವ ಮಂತು |
ಬಗೆದೆರಡನುಂ ಭುಜಿಸು – ಮಂಕುತಿಮ್ಮ || 434 ||

**ಪದ-ಅರ್ಥ:** ನಗುವಾತ್ಮ= ನಗುವು + ಆತ್ಮ, ದುಗುಡವಾತ್ಮವ= ದುಗುಡವು (ಆತಂಕ, ದುಃಖ) + ಆತ್ಮವ, ಸತ್ತ್ವವೆತ್ತುವ= ಸತ್ತ್ವವ + ಎತ್ತುವ, ಮಂತು = ಕಡೆಗೋಲು, ಬಗೆದೆರಡನುಂ= ಬಗೆದು + ಎರಡನುಂ(ಎರಡನ್ನೂ), ಭುಜಿಸು= ಸ್ವೀಕರಿಸು, ಅನುಭವಿಸು.

**ವಾಚ್ಯಾರ್ಥ:** ನಗುವು ಒಂದು ಅನುಭವದ ಪಾಕ, ಅಳುವೂ ಒಂದು ರಸಪಾಕ. ನಗುವು ಆತ್ಮದ ಪರಿಮಳವನ್ನು ಹರಡುವ ಹೂವು. ಅಂತೆಯೆ, ದುಗುಡ, ದು:ಖಗಳು ಆತ್ಮದ ಮಂಥನ ಮಾಡಿ, ಸತ್ವವನ್ನು ಹೊರತೆಗೆಯುವ ಕಡೆಗೋಲು. ಇದನ್ನು ತಿಳಿದು ಎರಡನ್ನೂ ಅನುಭವಿಸು.

**ವಿವರಣೆ:** ಪ್ರಪಂಚದೊಂದಿಗಿನ ನಮ್ಮ ವ್ಯವಹಾರ ಕೆಲವೊಮ್ಮೆ ಮುದವನ್ನು ನೀಡುತ್ತದೆ. ಮತ್ತೆ ಕೆಲವೊಮ್ಮೆ ಆಘಾತವನ್ನು ನೀಡಿ ದುಃಖವನ್ನು ಕೊಡುತ್ತದೆ. ಈ ಅನುಭವಗಳು ಪಾಕವಿದ್ದಂತೆ. ಪಾಕ ಎಂಬ ಶಬ್ದಕ್ಕೆ ಬೇಯಿಸು, ಹಣ್ಣಾಗು ಎಂಬ ಅರ್ಥಗಳು ಮೂಡುತ್ತವೆ. ಅದೊಂದು ಪಕ್ವವಾಗುವ ಪರಿ. ಬದುಕಿನಲ್ಲಿ ಸಂತಸದ, ತೃಪ್ತಿಯ, ಸಾಧನೆಯ ಗಳಿಗೆಗಳು ಬಂದಾಗ ಮನಸ್ಸು ಸಂತೋಷಗೊಳ್ಳುತ್ತದೆ. ಅದರ ವ್ಯಕ್ತರೂಪವೆ ನಗು. ನಗು ಒಂದು ಪರಿಮಳವನ್ನು ಸೂಸುವ ಹೂವಿದ್ದಂತೆ. ಅದನ್ನು ಕಂಡು, ಆಸ್ವಾದಿಸಿ ಯಾರಾದರೂ ಬೇಸರ ಮಾಡಿಕೊಳ್ಳುತ್ತಾರೆಯೇ? ಅರಳಿ ನಿಂತು ಸುವಾಸನೆಯನ್ನು ಪಸರಿಸುವ ಹೂವು ಹತ್ತಿರದ ವ್ಯಕ್ತಿಯ ಮನಸ್ಸನ್ನು ಅರಳಿಸುತ್ತದೆ, ದಂದುಗವನ್ನು ಮರೆಸುತ್ತದೆ. ಹಾಗೆಯೇ ಸಂತೋಷದಲ್ಲಿ, ನಗುನಗುತ್ತ ಇರುವ ವ್ಯಕ್ತಿ ತನ್ನ ಸುತ್ತಲೂ ಧನಾತ್ಮಕವಾದ, ಉತ್ಸಾಹಪೂರಿತ ವಾತಾವರಣವನ್ನು ಹರಡುತ್ತಾನೆ. ಇದರಂತೆಯೇ ಅಳು ಕೂಡ ಒಂದು ಪಾಕ.

ಕಷ್ಟ, ದುಗುಡಗಳಲ್ಲಿ ಬೆಂದು ಬರುವುದು ಪಾಕವೇ ಸರಿ. ಅದೊಂದು ಅಗ್ನಿಪರೀಕ್ಷೆ. ಬೆಂಕಿಯಲ್ಲಿ ಹಾದು ಬಂದವರು ಪುಟವಿಟ್ಟ ಬಂಗಾರದಂತೆ ಪರಿಶುದ್ಧರಾಗುತ್ತಾರೆ. ಆದರೆ ಅದಕ್ಕೆ ಧೈರ್ಯ ಬೇಕು, ಆತ್ಮವಿಶ್ವಾಸಬೇಕು. ಬೆಂದರೆ ಬೇಂದ್ರೆಯಾಗುತ್ತಾರೆ ಎನ್ನುವ ಮಾತು ಕ್ಲೀಷೆಯಾಗುವಷ್ಟು ಬಳಕೆಯಾಗಿತ್ತು. ಒಂದು ಬಾರಿ ಅವರನ್ನು ಪರಿಚಯಿಸುವವರು ಆ ಮಾತನ್ನು ಹೇಳಿದಾಗ ಬೇಂದ್ರೆ ಕೋಪದಿಂದ ಸಿಡಿದರು. ‘ಬೆಂದ್ರ ಬೇಂದ್ರೆ ಆಗತಾರೇನು? ಒಳಗ ಹಸೀ ಇಲ್ಲಾಂದ್ರ ಸುಟ್ಟು ಬೂದಿ ಆಗತಾರ’. ಅದು ಸತ್ಯದ ಮಾತು. ಬರೀ ಬೇಂದ್ರೆಯವರಿಗೆ ಮಾತ್ರ ಅನ್ವಯಿಸುವುದಿಲ್ಲ. ಒಳಗೆ ಆತ್ಮವಿಶ್ವಾಸದ ಹಸಿ ಇಲ್ಲದಿದ್ದರೆ ಕಷ್ಟಗಳು ಮನುಷ್ಯನನ್ನು ಬೂದಿ ಮಾಡುತ್ತವೆ. ಆದರೆ ಛಲ, ವಿಶ್ವಾಸವಿದ್ದರೆ ಬಂಗಾರವನ್ನು ಬೆಂಕಿಗೆ ಹಾಕಿದಾಗ ಕಸರು ಮಾತ್ರ ಸುಟ್ಟು ಬಂಗಾರ ಮತ್ತಷ್ಟು ಹೊಳಪಾಗುವಂತೆ ವ್ಯಕ್ತಿತ್ವದ ಸತ್ವ ಮೇಲೆದ್ದು ಬರುತ್ತದೆ. ಇದನ್ನು ಕಗ್ಗ ಸುಂದರವಾಗಿ ಹೇಳುತ್ತದೆ. ನಗು ಎನ್ನುವುದು ಆತ್ಮದ ಪರಿಮಳವಾದರೆ, ದುಃಖವನ್ನು ತೋರಿಸುವ ಅಳು, ಆತ್ಮವನ್ನು ಮಥಿಸಿ, ಅಂತರ್ಗತವಾದ ಸತ್ವನ್ನು ಹೊರತೆಗೆಯುವ ಕಡೆಗೋಲು ಇದ್ದಂತೆ. ಎರಡೂ ನಮಗೆ ಪ್ರಯೋಜನವಾದವುಗಳೇ, ಅವಶ್ಯವಾದವೇ. ಅವೆರಡನ್ನು ಸಮಾನವಾಗಿ ತೆಗೆದುಕೊಂಡು, ಬದುಕಿನ ಔನ್ನತ್ಯಕ್ಕೆ ಪ್ರಯತ್ನಿಸಬೇಕು.

❖

## ಗುಂಡಣ್ಣ




## ದಿನ ಭವಿಷ್ಯ

ಗುರುವಾರ ಜುಲೈ 1, 2021

**ಶ್ರೀಪ್ಲವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ಜ್ಯೇಷ್ಠ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಆರ್ದ್ರೆ ಸಪ್ತಮೀ ಗಂ. 26-58 (ಹ. 4-53) ಗುರುವಾರ ನಿತ್ಯ ನಕ್ಷತ್ರ ಉತ್ತರಾಭಾದ್ರ ಗಂ. 60-00 (ದಿನಪೂರ್ತಿ) ಸೌಭಾಗ್ಯ ನಾಮ ಯೋಗ ಗಂ. 21-12 ಬವ ಕರಣ ಗಂ. 26-58 ವಿಷ ಗಂ. 24-13 ಅಮೃತ ಗಂ. 49-35 ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30**
**ಸೂರ್ಯೋದಯ:** 6-00 **ಸೂರ್ಯಾಸ್ತ:** 6-46 ಅದೃಷ್ಟ ಸಂಖ್ಯೆ 1 8

**ಮೇಷ:** ಎದುರಾದ ಸಮಸ್ಯೆಗಳಿಗೆ ಆತ್ಮಬಲದಿಂದ ಸೂಕ್ತ ಪರಿಹಾರಗಳು ಕಂಡುಬರುವವು. ಭಯ ರಹಿತ ವ್ಯವಹಾರದಿಂದಾಗಿ ಯಶಸ್ಸು. ಪ್ರಯಾಣದ ಸಲುವಾಗಿ ಅಧಿಕ ಖರ್ಚು. ಇಷ್ಟ ದೇವತಾ ಆರಾಧನೆ ಸೂಕ್ತ.

**ವೃಷಭ:** ತಾಳ್ಮೆಯ ವ್ಯವಹಾರದಿಂದಾಗಿ ವ್ಯವಹಾರದಲ್ಲಿ ಲಾಭವನ್ನು ನಿರೀಕ್ಷಿಸಬಹುದು. ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿಯನ್ನು ಕಾಣುವಿರಿ. ದಿನದ ಮಟ್ಟಿಗೆ ಪ್ರಯಾಣ ಅಷ್ಟೊಂದು ಶುಭದಾಯಕವಲ್ಲ.

**ಮಿಥುನ:** ವ್ಯಾಪಾರದಲ್ಲಿ ವೃದ್ಧಿಯನ್ನು ಕಾಣುವಿರಿ. ಆಕಸ್ಮಿಕ ಘಟನೆಗಳಿಂದಾಗಿ ನೆರೆಯವರಲ್ಲಿ ವೈಮನಸ್ಸು ಉಂಟಾದೀತು. ಮನೆಯ ಅಲಂಕರಣ ವಸ್ತುಗಳ ಖರೀದಿಯನ್ನು ಮಾಡುವ ಸಾಧ್ಯತೆ. ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ವಹಿಸಿ.

**ಕರ್ಕಾಟಕ:** ಹೊಸ ಉದ್ಯೋಗ ರಂಗದಲ್ಲಿ ಶ್ರದ್ಧೆಯಿಂದಾಗಿ ಮೇಲಾಧಿಕಾರಿಗಳ ಗಮನ ಸೆಳೆಯುವ ಸಾಧ್ಯತೆ. ಸಹೋದ್ಯೋಗಿಗಳೊಂದಿಗೆ ತಾಳ್ಮೆ ಅಗತ್ಯ. ಆಭರಣ ಖರೀದಿಯ ಸಾಧ್ಯತೆ. ಸಕಾಲಿಕ ಸಲಹೆ ಲಭ್ಯ.

**ಸಿಂಹ:** ಎದುರಾದ ತೊಂದರೆಗಳು ಸಹೋದ್ಯೋಗಿಗಳ ಸಕಾಲಿಕ ನೆರವಿನಿಂದಾಗಿ ದೂರವಾಗಲಿದೆ. ವಾಹನ ಚಾಲನೆ ಸಂದರ್ಭದಲ್ಲಿ ಜಾಗರೂಕತೆ ಅವಶ್ಯ. ಒಡವೆಗಳ ಬಗ್ಗೆ ಜಾಗರೂಕರಾಗಿರುವುದು ಉತ್ತಮ.

**ಕನ್ಯಾ:** ವ್ಯವಹಾರ ನೈಪುಣ್ಯದಿಂದಾಗಿ ಅಧಿಕ ಲಾಭದ ನಿರೀಕ್ಷೆ. ವೃತ್ತಿಯಲ್ಲಿನ ಸಮಸ್ಯೆಗಳಿಗೆ ಪರಿಹಾರ ದೊರಕುವುದು. ಅಧಿಕ ಪ್ರಯಾಣದ ಸಾಧ್ಯತೆ. ಪ್ರತಿಭಾ ಸಂಪನ್ನತೆಯಿಂದಾಗಿ ಗೌರವಾದರಗಳು. ಕುಲದೇವತಾ ದರ್ಶನ ಭಾಗ್ಯ.

**ತುಲಾ:** ಪತ್ರಿಕಾ ರಂಗದಲ್ಲಿರುವವರಿಗೆ ಹೆಸರು ತರುವಂತಹ ಘಟನೆಗಳು ಸಂಭವಿಸಲಿದೆ. ಆರ್ಥಿಕ ಸಹಕಾರ ದೊರಕುವುದು. ಪ್ರೇಮ ಪ್ರಕರಣಗಳಲ್ಲಿ ದುಡುಕಿನಿಂದಾಗಿ ವೈಮನಸ್ಸು. ಸಂಕಲ್ಪಿತ ಕೆಲಸ ಕಾರ್ಯಗಳಲ್ಲಿ ಯಶಸ್ಸು.

**ವೃಶ್ಚಿಕ:** ಉತ್ತಮ ಆರೋಗ್ಯ ಭಾಗ್ಯ. ಪ್ರಯತ್ನ ಶೀಲತೆಯಿಂದಾಗಿ ಕೆಲಸ ಕಾರ್ಯಗಳಲ್ಲಿ ಸಫಲತೆ ಕಾಣುವಿರಿ. ಸಾಮಾಜಿಕ ಕೆಲಸ ಕಾರ್ಯಗಳಲ್ಲಿ ತೊಡಗಿಕೊಳ್ಳುವ ಸಾಧ್ಯತೆ. ಗೃಹ ನಿರ್ಮಾಣ ಕಾರ್ಯಗಳಿಗೆ ಉತ್ತಮ ಸಹಕಾರ.

**ಧನು:** ಇತ್ತೀಚೆಗೆ ಸ್ಥಾಪಿಸಿದ ಹೊಸ ಉದ್ಯಮದಲ್ಲಿ ವ್ಯವಹಾರ ಸುಧಾರಣೆಗೊಳ್ಳುವುದು. ವೃಥಾ ಖರ್ಚನ್ನು ನಿಯಂತ್ರಿಸಿ ಉಳಿತಾಯ ಮಾಡಿ. ಸಾಮಾಜಿಕ ಗೌರವ ಮತ್ತು ಜವಾಬ್ದಾರಿಗಳು ಒಟ್ಟೊಟ್ಟಿಗೆ ಬರುವ ಸಾಧ್ಯತೆ.

**ಮಕರ:** ದೈನಂದಿನ ಕಾರ್ಯ ಚಟುವಟಿಕೆಗಳಲ್ಲಿ ಉತ್ಸಾಹ. ಪ್ರಯಾಣದ ಸಂತೃಪ್ತಿ ನಿಮ್ಮದಾಗಲಿದೆ. ಗುರು ದೇವತಾ ದರ್ಶನ ಭಾಗ್ಯ. ಉದ್ಯೋಗಾಕಾಂಕ್ಷಿಗಳಿಗೆ ಯೋಗ್ಯ ಅವಕಾಶಗಳು ಲಭ್ಯವಾಗುವುದು. ಹೊಸ ಯೋಜನೆ ರೂಪಿಸಿ.

**ಕುಂಭ:** ಮಾನಸಿಕ ಗೊಂದಲದ ನಿರ್ಣಯದಿಂದಾಗಿ ನಷ್ಟವನ್ನನುಭವಿಸುವ ಸಾಧ್ಯತೆ. ತಾಳ್ಮೆಯಿಂದ ಕೆಲಸಗಳನ್ನು ಸಾಧಿಸಿ. ಅನಾವಶ್ಯಕ ಮಾತುಗಳಿಂದಾಗಿ ವೈರತ್ವ ತಲೆದೋರಬಹುದು. ಧಾರ್ಮಿಕ ಕಾರ್ಯಗಳಲ್ಲಿ ಭಾಗಿ.

**ಮೀನ:** ಆತುರಯಿಂದಾಗಿ ಕೆಲಸ ಕಾರ್ಯಗಳಲ್ಲಿ ವಿಘ್ನ ತಲೆದೋರಬಹುದು. ಲೇಖಕರಿಗೆ ಕೀರ್ತಿ. ನೆರೆಹೊರೆಯವರ ಅಗತ್ಯಕ್ಕೆ ಸ್ಪಂದಿಸಬೇಕಾದೀತು. ಹೊಸ ಯೋಜನೆಗಳು ರೂಪುಗೊಳ್ಳುವವು. ಮಕ್ಕಳಿಂದ ನೆಮ್ಮದಿ.

**ನಿಮ್ಮ ಜನ್ಮದಿನ 1-ಜುಲೈ** ಈ ದಿನವು ಅತ್ಯಂತ ಶುಭಕರವಾಗಿದ್ದು, ವ್ಯವಹಾರದಲ್ಲಿ ಉತ್ತಮ ಲಾಭವನ್ನು ಹೊಂದುವಿರಿ. ಸರ್ಕಾರಿ ಉದ್ಯೋಗಿಗಳಿಗೆ ಪದೋನ್ನತಿ. ದಾಂಪತ್ಯದ ವಿಷಯದಲ್ಲಿ ಏರು ಪೇರುಗಳು ಸಂಭವಿಸಬಹುದು. ಹಿರಿಯರ ಸಲಹೆಯಿಂದಾಗಿ ಸಮಸ್ಯೆಗಳ ಪರಿಹಾರ.

## ಪದಬಂಧ 4644 – ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ಜಗಳಕ್ಕೊಂದು ಪರ್ಯಾಯ ಪದ (3)
4.ಶುದ್ಧಿ ಮಾಡುವುದು (4)
6.ಉತ್ತಮವಾದ ಮದ್ದು (4)
8.ಇದು ನಿಶ್ಚಯವಾದುದು (3)
11.ಗುಲಾಬಿ ಹೂ ಹಿಡಿದಿಹ ದಾಸ (3)
13.ಹಸು ನೋಡುತ್ತಿರುವ ಕಂದ (4)
17.ವಿರಾಜಮಾನವಾಗಿರುವ ಚಕ್ರವರ್ತಿ (4)
18.ತಲೆಗೆ ಸುತ್ತಿಕೊಳ್ಳುವ ಬಟ್ಟೆ (3)

**ಮೇಲಿಂದ ಕೆಳಕ್ಕೆ**
1.ಹಡಗಿನ ಮುಖ್ಯಾಧಿಕಾರಿ (3)
2.ಸಖನದು ಸದಾ ನಗುಮುಖ! (4)
3.ಹಿಮದ ಹತ್ತಿರವಿರುವ ಕೋಣ (3)
5.ತಿರುವುಮುರುವಾಗಿರುವ ಆಲಯ (2)
7.ಧನುರ್ಮಾಸದಲ್ಲಿ ಹಿಡಿದಿರುವ ಬಿಲ್ಲು (3)
9.ಒಣಗಿದ ವಸ್ತು (3)
10.ಅತಿಶಯವಾದ ಪ್ರೀತಿ (3)
12.ಜರೂರಾಗಿ ಮಾಡಿರುವ ಪಂಚನಾಮೆ (4)
14.ಕೇಳಲು ಮಧುರವಾಗಿರುವುದು (3)
15.ಸುಗಮವಾಗಿ ಕಿತ್ತು ತಂದ ಹೂ (2)
16. ವಿಸ್ತಾರವಾದ ಜಾಗ (3)



### 4643ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:** 1.ಅಸಹಾಯಸ್ಥಿತಿ 4.ದಿಗಂಬರ 5.ಗದರು 7.ಪ್ರಕಾಶ 10.ತುರಗ 12.ಶಬರ 13.ಕೇಕಾರವ 15.ಶರೀರದಂಡನೆ

**ಮೇಲಿಂದ ಕೆಳಕ್ಕೆ:** 1.ಅಜಗರ 2.ತಿದಿ 3.ಪುರಸ್ಕೃತ 6.ರುಜುವಾತು 7.ಪ್ರಯೋಗ 8.ಶಬ್ದಕೋಶ 9.ಕಿಳ್ಳಿಕೇತ 11.ಅರಮನೆ 14.ವಶ

## ಸುಡೊಕು 5030

| | | | | | | | | |
|---|---|---|---|---|---|---|---|---|
| 2 | | | 1 | | | | 8 | |
| | | | | | | 5 | | 9 |
| 8 | | 3 | | | 9 | | 1 | |
| 3 | | 9 | 5 | | 1 | | | |
| | 6 | | | | | | 4 | |
| 5 | | 1 | 6 | | 8 | | | 2 |
| | 7 | | | 3 | 5 | 2 | | 4 |
| 4 | | 5 | | | | | 6 | |
| | 8 | | 4 | 6 | | 3 | | 1 |

### ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5029 ಸುಡೊಕು

| | | | | | | | | |
|---|---|---|---|---|---|---|---|---|
| 4 | 7 | 5 | 3 | 9 | 8 | 2 | 6 | 1 |
| 1 | 2 | 9 | 6 | 4 | 7 | 5 | 8 | 3 |
| 3 | 6 | 8 | 5 | 1 | 2 | 4 | 9 | 7 |
| 9 | 5 | 2 | 7 | 8 | 1 | 3 | 4 | 6 |
| 6 | 4 | 1 | 9 | 5 | 3 | 8 | 7 | 2 |
| 8 | 3 | 7 | 2 | 6 | 4 | 1 | 5 | 9 |
| 7 | 1 | 6 | 4 | 3 | 5 | 9 | 2 | 8 |
| 5 | 9 | 3 | 8 | 2 | 6 | 7 | 1 | 4 |
| 2 | 8 | 4 | 1 | 7 | 9 | 6 | 3 | 5 |

# ಅಜಿಯೊ ಮಾರಾಟ ಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನ್‌ಲೈನ್ ವೇದಿಕೆ ಮೂಲಕ ಬಟ್ಟೆಗಳು ಹಾಗೂ ಇತರ ಫ್ಯಾಶನ್ ವಸ್ತುಗಳನ್ನು ಮಾರಾಟ ಮಾಡುವ 'ಅಜಿಯೊ', ಜುಲೈ 1ರಿಂದ 5ನೆಯ ತಾರೀಕಿನವರೆಗೆ 'ಬಿಗ್ ಬೋಲ್ಡ್ ಸೇಲ್' ಹೆಸರಿನ ಮಾರಾಟ ಮೇಳ ಆಯೋಜಿಸಿದೆ.

ಮಾರಾಟ ಮೇಳದಲ್ಲಿ ಎರಡೂವರೆ ಸಾವಿರಕ್ಕೂ ಹೆಚ್ಚಿನ ಬ್ರ್ಯಾಂಡ್‌ಗಳ ವಿವಿಧ ಉತ್ಪನ್ನಗಳಿಗೆ ಶೇಕಡ 50ರಿಂದ ಶೇ 90ರವರೆಗೆ ರಿಯಾಯಿತಿ ಇದೆ.

ಇದು ಫ್ಯಾಶನ್ ವಸ್ತುಗಳ ಅತಿದೊಡ್ಡ ಮಾರಾಟ ಮೇಳ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

## ಚಿನ್ನ: ₹ 264 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ಚಿನ್ನದ ದರ 10 ಗ್ರಾಂಗೆ ₹ 264ರಷ್ಟು ಇಳಿಕೆ ಆಗಿ, ₹ 45,783ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆ ಕೆ.ಜಿ.ಗೆ ₹ 60ರಷ್ಟು ಇಳಿಕೆ ಕಂಡು ₹ 67,472ಕ್ಕೆ ತಲುಪಿದೆ.

ಜಾಗತಿಕ ಮಾರುಕಟ್ಟೆಯಲ್ಲಿನ ದರ ಇಳಿಕೆ ಆಗಿರುವುದು ದೇಶಿ ಮಾರುಕಟ್ಟೆಯಲ್ಲಿಯೂ ಪ್ರತಿಫಲಿಸಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

### ಷೇರುಪೇಟೆ ವಹಿವಾಟು




### ಎನ್‌ಎಸ್‌ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ | 15,748 |
| ಇಂದಿನ ಅಂತ್ಯ | 15,721 |
| ▼ | 27 |
| ದಿನದ ಕನಿಷ್ಠ | 15,708 |

### ವಿನಿಮಯ ದರ

| | |
|---|---|
| $ ಡಾಲರ್ | 74.32 |
| £ ಪೌಂಡ್ | 102.99 |
| € ಯುರೊ | 88.38 |
| ¥ ಯೆನ್ (100ಕ್ಕೆ) | 67 |

### ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹525 |
| 12 ಮೊಟ್ಟೆಗೆ | ₹72 |
| ಮೈಸೂರು | |
| 100 ಮೊಟ್ಟೆಗೆ | ₹520 |

### ಖಾದ್ಯ ತೈಲ ಮುಂಬೈ

(10 ಕೆಜಿಗೆ)

| | |
|---|---|
| ಶೇಂಗಾ (ರಿಫೈಂಡ್) | ₹1365 (1350) |
| ಸೋಯಾ (ರಿಫೈಂಡ್) | ₹1285 (1285) |
| ಸೂರ್ಯಕಾಂತಿ (ರಿಫೈಂಡ್) | ₹1340(1350) |
| ಪಾಮೋಲಿನ್ | ₹1155(1165) |

# ಜಿಎಸ್‌ಟಿಗೆ ನಾಲ್ಕು ವರ್ಷ: 66 ಕೋಟಿ ರಿಟರ್ನ್ಸ್ ಸಲ್ಲಿಕೆ

ನವದೆಹಲಿ (ಪಿಟಿಐ): ದೇಶದಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆ ಜಾರಿಗೆ ಬಂದು ನಾಲ್ಕು ವರ್ಷಗಳು ಪೂರ್ಣಗೊಂಡಿದ್ದು, ಇದುವರೆಗೆ 66 ಕೋಟಿಗೂ ಅಧಿಕ ಜಿಎಸ್‌ಟಿ ರಿಟರ್ನ್ಸ್ ಸಲ್ಲಿಕೆಯಾಗಿವೆ. ಕಡಿಮೆ ತೆರಿಗೆ ದರದಿಂದಾಗಿ ರಿಟರ್ನ್ ಸಲ್ಲಿಕೆ ಹೆಚ್ಚಳವಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.

ಈ ಕುರಿತು ಸರಣಿ ಟ್ವೀಟ್ ಮಾಡಿರುವ ಸಚಿವಾಲಯವು, 'ಜಿಎಸ್‌ಟಿಯು ಎಲ್ಲಾ ತೆರಿಗೆ ಪಾವತಿದಾರರಿಗೂ ಸರಳೀಕೃತ ರಿಟರ್ನ್ಸ್ ವ್ಯವಸ್ಥೆಯನ್ನು ಕಲ್ಪಿಸಿದೆ' ಎಂದು ಹೇಳಿದೆ. ವಾರ್ಷಿಕ ₹ 20 ಲಕ್ಷದವರೆಗೆ ವಹಿವಾಟು ನಡೆಸುವ ಉದ್ದಿಮೆಗಳಿಗೆ ಜಿಎಸ್‌ಟಿ ವಿನಾಯಿತಿ ಇದೆ. ವಾರ್ಷಿಕ ₹ 50 ಲಕ್ಷದವರೆಗಿನ ವಹಿವಾಟುದಾರರು ಕಂಪೊಸಿಷನ್ ಸ್ಕೀಮ್ ಆಯ್ಕೆ ಮಾಡಿಕೊಳ್ಳಲು ಅವಕಾಶವಿದ್ದು, ಶೇಕಡ 6ರಷ್ಟು ತೆರಿಗೆ ಪಾವತಿಸಬಹುದಾಗಿದೆ.

'ಜಿಎಸ್‌ಟಿ ವ್ಯವಸ್ಥೆಯು ಗ್ರಾಹಕ ಮತ್ತು ತೆರಿಗೆ ಪಾವತಿದಾರ ಸ್ನೇಹಿಯಾಗಿದೆ ಎಂದು ಈಗ ವ್ಯಾಪಕವಾಗಿ ಒಪ್ಪಿಕೊಳ್ಳಲಾಗಿದೆ' ಎಂದು ಸಚಿವಾಲಯವು ಟ್ವೀಟ್ ಮಾಡಿದೆ.

ಜಿಎಸ್‌ಟಿ ಅಡಿಯಲ್ಲಿ ನಾಲ್ಕು ಹಂತಗಳ ತೆರಿಗೆ ದರ ಇದೆ. ಜಿಎಸ್‌ಟಿ ಜಾರಿಗೂ ಮೊದಲಿನ ವ್ಯವಸ್ಥೆಯಲ್ಲಿ ವ್ಯಾಟ್, ಎಕ್ಸೈಸ್, ಸಿಎಸ್‌ಟಿ ಮತ್ತು ಇತರೆ ತೆರಿಗೆಗಳು ಸೇರಿಕೊಂಡು ಒಟ್ಟಾರೆ ಶೇ 31ರಷ್ಟು ತೆರಿಗೆಯನ್ನು ಗ್ರಾಹಕ ಪಾವತಿಸಬೇಕಾಗಿತ್ತು ಎಂದು ಸಚಿವಾಲಯ ಹೇಳಿದೆ. ಜಿಎಸ್‌ಟಿ ವ್ಯವಸ್ಥೆಯಲ್ಲಿ ಗರಿಷ್ಠ ತೆರಿಗೆ ದರ ಶೇ 28ರಷ್ಟು.

# ಭಾರತದ ಅಸಂಘಟಿತ ವಲಯಕ್ಕೆ ₹ 3,716 ಕೋಟಿ ಸಾಲ: ವಿಶ್ವಬ್ಯಾಂಕ್

ನವದೆಹಲಿ (ಪಿಟಿಐ): ಭಾರತದ ಅಸಂಘಟಿತ ದುಡಿಯುವ ವಲಯವು ಕೋವಿಡ್ ಸಾಂಕ್ರಾಮಿಕದ ಸಂಕಷ್ಟದಿಂದ ಹೊರಬರಲು ಅನುಕೂಲ ಕಲ್ಪಿಸಲು ₹ 3,716 ಕೋಟಿ ಸಾಲ ಮಂಜೂರು ಮಾಡಿರುವುದಾಗಿ ವಿಶ್ವ ಬ್ಯಾಂಕ್ ಬುಧವಾರ ಹೇಳಿದೆ.

ಸದ್ಯದ ಸಾಂಕ್ರಾಮಿಕದ ಪರಿಸ್ಥಿತಿ, ಭವಿಷ್ಯದ ವಿಪತ್ತುಗಳನ್ನು ನಿಭಾಯಿಸಲು ಈ ಸಾಲವು ರಾಜ್ಯಗಳಿಗೆ ಹೆಚ್ಚಿನ ಅನುಕೂಲವನ್ನು ಮಾಡಿಕೊಡಲಿದೆ ಎಂದು ವಿಶ್ವ ಬ್ಯಾಂಕ್ ಪ್ರಕಟಣೆ ತಿಳಿಸಿದೆ.

ಒಟ್ಟಾರೆ ₹ 3,716 ಕೋಟಿ ಮೊತ್ತದಲ್ಲಿ ವಿಶ್ವ ಬ್ಯಾಂಕ್‌ನ ಅಂಗಸಂಸ್ಥೆ ಅಂತರರಾಷ್ಟ್ರೀಯ ಅಭಿವೃದ್ಧಿ ಸಂಘವು ₹ 836.10 ಕೋಟಿಯನ್ನು ಮತ್ತು ಅಂತರರಾಷ್ಟ್ರೀಯ ಪುನರ್‌ನಿರ್ಮಾಣ ಮತ್ತು ಅಭಿವೃದ್ಧಿ ಬ್ಯಾಂಕ್ (ಐಬಿಆರ್‌ಡಿ) ₹ 2,879.90 ಕೋಟಿಯನ್ನು ಸಾಲವಾಗಿ ನೀಡಲಿವೆ.

ಸಾಲವು 18.5 ವರ್ಷಗಳ ಮುಕ್ತಾಯ ಅವಧಿ (ಮೆಚ್ಯುರಿಟಿ ಪಿರಿಯಡ್) ಹೊಂದಿದ್ದು, ಐದು ವರ್ಷಗಳ ಹೆಚ್ಚುವರಿ ಅವಧಿಯನ್ನೂ ಒಳಗೊಂಡಿದೆ.

ಸಾಂಕ್ರಾಮಿಕವು ಆರಂಭವಾದಾಗಿನಿಂದಲೂ ಬಡ ಮತ್ತು ದುರ್ಬಲ ಕುಟುಂಬಗಳಿಗೆ ಸಹಾಯ ಮಾಡಲು ಭಾರತದ ಸಾಮಾಜಿಕ ಸಂರಕ್ಷಣಾ ಕಾರ್ಯಕ್ರಮಗಳನ್ನು ಬಲಪಡಿಸಲು ಒಟ್ಟಾರೆ ₹ 12,264.54 ಕೋಟಿ ಮೊತ್ತದ ನೆರವು ನೀಡಲಾಗಿದೆ ಎಂದು ಅದು ತಿಳಿಸಿದೆ.

ಬೀದಿ ಬದಿಯ ವ್ಯಾಪಾರಿಗಳು ಭಾರತದ ನಗರಗಳ ಅಸಂಘಟಿತ ಆರ್ಥಿಕತೆಯ ಭಾಗವಾಗಿದ್ದಾರೆ. ನ್ಯಾಷನಲ್ ಡಿಜಿಟಲ್ ಅರ್ಬನ್ ಮಿಷನ್ ಕಾರ್ಯಕ್ರಮವು ಬೀದಿ ಬದಿ ವ್ಯಾಪಾರಿಗಳಿಗೆ ಕೈಗೆಟುಕುವ ಬಡ್ಡಿ ದರಕ್ಕೆ ಗರಿಷ್ಠ ₹ 10 ಸಾವಿರದವರೆಗೆ ದುಡಿಯುವ ಬಂಡವಾಳದ ಸಾಲ ಒದಗಿಸಲಿದೆ. ನಗರ ಸ್ಥಳೀಯ ಸಂಸ್ಥೆಗಳು ಐ.ಟಿ. ಆಧಾರಿತ ವೇದಿಕೆಯ ಮೂಲಕ ಅವರನ್ನು ಗುರುತಿಸಲಾಗುತ್ತದೆ. ಹೊಸ ಸಾಲ ಕಾರ್ಯಕ್ರಮದಿಂದ ನಗರ ಪ್ರದೇಶಗಳ 50 ಲಕ್ಷ ಬೀದಿ ಬದಿ ವ್ಯಾಪಾರಿಗಳಿಗೆ ಪ್ರಯೋಜನ ಆಗಲಿದೆ ಎಂದು ಹೇಳಿದೆ.

## ಎಮಿಲಿಯೊ ವಿಶ್ವದ ಅತ್ಯಂತ ಹಿರಿಯ ಅಜ್ಜ: ಗಿನ್ನಿಸ್ ದಾಖಲೆ

ಲಂಡನ್ (ಎಎಫ್‌ಪಿ): ಪೋರ್ಟೊ ರಿಕೊದ ಎಮಿಲಿಯೊ ಫ್ಲಾರಸ್ ಮಾರ್ಕ್ವೆಝ್ ವಿಶ್ವದ ಅತಿ ಹಿರಿಯ ವ್ಯಕ್ತಿ ಎನ್ನುವ ಕೀರ್ತಿಗೆ ಪಾತ್ರರಾಗಿದ್ದಾರೆ.

ಎಮಿಲಿಯೊ ಅವರಿಗೆ 112 ವರ್ಷ 326 ದಿನಗಳಾಗಿದ್ದು, ಗಿನ್ನಿಸ್ ವಿಶ್ವ ದಾಖಲೆ ನಿರ್ಮಿಸಿದ್ದಾರೆ. 1908ರಲ್ಲಿ ಕೊರೊಲಿನಾದಲ್ಲಿ ಜನಿಸಿರುವ ಎಮಿಲಿಯೊ ಅವರನ್ನು ಗುರುತಿಸಿ ಗಿನ್ನಿಸ್ ದಾಖಲೆಯ ಪ್ರಮಾಣವನ್ನು ಬುಧವಾರ ನೀಡಲಾಗಿದೆ.

'ನನ್ನ ತಂದೆ ಪ್ರೀತಿಯಿಂದ ನನ್ನನ್ನು ಬೆಳೆಸಿದರು. ಪ್ರತಿಯೊಬ್ಬರನ್ನು ಪ್ರೀತಿಯಿಂದ ಕಾಣಬೇಕು ಎನ್ನುವುದನ್ನು ತಂದೆಯೇ ಕಲಿಸಿದರು. ಎಲ್ಲರಿಗೂ ಒಳ್ಳೆಯದನ್ನು ಮಾಡು. ಇನ್ನೊಬ್ಬರ ಜತೆ ಪ್ರತಿಯೊಂದನ್ನು ಹಂಚಿಕೊಳ್ಳುತ್ತೇನೆ. ಕ್ರೈಸ್ತ ನನ್ನ ಜತೆಗಿದ್ದಾನೆ ಎನ್ನುವ ನಂಬಿಕೆ ಇದೆ. ಇಷ್ಟು ವರ್ಷಗಳ ಕಾಲ ಈ ತತ್ವಗಳ ಆಧಾರದ ಮೇಲೆ ಬದುಕಿದ್ದೇನೆ' ಎಂದು ಅವರು ಹೇಳಿದ್ದಾರೆ.

## ಕ್ಯಾಪಿಟಲ್ ದಾಳಿ: ತನಿಖೆಗೆ ಹೊಸ ಸಮಿತಿ?

ವಾಷಿಂಗ್ಟನ್ (ರಾಯಿಟರ್ಸ್): ಕ್ಯಾಪಿಟಲ್ ಹಿಲ್‌ನಲ್ಲಿ ಜನವರಿ 6ರಂದು ನಡೆದ ಹಿಂಸಾಚಾರದ ಕುರಿತು ಸ್ವತಂತ್ರ ಆಯೋಗದ ತನಿಖೆಗಾಗಿ ಹೊಸ ಆಯ್ಕೆ ಸಮಿತಿ ರಚಿಸಲು ಅಮೆರಿಕದ ಜನಪ್ರತಿನಿಧಿಗಳ ಸಭೆಯಲ್ಲಿ ಬುಧವಾರ ಮತ ಚಲಾಯಿಸಿಲಾಯಿತು.

ಅಂದು ಅಧ್ಯಕ್ಷರಾಗಿದ್ದ ಡೊನಾಲ್ಡ್ ಟ್ರಂಪ್ ಅವರ ಬೆಂಬಲಿಗರು ಸಂಸತ್ ಭವನಕ್ಕೆ (ಕ್ಯಾಪಿಟಲ್) ನುಗ್ಗಿ ದಾಂದಲೆ ನಡೆಸಿದ್ದರು. ಸ್ಪೀಕರ್ ಕಚೇರಿಗೆ ನುಗ್ಗಿ ಅಲ್ಲಿದ್ದ ವಸ್ತುಗಳನ್ನು ಚೆಲ್ಲಾಡಿದ್ದರು. ಕಿಟಕಿ ಗಾಜುಗಳನ್ನು ಒಡೆದು ಹಾಕಿದ್ದರು. ಕಲಾಕೃತಿಗಳನ್ನು ಹೊತ್ತೊಯ್ದಿದ್ದರು.

### ನಿಧನ ವಾರ್ತೆ

## 'ಸುಧರ್ಮಾ' ಸಂಪಾದಕ ಕೆ.ವಿ. ಸಂಪತ್ ಕುಮಾರ್

ಪ್ರಜಾವಾಣಿ ವಾರ್ತೆ

ಸಂಪತ್ ಕುಮಾರ್

ಮೈಸೂರು: ರಾಷ್ಟ್ರದ ಏಕೈಕ ಸಂಸ್ಕೃತ ಪತ್ರಿಕೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ 'ಸುಧರ್ಮಾ' ಪತ್ರಿಕೆಯ ಸಂಪಾದಕರಾದ ಕೆ.ವಿ. ಸಂಪತ್ ಕುಮಾರ್ (64) ಅವರು ಬುಧವಾರ ತಮ್ಮ ಕಚೇರಿಯಲ್ಲಿ ಹೃದಯಾಘಾತದಿಂದ ನಿಧನರಾದರು. ಇವರಿಗೆ ಪತ್ನಿ ಕೆ.ಎಸ್.ಜಯಲಕ್ಷ್ಮಿ ಇದ್ದಾರೆ.

ಮೃತರ ಅಂತ್ಯಕ್ರಿಯೆಯು ಇಲ್ಲಿನ ಚಾಮುಂಡಿಬೆಟ್ಟದ ತಪ್ಪಲಿನ ಸ್ಮಶಾನದಲ್ಲಿ ಸಂಜೆ ನೆರವೇರಿತು.

ಕಡಿಮೆ ಓದುಗರ ಬಳಗ ಹಾಗೂ ಆರ್ಥಿಕವಾಗಿ ಸಾಕಷ್ಟು ತೊಂದರೆಗಳಿದ್ದರೂ ಅದನ್ನು ಲೆಕ್ಕಿಸದೆ 'ಸುಧರ್ಮಾ' ಸಂಸ್ಕೃತ ಪತ್ರಿಕೆಯನ್ನು ಇವರು ತಮ್ಮ ಪತ್ನಿ ಜತೆಗೂಡಿ ಹೊರತರುತ್ತಿದ್ದರು. ಅವರ ಈ ಕಾರ್ಯಕ್ಕಾಗಿ, ಕೇಂದ್ರ ಸರ್ಕಾರವು ಸಂಪತ್‌ಕುಮಾರ್ ದಂಪತಿಗೆ 'ಪದ್ಮಶ್ರೀ' ಗೌರವ ಘೋಷಿಸಿತ್ತು. ಗೌರವ ಸ್ವೀಕಾರಕ್ಕೂ ಮುನ್ನವೇ ಸಂಪತ್‌ಕುಮಾರ್ ನಿಧನರಾಗಿದ್ದಾರೆ.

ಅವರ ತಂದೆ ಪಂಡಿತ್ ವರದರಾಜ ಅಯ್ಯಂಗಾರ್, 1945ರಲ್ಲಿ ಸುಧರ್ಮಾ ಮುದ್ರಣಾಲಯ ಪ್ರಾರಂಭಿಸಿ, 1970ರಲ್ಲಿ ಸುಧರ್ಮಾ ಪತ್ರಿಕೆಯನ್ನು ಹೊರತರಲಾರಂಭಿಸಿದರು. ತಂದೆಯ ನಿಧನದ ನಂತರ ಪತ್ರಿಕೆಯ ಜವಾಬ್ದಾರಿಯನ್ನು ವಹಿಸಿಕೊಂಡ ಸಂಪತ್‌ಕುಮಾರ್, ಪತ್ರಿಕೆಯಲ್ಲಿ ಹೊಸ ತಂತ್ರಜ್ಞಾನ ಅಳವಡಿಸಿಕೊಂಡರು. ಪತ್ರಿಕೆಯ ಆನ್‌ಲೈನ್ ಆವೃತ್ತಿಯನ್ನೂ ಹೊರತಂದರು. ಜತೆಗೆ, ಸಂಸ್ಕೃತ ದಿನದರ್ಶಿಯನ್ನೂ ಪ್ರಕಟಿಸಿದರು.

ಸಂಸ್ಕೃತದಲ್ಲಿ 50 ವರ್ಷಗಳಿಂದ ಮೈಸೂರಿನಿಂದ ಪ್ರಕಟವಾಗುತ್ತಿರುವ 'ಸುಧರ್ಮಾ' ದಿನಪತ್ರಿಕೆಯನ್ನು ಪರಿಗಣಿಸಿ 2 ವರ್ಷಗಳ ಹಿಂದೆ ಕೇಂದ್ರ ಸರ್ಕಾರ ಕೆ.ವಿ.ಸಂಪತ್ ಕುಮಾರ್-ಕೆ.ಎಸ್.ಜಯಲಕ್ಷ್ಮೀ ದಂಪತಿಗೆ ಪ್ರತಿಷ್ಠಿತ ಪದ್ಮಶ್ರೀ ಪ್ರಕಟಿಸಿತ್ತು. ಇದರ ಜತೆಗೆ, ಸಿದ್ಧಾರೂಢ ಪ್ರಶಸ್ತಿ, ಶಿವರಾತ್ರಿ ದೇಶಿಕೇಂದ್ರ ಮಾಧ್ಯಮ ಪ್ರಶಸ್ತಿ, ಅಬ್ದುಲ್ ಕಲಾಂ ಪ್ರಶಸ್ತಿಗಳೂ ಇವರಿಗೆ ಲಭಿಸಿವೆ.

## ಟ್ರಾನ್ಸ್ ಯೂನಿಯನ್ ಸಿಬಿಲ್ ಸಂಸ್ಥೆ ವರದಿ

# ಉದ್ದೇಶಪೂರ್ವಕ ಸುಸ್ತಿದಾರರ ಸಂಖ್ಯೆ ಇಳಿಕೆ

ಮುಂಬೈ (ಪಿಟಿಐ): ಸಾಂಕ್ರಾಮಿಕದ ವರ್ಷದಲ್ಲಿ ದೇಶದಲ್ಲಿ 'ಉದ್ದೇಶಪೂರ್ವಕ ಸುಸ್ತಿದಾರರ ಪ್ರಕರಣ'ಗಳ ಪ್ರಮಾಣ ಕಡಿಮೆ ಆಗಿದೆ ಎಂದು ಟ್ರಾನ್ಸ್ ಯೂನಿಯನ್ ಸಿಬಿಲ್ ಸಂಸ್ಥೆ ವರದಿ ಹೇಳಿದೆ. 2020-21ನೆಯ ಆರ್ಥಿಕ ವರ್ಷದ ಅಂತ್ಯದ ವೇಳೆಗೆ, ಉದ್ದೇಶಪೂರ್ವಕವಾಗಿ ಬ್ಯಾಂಕ್ ಸಾಲವನ್ನು ಮರುಪಾವತಿ ಮಾಡದೆ ಇದ್ದವರ ಪ್ರಕರಣಗಳ ಪ್ರಮಾಣದಲ್ಲಿ ಶೇಕಡ 1.9ರಷ್ಟು ಇಳಿಕೆ ಕಂಡುಬಂದಿದೆ.

₹ 25 ಲಕ್ಷಕ್ಕಿಂತ ಹೆಚ್ಚಿನ ಸಾಲ ಪಡೆದವರ ಪೈಕಿ 'ಉದ್ದೇಶಪೂರ್ವಕ ಸುಸ್ತಿದಾರರು' ಎಂಬ ಹಣೆಪಟ್ಟಿ ಹೊತ್ತವರ ಸಂಖ್ಯೆಯಲ್ಲಿ ಕೂಡ ಇಳಿಕೆ ಕಂಡುಬಂದಿದೆ. ಇಂಥವರ ಸಂಖ್ಯೆಯು ಈ ವರ್ಷದ ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ 10,898 ಆಗಿತ್ತು. ಇದು ಹಿಂದಿನ ಆರ್ಥಿಕ ವರ್ಷದಲ್ಲಿ 12,242 ಆಗಿತ್ತು ಎಂದು ವರದಿಯಲ್ಲಿ ಹೇಳಲಾಗಿದೆ.

ಸಾಲ ತೀರಿಸುವ ಸಾಮರ್ಥ್ಯ ಇದ್ದರೂ ಆ ಕೆಲಸ ಮಾಡದೆ ಇರುವವರನ್ನು 'ಉದ್ದೇಶಪೂರ್ವಕ ಸುಸ್ತಿದಾರರು' ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ವ್ಯಾಖ್ಯಾನಿಸಿದೆ. ಈ ರೀತಿಯ ಹಣೆಪಟ್ಟಿ ಹೊತ್ತುಕೊಂಡವರಿಗೆ ಯಾವುದೇ ಬ್ಯಾಂಕ್‌ನಿಂದ ಹೊಸ ಸಾಲ ಸಿಗುವುದಿಲ್ಲ. ಸಾಲ ಪಡೆದವರು ಸಕಾಲದಲ್ಲಿ ಮರುಪಾವತಿ ಮಾಡಲಿ ಎಂಬ ಉದ್ದೇಶದಿಂದ ಬ್ಯಾಂಕ್‌ಗಳು ಈ ಅಸ್ತ್ರ ಬಳಕೆ ಮಾಡುತ್ತವೆ.

ದೇಶದ ಅತಿದೊಡ್ಡ ಬ್ಯಾಂಕ್ ಆಗಿರುವ ಭಾರತೀಯ ಸ್ಟೇಟ್ ಬ್ಯಾಂಕ್‌ನಿಂದ (ಎಸ್‌ಬಿಐ) ಸಾಲ ಪಡೆದು, ಉದ್ದೇಶಪೂರ್ವಕವಾಗಿ ಅದನ್ನು ಮರುಪಾವತಿ ಮಾಡದವರ ಸಂಖ್ಯೆಯಲ್ಲಿ ಏರಿಕೆ ಆಗಿದೆ. ಹಿಂದಿನ ಆರ್ಥಿಕ ವರ್ಷದಲ್ಲಿ 1,640 ಇದ್ದ ಇಂಥವರ ಸಂಖ್ಯೆಯು ಈ ಬಾರಿಯ ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ 1,801ಕ್ಕೆ ಏರಿಕೆ ಆಗಿದೆ. ಇಂಥವರಿಂದ ಎಸ್‌ಬಿಐಗೆ ಬರಬೇಕಿರುವ ಒಟ್ಟು ಮೊತ್ತ ₹ 67 ಸಾವಿರ ಕೋಟಿ.

ಎಲ್ಲ ರಾಷ್ಟ್ರೀಕೃತ ಬ್ಯಾಂಕ್‌ಗಳನ್ನು ಪರಿಗಣಿಸಿದರೆ ಸಾಲವನ್ನು ಉದ್ದೇಶಪೂರ್ವಕವಾಗಿ ಬಾಕಿ ಉಳಿಸಿಕೊಂಡವರ ಸಂಖ್ಯೆಯಲ್ಲಿ ಇಳಿಕೆ ಕಂಡುಬಂದಿದೆ. ಹಿಂದಿನ ವರ್ಷದಲ್ಲಿ 8,781 ಇದ್ದ ಇಂಥವರ ಸಂಖ್ಯೆಯು ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ 7,418ಕ್ಕೆ ತಗ್ಗಿದೆ. ಇವರಿಂದ ಬ್ಯಾಂಕ್‌ಗಳಿಗೆ ಬರಬೇಕಿರುವ ಒಟ್ಟು ಮೊತ್ತ ₹ 1.18 ಲಕ್ಷ ಕೋಟಿ.

ಖಾಸಗಿ ಬ್ಯಾಂಕ್‌ಗಳಿಂದ ಸಾಲ ಪಡೆದವರ ಪೈಕಿ 1,514 ಜನ ಉದ್ದೇಶಪೂರ್ವಕವಾಗಿ ಸಾಲವನ್ನು ಹಿಂದಿರುಗಿಸಿಲ್ಲ. ಇವರಿಂದ ಬರಬೇಕಿರುವ ಮೊತ್ತ ₹ 22,867 ಕೋಟಿ.

### ಮುಂಬೈ ಧಾರಣೆ

**ಶೇಂಗಾ**

30-6-2021

| | |
|---|---|
| ಜಾವಾ 70/80(ಹೊಸ) | 9700-9750 |
| ಜಾವಾ 80/90(ಹೊಸ) | 8950-9000 |
| ದಪ್ಪ ಮಧ್ಯಪ್ರದೇಶ(ಹೊಸ) | 10000-10100 |
| ದಪ್ಪ ಗುಜರಾತ್(ಹೊಸ) | 9400-9500 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1375 (1360) |
| ಒಂದು ವಾರದ ಡೆಲಿವರಿ | 1370 (1355) |
| ಸೋಯಾ ಕಚ್ಚಾ | 1225 (1235) |
| ಪಾಮ್ ವಾರದ ಡೆಲಿವರಿ | 1153 (1163) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1260 (1270) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10 ಗ್ರಾಂ
46,550 (46,500)
ಬೆಳ್ಳಿ ಕೆ.ಜಿ 67,850 (67,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

### ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 700-800 |
| ನಡುಗೋಲು | 850-900 |
| ರಾಶಿ | 950-1000 |
| ರಾಶಿ ಉತ್ತಮ | 1000-1050 |
| ಜರಡಿ | 1150-1200 |
| ಹೆರಕಿದ್ದು | 1500-1600 |
| ಹಸಿರು ಸಾಧಾರಣ | 900-1000 |
| ಹಸಿರು ಉತ್ತಮ | 1100-1200 |
| ಹಸಿರು ಅತಿ ಉತ್ತಮ | 1400-1500 |
| ಕಾಳು ಮೆಣಸು | 385 |
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 10000-22500 |
| ಹೊಸತು | 23500-42000 |
| ಹಳತು | 42500-52000 |
| **ಕುಮಟ** | |
| ಚಿಪ್ಪು | 29569-32869 |
| ಕೋಕ | 19569-29869 |
| ಫ್ಯಾಕ್ಟರಿ | 13699-18261 |
| ಹಳೆಚಾಲಿ | 40169-42226 |
| ಹೊಸಚಾಲಿ | 36599-39499 |
| **ಸಿದ್ದಾಪುರ** | |
| ಬಿಳಿಗೋಟು | 23999-32399 |
| ಚಾಲಿ | 34608-38499 |
| ಕೋಕ | 20399-31489 |
| ಕೆಂಪುಗೋಟು | 29499-30599 |
| ರಾಶಿ | 38589-41599 |
| ತಟ್ಟಿಬೆಟ್ಟೆ | 33039-38599 |
| **ರಾಮನಗರ ರೇಷ್ಮೆ ಧಾರಣೆ** | |
| ಮಿಶ್ರತಳಿ (ಸಿ.ಬಿ) | 317-431 |
| ದ್ವಿತಳಿ (ಬಿ.ವಿ) | 318-489 |

**ಕಾಫಿ** (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | ---- | 11000 | 10900 | 159.70 ಸೆಂಟ್ಸ್ |
| ಎಸಿ | ---- | 4500 | 4325 | |
| ಆರ್‌ಪಿ | ---- | 5500 | 5600 | |
| ಆರ್‌ಸಿ | ---- | 3150 | 3275 | 1691 ಡಾಲರ್ಸ್ |

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

# ಶಿಕ್ಷಕರ ವರ್ಗಾವಣೆ ಶುರು

ಒಂದನೇ ಪುಟದಿಂದ...

2020-21ನೇ ಸಾಲಿನ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆ ಇದೇ 27ರಂದು ಆರಂಭವಾಗಲಿದ್ದು, 2022ರ ಜನವರಿ 14ರಂದು ಕೌನ್ಸೆಲಿಂಗ್ ನಡೆಯಲಿದೆ.

**ಸಾಮಾನ್ಯ ವರ್ಗಾವಣೆ:** 2020-21ನೇ ಸಾಲಿನ ಸರ್ಕಾರಿ ಪ್ರಾಥಮಿಕ ಶಾಲಾ ಮುಖ್ಯಶಿಕ್ಷಕರು ಸೇರಿದಂತೆ ಪ್ರಾಥಮಿಕ ಶಾಲಾ ಶಿಕ್ಷಕರು ಮತ್ತು ಪ್ರೌಢಶಾಲಾ ಶಿಕ್ಷಕರು ಅಲ್ಲದೆ, ಈ ಹುದ್ದೆಗಳಿಗೆ ಸಮಾನವಾದ ಅಧಿಕಾರಿಗಳ ಸಾಮಾನ್ಯ ವರ್ಗಾವಣೆಯೂ ಕೌನ್ಸೆಲಿಂಗ್ ಮೂಲಕ ನಡೆಯಲಿದೆ.

ತೀವ್ರ ಅನಾರೋಗ್ಯ, ಅಂಗವಿಕಲ, ಮೃತ ಸೈನಿಕರ ಶಿಕ್ಷಕ ಪತಿ ಅಥವಾ ಪತ್ನಿ, ಕೇಂದ್ರ ಅಥವಾ ರಾಜ್ಯ ಸರ್ಕಾರ ಇಲ್ಲವೇ ಅನುದಾನಿತ ಶಿಕ್ಷಣ ಸಂಸ್ಥೆ ನೌಕರರನ್ನು ಮದುವೆಯಾಗಿರುವ ಶಿಕ್ಷಕ, ಶಿಕ್ಷಕಿಯರಿಗೆ ವರ್ಗಾವಣೆಯಲ್ಲಿ ಅವಕಾಶ ಇರಲಿದೆ.

ಸಾಮಾನ್ಯ ವರ್ಗಾವಣೆಯಡಿಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ವರ್ಗಾವಣೆ ಈ ಪ್ರಕ್ರಿಯೆಯು ಜುಲೈ 27ರಿಂದ ಆರಂಭವಾಗಲಿದ್ದು, 2022ರ ಫೆ. 26ರಂದು ಕೌನ್ಸೆಲಿಂಗ್ ನಡೆಯಲಿದೆ. ಪ್ರೌಢಶಾಲಾ ಶಿಕ್ಷಕರ ವೃಂದದ ಜಿಲ್ಲೆಯೊಳಗಿನ ಕೋರಿಕೆ ವರ್ಗಾವಣೆ ಪ್ರಕ್ರಿಯೆಯು ನ. 17ರಿಂದ ಪ್ರಾರಂಭವಾಗಲಿದ್ದು, 2022 ಜ.29ರಂದು ಕೌನ್ಸೆಲಿಂಗ್ ಮೂಲಕ ಸ್ಥಳ ನಿಯುಕ್ತಿ ಮಾಡಲಾಗುತ್ತದೆ.

ವಿಭಾಗದೊಳಗಿನ ವರ್ಗಾವಣೆ ಕೋರಿಕೆ ಪ್ರಕ್ರಿಯೆಯು, ನ.17ರಿಂದ ಪ್ರಾರಂಭವಾಗಿ, 2022ರ ಫೆ.8ರಂದು ಮುಗಿಯಲಿದೆ. ಅದೇ ರೀತಿ ಅಂತರ್ ವಿಭಾಗೀಯ ವರ್ಗಾವಣೆ ಪ್ರಕ್ರಿಯೆಯು ನ.17ರಿಂದ ಪ್ರಾರಂಭವಾಗಿ, ಫೆ.26ಕ್ಕೆ ಕೌನ್ಸೆಲಿಂಗ್ ಮೂಲಕ ಮುಕ್ತಾಯಗೊಳ್ಳಲಿದೆ.

ವರ್ಗಾವಣಾ ಪ್ರಕ್ರಿಯೆ ನಿರ್ವಹಣೆಗೆಂದೇ ಪ್ರತ್ಯೇಕ ಸಹಾಯವಾಣಿ ರೂಪಿಸಲಾಗುತ್ತಿದೆ. ಅಲ್ಲದೆ, ಪೂರ್ಣ ಮಾಹಿತಿಗಾಗಿ, ಇಲಾಖೆಯ ವೆಬ್‌ಸೈಟ್ www.schooleducation.kar.nic.in ನೋಡಬಹುದು.

# ವಿದ್ಯುತ್ ವಿತರಣಾ ಸುಧಾರಣೆಗೆ ₹3.03 ಲಕ್ಷ ಕೋಟಿ: ಅನುಮತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿದ್ಯುತ್ ವಿತರಣಾ ವ್ಯವಸ್ಥೆಯಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ ₹3.03 ಲಕ್ಷ ಕೋಟಿ ಮೊತ್ತದ ಯೋಜನೆಗೆ ಆರ್ಥಿಕ ವ್ಯವಹಾರಗಳ ಸಚಿವ ಸಂಪುಟ ಸಮಿತಿ (ಸಿಸಿಇಎ) ಬುಧವಾರ ಅನುಮೋದನೆ ನೀಡಿದೆ.

ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಬಲಪಡಿಸುವ ಅಗತ್ಯವಿದೆ. ಹೀಗಾಗಿ, ಹೊಸ ಯೋಜನೆಗೆ ಅನುಮೋದನೆ ನೀಡಲಾಗಿದೆ ಎಂದು ಸಿಸಿಇಎ ಸಭೆಯ ನಂತರ ವಿದ್ಯುತ್ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಆರ್.ಕೆ.ಸಿಂಗ್ ತಿಳಿಸಿದ್ದಾರೆ.

ವಿದ್ಯುತ್ ವಿತರಣಾ ಕಂಪನಿಗಳಿಗೆ (ಡಿಸ್ಕಾಮ್ಸ್) ಮೂಲಸೌಲಭ್ಯಗಳನ್ನು ಕಲ್ಪಿಸುವುದು ಸೇರಿದಂತೆ ತಮ್ಮ ವ್ಯವಸ್ಥೆ ಬಲಪಡಿಸಲು ಮತ್ತು ಹಣಕಾಸು ಸ್ಥಿರತೆ ಕಾಯ್ದುಕೊಳ್ಳಲು ಈ ಅನುದಾನ ನೀಡಲಾಗುವುದು ಎಂದು ಹೇಳಿದ್ದಾರೆ.

ಈ ಯೋಜನೆ ಅಡಿಯಲ್ಲಿ ಕೃಷಿ ಕ್ಷೇತ್ರಕ್ಕೆ ಸಮರ್ಪಕ ವಿದ್ಯುತ್ ಪೂರೈಸಲು ಉದ್ದೇಶ ಹೊಂದಲಾಗಿದೆ. ಸೌರಶಕ್ತಿ ಮೂಲಕ ಹಗಲು ಹೊತ್ತಿನಲ್ಲಿ ರೈತರಿಗೆ ವಿದ್ಯುತ್ ಪೂರೈಸಲು ಉದ್ದೇಶಿಸಲಾಗಿದೆ ಎಂದು ತಿಳಿಸಿದ್ದಾರೆ.

ಈ ಯೋಜನೆಗೂ ಮತ್ತು ಈ ಹಿಂದೆ ಘೋಷಿಸಿದ ಯೋಜನೆಗೂ ವ್ಯತ್ಯಾಸವಿದೆ. ಈ ಮೊತ್ತವನ್ನು ಷರತ್ತು ಆಧರಿಸಿ ಹಂಚಿಕೆ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ನಷ್ಟದಲ್ಲಿರುವ ವಿದ್ಯುತ್ ವಿತರಣಾ ಕಂಪನಿಗಳಿಗೆ ಈ ಯೋಜನೆ ಅಡಿಯಲ್ಲಿನ ಮೊತ್ತವು ದೊರೆಯುವುದಿಲ್ಲ. ಆದರೆ, ನಷ್ಟವನ್ನು ಸರಿಪಡಿಸಲು ಕೈಗೊಳ್ಳಲಾದ ಯೋಜನೆಗೆ ರಾಜ್ಯ ಸರ್ಕಾರದಿಂದ ಅನುಮೋದನೆ ಪಡೆದು ಕೇಂದ್ರ ಸರ್ಕಾರಕ್ಕೆ ಕಳುಹಿಸಿದಾಗ ಮಾತ್ರ ಅನುದಾನ ದೊರೆಯಬಹುದು ಎಂದು ಸಚಿವರು ತಿಳಿಸಿದ್ದಾರೆ.

ಜತೆಗೆ, 25 ಕೋಟಿ ಸ್ಮಾರ್ಟ್ ಮೀಟರ್‌ಗಳ ಅಳವಡಿಕೆ, 10 ಸಾವಿರ ಫೀಡರ್‌ಗಳ ಸ್ಥಾಪನೆ ಸೇರಿದಂತೆ ವಿವಿಧ ಯೋಜನೆಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಮುಂದಿನ 5 ವರ್ಷಗಳಲ್ಲಿ ತಾಂತ್ರಿಕ ಮತ್ತು ವಾಣಿಜ್ಯದ ಒಟ್ಟು ನಷ್ಟವನ್ನು ಶೇ 12ಕ್ಕೆ ಕಡಿಮೆ ಮಾಡುವ ಉದ್ದೇಶವನ್ನು ಹೊಂದಲಾಗಿದೆ. ಪ್ರಸ್ತುತ ಶೇಕಡ 21ರಷ್ಟು ನಷ್ಟ ಪ್ರಮಾಣ ಇದೆ ಎಂದು ವಿವರಿಸಿದ್ದಾರೆ.

ವಿದ್ಯುತ್ ವಿತರಣೆಗೆ ಸಂಬಂಧಿಸಿದ ಯೋಜನೆಯನ್ನು ಈ ವರ್ಷದ ಬಜೆಟ್‌ನಲ್ಲಿ ಘೋಷಿಸಲಾಗಿತ್ತು.

ಕೇಂದ್ರ ಯೋಜನೆಗಳಾದ ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆ, ದೀನ್ ದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆ, ಪ್ರಧಾನ್ ಮಂತ್ರಿ ಸಹಜ್ ಬಿಜ್ಲಿ ಹರ್ ಘರ್ ಯೋಜನೆ (ಸೌಭಾಗ್ಯ) ಯೋಜನೆಗಳು ವಿಲೀನಗೊಳ್ಳಲಿವೆ.

## ಭಾರತ್ ನೆಟ್‌ಗಾಗಿ ₹19 ಸಾವಿರ ಕೋಟಿ

ನವದೆಹಲಿ: ಭಾರತ್‌ನೆಟ್ ಯೋಜನೆಯನ್ನು ಸರ್ಕಾರ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಅನುಷ್ಠಾನಗೊಳಿಸಲು ₹19,041 ಕೋಟಿ ಮೊತ್ತದ ಯೋಜನೆಗೆ ಬುಧವಾರ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ.

ಕರ್ನಾಟಕವು ಸೇರಿದಂತೆ 16 ರಾಜ್ಯಗಳ ಗ್ರಾಮೀಣ ಪ್ರದೇಶದಲ್ಲಿ ಬ್ರಾಡ್‌ಬ್ಯಾಂಡ್ ಸೇವೆಯನ್ನು ತ್ವರಿತಗತಿಯಲ್ಲಿ ಕೈಗೊಳ್ಳಲು ಈ ಅನುದಾನ ಮೀಸಲಿಡಲು ಉದ್ದೇಶಿಸಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟದಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

16 ರಾಜ್ಯಗಳ ಸುಮಾರು 3.6 ಲಕ್ಷ ಹಳ್ಳಿಗಳನ್ನು ಒಳಗೊಂಡ ಈ ಯೋಜನೆಗೆ ಒಟ್ಟು ₹29,430 ಕೋಟಿ ವಿನಿಯೋಗಿಸಲಾಗುತ್ತಿದ್ದು, ಇದರಲ್ಲಿ ಕಾರ್ಯಸಾಧ್ಯತೆಯ ಅಂತರ ನಿಧಿಗೆ ಕೇಂದ್ರ ಸರ್ಕಾರ ₹19,041 ಕೋಟಿ ವೆಚ್ಚ ಮಾಡಲಿದೆ ಎಂದು ಸಚಿವ ರವಿಶಂಕರ್ ಪ್ರಸಾದ್ ತಿಳಿಸಿದರು.

ಪರಿಷ್ಕೃತ ಯೋಜನೆಯಲ್ಲಿ ಕರ್ನಾಟಕ, ಕೇರಳ ರಾಜಸ್ಥಾನ, ಹಿಮಾಚಲ ಪ್ರದೇಶ, ಪಂಜಾಬ್, ಹರಿಯಾಣ, ಉತ್ತರ ಪ್ರದೇಶ, ಮಧ್ಯಪ್ರದೇಶ, ಪಶ್ಚಿಮ ಬಂಗಾಳ, ಅಸ್ಸಾಂ, ಮೇಘಾಲಯ, ಮಣಿಪುರ, ಮಿಜೋರಾಂ, ತ್ರಿಪುರ, ನಾಗಾಲ್ಯಾಂಡ್ ಮತ್ತು ಅರುಣಾಚಲ ಪ್ರದೇಶ ರಾಜ್ಯಗಳ ಗ್ರಾಮ ಪಂಚಾಯಿತಿಗಳು ಸೇರಿ ಅಂದಾಜು 3.61 ಲಕ್ಷ ಗ್ರಾಮಗಳನ್ನು ಒಳಗೊಂಡಿವೆ ಎಂದು ಅವರು ಹೇಳಿದರು.

ಇಲ್ಲಿಯವರೆಗೆ 2.5 ಲಕ್ಷ ಗ್ರಾಮ ಪಂಚಾಯಿತಿಗಳಲ್ಲಿ ಒಟ್ಟು 1.56 ಲಕ್ಷ ಗ್ರಾಮ ಪಂಚಾಯಿತಿಗಳನ್ನು ಬ್ರಾಡ್‌ಬ್ಯಾಂಡ್ ಸಂಪರ್ಕಕ್ಕೆ ಬೆಸೆಯಲಾಗಿದೆ.

'ಪರಿಷ್ಕೃತ ಯೋಜನೆಯು ಭಾರತ್‌ನೆಟ್ ರಚನೆ, ನವೀಕರಣ, ಕಾರ್ಯಾಚರಣೆ, ನಿರ್ವಹಣೆ ಮತ್ತು ಬಳಕೆ ಒಳಗೊಂಡಿದೆ. ಪಿಪಿಪಿ ಮಾದರಿಗೆ ಅನುಮೋದಿಸಲಾದ ಅಂದಾಜು ಗರಿಷ್ಠ ಕಾರ್ಯಸಾಧ್ಯತೆಯ ಅಂತರ ನಿಧಿಯು ₹19,041 ಕೋಟಿ ಆಗಿದೆ. ಇದಕ್ಕಾಗಿ ಸ್ಪರ್ಧಾತ್ಮಕ ಅಂತರರಾಷ್ಟ್ರೀಯ ಬಿಡ್ಡಿಂಗ್ ನಡೆಯಲಿದೆ' ಎಂದು ಸರ್ಕಾರದ ಹೇಳಿಕೆ ತಿಳಿಸಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಶ್ರೀ. ಬಿ. ನಾರಾಯಣ್ ರಾವ್

ಮಾಜಿ ಶಾಸಕರು,
ಬಸವಕಲ್ಯಾಣ ತಾಲುಕು, ಬೀದರ್ ಜಿಲ್ಲೆ.
66ನೇ ಹುಟ್ಟುಹಬ್ಬ
01-07-2021
ನಮ್ಮ ಕುಟುಂಬದ ಹಿರಿಯರಾದ ದಿವಂಗತ ಶ್ರೀ ಬಿ. ನಾರಾಯಣ್ ರಾವ್‌ರವರ 66ನೇ ಹುಟ್ಟುಹಬ್ಬ ಆಚರಿಸುವ ಈ ಸಂದರ್ಭದಲ್ಲಿ ಭಗವಂತನು ಇವರ ಆತ್ಮಕ್ಕೆ ಶಾಂತಿಯನ್ನು ನೀಡಲೆಂದು ಕೋರುತ್ತೇವೆ.
ಮಾಲಾ ಬಿ. ನಾರಾಯಣ್ ರಾವ್ (ಮೊಬೈಲ್: 96632 33852)
ಗೌತಮ್ ಬಿ. ನಾರಾಯಣ್ ರಾವ್ (ಮೊಬೈಲ್: 94805 58111)
ರಾಹುಲ್ ಬಿ. ನಾರಾಯಣ್ ರಾವ್ (ಮೊಬೈಲ್: 88843 88759)
ಬಂಧುಗಳು ಮತ್ತು ಮಿತ್ರರು
BMLA-21202-PV

10ನೇ ವರ್ಷದ ಚಿರಸ್ಮರಣೆ

ಎಂ. ಅಂತೋಣಿ ಸ್ವಾಮಿ
ಜನನ:28-6-1914 ನಿಧನ:1-7-2011
ನೀವು ನಮ್ಮನ್ನಗಲಿ ಹತ್ತು ವರ್ಷವಾಯಿತು ನಿಮ್ಮ ನೆನಪೇ ನಮಗೆ ದಾರಿ ದೀಪವಾಗಿದೆ.
ಸದಾ ಸ್ಮರಿಸುವ:
ಪತ್ನಿ ಮತ್ತು ಕುಟುಂಬವರ್ಗ

14ನೇ ವರ್ಷದ ಪುಣ್ಯಸ್ಮರಣೆ

ಶ್ರೀ. ಬಿ.ಎನ್. ಸಂಪತ್‌ಕುಮಾರ್
BA, LLB, ವಕೀಲರು
ನಿಮ್ಮ ನೆನಪು ಸದಾ ಹಸಿರು ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲೆಂದು ಸದಾ ಸ್ಮರಿಸುವ
ದುಃಖತಪ್ತರು: ತಾಯಿ, ಸಹೋದರಿಯರು, ಭಾವಂದಿರು, ಮಕ್ಕಳು ಮತ್ತು ಕುಟುಂಬವರ್ಗದವರು

LOOKING TO BUILD, BUY OR SELL A PROPERTY
Please refer Classifieds on Sunday

NAME CHANGE ANNOUNCEMENT
Log on to :
dhclassifieds.com

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers
ಬೆಂಗಳೂರಿನಲ್ಲಿ ೪ ಜನರ ಒಂದು ಕುಟುಂಬಕ್ಕೆ ಚಾಲಕ ಮತ್ತು ಅಡುಗೆ ಕೆಲಸಕ್ಕೆ ದಂಪತಿಗಳು ಬೇಕಾಗಿದ್ದಾರೆ. ಉತ್ತಮ ಸಂಬಳ, ಊಟ ಮತ್ತು ವಸತಿ ವ್ಯವಸ್ಥೆ ನೀಡಲಾಗುತ್ತದೆ. ಸಂಪರ್ಕಿಸಿ: 9741900909

General
ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧಕಂಪನಿ ಹಾಗೂ ಆಫೀಸ್ ಕೆಲಸಗಳಿಗೆಯುವಕ ಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-.8792155097, 8792156697

ಬೆಂಗಳೂರಿನಲ್ಲಿರುವ ಆಯುರ್ವೇದಿಕ್ ಕಂಪನಿಗೆ ಪ್ರತಿ ಜಿಲ್ಲೆಯಿಂದ ಆಯುರ್ವೇದಿಕ್ ವೈದ್ಯರು, ನೇರ ಮಾರಾಟ ಪ್ರತಿನಿದಿಗಳು ಬೇಕಾಗಿದ್ದಾರೆ. ಆಕರ್ಷಕ ಸಂಬಳ. 8892501007/ 9606701007

ಪುರುಷರು/ ಮಹಿಳೆಯರು ಸಾಮಾನ್ಯ ಕಂಪ್ಯೂಟರ್ ಜ್ಞಾನವುಳ್ಳವರಿಗೆ ಆನ್ ಲೈನ್ ನಲ್ಲಿ ಕೆಲಸಮಾಡಿ ವಾರವಾರ ಆದಾಯ ಗಳಿಸಲು ಕರೆಮಾಡಿ: 8762024160

Part-Time Jobs
ಮನೆಯಿಂದಲೇ ಕುಳಿತು ಫಾರಂನಲ್ಲಿ ಅಂಕಿಗಳು ತುಂಬುವ ಮೂಲಕ,ಗಳಿಸಿ 15,000-25,000/-. ಕೊರಿಯರ್ ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9108059956, 9901929956

ನಿಮ್ಮ ಬಿಡುವಿನ ವೇಳೆಯಲ್ಲಿ ಮನೆಯಿಂದಲೇ ಕುಳಿತು ಬುಕ್ ಬರೆಯುವ ಫಾರಂ ತುಂಬುವ ಎಕ್ಸಲ್ ಶೀಟ್ ಡೇಟಾ ಎಂಟ್ರಿ ಕೆಲಸ ಮಾಡಿ ಗಳಿಸಿ ತಿಂಗಳಿಗೆ 12,000-15,000 ಕನ್ನಡ,ಇಂಗ್ಲೀಷ್ ಓದಲು ಬರೆಯಲು ಬರುವ ಎಲ್ಲರಿಗೂ ಮುಕ್ತ ಅವಕಾಶ. 9902603707, 9686114647

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted
ಸೇವಾ ಮನೋಭಾವವುಳ್ಳ ಯುವಕ, ಯುವತಿಯರು ಹಾಗೂ ದಂಪತಿಗಳು ಬೆಂಗಳೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ,ಉಚಿತ ಊಟ ವಸತಿಯೊಂದಿಗೆ ಉತ್ತಮ ಸಂಭಳ, ತರಬೇತಿ ನೀಡಲಾಗುವುದು ಸಂಪರ್ಕಿಸಿ: 9916551457/ 9916544057/ 9900371597/ 6363957317

ಭವಿಷ್ಯ
Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071

★||ಶ್ರೀಆಂಜನೇಯಸ್ವಾಮಿ||★ ಆರಾಧನೆಯಿಂದ ಪ್ರೀತಿಪ್ರೇಮ, ವಶೀಕರಣ, ಸಾಲದಬಾದೆ, ಕೋರ್ಟ್‌ಕೇಸ್, ವ್ಯಾಪಾರ, ಸಂತಾನ ಇನ್ನೂಯಾವುದೇ ಗುಪ್ತ ಸಮಸ್ಯೆಗಳಿಗೆ ಫೋನಿನ ಮೂಲಕ ಪರಿಹಾರ. 9972550137

★||ಶ್ರೀಶಾಕಂಬರಿದೇವಿ||★ ಜ್ಯೋತಿಷ್ಯರು ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ ಇನ್ನೂಯಾವುದೇ ಸಮಸ್ಯೆಗಳಿಗೆ 11ನಿಮಿಷದಲ್ಲಿ ಶಾಶ್ವತ ಪರಿಹಾರ. ಡಾ|| ವಿವೇಕಾನಂದ ಜೋಶಿ 7899899949

★||ಕೊಳ್ಳೇಗಾಲದ ಪ್ರಖ್ಯಾತ ಮೋಡಿಮಾಂತ್ರಿಕರು||★ ನಿಮ್ಮ ಸಮಸ್ಯೆ ಯಾವುದೇಯಿದ್ದರೂ ಶ್ರೀ ಭದ್ರಕಾಳಿದೇವಿಯ ಬಲಿಷ್ಠ ಪೂಜೆಯಿಂದ ಗ್ಯಾರಂಟಿ ಪರಿಹಾರ. ವಿಶೇಷ ಸೂಚನೆ: ನಮ್ಮ ಮೋಡಿ ಸಿದ್ಧಾಂತ ತಪ್ಪದು. ಸ್ತ್ರೀ ಮೋಡಿ, ಪುರುಷ ಮೋಡಿಗಾರರು. ಮೋಡಿ ಕೃಷ್ಣಪ್ಪ. 9880877747

★ಮಂತ್ರದುರ್ಗಿ ಮಾಂತ್ರಿಕರು★ ಕೇರಳ, ಕೊಳ್ಳೆಗಾಲದ ಮಂತ್ರಸಿದ್ಧ ವಾಕ್ಸಿದ್ಧಿಯಿಂದ ಸ್ತ್ರೀಪುರುಷ ವಶೀಕರಣ ಕೆಲವೇ ಗಂಟೆಗಳಲ್ಲಿ.ಫೋನಿನ ಮೂಖಾಂತರ ಶಾಶ್ವತ ಪರಿಹಾರ. (ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್) ಪಂ.ರಾಮಚಂದ್ರಭಟ್. 9008711329

EDUCATION SPECIAL
We are coming out with special offer for Admission Notice, Education Success Congratulation Ads
For details contact:
Jerry : 9731810277
Vishal : 9845114560
Tanveer: 9886213331
E-mail: dhclassifieds@deccanherald.co.in

DH Classifieds
BOOK YOUR AD FOR SUNDAY & GET 50% OFF ON WEEKDAYS
For Lineage & Single/ Multi Column Classifieds Display ads
For more information contact:
9880856233 /9845114560
9886213331

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

## ರಜೌರಿ: ಡ್ರೋನ್ ಬಳಕೆಗೆ ನಿಷೇಧ

ಜಮ್ಮು: ಜಮ್ಮು ಮತ್ತು ಕಾಶ್ಮೀರದ ರಜೌರಿ ಜಿಲ್ಲೆಯಲ್ಲಿ ಡ್ರೋನ್‌ಗಳ ಸಂಗ್ರಹ, ಮಾರಾಟ, ಬಳಕೆ ಮತ್ತು ಸಾಗಣೆಯನ್ನು ನಿಷೇಧಿಸಲಾಗಿದೆ.

ಜಮ್ಮು ವಾಯು ಪಡೆ ನೆಲೆ ಮೇಲೆ ಬಾಂಬ್ ದಾಳಿ ಪ್ರಕರಣದ ಬಳಿಕ ಜಿಲ್ಲಾಡಳಿತ ಈ ಕ್ರಮ ಕೈಗೊಂಡಿದೆ.

ಜಿಲ್ಲಾಧಿಕಾರಿ ರಾಜೇಶ್ ಕುಮಾರ್ ಶವಾನ್ ಈ ಬಗ್ಗೆ ಆದೇಶ ಹೊರಡಿಸಿದ್ದಾರೆ. ಡ್ರೋನ್ ಅಥವಾ ಡ್ರೋನ್ ರೀತಿಯ ವಸ್ತುಗಳನ್ನು ನಾಗರಿಕರು ಹೊಂದಿದ್ದರೆ ಸ್ಥಳೀಯ ಪೊಲೀಸ್ ಠಾಣೆಗೆ ನೀಡಬೇಕು ಎಂದು ಸೂಚಿಸಿದ್ದಾರೆ.

ಆದರೆ, ನಕಾಶೆ, ಸಮೀಕ್ಷೆ ಮತ್ತು ನಿಗಾವಹಿಸುವ ಉದ್ದೇಶದಿಂದ ಸರ್ಕಾರಿ ಸಂಸ್ಥೆಗಳು ಡ್ರೋನ್‌ಗಳನ್ನು ಬಳಸುವುದಾದರೆ ಸ್ಥಳೀಯ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ಡ್ರೋನ್ ಕ್ಯಾಮೆರಾಗಳು ಮತ್ತು ಹಾರಾಟ ಮಾಡುವ ಗೊಂಬೆಗಳನ್ನು ಸಹ ನಾಗರಿಕರು ಸ್ಥಳೀಯ ಪೊಲೀಸ್ ಠಾಣೆಯಲ್ಲಿಟ್ಟು ರಶೀದಿ ಪಡೆಯಬೇಕು ಎಂದು ಸೂಚಿಸಿದ್ದಾರೆ

### 2 ಕೋಟಿ ಡೋಸ್ ರಫ್ತು ಸ್ಥಗಿತ ಪ್ರಕರಣ: ಭಾರತ್ ಬಯೊಟೆಕ್ ಸ್ಪಷ್ಟನೆ

# ಬ್ರೆಜಿಲ್ ಲಸಿಕೆ ಒಪ್ಪಂದದಲ್ಲಿ ತಪ್ಪೆಸಗಿಲ್ಲ

ನವದೆಹಲಿ (ಪಿಟಿಐ): 'ಬ್ರೆಜಿಲ್‌ಗೆ 2 ಕೋಟಿ ಡೋಸ್ ಕೋವ್ಯಾಕ್ಸಿನ್ ಲಸಿಕೆ ಪೂರೈಸುವ ಒಪ್ಪಂದ ಮಾಡಿಕೊಳ್ಳುವಲ್ಲಿ ಯಾವುದೇ ತಪ್ಪೆಸಗಿಲ್ಲ' ಎಂದು ಭಾರತ್ ಬಯೊಟೆಕ್ ಸ್ಪಷ್ಟನೆ ನೀಡಿದೆ.

ಭಾರತ್ ಬಯೊಟೆಕ್‌ನ ಕೋವ್ಯಾಕ್ಸಿನ್ ಲಸಿಕೆಯ 2 ಕೋಟಿ ಡೋಸ್‌ಗಳನ್ನು ತುರ್ತು ಬಳಕೆಗೆ ಖರೀದಿಸಲು ಬ್ರೆಜಿಲ್ ಸರ್ಕಾರ ಜೂನ್ 4ರಂದು ಒಪ್ಪಂದ ಮಾಡಿಕೊಂಡಿದೆ. ಪ್ರತಿ ಡೋಸ್‌ಗೆ 15 ಡಾಲರ್‌ನಂತೆ (₹ 1,115) 2 ಕೋಟಿ ಡೋಸ್‌ಗಳನ್ನು, ಅಂದಾಜು ₹ 2,470 ಕೋಟಿ ಮೊತ್ತಕ್ಕೆ ಖರೀದಿಸಲು ಒಪ್ಪಂದ ಮಾಡಿಕೊಂಡಿದೆ. ಈ ಒಪ್ಪಂದ ಮಾಡಿಕೊಳ್ಳುವಲ್ಲಿ ಬ್ರೆಜಿಲ್ ಅಧ್ಯಕ್ಷ ಜೈರ್ ಬೋಲ್ಸಾನ್ಯಾರೋ ಅಕ್ರಮ ಎಸಗಿದ್ದಾರೆ ಎಂದು ಬ್ರೆಜಿಲ್‌ನ ವಿರೋಧ ಪಕ್ಷಗಳು ಆರೋಪಿಸಿವೆ.

**ಆರೋಪಗಳು**

- ಬ್ರೆಜಿಲ್‌ನಲ್ಲಿ ಕೋವ್ಯಾಕ್ಸಿನ್ ಲಸಿಕೆಗಳನ್ನು ಬಳಸಲು ಅನುಮತಿ ಇಲ್ಲದೇ ಇದ್ದರೂ, ಆರೋಗ್ಯ ಸಚಿವಾಲಯವು ಒಮ್ಮೆ ತಿರಸ್ಕರಿಸಿದ್ದ ಲಸಿಕೆಯನ್ನು ಖರೀದಿಸಲು ಒಪ್ಪಂದ ಮಾಡಿಕೊಳ್ಳಲಾಗಿದೆ
- ಬ್ರೆಜಿಲ್‌ನಲ್ಲಿ ಕೋವ್ಯಾಕ್ಸಿನ್ ಹೊರತುಪಡಿಸಿ ಇನ್ನೂ ಐದು ಲಸಿಕೆಗಳ ಬಳಕೆಗೆ ಅನುಮತಿ ನೀಡಲಾಗಿದೆ. ವಿಶ್ವದ ಹಲವೆಡೆ ಬಳಕೆಯಲ್ಲಿರುವ ಆ ಲಸಿಕೆಗಳ ದರಕ್ಕಿಂತಲೂ, ಹೆಚ್ಚಿನ ದರದಲ್ಲಿ ಕೋವ್ಯಾಕ್ಸಿನ್ ಅನ್ನು ಖರೀದಿಸಲಾಗಿದೆ
- ಈ ಒಪ್ಪಂದ ಕುದುರಿಸುವುದರಲ್ಲಿ ಸಿಂಗಪುರದ ಮ್ಯಾಡಿಸನ್ ಬಯೊಟೆಕ್ 4.5 ಕೋಟಿ ಡಾಲರ್ (ಅಂದಾಜು ₹ 330 ಕೋಟಿ) ಮೊತ್ತದ ಬಿಲ್ ನೀಡಿದೆ. ಈ ಬಿಲ್ ನೀಡಿಕೆಯಲ್ಲಿ ಸಾಕಷ್ಟು ಲೋಪಗಳಿವೆ

**ಸ್ಪಷ್ಟನೆ**

- ಕೋವ್ಯಾಕ್ಸಿನ್‌ನ ಕ್ಲಿನಿಕಲ್ ಟ್ರಯಲ್‌ನ ದತ್ತಾಂಶಗಳನ್ನು ಆಧರಿಸಿ ಈ ಲಸಿಕೆ ಬಳಕೆಗೆ ಬ್ರೆಜಿಲ್‌ನ ಆರೋಗ್ಯ ಸಚಿವಾಲಯ ಒಪ್ಪಿಗೆ ನೀಡಿದೆ
- ವಿಶ್ವದ ಬೇರೆ ದೇಶಗಳಿಗೆ ಕೋವ್ಯಾಕ್ಸಿನ್ ಲಸಿಕೆಯ ಪ್ರತಿ ಡೋಸ್ ಅನ್ನು 15-20 ಡಾಲರ್‌ಗೆ (ಅಂದಾಜು ₹ 1,115ರಿಂದ ₹ 1,486) ಮಾರಾಟ ಮಾಡಲಾಗುತ್ತಿದೆ. ಬ್ರೆಜಿಲ್‌ಗೆ 15 ಡಾಲರ್‌ಗೆ ಒಂದು ಡೋಸ್‌ನಂತೆ ಪೂರೈಕೆ ಮಾಡಲು ಒಪ್ಪಂದ ಮಾಡಿಕೊಳ್ಳಲಾಗಿದೆ
- ಭಾರತ್ ಬಯೊಟೆಕ್‌ನ ಮುಖ್ಯಸ್ಥ ಕೃಷ್ಣಾ ಎಲ್ಲಾ ಅವರೇ ಲಸಿಕೆ ಸಂಶೋಧನೆ, ಕ್ಲಿನಿಕಲ್ ಟ್ರಯಲ್ ಮತ್ತು ಲಸಿಕೆ ಮಾರಾಟ ವ್ಯವಹಾರಗಳನ್ನು ನಿರ್ವಹಿಸಲು ಮ್ಯಾಡಿಸನ್ ಬಯೊಟೆಕ್ ಕಂಪನಿಯನ್ನು 2020ರಲ್ಲಿ ಸ್ಥಾಪಿಸಿದ್ದರು. ಆ ಕಂಪನಿ ಮೂಲಕವೇ ಕೆಲವು ವಹಿವಾಟು ನಡೆದಿವೆ

'ಬ್ರೆಜಿಲ್‌ಗೆ ಲಸಿಕೆ ಮಾರಾಟ ಮಾಡುವ ಸಂಬಂಧ 2020ರ ನವೆಂಬರ್‌ನಿಂದಲೇ ಮಾತುಕತೆ ನಡೆಯುತ್ತಿದೆ. 8 ತಿಂಗಳ ಸುದೀರ್ಘ ಮಾತುಕತೆಯ ನಂತರ ಒಪ್ಪಂದ ಅಂತಿಮ ರೂಪಕ್ಕೆ ಬಂದಿದೆ. ಈ ಒಪ್ಪಂದ ಮಾಡಿಕೊಳ್ಳುವಲ್ಲಿ ಎಲ್ಲಾ ಪ್ರಕ್ರಿಯೆಗಳನ್ನು ಕ್ರಮವಾಗಿ ನಡೆಸಿದ್ದೇವೆ. ಯಾವ ತಪ್ಪೂ ಎಸಗಿಲ್ಲ. ಒಪ್ಪಂದ ಆಗಿದ್ದರೂ, ಈವರೆಗೆ ಒಂದು ರೂಪಾಯಿ ಮುಂಗಡವನ್ನೂ ನಾವು ಪಡೆದಿಲ್ಲ. ಒಂದು ಡೋಸ್ ಲಸಿಕೆಯನ್ನೂ ಪೂರೈಸಿಲ್ಲ. ಈ ಪ್ರಕ್ರಿಯೆ ಜಾರಿಯಲ್ಲಿದೆ' ಎಂದು ಭಾರತ್ ಬಯೊಟೆಕ್ ಹೇಳಿದೆ.

## ಅಶ್ಲೀಲ ವಿಷಯ ತೆಗೆದುಹಾಕಿ: ಟ್ವಿಟರ್‌ಗೆ ಸೂಚನೆ

ರೇಖಾ ಶರ್ಮಾ

ನವದೆಹಲಿ(ಪಿಟಿಐ): ಟ್ವಿಟರ್‌ನಲ್ಲಿರುವ ಎಲ್ಲ ಅಶ್ಲೀಲ ಚಿತ್ರ, ವಿಡಿಯೊ ಮತ್ತು ಅಶ್ಲೀಲ ವಿಷಯಗಳನ್ನು ಒಂದು ವಾರದೊಳಗೆ ಟ್ವಿಟರ್ ತಾಣದಿಂದ ತೆಗೆದುಹಾಕುವಂತೆ ರಾಷ್ಟ್ರೀಯ ಮಹಿಳಾ ಆಯೋಗ (ಎನ್‌ಸಿಡಬ್ಲ್ಯು) ಟ್ವಿಟರ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚನೆ ನೀಡಿದೆ.

ಟ್ವಿಟರ್‌ನ ಹಲವಾರು ಪ್ರೊಫೈಲ್‌ಗಳಲ್ಲಿ ಅಶ್ಲೀಲ ಚಿತ್ರ, ಅಶ್ಲೀಲ ವಿಡಿಯೊ ಹಾಗೂ ಅಶ್ಲೀಲ ವಿಷಯಗಳು ಇರುವ ಬಗ್ಗೆ ಎನ್‌ಸಿಡಬ್ಲ್ಯು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿದೆ. ಟ್ವಿಟರ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕರಿಗೂ ಎನ್‌ಸಿಡಬ್ಲ್ಯು ಅಧ್ಯಕ್ಷೆ ಎಂ.ಎಸ್. ರೇಖಾ ಶರ್ಮಾ ಅವರು ಪತ್ರ ಬರೆದಿದ್ದು, ಅಶ್ಲೀಲ ಚಿತ್ರ, ವಿಡಿಯೊ ಮತ್ತು ಅಶ್ಲೀಲ ವಿಷಯಗಳನ್ನು ತೆಗೆದು ಹಾಕಲು ವಾರದ ಗಡುವು ನೀಡಿದ್ದಾರೆ.

ಈ ಮೊದಲು ಇದೇ ರೀತಿಯ ದೂರು ಬಂದಿದ್ದು, ಆಯೋಗವು ತಕ್ಷಣದ ಕ್ರಮಕ್ಕಾಗಿ ಟ್ವಿಟರ್‌ನ ಗಮನಕ್ಕೆ ತಂದಿತು. ಆದರೆ, ಟ್ವಿಟರ್ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಎನ್‌ಸಿಡಬ್ಲ್ಯು ತಿಳಿಸಿದೆ.

ಭಾರತೀಯ ಕಾನೂನುಗಳನ್ನು ಉಲ್ಲಂಘಿಸುವುದಲ್ಲದೆ, ಟ್ವಿಟ್ಟರ್‌ನ ನೀತಿಯನ್ನೂ ಉಲ್ಲಂಘಿಸುವ ಇಂತಹ ನಿಷೇಧಿತ ವಿಷಯಗಳು ಟ್ವಿಟರ್‌ನಲ್ಲಿ ಲಭ್ಯವಾಗುತ್ತಿದ್ದರೂ ಅವುಗಳನ್ನು ತೆಗೆದುಹಾಕಲು ಕ್ರಮ ಕೈಗೊಂಡಿಲ್ಲ ಎಂದು ಆಯೋಗ ಅಸಮಾಧಾನ ವ್ಯಕ್ತಪಡಿಸಿದೆ.

### ಯೋಗಗುರು ರಾಮದೇವ್‌ಗೆ ಸುಪ್ರೀಂ ಕೋರ್ಟ್ ಸೂಚನೆ

# 'ಹೇಳಿಕೆಯ ಮೂಲಪ್ರತಿ ಸಲ್ಲಿಸಿ'



ನವದೆಹಲಿ (ಪಿಟಿಐ): ಕೋವಿಡ್ ಸಂದರ್ಭದಲ್ಲಿ ಅಲೋಪಥಿ ಔಷಧ ಬಳಕೆಗೆ ಸಂಬಂಧಿಸಿದಂತೆ ನೀಡಿರುವ ಹೇಳಿಕೆಯ ಮೂಲ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸುವಂತೆ ಸುಪ್ರೀಂ ಕೋರ್ಟ್, ಯೋಗಗುರು ರಾಮದೇವ್ ಅವರಿಗೆ ಬುಧವಾರ ಸೂಚಿಸಿದೆ.

ಕೋವಿಡ್–19ಗೆ ಅಲೋಪಥಿ ಔಷಧ ಬಳಕೆಯ ಬಗ್ಗೆ ರಾಮದೇವ್ ಅವರು ನೀಡಿದ್ದ ಹೇಳಿಕೆಯನ್ನು ಖಂಡಿಸಿ ಭಾರತೀಯ ವೈದ್ಯಕೀಯ ಸಂಘವು (ಐಎಂಎ) ಬಿಹಾರ ಮತ್ತು ಛತ್ತೀಸಗಡದ ವಿವಿಧ ಠಾಣೆಗಳಿಗೆ ದೂರು ನೀಡಿತ್ತು. ಈ ಎಫ್‌ಐಆರ್‌ಗಳನ್ನು ಕುರಿತ ತನಿಖೆಗೆ ತಡೆ ನೀಡಬೇಕೆಂದು ಕೋರಿ ರಾಮ್‌ದೇವ್ ಅವರು ಮನವಿ ಸಲ್ಲಿಸಿದ್ದರು.

ಈ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ನೇತೃತ್ವದ ಪೀಠವು, 'ಅವರು ಮೂಲತಃ ಹೇಳಿದ್ದೇನು? ಆ ಕುರಿತ ಪೂರ್ಣ ಮಾಹಿತಿಯನ್ನು ನೀವು ಇನ್ನೂ ಸಲ್ಲಿಸಲಿಲ್ಲ' ಎಂದು ರಾಮದೇವ್ ಪರ ವಕೀಲ ಮುಕುಲ್ ರೋಹಟಗಿ ಅವರಿಗೆ ಹೇಳಿತು. ಹೇಳಿಕೆಯ ಮೂಲಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸುವುದಾಗಿ ರೋಹಟಗಿ ಅವರು ತಿಳಿಸಿದ ನಂತರ, ನ್ಯಾಯಾಲಯವು ವಿಚಾರಣೆಯನ್ನು ಜುಲೈ 5ಕ್ಕೆ ಮುಂದೂಡಿತು.

'ರಾಮದೇವ್ ಒಬ್ಬ ಸಾರ್ವಜನಿಕ ವ್ಯಕ್ತಿ, ಯೋಗ ಮತ್ತು ಆಯುರ್ವೇದದ ಪ್ರತಿಪಾದಕ. ಕಾರ್ಯಕ್ರಮವೊಂದರಲ್ಲಿ ಅವರು ತಮಗೆ ವಾಟ್ಸ್‌ಆ್ಯಪ್‌ನಲ್ಲಿ ಬಂದಿದ್ದ ಸಂದೇಶವನ್ನು ಓದಿದ್ದರು. ವೈದ್ಯರ ವಿರುದ್ಧ ನನಗೆ ಯಾವುದೇ ವಿರೋಧಿ ಭಾವನೆ ಇಲ್ಲ ಎಂದು ಅವರು ಈಗಾಗಲೇ ಸ್ಪಷ್ಟಪಡಿಸಿದ್ದಾರೆ. ಆದರೂ ಬೇರೆಬೇರೆ ಕಡೆಗಳಲ್ಲಿ ಅವರ ವಿರುದ್ಧ ದೂರುಗಳನ್ನು ದಾಖಲಿಸಲಾಗಿದೆ. ಈ ಎಲ್ಲಾ ದೂರುಗಳನ್ನು ದೆಹಲಿಗೆ ವರ್ಗಾಯಿಸಿ, ಒಂದು ದೂರು ಎಂದು ಪರಿಗಣಿಸಬೇಕು' ಎಂದು ರೋಹಟಗಿ ಮನವಿ ಮಾಡಿದರು.

'ಕಳೆದ ವರ್ಷ ಪತಂಜಲಿ ಸಂಸ್ಥೆಯು 'ಕೊರೊನಿಲ್' ಎಂಬ ಔಷಧ ಬಿಡುಗಡೆ ಮಾಡಿತ್ತು. ಆಗ ಅಲೋಪಥಿ ವೈದ್ಯರು ರಾಮದೇವ್ ವಿರುದ್ಧ ಹರಿಹಾಯ್ದಿದ್ದರು. ಆದರೂ ರಾಮದೇವ್ ವೈದ್ಯರನ್ನು ವಿರೋಧಿಸುತ್ತಿಲ್ಲ. ಅವರೇಕೆ ಬೇರೆಬೇರೆ ಕಡೆ ಓಡಾಡಬೇಕು. ಪ್ರತಿಯೊಬ್ಬರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯವಿದೆ' ಎಂದು ರೋಹಟಗಿ ವಾದಿಸಿದರು.

ಅಲೋಪಥಿ ವೈದ್ಯ ಪದ್ಧತಿಯ ಬಗ್ಗೆ ಸಮಾರಂಭವೊಂದರಲ್ಲಿ ರಾಮದೇವ್ ಅವರು ನೀಡಿದ್ದ ಹೇಳಿಕೆಯು ಭಾರಿ ವಿವಾದಕ್ಕೆ ಕಾರಣವಾಗಿತ್ತು. ದೇಶದಾದ್ಯಂತ ಅದಕ್ಕೆ ವಿರೋಧ ಬಂದ ಬಳಿಕ ಅವರು ತಮ್ಮ ಹೇಳಿಕೆಯನ್ನು ಹಿಂಪಡೆದಿದ್ದರು.

## ರಾಮಮಂದಿರ ಟ್ರಸ್ಟ್ ವಿರುದ್ಧ ಆರೋಪ: ಸಾಧುಗಳಲ್ಲೇ ಒಡಕು

ಲಖನೌ: ರಾಮಮಂದಿರ ನಿರ್ಮಾಣದ ಮೇಲ್ವಿಚಾರಣೆ ನೋಡಿಕೊಳ್ಳುತ್ತಿರುವ ರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ವಿರುದ್ಧ ಭೂಮಿ ಖರೀದಿ ವಿಚಾರದಲ್ಲಿ ಭ್ರಷ್ಟಾಚಾರದ ಆರೋಪ ಕೇಳಿಬಂದ ಬೆನ್ನಲ್ಲೆ, ಅಯೋಧ್ಯೆಯ ಸಾಧುಗಳ ಬಣಗಳಲ್ಲಿ ಭಿನ್ನಾಭಿಪ್ರಾಯ ಕಂಡುಬಂದಿದೆ.

ವಿಶ್ವ ಹಿಂದೂ ಪರಿಷತ್‌ಗೆ (ವಿಎಚ್‌ಪಿ) ನಿಷ್ಠರಾಗಿರುವ ಸಾಧುಗಳ ಒಂದು ಬಣ ಟ್ರಸ್ಟ್‌ಗೆ ಬೆಂಬಲ ನೀಡಿದರೆ, ಮತ್ತೊಂದು ಬಣವು ಭ್ರಷ್ಟಾಚಾರ ಆರೋಪದ ಕುರಿತು ತನಿಖೆ ನಡೆಸಬೇಕೆಂದು ಒತ್ತಾಯಿಸಿದೆ.

ಮಹಾಂತ ಧರ್ಮ ದಾಸ್ ನೇತೃತ್ವದಲ್ಲಿ ಮಂಗಳವಾರ ಅಯೋಧ್ಯೆಯ ಸರಯೂ ನದಿ ದಂಡೆಯಲ್ಲಿ ಹನುಮಾನ್ ಚಾಲೀಸಾ ಪಠಿಸಿದ ಸಾಧುಗಳ ಗುಂಪೊಂದು ಭ್ರಷ್ಟಾಚಾರ ಆರೋಪದ ತನಿಖೆ ನಡೆಸಲು ಹನುಮಾನ್ ದೇವರಿಗೆ ಮನವಿ ಪತ್ರವೊಂದನ್ನು ಸಮರ್ಪಿಸಿದೆ.

'ರಾಮಮಂದಿರ ನಿರ್ಮಾಣಕ್ಕೆ ಜನರು ಹಣವನ್ನು ದೇಣಿಗೆ ನೀಡಿದ್ದಾರೆ. ಭ್ರಷ್ಟಾಚಾರದ ಆರೋಪಗಳ ಹಿನ್ನೆಲೆಯಲ್ಲಿ ಕೇಂದ್ರವು ಈ ಬಗ್ಗೆ ತನಿಖೆ ನಡೆಸಬೇಕು' ಎಂದೂ ಮಹಾಂತ ಧರ್ಮ ದಾಸ್ ಅವರು ಒತ್ತಾಯಿಸಿದ್ದಾರೆ. ಇದನ್ನು ಬೆಂಬಲಿಸಿರುವ ಮತ್ತೊಬ್ಬ ಸಾಧು ಮಹಾಂತ ದಿಲೀಪ್ ದಾಸ್ ಅವರು ಕೂಡಾ ತನಿಖೆಗೆ ಆಗ್ರಹಿಸಿದ್ದಾರೆ.

ರಾಷ್ಟ್ರೀಯ ಹಿಂದೂ ರಕ್ಷಾ ಸೇನಾದ ಅಧ್ಯಕ್ಷ ಸ್ವಾಮಿ ಪ್ರಮೋದ್ ಆನಂದ್ ಗಿರಿ ಅವರು, 'ಟ್ರಸ್ಟ್ ವಿರುದ್ಧದ ಆರೋಪಗಳನ್ನು ಅಲ್ಲಗಳೆದಿದ್ದು, ಈ ಬಗ್ಗೆ ಪ್ರಶ್ನಿಸಿದವರನ್ನು ಹಿಂದೂ ವಿರೋಧಿ ಗ್ಯಾಂಗ್‌ನ ಸದಸ್ಯರು' ಎಂದು ದೂರಿದ್ದಾರೆ.

ಎಎಪಿ ಮುಖಂಡ ಹಾಗೂ ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್ ಮತ್ತು ಸಮಾಜವಾದಿ ಪಕ್ಷದ ಮುಖಂಡ ತೇಜ್ ನಾರಾಯಣ್ ಪಾಂಡೆ ಅವರು, '₹2 ಕೋಟಿ ಮೌಲ್ಯದ ಜಮೀನನ್ನು ರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ₹ 18.5 ಕೋಟಿಗೆ ಖರೀದಿಸಿದೆ' ಎಂದು ಆರೋಪಿಸಿದ್ದಾರೆ.

ಅಲ್ಲದೆ, 'ಟ್ರಸ್ಟ್‌ನ ಕಾರ್ಯದರ್ಶಿ ಚಂಪತ್ ರಾಯ್ ಅವರು ಭ್ರಷ್ಟಾಚಾರ ನಡೆಸಿದ್ದಾರೆ ಎಂದು ಆರೋಪಿಸಿದ್ದು, ಈ ಬಗ್ಗೆ ಸಿಬಿಐ ತನಿಖೆ ನಡೆಸಬೇಕು' ಎಂದೂ ಒತ್ತಾಯಿಸಿದ್ದಾರೆ.

## ರ‍್ಯಾಲಿಗೆ ಅನುಮತಿ ಬೇಡ: ಬಾಂಬೆ ಹೈಕೋರ್ಟ್

ಮುಂಬೈ (ಪಿಟಿಐ): ರಾಜ್ಯದಲ್ಲಿ ರಾಜಕೀಯ ಸಮಾವೇಶಗಳನ್ನು ನಿಲ್ಲಿಸಬೇಕು ಎಂದು ಬಾಂಬೆ ಹೈಕೋರ್ಟ್ ಬುಧವಾರ ಮಹಾರಾಷ್ಟ್ರ ಸರ್ಕಾರಕ್ಕೆ ಸೂಚಿಸಿದೆ. ರಾಜ್ಯದಲ್ಲಿ ಕೋವಿಡ್ ಸಾಂಕ್ರಾಮಿಕ ಇರುವಾಗಲೇ ಕೋವಿಡ್ ನಿಯಮಾವಳಿಗಳನ್ನು ಗಾಳಿಗೆ ತೂರಿ ರಾಜಕೀಯ ಸಮಾವೇಶಗಳನ್ನು ನಡೆಸಲಾಗುತ್ತದೆ ಎಂದು ನ್ಯಾಯಮೂರ್ತಿಗಳಾದ ದೀಪಂಕರ್ ಗುಪ್ತಾ ಮತ್ತು ಜಿ.ಎಸ್. ಕುಲಕರ್ಣಿ ಅವರಿದ್ದ ಪೀಠ ಹೇಳಿದೆ.

**ಕೊರೊನಾ ಸೋಂಕು ನಿಯಂತ್ರಣಕ್ಕೆ ಬರುವ ವರೆಗೆ ಕಾಯಲು ಸಾಧ್ಯವಿಲ್ಲವೇ. ರಾಜಕೀಯ ಲಾಭಕ್ಕಾಗಿ ರ‍್ಯಾಲಿ ನಡೆಸುವುದು ಕೊರೊನಾ ಹರಡುವಿಕೆ ತಡೆಯುವುದಕ್ಕಿಂತ ಮುಖ್ಯವೇ ?**
**ಬಾಂಬೆ ಹೈಕೋರ್ಟ್**

ಕೊರೊನಾ ಸೋಂಕು ಹರಡುವಿಕೆ ತಡೆಗಟ್ಟುವುದಕ್ಕಾಗಿ ದೊಡ್ಡ ಪ್ರಮಾಣದಲ್ಲಿ ಜನರು ಗುಂಪು ಸೇರುವುದನ್ನು ರಾಜ್ಯ ಸರ್ಕಾರ ನಿಷೇಧಿಸಿದೆ. ಆದರೂ ವಿಮಾನ ನಿಲ್ದಾಣ ಹೆಸರಿನಲ್ಲಿ ನಡೆದ ಸಮಾವೇಶವೂ ಸೇರಿ ಹಲವು ಸಮಾವೇಶಗಳು ನಡೆಯಲು ಸರ್ಕಾರ ಹೇಗೆ ಅನುವು ಮಾಡಿದೆ. ಮುಂದಿನ ದಿನಗಳಲ್ಲಿ, ಕೋವಿಡ್ ನಿಯಮಗಳನ್ನು ಉಲ್ಲಂಘಿಸಿ ನಡೆವ ಇಂತಹ ರಾಜಕೀಯ ರ‍್ಯಾಲಿಗಳನ್ನು ತಡೆಯಲು ಮಹಾರಾಷ್ಟ್ರ ಸರ್ಕಾರಕ್ಕೆ ಯಾವುದೇ ರೀತಿಯ ಆಡಳಿತ ವ್ಯವಸ್ಥೆಯನ್ನು ಜಾರಿತರಲು ಆಗದಿದ್ದರೆ, ಕೋರ್ಟ್ ಮಧ್ಯಪ್ರವೇಶಿಸಿ ಅಂತಹ ರ‍್ಯಾಲಿಗಳನ್ನು ತಡೆಯಲಿದೆ. ನಮಗೆ ಪೂರ್ಣಪ್ರಮಾಣದಲ್ಲಿ ಕರ್ತವ್ಯ ನಿರ್ವಹಿಸಲು ಆಗುತ್ತಿಲ್ಲ. ಅಂತಹದರಲ್ಲಿ ರಾಜಕೀಯ ಮುಖಂಡರು ರ‍್ಯಾಲಿಗಳನ್ನು ಹೇಗೆ ನಡೆಸುತ್ತಾರೆ ಎಂದು ಕೋರ್ಟ್, ಮಹಾರಾಷ್ಟ್ರದ ಅಡ್ವೊಕೇಟ್ ಜನರಲ್ ಆಶುತೋಷ್ ಕುಂಭಕೋಣಿ ಅವರನ್ನು ಪ್ರಶ್ನಿಸಿದೆ.

## 'ಲಸಿಕೆ ಸುರಕ್ಷಿತ'

ನವದೆಹಲಿ: ಲಸಿಕೆ ಪಡೆಯುವುದರಿಂದ ಸಂತಾನೋತ್ಪತ್ತಿ ಮೇಲೆ ಪರಿಣಾಮ ಬೀರಲಿದೆ ಎಂಬುದಕ್ಕೆ ಯಾವುದೇ ರೀತಿಯ ವೈಜ್ಞಾನಿಕ ಸಾಕ್ಷ್ಯಾಧಾರಗಳಿಲ್ಲ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಸ್ಪಷ್ಟಪಡಿಸಿದೆ.

ಲಸಿಕೆಗಳು ಸುರಕ್ಷಿತ ಮತ್ತು ಪರಿಣಾಮಕಾರಿಯಾಗಿವೆ ಎಂದು ತಿಳಿಸಿದೆ.

ಕೋವಿಡ್–19 ಲಸಿಕೆಗೆ ಸಂಬಂಧಿಸಿದ ರಾಷ್ಟ್ರೀಯ ತಜ್ಞರ ತಂಡ (ಎನ್‌ಇಜಿವಿಎಸಿ) ಎದೆಹಾಲುಣಿಸುವ ಮಹಿಳೆಯರು ಸಹ ಲಸಿಕೆ ಹಾಕಿಸಿಕೊಳ್ಳುವಂತೆ ಶಿಫಾರಸು ಮಾಡಿದೆ. ಲಸಿಕೆ ಹಾಕಿಸಿಕೊಳ್ಳುವ ಮುನ್ನ ಅಥವಾ ನಂತರ ಎದೆಹಾಲುಣಿಸುವುದನ್ನು ನಿಲ್ಲಿಸಬಾರದು ಎಂದು ತಿಳಿಸಿದೆ. ಹೀಗಾಗಿ, ಲಸಿಕೆ ಸಂಪೂರ್ಣ ಸುರಕ್ಷಿತ. ಈ ಬಗ್ಗೆ ಯಾವುದೇ ರೀತಿಯ ಅನುಮಾನ ಬೇಡ ಎಂದಿದೆ.

## 'ನ್ಯಾಯಾಂಗಕ್ಕೆ ಸಂಪೂರ್ಣ ಸ್ವಾತಂತ್ರ್ಯವಿರಬೇಕು'

ನವದೆಹಲಿ (ಪಿಟಿಐ): 'ನ್ಯಾಯಾಂಗಕ್ಕೆ 'ಸಂಪೂರ್ಣ ಸ್ವಾತಂತ್ರ್ಯ'ವಿರಬೇಕು ಮತ್ತು ಅದನ್ನು ನೇರವಾಗಿ ಅಥವಾ ಪರೋಕ್ಷವಾಗಿ ಶಾಸಕಾಂಗ ಅಥವಾ ಕಾರ್ಯಾಂಗದಿಂದ ನಿಯಂತ್ರಿಸಬಾರದು. ಇಲ್ಲದಿದ್ದರೆ ಕಾನೂನಿನ ನಿಯಮ ಭ್ರಮೆಯಾಗುತ್ತದೆ' ಎಂದು ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಬುಧವಾರ ಪ್ರತಿಪಾದಿಸಿದ್ದಾರೆ.

'17ನೇ ನ್ಯಾಯಮೂರ್ತಿ ಪಿ.ಡಿ. ದೇಸಾಯಿ ಸ್ಮಾರಕ ಉಪನ್ಯಾಸ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಾಮಾಜಿಕ ಮಾಧ್ಯಮ ವೇದಿಕೆಗಳ ಮೂಲಕ ಪ್ರವಹಿಸುತ್ತಿರುವ ಸಾರ್ವಜನಿಕ ಅಭಿಪ್ರಾಯದ ಭಾವನಾತ್ಮಕತೆಗೆ ನ್ಯಾಯಾಧೀಶರು ಪ್ರಭಾವಿತವಾಗಬಾರದು. ಸಾಮಾಜಿಕ ಮಾಧ್ಯಮ ಪ್ರವೃತ್ತಿಗಳು ನ್ಯಾಯಾಂಗದ ಮೇಲೆ ಹೇಗೆ ಪರಿಣಾಮ ಬೀರಬಹುದು ಎಂಬುದರ ಬಗ್ಗೆಯೂ ನಾವು ಕಡ್ಡಾಯವಾಗಿ ಚರ್ಚಿಸುವ ಅಗತ್ಯವೂ ಇದೆ ಎಂದು ಅವರು ಇದೇ ಸಂದರ್ಭದಲ್ಲಿ ಅಭಿಪ್ರಾಯಪಟ್ಟರು.

## ಪ್ರಜಾವಾಣಿ DH DECCAN HERALD ಕೋವಿಡ್ ಪರಿಹಾರ ನಿಧಿ

### ದೇಣಿಗೆ ಕೊಟ್ಟವರ ವಿವರ

| ಸಂ | ಹೆಸರು, ವಿಳಾಸ | ದೇಣಿಗೆ ₹ಗಳಲ್ಲಿ |
|---|---|---|
| 1 | **ಲಲಿತಾ ರಾಮಚಂದ್ರ ರಾವ್ ಮೆಮೋರಿಯಲ್ ಚಾರಿಟೆಬಲ್ ಟ್ರಸ್ಟ್**, #802, 19ನೇ ಅಡ್ಡರಸ್ತೆ, 19ನೇ ಮುಖ್ಯರಸ್ತೆ, ಬಿಎಸ್‌ಕೆ ಎರಡನೇ ಹಂತ, ಬೆಂಗಳೂರು | 50,000 |
| 2 | **ಜಗನ್ನಾಥ್ ಡಿ.**, 76/14 ಮುಖ್ಯರಸ್ತೆ, 15ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಂಗಳೂರು | 20,000 |
| 3 | **ರಾಜ್‌ಕುಮಾರ್ ಬುಯ್ಯ**, 66 ಬ್ಯಾರೆಟ್ ಸ್ಟ್ರೀಟ್, ಅಲ್ಬರ್ಟ್ ಪಾರ್ಕ್, ವಿಐಸಿ 3206, ಆಸ್ಟ್ರೇಲಿಯಾ, ಮೆಲ್ಬರ್ನ್ | 10,108 |
| 4 | **ಪ್ರಭಾಕರ ರಾವ್ ಟಿ.ಎನ್.**, ನಂ 41/2, 3ನೇ ಮಾಡೆಲ್ ಹೌಸ್ ಸ್ಟ್ರೀಟ್, ಬಸವನಗುಡಿ, ಬೆಂಗಳೂರು | 10,000 |
| 5 | **ಆನಂದೇಗೌಡ ಕೆ.ಐ**, ನಂ.37, 36ನೇ ಅಡ್ಡರಸ್ತೆ, 9ನೇ ಬ್ಲಾಕ್, ಬೆಂಗಳೂರು | 10,000 |
| 6 | **ಎಲ್.ಎನ್.ಶಶಿಕುಮಾರ್**, S/o ದಿವಂಗತ ಎಲ್.ಎಂ.ನೀಲಕಂಠಪ್ಪ, ರೈಲ್ವೆ ಟ್ರ್ಯಾಕ್ ಎದುರು, ಬೀರೂರು | 10,000 |
| 7 | **ಕೆ.ರಾಮಕೃಷ್ಣ**, ಜೆ.ಸಿ.ತಾಲ್ಲೂಕು ಆಸ್ಪತ್ರೆ, ತೀರ್ಥಹಳ್ಳಿ | 10,000 |
| 8 | **ಮಧು ಬಿ.**, 17ನೇ ಮುಖ್ಯರಸ್ತೆ, ಜೆಪಿ ನಗರ, 2ನೇ ಹಂತ, ಬೆಂಗಳೂರು | 10,000 |
| 9 | **ವೆಂಕಟೇಶ ಮೂರ್ತಿ ಎಚ್.ಎಸ್.**, ನಂ.725, 41ನೇ ಅಡ್ಡರಸ್ತೆ, ಇಎಸ್‌ಐ ಆಸ್ಪತ್ರೆ ರಸ್ತೆ, 3ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು | 5,001 |
| 10 | **ಪ್ರಮೋದ್ ನಾಯಕ್**, ನಂ 41 ಮತ್ತು 42, 3ನೇ ಅಡ್ಡರಸ್ತೆ, 1ನೇ ಮುಖ್ಯರಸ್ತೆ, ಬೃಂದಾವನ ಲೇಔಟ್, ಕಾವಲ್ ಭೈರಸಂದ್ರ, ಬೆಂಗಳೂರು | 5,001 |
| 11 | **ಶ್ರೀನಿವಾಸ್ ಎಂ.ಎಚ್**, ನಂ. 23, 1ನೇ ಮಹಡಿ, 6ನೇ ಅಡ್ಡ ರಸ್ತೆ, ಪೈಪ್ ಲೈನ್ ರಸ್ತೆ, ವಿಜಯನಗರ, ಬೆಂಗಳೂರು | 5,000 |
| 12 | **ಟಿ.ಎಸ್.ಶ್ರೀರಾಮ್**, #123, 3ನೇ ಅಡ್ಡರಸ್ತೆ, ಎಎಂಎಸ್ ಲೇಔಟ್, ವಿದ್ಯಾರಣ್ಯಪುರ, ಬೆಂಗಳೂರು | 5,000 |
| 13 | **ಡಾ.ಚಂದ್ರಶೇಖರ್**, ಸಂಗಮ ಎಂಐಜಿ 77, ಕೆಎಚ್‌ಬಿ ಕಾಲೋನಿ, 2ನೇ ಹಂತ, 6ನೇ ಮುಖ್ಯರಸ್ತೆ, 6ನೇ ಅಡ್ಡರಸ್ತೆ, ಬಸವೇಶ್ವರನಗರ, ಬೆಂಗಳೂರು | 5,000 |
| 14 | **ಶಾರದಾಂಬ ಬಿ.ಎಸ್**, ನಂ.1047/26, 2ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆ, ವಿದ್ಯಾರಣ್ಯಪುರ, ಮೈಸೂರು | 5,000 |
| 15 | **ಸಾರಂಗ್ ಗಾಡ್ಗೀಳ್**, ಸಿ603, ಸೆಲೆಸ್ಟಿಯಲ್ ಗ್ರೀನ್ಸ್, 6ನೇ ಹಳೇ ಮದ್ರಾಸ್ ರಸ್ತೆ, ನಾಗಾವರಪಾಳ್ಯ, ಬೆಂಗಳೂರು | 5,000 |
| 16 | **ಅನುನಯ್ ಗುಪ್ತಾ**, 4094, ಪ್ರೆಸ್ಟೀಜ್ ಜೇಡ್ ಪೆವಿಲಿಯನ್, ಬೆಂಗಳೂರು | 5,000 |
| 17 | **ಲಕ್ಷ್ಮೀ ರಾಮಾನುಜನ್**, ಫ್ಲ್ಯಾಟ್ 101, ಯದುಗೇರಿ ನೆಸ್ಟ್, ನಂ.60, ಹನ್ನೊಂದನೇ ಮುಖ್ಯರಸ್ತೆ, ಮಲ್ಲೇಶ್ವರ, ಬೆಂಗಳೂರು | 4,000 |
| 18 | **ಗಣಪತಿ ಎಂ.ಕೆ.**, ನಂ. 574, 30ನೇ ಮುಖ್ಯರಸ್ತೆ, ಬನಗಿರಿ ನಗರ, ಬನಶಂಕರಿ 3ನೇ ಹಂತ, ಬೆಂಗಳೂರು | 3,001 |
| 19 | **ಜಗದೇವ್ ಬಿ.ನಿಗ್ಗುಡಗಿ**, ನಂ.4 601/10ಎ/1 ಎಂ.ಬಿ.ನಗರ 2ನೇ ಅಡ್ಡರಸ್ತೆ, ಕಲಬುರ್ಗಿ | 3,000 |
| 20 | **ಎಚ್.ವಿ.ವೆಂಕಟರಮಣ**, ನಂ.4, ಸಪ್ತಗಿರಿ ನಿಲಯ, 1ನೇ ಎ ಮುಖ್ಯರಸ್ತೆ, ಶಿವನಗರ, ರಾಜಾಜಿನಗರ, ಬೆಂಗಳೂರು | 3000 |
| 21 | **ಶ್ರೀನಿವಾಸ್ ಗೌಡ ಕೆ.ಎಂ**, 452, 39ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ, ಜಯನಗರ, 5ನೇ ಬ್ಲಾಕ್, ಬೆಂಗಳೂರು | 2,500 |
| 22 | **ಟಿ.ಎಂ.ವೆಂಕಟಸ್ವಾಮಯ್ಯ**, ತಿಂಡ್ಲು ಗ್ರಾಮ, ಸರ್ಜಾಪುರ ಹೋಬಳಿ, ಬೆಂಗಳೂರು | 2,001 |
| 23 | **ಶ್ರೀನಿವಾಸ ಜಾಲವಾದಿ**, 'ಅಕ್ಷರ', ಗಾಂಧಿ ಚೌಕದ ಸಮೀಪ, ಸುರಪುರ, ಯಾದಗಿರಿ ಜಿಲ್ಲೆ | 2,000 |
| 24 | **ನಾರಾಯಣ ಎಂ.ಡಿ**, ನಂ.26, 11ನೇ ಅಡ್ಡರಸ್ತೆ, 1ನೇ ಮುಖ್ಯರಸ್ತೆ, ಕೆಂಪಯ್ಯ ಬಿಲ್ಡಿಂಗ್, ಮಲ್ಲತ್ತಹಳ್ಳಿ, ಬೆಂಗಳೂರು | 2,000 |
| 25 | **ನಿವೇಶ್ ಕುಮಾರ್ ಪಾಂಡೆ**, ಕುಶಾಲನಗರ, ಕೊಡಗು | 1,101 |
| 26 | **ಅನಿತಾ ಕೃಷ್ಣಮೂರ್ತಿ**, 'ಶಂಕರಿ' ರವೀಂದ್ರ ನಗರ, 3ನೇ ಅಡ್ಡರಸ್ತೆ, ಶಿವಮೊಗ್ಗ | 1,001 |
| 27 | **ಎಸ್.ಕುಮಾರ್**, 148/3, ಸರ್ವೇಯರ್ ಸ್ಟ್ರೀಟ್, ಬಸವನಗುಡಿ | 1,001 |
| 28 | **ವಿ.ಎಸ್. ಜಯಕೃಷ್ಣ**, ನಂ.38, 2ನೇ ಎ ಕ್ರಾಸ್, ನಾಗರಬಾವಿ, 'ಐಸೆಕ್' ಅಂಚೆ, ಬೆಂಗಳೂರು | 1,001 |
| 29 | **ರತ್ನಾ ಜಿ.**, #987, 9ನೇ ಅಡ್ಡರಸ್ತೆ, 2ನೇ ಎ ಮುಖ್ಯರಸ್ತೆ, ಎಸ್‌ಬಿಎಂ ಕಾಲೋನಿ, ಬೆಂಗಳೂರು | 1001 |
| 30 | **ಡಾ.ಶೈಲೇಶ್**, 37ನೇ ಬಿ ಕ್ರಾಸ್, 9ನೇ ಬ್ಲಾಕ್, ಜಯನಗರ, ಬೆಂಗಳೂರು | 1001 |
| 31 | **ಸಮರ್ಥ್ ಮುನಿರಾಜಯ್ಯ ಎನ್**, #22, 2ನೇ ಮುಖ್ಯರಸ್ತೆ, ಅನಂತಪುರ, ಯಲಹಂಕ, ಬೆಂಗಳೂರು | 1,001 |
| 32 | **ಗಿರಿಜಾಂಬ ನರಹರಿ**, 282/30, 14ನೇ ಎ ಕ್ರಾಸ್, ವೈಯಾಲಿಕಾವಲ್ ಎಕ್ಸ್‌ಟೆನ್ಷನ್, ಬೆಂಗಳೂರು | 1,001 |
| 33 | **ಜನಾರ್ದನ ತಲ್ಲಂ**, ಶ್ರೀ ರಾಮ ಸತ್ಯ ನಿಲಯಂ, ಈಶ್ವರನಗರ 24ನೇ ವಾರ್ಡ್, ಹೊಸಪೇಟೆ, ವಿಜಯನಗರ ಜಿಲ್ಲೆ | 1,000 |
| 34 | **ಬಿ.ಆರ್.ಅಣ್ಣಾಸಾಗರ**, ನಂ.42–ಎಚ್, ಬಾಲನಿಲಯ, ಸರ್ಕಾರಿ ಪದವಿ ಕಾಲೇಜು ಸಮೀಪ, ವಿದ್ಯಾನಗರ, ಸೇಡಂ | 1,000 |
| 35 | **ಡಿ.ವಸಂತಲಕ್ಷ್ಮೀ**, 213, 6ನೇ ಅಡ್ಡರಸ್ತೆ, ಟೆಲಿಕಾಂ ಲೇಔಟ್, ಬೋಗಾದಿ, ಮೈಸೂರು | 1,000 |
| 36 | **ವಿಕ್ಟರ್ ಕ್ರಾಸ್ತಾ**, ಫ್ಲ್ಯಾಟ್ ನಂ.102, ಸೋನಿ ರೆಸಿಡೆನ್ಸಿ, ಕಂಕನಾಡಿ ಬೈಪಾಸ್ ರಸ್ತೆ, ಮಂಗಳೂರು | 1,000 |
| | ಇದುವರೆಗಿನ ಒಟ್ಟು ಮೊತ್ತ: | 1,22,34,069 |

ಪರಸ್ಪರ ಅಂತರ ಕಾಯ್ದುಕೊಳ್ಳಿ


ಕಾರ್ಮಿಕ ಇಲಾಖೆ
ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ

ಶ್ರೀ ಬಿ. ಎಸ್. ಯಡಿಯೂರಪ್ಪ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರಮಜೀವಿಗಳಿಗೆ ರೂ.2,000/- ಗಳ ಒಂದು ಬಾರಿಯ ಆರ್ಥಿಕ ನೆರವು

ಕೋವಿಡ್–19ರ 2ನೇ ಅಲೆಯ ಲಾಕ್‌ಡೌನ್ ಸಂದರ್ಭದಲ್ಲಿ ಆರ್ಥಿಕ ಸಂಕಷ್ಟಕ್ಕೊಳಗಾದ 11 ವರ್ಗಗಳ ಅಸಂಘಟಿತ ಕಾರ್ಮಿಕರಿಗೆ ಒಂದು ಬಾರಿ ಪರಿಹಾರವಾಗಿ ರೂ.2,000/– ನೆರವು.

ಫಲಾನುಭವಿಗಳು*
- ಅಗಸರು
- ಕ್ಷೌರಿಕರು
- ಗೃಹ ಕಾರ್ಮಿಕರು
- ಟೈಲರ್‌ಗಳು
- ಮೆಕ್ಯಾನಿಕ್‌ಗಳು
- ಚಿಂದಿ ಆಯುವವರು
- ಹಮಾಲರು
- ಅಕ್ಕಸಾಲಿಗರು
- ಕಮ್ಮಾರರು
- ಕುಂಬಾರರು
- ಮಂಡಕ್ಕಿ ಭಟ್ಟಿ ಕಾರ್ಮಿಕರು

*ಮೇಲ್ಕಂಡ ವೃತ್ತಿಗಳಲ್ಲಿ ತೊಡಗಿಸಿಕೊಂಡವರಿಗೆ ಮಾತ್ರ

ಮಾನ್ಯ ಕಾರ್ಮಿಕ ಸಚಿವರಾದ ಶ್ರೀ ಅರಬೈಲ್ ಶಿವರಾಮ ಹೆಬ್ಬಾರ್ ರವರು ಕೋವಿಡ್–19ರ ಸಂಕಷ್ಟದಲ್ಲಿರುವ ಕಾರ್ಮಿಕರಿಗೆ ಆಹಾರ ಪೊಟ್ಟಣಗಳನ್ನು ವಿತರಿಸುತ್ತಿರುವುದು.

ಸಹಾಯಧನ ಪಡೆಯಲು ಅರ್ಜಿ ಸಲ್ಲಿಸಲು (ಅಗತ್ಯ ದಾಖಲೆಗಳೊಂದಿಗೆ) ಸಂಪರ್ಕಿಸಬೇಕಾದ ಸೇವಾ ಕೇಂದ್ರಗಳು.

ಸೇವಾ ಕೇಂದ್ರಗಳು: ಬೆಂಗಳೂರು ಒನ್, ಕರ್ನಾಟಕ ಒನ್, ಸೇವಾಸಿಂಧು ಕೇಂದ್ರ, ಗ್ರಾಮ ಒನ್ ಹಾಗೂ ಸಾಮಾನ್ಯ ಸೇವಾ ಕೇಂದ್ರಗಳು (CSC), ಜಿಲ್ಲಾ ಸೇವಾ ಕೇಂದ್ರಗಳು ಮತ್ತು ಕಾರ್ಮಿಕ ಸೇವಾ ಕೇಂದ್ರಗಳು.

ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಶುಲ್ಕ : ರೂ.25/– ಮಾತ್ರ, ಕಾರ್ಮಿಕ ಸೇವಾ ಕೇಂದ್ರಗಳಲ್ಲಿ ಶುಲ್ಕ ರಹಿತವಾಗಿ ನೋಂದಣಿ.

ನಿಗದಿತ ಶುಲ್ಕಕ್ಕಿಂತ ಹೆಚ್ಚಿನ ಮೊತ್ತ ಪಾವತಿಸುವ ಅವಶ್ಯಕತೆ ಇರುವುದಿಲ್ಲ.
ಯಾವುದೇ ಕೇಂದ್ರದಲ್ಲಿ ಹೆಚ್ಚಿನ ಮೊತ್ತಕ್ಕೆ ಬೇಡಿಕೆ ಇಟ್ಟಲ್ಲಿ ಈ ಕೆಳಕಂಡ ಸಂಖ್ಯೆಗಳಿಗೆ ದೂರು ಸಲ್ಲಿಸುವುದು.

- ಕಾರ್ಮಿಕ ಸಹಾಯವಾಣಿ 155214 (24x7), ವಾಟ್ಸ್‌ಆಪ್ ಸಂಖ್ಯೆ: 93333 33684
- ಸೇವಾಸಿಂಧು ಸಂಸ್ಥೆಯ ಸಂಖ್ಯೆ: 80883 04855 / 63617 99796 / 93802 04364 / 93802 06704 (9:00 a.m. to 06:00 p.m. ರಜಾದಿನಗಳನ್ನು ಹೊರತುಪಡಿಸಿ) ಸಂಪರ್ಕಿಸಬಹುದಾಗಿದೆ.
- ಕರ್ನಾಟಕ ಒನ್ ಹಾಗೂ ಬೆಂಗಳೂರು ಒನ್ ಕೇಂದ್ರಗಳ ದೂರವಾಣಿ ಸಂಖ್ಯೆ: 78292 74377 / 63624 51543 / 74067 67048.
- CSC ಕೇಂದ್ರ ಸಂಸ್ಥೆಯ ಸಂಖ್ಯೆ: 18001213468.

ಸ್ವಯಂ ನೋಂದಣಿಗೆ ವೆಬ್‌ಸೈಟ್ ವಿಳಾಸ www.sevasindhu.karnataka.gov.in

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31-07-2021

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ಕಾರ್ಮಿಕ ಸಹಾಯವಾಣಿ 155214 (24/7),
ಕಾರ್ಮಿಕ ಅಧಿಕಾರಿಗಳು ಹಾಗೂ ಹಿರಿಯ ಕಾರ್ಮಿಕ ನಿರೀಕ್ಷಕರು/ಕಾರ್ಮಿಕ ನಿರೀಕ್ಷಕರು, ಕಾರ್ಮಿಕ ಇಲಾಖೆ.

"ಕೋವಿಡ್–19ರ ಮಾರ್ಗಸೂಚಿಗಳನ್ನು ಪಾಲಿಸೋಣ, ಕೊರೋನಾ ವಿರುದ್ಧ ಜಯಗಳಿಸೋಣ"

ಡಾ. ಜಿ. ಕಲ್ಪನ, ಭಾ.ಆ.ಸೇ.
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ.

ಮಾಸ್ಕ್ ಧರಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ | ದೈಹಿಕ ಅಂತರ ಪಾಲಿಸಿ

ಅಕ್ರಂ ಪಾಷ, ಭಾ.ಆ.ಸೇ.
ಆಯುಕ್ತರು, ಕಾರ್ಮಿಕ ಇಲಾಖೆ.



ಪ್ರಜಾವಾಣಿ

ವೈದ್ಯರಿಗೊಂದು ಕಲಾಪೂರ್ಣ ನಮನ

ನಮ್ಮ ವೈದ್ಯರು ನಮಗಾಗಿ ತಮ್ಮ ಜೀವನವನ್ನು ಮುಡಿಪಾಗಿ ಇಡುತ್ತಾರೆ.
ಈ **ವೈದ್ಯರ ದಿನದಂದು**, ಡೂಡಲ್, ಸ್ಕೆಚ್ ಅಥವಾ ಕ್ಯಾರಿಕೇಚರ್ ಮೂಲಕ ವೈದ್ಯರಿಗೆ ನಿಮ್ಮ **ಶುಭಾಶಯ ಮತ್ತು ಮೆಚ್ಚುಗೆಯನ್ನು ತಿಳಿಸಿ**.

www.bit.ly/PVdoctorsdayಗೆ ಲಾಗಿನ್ ಆಗಿ
ಜುಲೈ 5ರ ರಾತ್ರಿ 8 ಗಂಟೆಯೊಳಗೆ ನಿಮ್ಮ ಚಿತ್ರಗಳನ್ನು ಕಳುಹಿಸಿ.

ಅತ್ಯುತ್ತಮ ಚಿತ್ರಗಳಿಗೆ ಆಕರ್ಷಕ ಬಹುಮಾನ ನೀಡಲಾಗುವುದು*.

*ಷರತ್ತುಗಳು ಅನ್ವಯ.

## ಅಭಿಮನ್ಯು ಮಿಶ್ರಾ ಅತಿ ಕಿರಿಯ ಗ್ರ್ಯಾಂಡ್‌ಮಾಸ್ಟರ್

ನವದೆಹಲಿ (ಪಿಟಿಐ): ಅಮೆರಿಕದಲ್ಲಿ ನೆಲೆಸಿರುವ ಭಾರತದ ಚೆಸ್ ಪಟು ಅಭಿಮನ್ಯು ಮಿಶ್ರಾ ಬುಧವಾರ ಅತಿ ಕಿರಿಯ ಗ್ರ್ಯಾಂಡ್‌ಮಾಸ್ಟರ್ ಎಂದೆನಿಸಿಕೊಂಡರು. ಹಂಗೇರಿಯ ಬುಡಾಪೆಸ್ಟ್‌ನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಗ್ರ್ಯಾಂಡ್‌ಮಾಸ್ಟರ್‌ಗೆ ಬೇಕಾಗಿದ್ದ ಮೂರನೇ ನಾರ್ಮ್ ಗಳಿಸುವ ಮೂಲಕ ಅವರು ಈ ಸಾಧನೆ ಮಾಡಿದರು.

ಅವರಿಗೆ ಈಗ ಕೇವಲ 12 ವರ್ಷ. ನ್ಯೂಜೆರ್ಸಿಯಲ್ಲಿರುವ ಅಭಿಮನ್ಯು ಗ್ರ್ಯಾಂಡ್‌ಮಾಸ್ಟರ್ ಪಟ್ಟಕ್ಕೆ ಬೇಕಾಗಿದ್ದ 2500 ಯೆಲೊ ರೇಟಿಂಗ್ಸ್ ಗಳಿಸುವ ಮೂಲಕ ಸರ್ಜಿ ಕರ್ಜಕಿನ್ಸ್ ಅವರ ದಾಖಲೆ ಮುರಿದಿದ್ದಾರೆ. ಕರ್ಜಕಿನ್ಸ್ 19ನೇ ವಯಸ್ಸಿನಲ್ಲಿ ಜಿಎಂ ಆಗಿದ್ದರು ಎಂದು ಚೆಸ್ ಡಾಟ್ ಕಾಮ್ ವೆಬ್‌ಸೈಟ್ ವರದಿ ಮಾಡಿದೆ.

## ನಸೆರ್‌ಗೆ ನಿಷೇಧ

ಲಾಸನ್ನೆ (ಎಪಿ): 400 ಮೀಟರ್ಸ್ ಓಟದಲ್ಲಿ ವಿಶ್ವ ಚಾಂಪಿಯನ್ ಆಗಿರುವ ಬಹರೇನ್‌ನ ಸಲ್ವಾ ಎಡ್ ನಸೆರ್ ಅವರ ಮೇಲೆ ಮಾದಕ ಪದಾರ್ಥ ಸೇವನೆ ಆರೋಪ ಪಡದಿ ಎರಡು ವರ್ಷಗಳ ನಿಷೇಧ ಹೇರಲಾಗಿದೆ. ಕ್ರೀಡಾ ನ್ಯಾಯಾಲಯದ ಈ ತೀರ್ಪಿನಿಂದಾಗಿ ಒಲಿಂಪಿಕ್ಸ್‌ಗೆ ತೆರಳಲು ಅವರಿಗೆ ಸಾಧ್ಯವಾಗಲಾರದು. ನೈಜೀರಿಯಾದಲ್ಲಿ ಜನಿಸಿದ ನಸೆರ್ 1985ರಿಂದ ವೇಗದ 400 ಮೀಟರ್ಸ್ ಓಟಗಾರ್ತಿ ಎಂದೆನಿಸಿಕೊಂಡಿದ್ದಾರೆ.


ಎಡ್ ನಸೆರ್

### ವಿಂಬಲ್ಡನ್: ಜೊಕೊವಿಚ್, ಸ್ವಿಟೋಲಿನಾಗೆ ಗೆಲುವು; ಸೋಫಿಯಾಗೆ ನಿರಾಸೆ

# ಗಾಯಗೊಂಡು ಸೆರೆನಾ ನಿರ್ಗಮನ

ಲಂಡನ್ (ರಾಯಿಟರ್ಸ್): ಏಳು ಬಾರಿಯ ಚಾಂಪಿಯನ್ ಸೆರೆನಾ ವಿಲಿಯಮ್ಸ್ ವಿಂಬಲ್ಡನ್ ಟೆನಿಸ್ ಟೂರ್ನಿಯ ಮೊದಲ ಸುತ್ತಿನಲ್ಲಿಯೇ ಕಣ್ಣೀರಿನ ವಿದಾಯ ಹೇಳಿದರು.

ಸೆಂಟರ್ ಕೋರ್ಟ್‌ನಲ್ಲಿ ಮಂಗಳವಾರ ತಡರಾತ್ರಿ ನಡೆದ ಮೊದಲ ಸುತ್ತಿನ ಪಂದ್ಯದ ಮೊದಲ ಸೆಟ್‌ನಲ್ಲಿ ಜಾರಿ ಬಿದ್ದು ಗಾಯಗೊಂಡ ಸೆರೆನಾ ವಿಲಿಯಮ್ಸ್ ಟೂರ್ನಿಯಿಂದ ನಿರ್ಗಮಿಸಬೇಕಾಯಿತು. ಹೀಗಾಗಿ ಬೆಲಾರಸ್‌ನ ಅಲೆಕ್ಸಾಂಡ್ರ ಸಸೊನೊವಿಚ್ ಎರಡನೇ ಸುತ್ತು ಪ್ರವೇಶಿಸಿದ್ದರು.

ಸೆರೆನಾ ಗಾಯಗೊಂಡ ನಂತರ ಆತಂಕ ಮನೆ ಮಾಡಿದೆ. ಆದರೆ ಅಂಗಣ ಸಿದ್ಧಪಡಿಸಿದ್ದರಲ್ಲಿ ಯಾವ ಲೋಪವೂ ಆಗಲಿಲ್ಲ ಎಂದು ಆಯೋಜಕರು ಸಮರ್ಥಿಸಿಕೊಂಡಿದ್ದಾರೆ.

ಎಂಟು ಬಾರಿಯ ಚಾಂಪಿಯನ್ ರೋಜರ್ ಫೆಡರರ್ ಎದುರಿನ ಪಂದ್ಯದಲ್ಲಿ ಫ್ರಾನ್ಸ್‌ನ ಅಡ್ರಿಯನ್ ಮನಾರಿನೊ ಕೂ ಜಾರಿ ಬಿದ್ದು ಮೊಣಕಾಲಿಗೆ ಗಾಯಗೊಂಡು ವಾಪಸಾಗಿದ್ದರು. ಮೊದಲ ದಿನವಾದ ಸೋಮವಾರ ಅಗ್ರ ಶ್ರೇಯಾಂಕದ ನೊವಾಕ್ ಜೊಕೊವಿಚ್ ಎರಡು ಬಾರಿ ಜಾರಿ ಬಿದ್ದಿದ್ದರು. ಮೊದಲ ಸುತ್ತಿನ ಪಂದ್ಯ ಆಡಿದ ನಂತರ ಎರಡು ಬಾರಿಯ ಚಾಂಪಿಯನ್ ಆ್ಯಂಡಿ ಮರೆ ಅಂಗಣದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದರು.

ಮೊದಲ ದಿನ ಮಳೆ ಕಾಡಿದ ನಂತರ ಕೆಲವು ಪಂದ್ಯಗಳನ್ನು ರದ್ದು ಮಾಡಲಾಗಿತ್ತು. ಎರಡನೇ ದಿನವೂ ಕೆಲವು ಪಂದ್ಯಗಳಿಗೆ ಅಡ್ಡಿಯಾಗಿತ್ತು.

ಕೋವಿಡ್‌ನಿಂದಾಗಿ ಕಳೆದ ಬಾರಿ ಟೂರ್ನಿ ರದ್ದುಗೊಂಡಿತ್ತು. ಆದರೆ ಈ ಬಾರಿ ಅಂಗಣವನ್ನು ಸಮರ್ಪಕವಾಗಿಯೇ ಸಿದ್ಧಗೊಳಿಸಲಾಗಿದೆ. ಪ್ರತಿಯೊಂದು ಅಂಗಣವನ್ನೂ ಗ್ರ್ಯಾನ್‌ಸ್ಲಾಂ ಟೂರ್ನಿಯ ಮೇಲ್ವಿಚಾರಕರು ಪರಿಶೀಲಿಸಿದ್ದಾರೆ. ರೆಫರಿಗಳು, ಅಧಿಕಾರಿಗಳು ಮತ್ತು ನೆರವು ಸಿಬ್ಬಂದಿಯೂ ಪರಿಶೀಲನೆ ಮಾಡಿದ್ದಾರೆ. ಅಂಗಣಗಳು ಆಟಕ್ಕೆ ಯೋಗ್ಯ ವಾಗಿವೆ ಎಂದು ಎರಡು ವಾರಗಳ ಹಿಂದೆ ಅವರು ವರದಿ ನೀಡಿದ್ದಾರೆ ಎಂದು ಆಯೋಜಕರು ಬುಧವಾರ ವಿವರಿಸಿದ್ದಾರೆ.

‘ಒಂದು ದಶಕದಲ್ಲಿ ಇದೇ ಮೊದಲು ಅಂಗಣ ಇಷ್ಟರ ಮಟ್ಟಿಗೆ ಒದ್ದೆಯಾಗಿದೆ. ಹೀಗಾಗಿ ಮೇಲಿನ ಭಾವಣೆಯನ್ನು ಮುಚ್ಚಬೇಕಾದ ಪರಿಸ್ಥಿತಿ ಉಂಟಾಗಿದೆ. ಇದು ಹುಲ್ಲು ಹುಲುಸಾಗಿ ಬೆಳೆಯುವ ಕಾಲ. ಹೀಗಾಗಿ ನವೆ ಹೆಚ್ಚು ಇರುವ ಸಾಧ್ಯತೆ ಇದೆ. ಈ ಸಮಸ್ಯೆಗೆ ಈಗ ಪರಿಹಾರ ಕಂಡುಕೊಳ್ಳಲಾಗಿದೆ’ ಎಂದು ಅವರು ತಿಳಿಸಿದ್ದಾರೆ.

ಕಣ್ಣೀರು ಹಾಕಿದ ಸೆರೆನಾ ವಿಲಿಯಮ್ಸ್ –ರಾಯಿಟರ್ಸ್ ಚಿತ್ರ

**ಜೊಕೊವಿಚ್, ಸ್ವಿಟೋಲಿನಾ ಜಯಭೇರಿ:** ಬುಧವಾರ ನಡೆದ ಪಂದ್ಯಗಳಲ್ಲಿ ಸರ್ಬಿಯಾದ ನೊವಾಕ್ ಜೊಕೊವಿಚ್ ಮತ್ತು ಉಕ್ರೇನ್‌ನ ಎಲಿನಾ ಸ್ವಿಟೋಲಿನಾ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಜಯ ಗಳಿಸಿದರು.

ದಕ್ಷಿಣ ಆಫ್ರಿಕಾದ ಕೆವಿನ್ ಆ್ಯಂಡರ್ಸನ್ ವಿರುದ್ಧದ ಎರಡನೇ ಸುತ್ತಿನ ಹಣಾಹಣಿಯಲ್ಲಿ ಜೊಕೊವಿಚ್ 6–3, 6–3, 6–3ರಲ್ಲಿ ಜಯ ಗಳಿಸಿದರು. ಎಲಿನಾ ಮೊದಲ ಸುತ್ತಿನ ಪಂದ್ಯದಲ್ಲಿ ಬೆಲಾರಸ್‌ನ ವ್ಯಾನ್ ಉತ್ವ್ಯಾವೆಂಕ್ ವಿರುದ್ಧ 6-3, 2-6, 6-3ರಲ್ಲಿ ಗೆಲುವು ದಾಖಲಿಸಿದರು.

ನಾಲ್ಕನೇ ಶ್ರೇಯಾಂಕಿತೆ, ಆಸ್ಟ್ರೇಲಿಯಾ ಓಪನ್ ಟೂರ್ನಿಯ ಮಾಜಿ ಚಾಂಪಿಯನ್ ಅಮೆರಿಕದ ಸೋಫಿಯಾ ಕೆನಿನ್ ಎರಡನೇ ಸುತ್ತಿನಲ್ಲಿ ವಿಶ್ವ ಕ್ರಮಾಂಕದಲ್ಲಿ 82ನೇ ಸ್ಥಾನದಲ್ಲಿರುವ ಮ್ಯಾಡಿಸನ್ ಬ್ರೆಂಗಲ್‌ಗೆ 2–6, 4–6ರಲ್ಲಿ ಮಣಿದು ಹೊರಬಿದ್ದರು.

### 3ನೇ ದಿನದ ಪ್ರಮುಖ ಫಲಿತಾಂಶಗಳು

ಕೆನಡಾದ ಡೆನಿಸ್ ಶಪೊವಲೊವ್‌ಗೆ ಸ್ಪೇನ್‌ನ ಪ್ಯಾಬ್ಲೊ ಆಂಡುಜರ್ ವಿರುದ್ಧ ವಾಕ್ ಓವರ್; ಚೀನಾದ ಕ್ರಿಸ್ಟಿಯನ್ ಗರಿನ್‌ಗೆ ಸ್ಪೇನ್‌ನ ಬೆರ್ನಾಬೆ ಜಪಾಟ ಎದುರು 6-7 (6/8), 6-3, 3-6, 6-3, 6-2ರಲ್ಲಿ ಜಯ, ಇಟಲಿಯ ಮಟಿಯೊ ಬೆರೆಟಿನಿಗೆ ಅರ್ಜೆಂಟೀನಾದ ಗೈಡೊ ಪೆಲ್ಲಾ ವಿರುದ್ಧ 6-4, 3-6, 6-4, 6-0ರಲ್ಲಿ ಜಯ, ಜಪಾನ್‌ನ ಯೊಶಿಹಿಟೊ ನಿಶಿಯೋಕಗೆ ಅಮೆರಿಕದ ಜಾನ್ ಇಸ್ನೇರ್ ವಿರುದ್ಧ 7-6 (7/5), 2-6, 6-3, 6-7 (3/7), 6-4ರಲ್ಲಿ ಗೆಲುವು, ಜಪಾನ್‌ನ ಕೀ ನಿಶಿಕೋರಿಗೆ ಅಮೆರಿಕದ ಅಲೆಕ್ಸಿ ಪಾಪಿರಿನ್ ವಿರುದ್ಧ 6-4, 6-4, 6-4ರಲ್ಲಿ ಜಯ.

**ಮಹಿಳೆಯರ ವಿಭಾಗ:** ಲ್ಯಾಟ್ವಿಯಾದ ಅನಸ್ತೇಸಿಜ ಸೆವಟೋವಗೆ ಕಜಕಸ್ತಾನದ ಜರೀನಾ ದಿಯಾಸ್ ವಿರುದ್ಧ 6-4, 6-1ರಲ್ಲಿ ಜಯ, ಜೆಕ್ ಗಣರಾಜ್ಯದ ಕರೋಲಿನಾ ಮುಚೋವಗೆ ಚೀನಾದ ಜಾಂಗ್ ಶುವಾಯ್ ವಿರುದ್ಧ 6-3, 6-3ರಲ್ಲಿ ಜಯ, ರಷ್ಯಾದ ಅನಸ್ತೇಸಿಯಾ ಪೌಲಿಚೆಂಕೋವಾಗ ರೊಮೇನಿಯಾದ ಅನಾ ಬೋಗ್ದಾನ್ ವಿರುದ್ಧ 6-2, 6-2ರಲ್ಲಿ ಗೆಲುವು.

# ಒಲಿಂಪಿಕ್ಸ್: ಶ್ರೀಹರಿಗೆ ‘ಎ’ ಅರ್ಹತೆ

### ಈಜು: 100 ಮೀಟರ್ಸ್ ಬ್ಯಾಕ್‌ಸ್ಟ್ರೋಕ್‌ನಲ್ಲಿ ಸಾಧನೆ

ನವದೆಹಲಿ (ಪಿಟಿಐ): ಬೆಂಗಳೂರಿನ ಈಜುಪಟು ಶ್ರೀಹರಿ ನಟರಾಜ್ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಲು ಅರ್ಹತೆ ಗಳಿಸಿದ್ದಾರೆ.

ರೋಮ್‌ನಲ್ಲಿ ನಡೆದಿದ್ದ ಸೆಟ್ಟೆ ಕೊಲೀ ಟ್ರೋಫಿ ಈಜು ಚಾಂಪಿಯನ್‌ಷಿಪ್‌ನ 100 ಮೀಟರ್ಸ್ ಬ್ಯಾಕ್‌ಸ್ಟ್ರೋಕ್‌ನಲ್ಲಿ ಅವರು ‘ಎ’ ದರ್ಜೆಯ ಅರ್ಹತಾ ಸಮಯದಲ್ಲಿ ಗುರಿ ಮುಟ್ಟಿದ್ದರು.

‘ಶ್ರೀಹರಿ ನಟರಾಜ್ ಒಲಿಂಪಿಕ್ಸ್ ಅರ್ಹತಾ ಸಮಯ (53.77 ಸೆಕೆಂಡು) ದಲ್ಲಿಯೇ ಗುರಿ ಮುಟ್ಟಿದ್ದರು. ಅವರ ಸಾಧನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಅಂತರರಾಷ್ಟ್ರೀಯ ಈಜು ಸಂಸ್ಥೆ (ಫಿನಾ) ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಲು ರಹದಾರಿ ನೀಡಿದೆ’ ಎಂದು ಭಾರತ ಈಜು ಫೆಡರೇಷನ್ (ಎಸ್‌ಎಫ್‌ಐ) ಬುಧವಾರ ಟ್ವೀಟ್ ಮಾಡಿದೆ. ಶ್ರೀಹರಿ ಅವರು ಭಾರತದಿಂದ ಟೋಕಿಯೊಗೆ ತೆರಳಲು ಅರ್ಹತೆ ಪಡೆದ ಎರಡನೇ ಈಜುಪಟುವಾಗಿದ್ದಾರೆ. ಸಾಜನ್ ಪ್ರಕಾಶ್ ಕೂಡ ಅರ್ಹತೆ ಗಿಟ್ಟಿಸಿದ್ದರು.

200 ಮೀಟರ್ಸ್ ಬಟರ್‌ಫ್ಲೈ ವಿಭಾಗದಲ್ಲಿ ಒಲಿಂಪಿಕ್ ‘ಎ’ ದರ್ಜೆಯ ಅರ್ಹತೆ ಗಳಿಸಿದ ಮೊದಲ ಭಾರತೀಯ ಈಜುಪಟುವೆಂಬ ಹೆಗ್ಗಳಿಕೆಗೆ ಸಾಜನ್ ಪಾತ್ರರಾಗಿದ್ದಾರೆ. ಅವರು 2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಭಾಗ ವಹಿಸಿದ್ದರು. 20 ವರ್ಷದ ಶ್ರೀಹರಿ ಅವರು ಇದೇ ಮೊದಲ ಬಾರಿಗೆ ಒಲಿಂಪಿಕ್ಸ್‌ಗೆ ತೆರಳುತ್ತಿದ್ದಾರೆ. ಅವರು 2018ರ ಕಾಮನ್‌ವೆಲ್ತ್ ಗೇಮ್ಸ್ ಮತ್ತು ಏಷ್ಯನ್ ಗೇಮ್ಸ್‌ನಲ್ಲಿ ಸ್ಪರ್ಧಿಸಿದ್ದರು. ಅದೇ ವರ್ಷ ನಡೆದಿದ್ದ ಯೂತ್ ಒಲಿಂಪಿಕ್ಸ್‌ನಲ್ಲಿಯೂ ಭಾಗವಹಿಸಿದ್ದರು.

ಶ್ರೀಹರಿ ನಟರಾಜ್

### ಅಭ್ಯಾಸಕ್ಕೆ ಅವಕಾಶ

ಒಲಿಂಪಿಕ್ಸ್‌ಗೆ ತೆರಳುವವರ ಅಭ್ಯಾಸಕ್ಕಾಗಿ ರಾಜ್ಯ ಈಜುಸಂಸ್ಥೆ ಮತ್ತು ಭಾರತ ಈಜು ಫೆಡರೇಷನ್ ಮಾನ್ಯ ಮಾಡಿರುವ ಒಂದು ಈಜುಕೊಳವನ್ನು ತೆರೆಯಲು ಕರ್ನಾಟಕ ಸರ್ಕಾರ ಬುಧವಾರ ಒಪ್ಪಿಗೆ ನೀಡಿದೆ.

# ಯೂರೊ ಕಪ್: ಎಂಟರ ಘಟ್ಟಕ್ಕೆ ಉಕ್ರೇನ್

ಗ್ಲಾಸ್ಗೊ, ಸ್ಕಾಟ್ಲೆಂಡ್ (ಎಪಿ/ಎಎಫ್‌ಪಿ): ಹೆಚ್ಚುವರಿ 30 ನಿಮಿಷಗಳ ಇಂಜುರಿ ಅವಧಿಯಲ್ಲಿ ಆರ್ಟೆಮ್ ಡೌಬಿಕ್ ಗಳಿಸಿದ ಗೋಲು ಉಕ್ರೇನ್ ತಂಡದಲ್ಲಿ ಸಂಭ್ರಮದ ಅಲೆ ಎಬ್ಬಿಸಿತು. ಯೂರೊ ಕಪ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ರೋಚಕ ಪ್ರೀ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಸ್ವೀಡನ್ ವಿರುದ್ಧ 2–1 ಅಂತರದಿಂದ ಗೆದ್ದ ಉಕ್ರೇನ್ ಎಂಟರ ಘಟ್ಟ ಪ್ರವೇಶಿಸಿತು.

27ನೇ ನಿಮಿಷದಲ್ಲಿ ಮುನ್ನಡೆ ಸಾಧಿಸಿದ್ದ ಉಕ್ರೇನ್ 43ನೇ ನಿಮಿಷದಲ್ಲಿ ಗೋಲು ಬಿಟ್ಟುಕೊಟ್ಟು ಕೈಸುಟ್ಟುಕೊಂಡಿತ್ತು. ನಿಗದಿತ ಅವಧಿಯಲ್ಲಿ ಉಭಯ ತಂಡಗಳು ಸಮಬಲ ಸಾಧಿಸಿದ್ದರಿಂದ ಹೆಚ್ಚುವರಿ ಅರ್ಧತಾಸು ಒದಗಿಸಲಾಗಿತ್ತು. ಈ ಸಂದರ್ಭದಲ್ಲೂ ಎರಡೂ ತಂಡಗಳು ಕೆಚ್ಚೆದೆಯಿಂದ ಹೋರಾಡಿದವು. ಇಂಜುರಿ ಅವಧಿ ಆರಂಭಗೊಂಡು ಎರಡನೇ ನಿಮಿಷದಲ್ಲಿ ಬದಲಿ ಆಟಗಾರ ಡೌಬಿಕ್ ಅವರು ಉಕ್ರೇನ್‌ನ ಕೈ ಹಿಡಿದರು. ಅಲೆಕ್ಸಾಂಡರ್ ಜಿಂಚೆಂಕೊ ನೀಡಿದ ಕ್ರಾಸ್‌ನಲ್ಲಿ ಹೆಡರ್ ಮೂಲಕ ಚೆಂಡನ್ನು ಡೌಬಿಕ್ ಗೋಲುಪೆಟ್ಟಿಗೆಯ ಒಳಗೆ ತಳ್ಳಿದರು. ಎದುರಾಳಿ ತಂಡದ ಗೋಲ್‌ಕೀಪರ್ ರಾಬಿನ್ ಒಲ್ಸೆನ್ ತಡೆಯಲು ಪ್ರಯತ್ನಿಸಿದರೂ ಫಲ ಸಿಗಲಿಲ್ಲ. 24 ವರ್ಷದ ಡೌಬಿಕ್ ರಾಷ್ಟ್ರೀಯ ತಂಡಕ್ಕಾಗಿ ಗಳಿಸಿದ ಮೊದಲ ಗೋಲು ಇದು.

27ನೇ ನಿಮಿಷದಲ್ಲಿ ನಾಯಕ ಆ್ಯಂಡ್ರಿ ಯರ್ಮಲೆಂಕೊ ನೀಡಿದ ಪಾಸ್ ನಿಯಂತ್ರಿಸಿದ ಅಲೆಕ್ಸಾಂಡರ್ ಜಿಂಚೆಂಕೊ ನೆಲಮಟ್ಟದಲ್ಲಿ ಚೆಂಡನ್ನು ಮಿಂಚಿನ ವೇಗದಲ್ಲಿ ಗೋಲುಪೆಟ್ಟಿಗೆಯ ಒಳಗೆ ಅಟ್ಟಿದ್ದರು. 43ನೇ ನಿಮಿಷದಲ್ಲಿ ಎಮಿಲ್ ಫೋರ್ಸ್‌ಬರ್ಗ್ ನಾಜೂಕಿನಿಂದ ಚೆಂಡನ್ನು ಗುರಿ ಸೇರಿಸಿದ್ದರು.

**ಜರ್ಮನಿ ಕೋಚ್ ರಾಜೀನಾಮೆ:** ಲಂಡನ್‌ನಲ್ಲಿ ನಡೆದ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ 0–2 ಗೋಲುಗಳಿಂದ ಸೋತ ಜರ್ಮನಿ ತಂಡದ ಕೋಚ್ ಜೋಕಿಮ್ ಲ್ಯೂ ತಮ್ಮ ಹುದ್ದೆಗೆ ರಾಜೀ ನಾಮೆ ನೀಡಿದರು. ಈ ಮೂಲಕ ತಂಡದೊಂದಿಗೆ 15 ವರ್ಷಗಳ ಅವರ ಸಂಬಂಧಕ್ಕೆ ತೆರೆ ಬಿತ್ತು. ಅವರ ತರಬೇತಿಯಲ್ಲಿ ತಂಡ ಈ ವರೆಗೆ 124 ಪಂದ್ಯಗಳಲ್ಲಿ ಜಯ ಗಳಿಸಿದ್ದು 40 ಪಂದ್ಯಗಳಲ್ಲಿ ಡ್ರಾ ಸಾಧಿಸಿದೆ. ಕೇವಲ 34 ಸೋಲು ಕಂಡಿದೆ. 2014ರ ವಿಶ್ವಕಪ್‌ನಲ್ಲಿ ಪ್ರಶಸ್ತಿ ಗೆಲ್ಲಿಸಿಕೊಟ್ಟ ಅವರು ಆ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ ಬ್ರೆಜಿಲ್ ಎದುರು 7–1ರ ಜಯ ಗಳಿಸುವಲ್ಲೂ ತಂಡಕ್ಕೆ ನೆರವಾಗಿದ್ದರು.

ಆರ್ಟೆಮ್ ಡೌಬಿಕ್ –ಎಎಫ್‌ಪಿ ಚಿತ್ರ

**ಕ್ವಾರ್ಟರ್‌ಫೈನಲ್ ವೇಳಾಪಟ್ಟಿ**

| ದಿನಾಂಕ | ತಂಡಗಳು | ಪಂದ್ಯ ನಡೆಯುವ ಸ್ಥಳ | ಸಮಯ |
|---|---|---|---|
| ಜು.2 | ಸ್ವಿಟ್ಜರ್ಲೆಂಡ್–ಸ್ಪೇನ್ | ಸೇಂಟ್ ಪಿಟರ್ಸ್‌ಬರ್ಗ್ | 9.30 |
| ಜು.2 | ಬೆಲ್ಜಿಯಂ–ಇಟಲಿ | ಮ್ಯೂನಿಚ್ | 12.30 |
| ಜು.3 | ಜೆಕ್‌ಗಣರಾಜ್ಯ–ಡೆನ್ಮಾರ್ಕ್ | ಬಾಕು | 9.30 |
| ಜು3 | ಉಕ್ರೇನ್–ಇಂಗ್ಲೆಂಡ್ | ರೋಮ್ | 12.30 |

(ಸಮಯ: ಭಾರತೀಯ ಕಾಲಮಾನ(ರಾತ್ರಿ))

## ಖೇಲ್‌ರತ್ನ: ಅಶ್ವಿನ್ ಹೆಸರು ಶಿಫಾರಸು

ನವದೆಹಲಿ (ಪಿಟಿಐ): ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಮತ್ತು ಮಹಿಳಾ ತಂಡದ ನಾಯಕಿ ಮಿಥಾಲಿ ರಾಜ್ ಅವರಿಗೆ ರಾಜೀವಗಾಂಧಿ ಖೇಲ್ ರತ್ನ ಪುರಸ್ಕಾರ ನೀಡಲು ಭಾರತ ಬಿಸಿಸಿಐ ಕೇಂದ್ರ ಕ್ರೀಡಾ ಇಲಾಖೆಗೆ ಶಿಫಾರಸು ಮಾಡಿದೆ.

ಆರ್. ಅಶ್ವಿನ್

ಕ್ರಿಕೆಟ್ ಆಟಗಾರರಾದ ಕೆ.ಎಲ್. ರಾಹುಲ್, ಶಿಖರ್ ಧವನ್ ಮತ್ತು ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರಿಗೆ ಅರ್ಜುನ ಪ್ರಶಸ್ತಿ ನೀಡಬೇಕೆಂದೂ ಮಂಡಳಿಯು ಶಿಫಾರಸು ಮಾಡಿದೆ.

**ಚೆಟ್ರಿಗೆ ಖೇಲ್ ರತ್ನ:** ಭಾರತ ಫುಟ್‌ಬಾಲ್ ತಂಡದ ನಾಯಕ ಸುನೀಲ್ ಚೆಟ್ರಿ ಅವರಿಗೆ ಖೇಲ್ ರತ್ನ ಮತ್ತು ಮಹಿಳಾ ಫುಟ್‌ಬಾಲ್ ತಂಡದ ಬಾಲಾದೇವಿ ಅವರನ್ನು ಅರ್ಜುನ ಪುರಸ್ಕಾರಕ್ಕೆ ಎಐಎಫ್‌ಎಫ್ ನಾಮನಿರ್ದೇಶನ ಮಾಡಿದೆ. ಕೋಚ್ ಗ್ಯಾಬ್ರಿಯಲ್ ಜೋಸೆಫ್ ಅವರಿಗೆ ದ್ರೋಣಾಚಾರ್ಯ ಪುರಸ್ಕಾರ ನೀಡುವಂತೆಯೂ ಶಿಫಾರಸು ಮಾಡಲಾಗಿದೆ. ಜಾವೆಲಿನ್ ಥ್ರೋ ಅಥ್ಲೀಟ್ ನೀರಜ್ ಚೋಪ್ರಾ ಅವರನ್ನು ಖೇಲ್ ರತ್ನಕ್ಕೆ ಶಿಫಾರಸು ಮಾಡಲಾಗಿದೆ.

ರವಿ ದಹಿಯಾ, ದೀಪಕ್ ಪೂನಿಯಾ, ಸರಿತಾ ಮೋರ್, ಅನ್ಶು ಮಲಿಕ್, ಅಂಕುರ್ ಮಿತ್ತಲ್, ಅಂಜುಮ್ ಮೌದ್ಗಿಲ್, ಇಳವೆನ್ನಿಲ ವಾಳರಿವನ್, ಅಭಿಷೇಕ್ ವರ್ಮಾ, ಓಂಪ್ರಕಾಶ್ ಮಿತ್ರಾವಳ್, ಅಚಂತ ಶರತ್ ಕಮಲ್, ಸೌಮ್ಯದೀಪ್ ರಾಯ್, ಸುತೀರ್ಥ ಮುಖರ್ಜಿ, ಐಹಿಕಾ ಮುಖರ್ಜಿ, ಮಾನವ್ ಠಕ್ಕರ್, ಶುಭಂಕರ್ ಶರ್ಮಾ, ಉದಯನ್ ಮಾನೆ, ರಶೀದ್ ಖಾನ್, ದೀಕ್ಷಾ ದಾಗರ್, ಜ್ಯೋತಿ ಸುರೇಖಾ, ಲಿಂಬಾರಾಮ್, ಲೋಕೇಶ್ ಚಂದ್ ಪಾಲ್ ಹಾಗೂ ಮುಸ್ಕಾನ್ ಕಿರಾರ್ ಅವರನ್ನು ವಿವಿಧ ಪ್ರಶಸ್ತಿಗಳಿಗೆ ಆಯಾ ಕ್ರೀಡಾಸಂಸ್ಥೆಗಳು ಶಿಫಾರಸು ಮಾಡಿವೆ.

### ಡಬ್ಲ್ಯುಟಿಸಿ: ಇನ್ನು ಜಯಕ್ಕೆ 12 ಅಂಕ

ನವದೆಹಲಿ (ಪಿಟಿಐ): ಎರಡನೇ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನಲ್ಲಿ ಐಸಿಸಿ ಹೊಸ ಪಾಯಿಂಟ್ಸ್ ಪದ್ಧತಿ ಜಾರಿಗೊಳಿಸಲಿದೆ.

ಆಗಸ್ಟ್‌ನಲ್ಲಿ ನಡೆಯಲಿರುವ ಭಾರತ ಮತ್ತು ಇಂಗ್ಲೆಂಡ್ ನಡುವಣ ಐದು ಟೆಸ್ಟ್‌ಗಳ ಸರಣಿಯಿಂದ ಡಬ್ಲ್ಯುಟಿಸಿ ಆರಂಭವಾಗಲಿದೆ.

ಪ್ರತಿ ಪಂದ್ಯದ ಜಯಕ್ಕೆ 12 ಅಂಕಗಳನ್ನು ನೀಡಲಾಗುವುದು. ಟೈ ಆದರೆ ಆರು ಮತ್ತು ಡ್ರಾ ಆದರೆ ನಾಲ್ಕು ಪಾಯಿಂಟ್‌ಗಳನ್ನು ನೀಡಲಾಗುವುದು. ತಂಡಗಳು ಆಡಿದ ಪಂದ್ಯಗಳ ಸಂಖ್ಯೆ ಮತ್ತು ಗಳಿಸಿದ ಅಂಕಗಳ ಶೇಕಡಾವಾರು ಫಲಿತಾಂಶದ ಮೇಲೆ ರ್‍ಯಾಂಕಿಂಗ್ ನಿರ್ಧರಿಸಲಾಗುವುದು ಎಂದು ತಿಳಿಸಲಾಗಿದೆ.

## ಭಾರತಕ್ಕೆ ಮಿಥಾಲಿ ಆಸರೆ

ಟಾಂಟನ್: ಆತಿಥೇಯ ಇಂಗ್ಲೆಂಡ್ ಬೌಲರ್‌ಗಳ ಪರಿಣಾಮಕಾರಿ ದಾಳಿಯ ಮುಂದೆ ಮತ್ತೊಮ್ಮೆ ಮಿಂಚಿದ ಮಿಥಾಲಿ ರಾಜ್ ಭಾರತ ತಂಡಕ್ಕೆ ಆಸರೆಯಾದರು.

ಬುಧವಾರ ಇಲ್ಲಿ ನಡೆದ ಎರಡನೇ ಏಕದಿನ ಪಂದ್ಯದಲ್ಲಿ ಅರ್ಧಶತಕ ಗಳಿಸಿದ ಮಿಥಾಲಿ (59; 92ಎ, 6ಬೌಂ) ನೆರವಿನಿಂದ ಭಾರತ ಮಹಿಳಾ ತಂಡವು 50 ಓವರ್‌ಗಳಲ್ಲಿ 221 ರನ್ ಗಳಿಸಿತು. ಮೊದಲ ಪಂದ್ಯದಲ್ಲಿಯೂ ಮಿಥಾಲಿ ರಾಜ್ ಉತ್ತಮವಾಗಿ ಆಡಿದ್ದರು.

ಈ ಪಂದ್ಯದಲ್ಲಿ ಜೂಲನ್ ಗೋಸ್ವಾಮಿ (ಔಟಾಗದೆ 20) ಮತ್ತು ಪೂನಂ ಯಾದವ್ (10 ರನ್) ಅವರು ಕೊನೆಯ ವಿಕೆಟ್ ಜೊತೆಯಾಟದಲ್ಲಿ ಸೇರಿಸಿದ 29 ರನ್‌ಗಳಿಂದಾಗಿ ತಂಡವು ಇನ್ನೂರು ರನ್‌ಗಳ ಗಡಿ ದಾಟಿತು.

ಸ್ಮೃತಿ ಮಂದಾನ (22; 30ಎ) ಮತ್ತು ಯುವಪ್ರತಿಭೆ ಶಫಾಲಿ ವರ್ಮಾ (44; 55ಎ) ಮೊದಲ ವಿಕೆಟ್ ಜೊತೆಯಾಟದಲ್ಲಿ 56 ರನ್ ಗಳಿಸಿದರು.

ಮಿಥಾಲಿ ರಾಜ್ –ಪಿಟಿಐ ಚಿತ್ರ

ಮಿಥಾಲಿ ಮತ್ತು ಹರ್ಮನ್‌ಪ್ರೀತ್ ಕೌರ್ (19; 39ಎ) ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 68 ರನ್ ಗಳಿಸಿದರು.

**ಸಂಕ್ಷಿಪ್ತ ಸ್ಕೋರು: ಭಾರತ:** 50 ಓವರ್‌ಗಳಲ್ಲಿ 221 (ಸ್ಮೃತಿ ಮಂದಾನ 22, ಶಫಾಲಿ ವರ್ಮಾ 44, ಮಿಥಾಲಿ ರಾಜ್ 59, ಹರ್ಮನ್‌ಪ್ರೀತ್ ಕೌರ್ 19, ಜೂಲನ್ ಗೋಸ್ವಾಮಿ ಔಟಾಗದೆ 20, ಪೂನಂ ಯಾದವ್ 10, ಸೋಫಿ ಎಕ್ಸೆಲ್‌ಸ್ಟೋನ್ 25ಕ್ಕೆ2, ಕೇಟ್ ಕ್ರಾಸ್ 34ಕ್ಕೆ5) ವಿವರ ಅಪೂರ್ಣ

# ಟೆಸ್ಟ್ ಸರಣಿಗೆ ಶುಭಮನ್ ಗಿಲ್ ಅಲಭ್ಯ?

ನವದೆಹಲಿ (ಪಿಟಿಐ): ಗಾಯದ ಸಮಸ್ಯೆಯಿಂದ ಬಳಲುತ್ತಿರುವ ಭಾರತದ ಆರಂಭಿಕ ಬ್ಯಾಟ್ಸ್‌ಮನ್ ಶುಭಮನ್ ಗಿಲ್ ಇಂಗ್ಲೆಂಡ್ ಎದುರಿನ ಟೆಸ್ಟ್ ಸರಣಿಗೆ ಅಲಭ್ಯರಾಗಲಿದ್ದಾರೆ. ಅವರ ಬದಲಿಗೆ ಅಭಿಮನ್ಯು ಈಶ್ವರನ್ ಅವರನ್ನು ತಂಡಕ್ಕೆ ಸೇರಿಸಿಕೊಳ್ಳುವ ಸಾಧ್ಯತೆ ಇದೆ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಆಡಿದ ವಿರಾಟ್ ಕೊಹ್ಲಿ ನೇತೃತ್ವದ ಭಾರತ ತಂಡ ಇಂಗ್ಲೆಂಡ್‌ನಲ್ಲೇ ಉಳಿದಿದ್ದು ಆಗಸ್ಟ್ ನಾಲ್ಕರಿಂದ ಟೆಸ್ಟ್ ಸರಣಿ ನಡೆಯಲಿದೆ.

‘ಶುಭಮನ್‌ಗೆ ಗಂಭೀರ ಗಾಯವಾಗಿದೆ. ಅದರ ಬಗ್ಗೆ ಸದ್ಯ ಏನೂ ಹೇಳಲಾಗದು. ಅವರು ಶಸ್ತ್ರಚಿಕಿತ್ಸೆಗೆ ಒಳಗಾಗುವ ಸಾಧ್ಯತೆಯೂ ಇದೆ’ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

## ಅಗ್ರಸ್ಥಾನಕ್ಕೆ ವಿಲಿಯಮ್ಸನ್

ದುಬೈ (ಪಿಟಿಐ): ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ವಿಜೇತ ನ್ಯೂಜಿಲೆಂಡ್ ತಂಡದ ನಾಯಕ ಕೇನ್ ವಿಲಿಯಮ್ಸನ್ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಟೆಸ್ಟ್ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರಿದ್ದಾರೆ.

ವಿಲಿಯಮ್ಸನ್

ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ ನಾಲ್ಕನೇ ಸ್ಥಾನವನ್ನು ಉಳಿಸಿಕೊಂಡಿದ್ದಾರೆ. ಆಸ್ಟ್ರೇಲಿಯಾದ ಮಾರ್ನಸ್ ಲಾಬುಷೇನ್ ಮೂರನೇ ಸ್ಥಾನದಲ್ಲಿದ್ದಾರೆ.

ಸೌತಾಂಪ್ಟನ್‌ನಲ್ಲಿ ನಡೆದ ಭಾರತ ವಿರುದ್ಧದ ಡಬ್ಲ್ಯುಟಿಸಿ ಫೈನಲ್‌ನಲ್ಲಿ ಕೇನ್ ವಿಲಿಯಮ್ಸನ್ ಎರಡೂ ಇನಿಂಗ್ಸ್‌ಗಳಲ್ಲಿ (49 ಮತ್ತು ಅಜೇಯ 52) ಉತ್ತಮವಾಗಿ ಬ್ಯಾಟಿಂಗ್ ಮಾಡಿದ್ದರು. ಐಸಿಸಿ ಪಟ್ಟಿಯಲ್ಲಿ ಹತ್ತು ಪಾಯಿಂಟ್‌ಗಳ ಅಂತರದಿಂದ ಆಸ್ಟ್ರೇಲಿಯಾದ ಸ್ಟೀವ್ ಸ್ಮಿತ್ ಅವರನ್ನು ಹಿಂದಿಕ್ಕಿದರು. ಎರಡು ವಾರಗಳ ಹಿಂದಷ್ಟೇ ಸ್ಮಿತ್ ಅವರು ಕೇನ್ ಅವರನ್ನು ಹಿಂದಿಕ್ಕಿ ಮೊದಲ ಸ್ಥಾನಕ್ಕೇರಿದ್ದರು.

ಭಾರತದ ರೋಹಿತ್ ಶರ್ಮಾ ಮತ್ತು ರಿಷಭ್ ಪಂತ್ ಕ್ರಮವಾಗಿ ಆರು ಹಾಗೂ ಏಳನೇ ಸ್ಥಾನ ಪಡೆದುಕೊಂಡಿದ್ದಾರೆ. ಅಜಿಂಕ್ಯ ರಹಾನೆ ಮೂರು ಸ್ಥಾನಗಳ ಬಡ್ತಿ ಪಡೆದು 13ನೇ ಸ್ಥಾನಕ್ಕೇರಿದ್ದಾರೆ.

ಬೌಲರ್‌ಗಳಲ್ಲಿ ನ್ಯೂಜಿಲೆಂಡ್ ವೇಗದ ಬೌಲರ್ ಕೈಲ್ ಜೆಮಿಸನ್ 13ನೇ ಸ್ಥಾನಕ್ಕೆ ಜಿಗಿದಿದ್ದಾರೆ. ಟ್ರೆಂಟ್ ಬೌಲ್ಟ್ 11ನೇ ಸ್ಥಾನ ಗಳಿಸಿದ್ದಾರೆ.

ಆಲ್‌ರೌಂಡರ್‌ಗಳ ವಿಭಾಗದಲ್ಲಿ ಭಾರತದ ರವೀಂದ್ರ ಜಡೇಜ ಎರಡನೇ ಸ್ಥಾನಕ್ಕೆ ಜಾರಿದ್ದಾರೆ.

ವೆಸ್ಟ್ ಇಂಡೀಸ್‌ನ ಜೇಸನ್ ಹೋಲ್ಡರ್ ಅಗ್ರಸ್ಥಾನಕ್ಕೆ ಮರಳಿದ್ದಾರೆ. ಇಂಗ್ಲೆಂಡ್‌ನ ಬೆನ್ ಸ್ಟೋಕ್ಸ್ ಅವರೊಂದಿಗೆ ಜಡೇಜ ಸ್ಥಾನ ಹಂಚಿಕೊಂಡಿದ್ದಾರೆ. ನಂತರದ ಸ್ಥಾನದಲ್ಲಿ ಆರ್. ಅಶ್ವಿನ್ ಇದ್ದಾರೆ. ಹೋದ ವಾರವಷ್ಟೇ ಜಡೇಜ ಅಗ್ರ ಸ್ಥಾನಕ್ಕೇರಿದ್ದರು.